ಶುಕ್ರವಾರ, ಸೆಪ್ಟೆಂಬರ್ 24, 2021 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಅಂತಿಮ ಸ್ಪರ್ಶ
ದುರ್ಗಾ ಪೂಜೆಗೆ ಪೂರ್ವಭಾವಿಯಾಗಿ ಹರಿಯಾಣದ ಗುರುಗ್ರಾಮದಲ್ಲಿ ಕಲಾವಿದೆಯೊಬ್ಬರು ಗುರುವಾರ ದುರ್ಗಾ ದೇವಿಯ ಮೂರ್ತಿಗೆ ಅಂತಿಮ ಸ್ಪರ್ಶ ನೀಡಿದರು

ನಿಮಗೆ ಅಲರ್ಜಿ ಇದೆಯೇ ?

ರಕ್ತ ಪರೀಕ್ಷೆಯ ಮೂಲಕ ಅಲರ್ಜಿಯ ಕಾರಣ ಕಂಡು ಹಿಡಿಯಬಹುದು

Aanjan Path Labs
& ALLERGY TESTING CENTRE
AFFORDABLE ACCURACY

ರೋಗಗಳಿಂದ ಭಯಪಡದಿರಿ, ಅದರ ವಿರುದ್ಧ **ಹೋರಾಡಿರಿ**
ಇಂದೇ ಅಲರ್ಜಿ ತಪಾಸಣೆ ಮಾಡಿಸಿಕೊಳ್ಳಿ

ಇಸಿಎಚ್‌ಎಸ್/ಇಎಸ್‌ಐ/ ಸಿಜಿಎಚ್‌ಎಸ್ ಕಾರ್ಡ್ ಹೊಂದಿರುವವರಿಗೆ ಹೆಚ್ಚುವರಿ ರಿಯಾಯಿತಿ

ಅಲರ್ಜಿ ತಪಾಸಣೆ ಜೊತೆಗೆ ವಿಟಾಮಿನ್ ಬಿ12 ಮತ್ತು ವಿಟಾಮಿನ್ ಡಿ ಪರೀಕ್ಷೆ

ಉಚಿತ

ಸಮಯ ಬೆಳಗ್ಗೆ 9 ರಿಂದ ಸಂಜೆ 5 ಗಂಟೆ

2021 ಸೆಪ್ಟೆಂಬರ್ 24, 25, 26 & 27 ರಂದು, ಅರ್ಧಕ್ಕಿಂತ ಕಡಿಮೆ ದರಗಳಲ್ಲಿ ನಿಮ್ಮ ಅಲರ್ಜಿ ತಪಾಸಣೆ ಮಾಡಿಸಿಕೊಳ್ಳಿ

@ ಬೆಂಗಳೂರು, ದೊಡ್ಡಬಳ್ಳಾಪುರ, ಚಿಂತಾಮಣಿ, ಕೋಲಾರ, ಕಗ್ಗದಾಸಪುರ, ಗುಬ್ಬಲಾಳ, ತುಮಕೂರು

ಕರ್ನಾಟಕ ಸ್ಪೆಸಿಫಿಕ್ ಅಲರ್ಜಿ ಪ್ಯಾನಲ್ ಲಭ್ಯವಿದೆ

ಕರ್ನಾಟಕ ಕಾಂಪ್ರಹೆನ್ಸಿವ್ ಅಲರ್ಜನ್ ಪ್ಯಾನಲ್.
ಕರ್ನಾಟಕದ ಅಲರ್ಜನ್ಸ್ ಸ್ಪೆಸಿಫಿಕ್ (ಪ್ರಕಟಿತ ಅಧ್ಯಯನಗಳು ಮತ್ತು ವ್ಯಾಖ್ಯಾನಿತ ಅನುಭವಗಳ ಆಧಾರದಲ್ಲಿ)

ಹಾಗಾದರೆ ಅಲರ್ಜಿ ಎಂದರೇನು? ತಿಳಿಯೋಣ

ಪುರುಷರಾಗಿರಲಿ ಅಥವಾ ಮಹಿಳೆಯಾಗಿರಲಿ, ಪ್ರತಿ ವ್ಯಕ್ತಿಯಲ್ಲೂ ಬಾಹ್ಯ ವಸ್ತುಗಳಿಂದ ಉಂಟಾಗಬಲ್ಲ ಪ್ರಚೋದತೆಯನ್ನು ತಡೆಯಬಲ್ಲ ಒಂದಿಷ್ಟು ಶಕ್ತಿ ಇದ್ದೇ ಇರುತ್ತದೆ. ಆದರೆ, ಕೆಲವು ನಿರ್ದಿಷ್ಟ ವಸ್ತುಗಳಿಂದಾಗಿ ಕೆಲವರ ರೋಗನಿರೋಧಕ ವ್ಯವಸ್ಥೆಯಲ್ಲಿ ಅಸಹಜ ಪ್ರತಿಸ್ಪಂದನೆಗಳನ್ನು ಸೃಷ್ಟಿಸುವ ಮೂಲಕ ಅಲರ್ಜಿಗೆ ಕಾರಣವಾಗುತ್ತದೆ.

ಅಲರ್ಜಿ ಎಂಬುದು ಒಂದು ಕಾಯಿಲೆ, ಆದರೆ ಜನರು ಇದನ್ನು ಕಾಯಿಲೆ ಎಂದು ಪರಿಗಣಿಸುವುದಿಲ್ಲ. ಒಂದು ಬಾರಿ ಇದು ಆರಂಭವಾದ ಬಳಿಕ ವ್ಯಕ್ತಿಯು ಸಮಸ್ಯೆಗಳನ್ನು ಅನುಭವಿಸತೊಡಗುತ್ತಾರೆ. ಒಂದು ವೇಳೆ ವ್ಯಕ್ತಿಯೊಬ್ಬರಿಗೆ ಪರಿಮಳಗಳು ಇಷ್ಟವಾಗದಿದ್ದಲ್ಲಿ, ಅವರಿಗೆ ಹೂಗಳಿಂದ ಅಲರ್ಜಿ ಇರುತ್ತದೆ. ಇನ್ನು ಕೆಲವು ಜನರಿಗೆ ಸಾಕು ಪ್ರಾಣಿಗಳಿಂದ ಕೂಡ ಅಲರ್ಜಿ ಇರುತ್ತದೆ. ಆದರೆ, ಇಂತಹ ಅಲರ್ಜಿಗಳನ್ನು ಗುರುತಿಸಿದ ಬಳಿಕ ಪರಿಣಾಮಕಾರಿ ಚಿಕಿತ್ಸೆ ಪಡೆಯಲು ಸುಲಭವಾಗುತ್ತದೆ ಹಾಗೂ ಮುಂಜಾಗ್ರತೆ ಕೂಡ ಕೈಗೊಳ್ಳ ಬಹುದಾಗುತ್ತದೆ.

ಅಲರ್ಜಿಯ ಲಕ್ಷಣಗಳು

- ಚರ್ಮ ಕೆಂಪಗಾಗುವುದು
- ಕಲೆಗಳು/ಚರ್ಮದ ಮೇಲೆ ತುರಿಕೆ
- ತ್ವಚೆಯ ಮೇಲೆ ಗುಳ್ಳೆ
- ಮುಖ-ತುಟಿ ಊದಿಕೊಳ್ಳುವುದು
- ಹೊಟ್ಟೆ ನೋವು
- ಡಯೇರಿಯಾ
- ಕೆಮ್ಮು
- ಗಂಟಲು ಕೆರೆತ
- ಉಬ್ಬಸ
- ಉಸಿರಾಟದಲ್ಲಿ ತೊಂದರೆ
- ಅರ್ಟಿಕೇರಿಯಾ
- ಅಲರ್ಜಿಕ್ ರ್ಹಿನಿಟಿಸ್ (ಸೀನುವಿಕೆ)

ಡಾ. ಪ್ರಶಾಂತ್ ಜೆರಾತ್ ರವರೊಂದಿಗೆ ಅಲರ್ಜಿ ಸಮಾಲೋಚನೆ

ಡಾ. ಪ್ರಶಾಂತ್ ಜೆರಾತ್, (ಎಂಡಿ, ಪಾಥೋಲಜಿಸ್ಟ್) ರವರು ಹಿಂದಿನ ದಿನಗಳಲ್ಲಿ ಅಲರ್ಜಿ ಕಂಡುಹಿಡಿಯಲು ತೋಳಿನ ಮೇಲೆ 98 ಬಾರಿ ಚುಚ್ಚಿ ಪರೀಕ್ಷಿಸುವ ಪದ್ಧತಿ ಅನುಸರಿಸುತ್ತಿದ್ದ ಬಗ್ಗೆ ತಮ್ಮ ವಿಚಾರ ಹಂಚಿಕೊಂಡರು. ಆದರೆ, ಇತ್ತೀಚಿನ ದಿನಗಳಲ್ಲಿ ಕೇವಲ ಒಂದು ರಕ್ತ ಪರೀಕ್ಷೆಯ ಮೂಲಕ ಇದನ್ನು ಸುಲಭವಾಗಿ ಪರೀಕ್ಷಿಸಬಹುದಾಗಿದೆ. ನಮ್ಮ ದೈನಂದಿನ ಪರಿಸರದಲ್ಲಿರುವ ಸಾಕಷ್ಟು ಅಂಶಗಳು ಅಲರ್ಜಿಗಳಿಗೆ ಕಾರಣವಾಗಿರುತ್ತವೆ. ಗಾಳಿಯ ಮೂಲಕ ಹರಡುವ ಪರಾಗ, ಪ್ರಾಣಿಗಳ ತ್ಯಾಜ್ಯ, ಧೂಳಿನ ಕಣಗಳು, ಕೆಲವು ಆಹಾರ ಪದಾರ್ಥಗಳು, ವಿಶೇಷವಾಗಿ ಕಡಲೆಬೀಜ, ಮರಗಳ ಬೀಜ, ಗೋಧಿ, ಸೋಯಾ, ಮೀನು, ಚಿಪ್ಪು ಮೀನು, ಮೊಟ್ಟೆ ಹಾಲು, ಜೇನು ನೊಣ ಅಥವಾ ಕಣಜದಂತಹ ಕೀಟಗಳ ಕಚ್ಚುವಿಕೆಯಿಂದ ಕೂಡ ಅಲರ್ಜಿ ಉಂಟಾಗುತ್ತದೆ. ಆದ್ದರಿಂದ, ಕರ್ನಾಟಕದಾದ್ಯಂತ ಅಲರ್ಜಿ ತಪಾಸಣೆ ಹಮ್ಮಿಕೊಳ್ಳಲಾಗುತ್ತಿದೆ.

ಡಾ. ನವನೀತ್ ಕೌರ್ (ಎಂಬಿಬಿಎಸ್, ಎಂಎಸ್ ಇ.ಎನ್.ಟಿ) ಇವರ ಪ್ರಕಾರ, ವಿಶ್ವದಾದ್ಯಂತ ಅಲರ್ಜಿಯ ಗಂಭೀರ ಸಮಸ್ಯೆಗಳೆಲ್ಲ ಒಂದೇ ರೀತಿಯಾಗಿ ಕಂಡುಬರುತ್ತವೆ. ಅಲರ್ಜಿಯ ಕಾರಣಗಳು ವಿಭಿನ್ನವಾಗಿದ್ದು, ಇವು ನಿಮ್ಮ ಬದುಕನ್ನು ಆತಂಕಕ್ಕೆ ಈಡು ಮಾಡಬಲ್ಲವಾಗಿರುತ್ತವೆ. ಸಾಮಾನ್ಯವಾಗಿ ಒಂದು ಅಲರ್ಜಿ ಸಮಸ್ಯೆಯ ಕಾರಣವು ಗಂಟಲು, ಶ್ವಾಸಕೋಶ, ಸೈನಸ್, ಕಿವಿ, ಹೊಟ್ಟೆ ಅಥವಾ ತ್ವಚೆಯ ಮೇಲೆ ಗೋಚರಿಸುತ್ತದೆ. ಕೆಲವು ಜನರಲ್ಲಿ ಅಸ್ತಮಾ ಕೂಡ ಒಂದು ಅಲರ್ಜಿ ಆಗಿರುತ್ತದೆ. ಬಹುತೇಕ ಗಂಭೀರ ಪ್ರಕರಣಗಳಲ್ಲಿ, ಅನಾಫಿಲಾಕ್ಸಿಸ್ ಎಂಬ ಮಾರಣಾಂತಿಕ ಪ್ರತಿಸ್ಪಂದನೆ ಕೂಡ ಎದುರಾಗಬಹುದಾಗಿರುತ್ತದೆ. ಅಲರ್ಜಿ ಸಮಸ್ಯೆಗಳು ಪ್ರಾಥಮಿಕ ಹಂತ ದಲ್ಲಿಯೇ ಪತ್ತೆಯಾದರೆ, ವಿಶೇಷ ತಜ್ಞ ವೈದ್ಯರಿಂದ ಇವುಗಳಿಗೆ ಉತ್ತಮ ಚಿಕಿತ್ಸೆ ನೀಡಬಹು ದಾಗಿರುತ್ತದೆ.

ಅಲರ್ಜಿಗೆ ಕಾರಣಗಳು

ನಮ್ಮ ದೈನಂದಿನ ಜೀವನದ ಪರಿಸರದಲ್ಲಿರುವ ಸಾಕಷ್ಟು ಅಂಶಗಳು ಅಲರ್ಜಿಗಳಿಗೆ ಕಾರಣವಾಗಿರುತ್ತವೆ. ಗಾಳಿಯ ಮೂಲಕ ಹರಡುವ ಪರಾಗ, ಪ್ರಾಣಿಗಳ ತ್ಯಾಜ್ಯ, ಧೂಳಿನ ಕಣಗಳು, ಕೆಲವು ಆಹಾರ ಪದಾರ್ಥಗಳು, ವಿಶೇಷವಾಗಿ ಕಡಲೆಬೀಜ, ಮರಗಳ ಬೀಜ, ಗೋಧಿ, ಸೋಯಾ, ಮೀನು, ಚಿಪ್ಪು ಮೀನು, ಮೊಟ್ಟೆ ಹಾಲು, ಜೇನು ನೊಣ ಅಥವಾ ಕಣಜದಂತಹ ಕೀಟಗಳ ಕಚ್ಚುವಿಕೆ ಮತ್ತು ನೀವು ಸ್ಪರ್ಶಿಸುವ ಲ್ಯಾಟೆಕ್ಸ್‌ನಿಂದಾಗಿ ಕೂಡ ಚರ್ಮವು ಪ್ರಚೋದನೆಗೆ ಒಳಪಡುತ್ತದೆ. ಒಂದೇ ಒಂದು ರಕ್ತ ಮಾದರಿ ತಪಾಸಣೆ ಮೂಲಕ ಯಾವುದೇ ಅಲರ್ಜಿಯನ್ನು ನಾವು ಕಂಡು ಹಿಡಿಯಬಹುದು ಮತ್ತು ಕೆಲವು ಇಮ್ಯೂನ್ ಬೂಸ್ಟರ್ಸ್, ಆ್ಯಂಟಿ ಅಲರ್ಜಿಕ್ ಔಷಧಿಗಳ ಮುಖಾಂತರ ಹಾಗೂ ಇಮ್ಯುನೊ ಥೆರಪಿ ಮೂಲಕ ಕೂಡ ಅಲರ್ಜಿಗೆ ಚಿಕಿತ್ಸೆ ನೀಡಬಹುದಾಗಿದೆ.

ಉದಾಹರಣೆಗೆ, 12 ವರ್ಷದ ಬಾಲಕಿಯೊಬ್ಬಳು ಅಸ್ತಮಾ ರೋಗಿಯಾಗಿದ್ದಳು ಮತ್ತು ಕೆಮ್ಮು, ಉಬ್ಬಸ ಹಾಗೂ ಉಸಿರಾಟದ ಸಮಸ್ಯೆಗಳಿಂದ ಬಳಲುತ್ತಿದ್ದಳು. ಬಾಲಕಿ ನಮ್ಮನ್ನು ಸಂಪರ್ಕಿಸಿದಾಗ, ಅವಳ ಉಸಿರಾಟದ ಸಮಸ್ಯೆಗಳಿಗೆ ಸ್ಪಷ್ಟ ಕಾರಣಗಳು ತಿಳಿದಿರಲಿಲ್ಲ. ಅವಳ ವೈದ್ಯಕೀಯ ಹಿನ್ನಲೆಯನ್ನು ಪರಿಶೀಲಿಸಿದಾಗ ಅವಳ ಅಸ್ತಮಾ ರೋಗದ ಬಗ್ಗೆ ತಿಳಿದು ಬಂದಿತು. ಇದಕ್ಕಾಗಿ ಅವಳು ಉತ್ತಮ ಚಿಕಿತ್ಸೆಯನ್ನೇ ಪಡೆದಿದ್ದಳಾದರೂ ಗುಣಮುಖ ಆಗಿರಲಿಲ್ಲ. ಅಷ್ಟೇ ಅಲ್ಲದೆ, ಪೀನಟ್ಸ್, ಚಿಕ್‌ಪೀಸ್ ಮತ್ತು ಲೆಂಟಿಲ್ಸ್‌ಗಳಿಂದ ಎದುರಾಗುವ ಡಿಸ್ನೋಯಿ ಮತ್ತು ಪ್ರುರಿಟಿಸ್ ಹಿನ್ನಲೆ ಕೂಡ ಹೊಂದಿರುವುದು ಖಚಿತವಾಗಿತ್ತು. ಹಿಂದಿನ ದಿನಗಳಲ್ಲಿ ಆ ಬಾಲಕಿ ನಿರ್ದಿಷ್ಟ ಋತುಮಾನದಲ್ಲಿ ಮಾತ್ರ, ಹುಲ್ಲು ಮತ್ತು ಧೂಳಿನ ಕಣಗಳಿಂದ ಎದುರಾಗುವ ಉಬ್ಬಸದ ಸಮಸ್ಯೆ ಎದುರಿಸುತ್ತಿದ್ದಳು. ಈ ಬಾಲಕಿಯ ರಕ್ತ ಮಾದರಿ ತಪಾಸಣೆ ಮೂಲಕ ಅಲರ್ಜಿ ಪರೀಕ್ಷೆ ಮಾಡಿದ ಬಳಿಕ, ಇಮ್ಯುನೊ ಥೆರಪಿ ಹಾಗೂ ಕೆಲವು ಆ್ಯಂಟಿ ಅಲರ್ಜಿಕ್ ಔಷಧೋಪಚಾರ ನೀಡಿದಾಗ ಅವಳು ಗುಣಮುಖಳಾದಳು. ಯಾರಾದರೂ ಉಸಿರಾಟದಲ್ಲಿ ತೊಂದರೆ ಅನುಭವಿಸುತ್ತಿದ್ದರೆ, ಅಂತಹವರು ಕೂಡ ತಕ್ಷಣವೇ ಅಲರ್ಜಿ ಪರೀಕ್ಷೆ ಮಾಡಿಸಿಕೊಳ್ಳುವುದು ಒಳಿತು. ಒಂದು ಬಾರಿ ಅಲರ್ಜಿ ಪತ್ತೆಯಾದಲ್ಲಿ, ಅರ್ಧ ಸಮಸ್ಯೆಯೇ ನಿವಾರಣೆಗೊಂಡಂತೆ. ಇದು ವಿಶೇಷಜ್ಞ ವೈದ್ಯರ ತಂಡದ ನೆರವಿನಿಂದ ಸೂಕ್ತ ಕ್ರಮ ಕೈಗೊಳ್ಳುವಲ್ಲಿ ಮತ್ತು ಸಮರ್ಪಕ ಔಷಧೋಪಚಾರದ ಮೂಲಕ ರೋಗಿಗಳಿಗೆ ಚಿಕಿತ್ಸೆ ನೀಡುವಲ್ಲಿ ನೆರವಾಗುತ್ತದೆ. ನಮ್ಮ ಹೆಮ್ಮೆಯ ವೈದ್ಯರ ತಂಡವು ವಿಶೇಷ ತರಬೇತಿ ಹೊಂದಿದ್ದು, ಯುರೋಬ್ಲಾಟ್ ಮತ್ತು ಫಾಡಿಯಾ ಯಂತ್ರಗಳನ್ನು ಬಳಸಿಕೊಂಡು ಇಂತಹ ಅಲರ್ಜಿಗಳನ್ನು ಪತ್ತೆ ಮಾಡುವಲ್ಲಿ ನಿಪುಣರಾಗಿದ್ದಾರೆ.

ಅಲರ್ಜಿಗಳಿಗೆ ಚಿಕಿತ್ಸೆ

ಅಲರ್ಜಿಯು ವ್ಯಕ್ತಿಯ ದೈನಂದಿನ ಜೀವನದಲ್ಲಿ ಹಲವಾರು ಸಮಸ್ಯೆಗಳನ್ನು ಸೃಷ್ಟಿಸಬಲ್ಲದಾಗಿರುತ್ತದೆ, ಆದ್ದರಿಂದ ಅಲರ್ಜಿಯನ್ನು ನಿರ್ಲಕ್ಷಿಸುವುದು ಒಳಿತಲ್ಲ. ಅಲರ್ಜಿಗಳು ಋತುಮಾನಗಳಿಗೆ ಅನುಗುಣವಾಗಿ ಕೂಡ ತಲೆದೋರುತ್ತವೆ. ವ್ಯಕ್ತಿಯೊಬ್ಬರು ನಿರ್ದಿಷ್ಟವಾದ ಋತುಮಾನ ಆಧಾರಿತ ಅಲರ್ಜಿಯಿಂದ ಬಳಲುತ್ತಿದ್ದರೆ, ಇದು ತುಂಬಾ ಬಾಧಿಸುತ್ತದೆಯಾದ್ದರಿಂದ ತಕ್ಷಣವೇ ವೈದ್ಯರನ್ನು ಸಂಪರ್ಕಿಸುವುದು ಒಳ್ಳೆಯದು. ಅಲರ್ಜಿಕ ಕಾಯಿಲೆಗಳನ್ನು ತಕ್ಷಣವೇ ತಪಾಸಣೆ ಮಾಡಿಸಿಕೊಳ್ಳುವ ಮೂಲಕ ಸೂಕ್ತ ಚಿಕಿತ್ಸೆ ಪಡೆದುಕೊಳ್ಳಬಹುದು ಮತ್ತು ಮುಂಜಾಗ್ರತೆಗಳನ್ನು ಕೂಡ ಕೈಗೊಳ್ಳಬಹುದು. ಒಂದು ಬಾರಿ ಅಲರ್ಜಿ ಪರೀಕ್ಷೆ ಮಾಡಿಸಿಕೊಂಡರೆ, ವೈದ್ಯರು ರೋಗಿಗೆ ಸಮರ್ಪಕವಾದ ಚಿಕಿತ್ಸೆ ನೀಡಲು ಸಹಕಾರಿಯಾಗುತ್ತದೆ.

ಇತ್ತೀಚೆಗಿನ ದಿನಗಳಲ್ಲಿ, ರೋಗಿಯ ರಕ್ತ ಮಾದರಿ ಪಡೆದುಕೊಂಡು ತುಂಬ ಸುಲಭವಾಗಿ ಅಲರ್ಜಿ ಪತ್ತೆ ಮಾಡಬಹುದಾಗಿದೆ. ಅಲರ್ಜಿ ಕಾಯಿಲೆಯ ತಪಾಸಣೆಯ ಬಳಿಕ, ರೋಗಿಯು ವೈದ್ಯರು ಸೂಚಿಸಿದ ಔಷಧಿಯನ್ನು ನಿಗದಿತ ಅವಧಿಯವರೆಗೆ ಸೇವಿಸುತ್ತ, ಅಲರ್ಜಿಯ ಪ್ರಚೋದಕಗಳ ವಿರುದ್ಧ ಹೋರಾಡಲು ತನ್ನ ರೋಗನಿರೋಧಕ ವ್ಯವಸ್ಥೆಯನ್ನು ಆಳದಿಂದ ಬಲಿಷ್ಠಗೊಳಿಸಿಕೊಳ್ಳಬೇಕು. ಇದರಿಂದಾಗಿ ರೋಗಿಯು ಮುಂಜಾಗ್ರತೆ ವಹಿಸಲು ನೆರವಾಗುತ್ತದೆ ಹಾಗೂ ರೋಗಿಯ ಅಲರ್ಜಿ ಕೂಡ ನಿವಾರಣೆಗೊಳ್ಳುತ್ತದೆ.

ಅಲರ್ಜಿಗಳನ್ನು ತಪಾಸಣೆ ಮಾಡಿದ ಬಳಿಕ, ನಿಗದಿತ ಆಹಾರ ಪದಾರ್ಥಗಳನ್ನು ತ್ಯಜಿಸುವ ಮೂಲಕವಾಗಲಿ ಅಥವಾ ಔಷಧೋಪಚಾರದ ಮೂಲಕವಾಗಲಿ ಚಿಕಿತ್ಸೆ ನೀಡಬಹುದಾಗಿದೆ. ಔಷಧೋಪಚಾರ ಎಂದರೆ ಅಲರ್ಜನ್ ಪ್ರತಿರೋಧಕ ಅಥವಾ ಒಬ್ಬ ಪರಿಣಿತ ವೈದ್ಯರು ನೀಡಬಹುದಾದ ಇಮ್ಯುನೋ–ಥೆರಪಿ ಎನ್ನಲಾಗುವ ಒಂದು ವಿಶೇಷ ಚಿಕಿತ್ಸೆ ನೀಡುವ ಮೂಲಕ ಅಲರ್ಜಿ ಸಮಸ್ಯೆಗಳಿಂದ ಮುಕ್ತರಾಗಬಹುದು.

ಜೆರಾತ್ ಪ್ಯಾಥ್ ಲ್ಯಾಬ್ಸ್ & ಅಲರ್ಜಿ ಟೆಸ್ಟಿಂಗ್ ಸೆಂಟರ್ ಒಂದು ಪ್ರತಿಷ್ಠಿತ ಡಯಾಗ್ನೋಸ್ಟಿಕ್ ಕೇಂದ್ರವಾಗಿದೆ ಹಾಗೂ ಭಾರತದ ಅತಿದೊಡ್ಡ ಅಲರ್ಜಿ ಟೆಸ್ಟಿಂಗ್ ಸರಣಿ ಕೇಂದ್ರವಾಗಿದೆ. ಅಂಜನ್ ಪ್ಯಾಥ್ ಲ್ಯಾಬ್, ಜೆರಾತ್ ಪ್ಯಾಥ್ ಲ್ಯಾಬ್ಸ್‌ನ ಸಹೋದರ ಸಂಸ್ಥೆಯಾಗಿದೆ. ಜೆಪಿಎಲ್ ಸಂಸ್ಥೆಯು ದೇಶದ ಉತ್ತರ, ಪೂರ್ವ, ಪಶ್ಚಿಮ ಭಾಗಗಳಲ್ಲಿನ 24 ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಲ್ಲಿ ನೆಲೆಗೊಂಡಿದೆ ಮತ್ತು ಇದೀಗ ಎಪಿಎಲ್ ಸಂಸ್ಥೆಯ ಮೂಲಕ ದಕ್ಷಿಣ ಭಾರತದ ತಮಿಳನಾಡು, ಕೇರಳ, ಕರ್ನಾಟಕ, ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳಲ್ಲಿ ಪ್ರವೇಶಿಸಿದೆ.

ಅಲರ್ಜಿ ತಪಾಸಣೆಗಾಗಿ ಅಪಾಯಿಂಟ್ಮೆಂಟ್ ಬುಕ್ ಮಾಡಿಕೊಳ್ಳಿ ಮತ್ತು ಅಲರ್ಜಿ ಪರೀಕ್ಷೆಯ ಬಳಿಕ, ನಮ್ಮ ಪರಿಣಿತರೊಂದಿಗೆ ಉಚಿತ ದೂರವಾಣಿ ಸಮಾಲೋಚನೆ ಪಡೆಯಿರಿ (ಮಾಸ್ಕ್ ಧರಿಸಿರಿ ಮತ್ತು ಸಾಮಾಜಿಕ ಅಂತರ ಕಾಪಾಡಿರಿ)

ತಪಾಸಣೆಗಳಿಗಾಗಿ ಸಂಪರ್ಕಿಸಿ

Aanjan Path Labs & ALLERGY TESTING CENTRE — AFFORDABLE ACCURACY

CORPORATE OFFICE : Plot No. - 29A ARK Colony (Anantha Ramakrishna Iyyer Colony) Eldams road, Teynampet Chennai.

- **BENGALURU** — 9035549256, 7795638554 — MARUTI DIAGNOSTICS CENTER, #63, V. Nagenahalli Main Road, (Nr. Nagenahalli Church), R.T. Nagar (P)
- **BENGALURU** (Doddaballapur) — 8088696070 — VASANTHA DIAGNOSTICS, Fort Jamia Masjid Complex, Opp To Rajkamal Theatre, Fort Road, Doddaballapur
- **BENGALURU** — 8431194338, 9900457409 — HOME COLLECTION (9480130408) — DEEPASHRI CLINICAL LAB (UNIT OF SHIFAA LAB), No.728, 3rd Block, Opp. Old Police Station, Rajajinagar, ESI Hospital Road
- **BENGALURU** — 8431194338, 9900457409 — HOME COLLECTION (9480130408) — DEEPASHRI CLINICAL LAB (UNIT OF SHIFAA LAB), No.29/30/31, Sudharshana Nilaya, 5th Cross, Aishwarya Layout, Kuvempunagar, Doddakallasandra, Kanakapura Main Road
- **BENGALURU** — 6366537785 — HOME COLLECTION (9480130408) — SAI SAMARTH LAB (UNIT OF SHIFAA CLINICAL LAB), No.44, 1st Main, 7th Cross, Mico Layout, BTM 2nd Stage, Bangalore
- **BENGALURU** — 6366537785 — HOME COLLECTION (9480130408) — RADIAL DIAGNOSTICS (UNIT OF SHIFAA LAB), CA Site, Lions Seva Bhavana, 8th 'A' Cross, 16th 'A' Main Road, Yelahanka New Town
- **BENGALURU** — 8431194338, 7022424960. — HOME COLLECTION (9480130408) — REPUBLIC HOSPITAL (UNIT OF SHIFAA LAB), No.5, Langford Road, Near Richmond Circle
- **BENGALURU** — 7022470224 — AARTHI SCANS & LABS, 159, 9th Main Road, 3rd Block, Jayanagar, Near Jos Alukkas Jewellery
- **BENGALURU** — 7022470224 — AARTHI SCANS & LABS, 499, CMH Road, Near Max Showroom, Indiranagar
- **BENGALURU** — 7022470224 — AARTHI SCANS & LABS, No.9, Kamanahalli Main Road, Ramaswamy Palya, IOC Bus Stop (Indian Oil), Maruthi Sevangar Post
- **BENGALURU** — 7022470224 — AARTHI SCANS & LABS, No.22, BBMP New No.24/1, 1st C' Main Road, 8th Block, Koramangala, Near Ambedkar Park, Near Lavish Pharma
- **BENGALURU** — 7022470224 — AARTHI SCANS & LABS, No.31, C' 1st Main, Ambedkar Nagar, Nagarbhavi Circle, Near Madhuramma Temple, Nagarbhavi, Bengaluru
- **BENGALURU** — 7022470224 — AARTHI SCANS & LABS, No.142, Amarkrupa, 11th Cross Main Road, Swimming Pool Extension Road, Mahawer Ayurvedha Medical
- **BENGALURU** — 7022470224 — AARTHI SCANS & LABS, No.3, Ground Floor, Jaypee Tower, East End Main Road, Leaf Pharmacy, Jayanagar 9th Block, Leaf Pharma Jp Towers, Bengaluru
- **BENGALURU** — 7022470224 — AARTHI SCANS & LABS, No.968, 2nd Main, 3rd Cross, Near Hoskarahalli Metro Station, MLA Sommanna House, Vijayanagar
- **BENGALURU** — 7022470224 — AARTHI SCANS & LABS, No.1-2, "Ayushri" Nobonagar Mini Park Road, Dixt Ayur Care Clinic, Doddakammanahalli Main Road, Bannerghatta Road
- **BENGALURU** — 7022470224 — AARTHI SCANS & LABS, No.24, Subramani Nilaya, Near Venugopal Swamy Temple, Devasandra Main Road, K.R.PURAM
- **BENGALURU** — 7022470224 — AARTHI SCANS & LABS, No.223/4, Bettaiah Building, Near Old Check Post, Near Dhasarahalli Metro Station, Tumkur Main Road, T.Dhasarahalli
- **CHINTAMANI** — 7259727100, 9900816830 — VITAL CARE DIAGNOSTIC LABORATORY, Near Vasavi Wedding Hall, Church Street, N.R.EXTN.,
- **KOLAR** — 9731449350, 08152401074 — DR. NUKAPUR HOSPITAL, Hruthik Mansion, Sharada Talkies Road, Near KSRTC Bus Stand
- **KAGGADASAPURA** — 8310033911, 080 48653232 — SAKSHI LABS & DIAGNOSTICS, # 56/B.6, Lakshmi Complex, 1st Floor, Main Road, Vignan Nagar, Opp. Poorvika Mobiles
- **GUBBALALA** — 9986035504, 7022594863 — PARKVIEW DIAGNOSTIC CENTRE, Near Shani Temple & Shopwell Supermarket, Thurahalli Main Road, Near Karnataka Bank
- **TUMKUR** — 8296746307 — PRERNA DIAGNOSTICS CENTRE, No 5, Sharada Medicals, Shanthinagar

HELPLINE : 90032-22841, 90032-22541

Member of Advertising Standards Council of India (Responsible Advertising)

ಅಮೆರಿಕದ ಪ್ರಮುಖ ಕಂಪನಿಗಳ ಸಿಇಒ ಜತೆಗೆ ಪ್ರಧಾನಿ ನರೇಂದ್ರ ಮೋದಿ ಸಂವಾದ

ಭಾರತದಲ್ಲಿ ಬಂಡವಾಳ ಹೂಡಿಕೆಗೆ ಆಹ್ವಾನ

ವಾಷಿಂಗ್ಟನ್ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕಕ್ಕೆ ತಮ್ಮ ಏಳನೇ ಭೇಟಿಯನ್ನು ಅಲ್ಲಿನ ವಿವಿಧ ಕಂಪನಿಗಳ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳ ಜೆತೆಗಿನ ಸಂವಾದದೊಂದಿಗೆ ಆರಂಭಿಸಿದ್ದಾರೆ. ಭಾರತದಲ್ಲಿ ಬಂಡವಾಳ ಹೂಡಿಕೆಗೆ ಇರುವ ಅವಕಾಶವನ್ನು ಅವರಿಗೆ ವಿವರಿಸಿದ್ದಾರೆ.

ಈ ಬಾರಿ ಅಮೆರಿಕದ ನೇತೃತ್ವದಲ್ಲಿ ನಡೆಯಲಿರುವ ಕ್ವಾಡ್ ಒಕ್ಕೂಟದ ಶೃಂಗಸಭೆಯಲ್ಲಿ ಭಾಗಿಯಾಗಲು ಮೋದಿ ಅವರು ಇಲ್ಲಿಗೆ ಬಂದಿದ್ದಾರೆ. ಈ ಭೇಟಿಯಲ್ಲಿಯೇ ಅಮೆರಿಕದ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಜತೆ ಅವರು ಮಾತುಕತೆ ನಡೆಸಲಿದ್ದಾರೆ.

ಗುರುವಾರ ಬೆಳಿಗ್ಗೆ ಅವರು, ಅಮೆರಿಕದ ಐದು ಪ್ರಮುಖ ಉದ್ಯಮಗಳ ಸಿಇಒಗಳ ಜತೆ ಮುಖತಃ ಚರ್ಚೆ ನಡೆಸಿದ್ದಾರೆ. ಅಡೋಬಿಯ ಶಂತನು ನಾರಾಯಣ್, ಜನರಲ್ ಆಟೊಮಿಕ್ಸ್‌ನ ವಿವೇಕ್ ಲಾಲ್, ಕ್ವಾಲ್‌ಕಾಂನ ಕ್ರಿಸ್ಟಿಯಾನೊ ಇ ಅಮೋನ್, ಫರ್ಸ್ಟ್ ಸೋಲಾರ್‌ನ ಮಾರ್ಕ್ ವಿಡ್ಮಾರ್ ಮತ್ತು ಬ್ಲ್ಯಾಕ್‌ಸ್ಟೋನ್‌ನ ಸ್ಟೀಫನ್ ಎ ಶಾವಾರ್ಜ್ಮಾನ್ ಜತೆಗೆ ಮಾತುಕತೆ ನಡೆಸಿದ್ದಾರೆ.

ಭಾರತದಲ್ಲಿ ತಂತ್ರಾಂಶ ಕ್ಷೇತ್ರದಲ್ಲಿನ ಅವಕಾಶಗಳ ಬಗ್ಗೆ ಶಂತನು ಜತೆಗೆ ಮಾತುಕತೆ ನಡೆಸಿದ್ದಾರೆ. ಸೇನಾ ಡ್ರೋನ್‌ಗಳ ತಯಾರಿಕೆ ಬಗ್ಗೆ ವಿವೇಕ್ ಅವರ ಜತೆ ಮಾತುಕತೆ ನಡೆಸಿದ್ದಾರೆ. ಭಾರತವು ಅಮೆರಿಕದಿಂದ ಸೇನಾ ಡ್ರೋನ್‌ಗಳನ್ನು ಖರೀದಿಸುವ ಪ್ರಕ್ರಿಯೆ ಈಗಾಗಲೇ ಚಾಲ್ತಿಯಲ್ಲಿದೆ.

ಭಾರತದಲ್ಲಿ 5ಜಿ ಮೊಬೈಲ್ ತಂತ್ರಜ್ಞಾನದ ಅಭಿವೃದ್ಧಿ ಮತ್ತು ಬಂಡವಾಳ ಹೂಡಿಕೆಗೆ ಇರುವ ಅವಕಾಶದ ಬಗ್ಗೆ ಕ್ರಿಸ್ಟಿಯಾನೊ ಜತೆಗೆ ಮಾತುಕತೆ ನಡೆಸಿದ್ದಾರೆ. ಭಾರತದಲ್ಲಿ ಸೌರಶಕ್ತಿ ಕ್ಷೇತ್ರದಲ್ಲಿ ಇರುವ ಅವಕಾಶಗಳ ಬಗ್ಗೆ ಮಾರ್ಕ್ ವಿಡ್ಮಾರ್ ಜತೆಗೆ ಚರ್ಚಿಸಿದ್ದಾರೆ.

ಭಾರತದಲ್ಲಿ ರಿಯಲ್ ಎಸ್ಟೇಟ್ ಕ್ಷೇತ್ರದಲ್ಲಿ ಹೂಡಿಕೆಗೆ ಇರುವ ಅವಕಾಶಗಳ ಬಗ್ಗೆ ಷೇರುವಿಕ್ರಯ ಮತ್ತು ರಿಯಲ್ ಎಸ್ಟೇಟ್ ಕಂಪನಿ ಬ್ಲ್ಯಾಕ್‌ಸ್ಟೋನ್‌ನ ಸಿಇಒ ಜತೆಗೆ ಮೋದಿ ಮಾತುಕತೆ ನಡೆಸಿದ್ದಾರೆ.

ಈ ಐದೂ ಕ್ಷೇತ್ರಗಳಲ್ಲಿ ಹೂಡಿಕೆ ಮಾಡಲು ಇರುವ ಅವಕಾಶಗಳನ್ನು ಮೋದಿ ಅವರು ವಿವರಿಸಿದ್ದಾರೆ. ಮತ್ತು ಬಂಡವಾಳ ಹೂಡಲು ಆಹ್ವಾನ ನೀಡಿದ್ದಾರೆ.

ಮೋದಿ– ಕಮಲಾ ಭೇಟಿ: ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕದ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು. ಈ ವೇಳೆ ಕಮಲಾ ಅವರು, 'ಭಾರತವು ಅಮೆರಿಕದ ಪ್ರಮುಖ ಪಾಲುದಾರ ದೇಶ' ಎಂದು ಹೇಳಿದ್ದಾರೆ.

ಇದಕ್ಕೂ ಮುನ್ನ ಮೋದಿ ಅವರು ಆಸ್ಟ್ರೇಲಿಯಾ ಪ್ರಧಾನಿ ಸ್ಕಾಟ್ ಮಾರಿಸನ್ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಿದರು

ಪ್ರಧಾನಿ ನರೇಂದ್ರ ಮೋದಿ ಅವರು ಟ್ವೀಟ್ ಮಾಡಿದ್ದ ಚಿತ್ರ

ವಿಭಾಕರ್ ಶಾಸ್ತ್ರಿ ಅವರು ಟ್ವೀಟ್ ಮಾಡಿದ್ದ, ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಚಿತ್ರ



@NotAfangirll_ ಎಂಬುವವರು ಟ್ವೀಟ್ ಮಾಡಿದ್ದ ರಾಜೀವ್ ಗಾಂಧಿ ಅವರ ಚಿತ್ರ

ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರು ಪತ್ರಿಕಾಗೋಷ್ಠಿ ನಡೆಸುತ್ತಿರುವ ಚಿತ್ರವನ್ನು ಕಾಂಗ್ರೆಸ್ ಟ್ವೀಟ್ ಮಾಡಿದೆ. 'ನಕಲು ಮಾಡಲು ಕಷ್ಟವಾದ ಚಿತ್ರ' ಎಂದು ಕಾಂಗ್ರೆಸ್ ಲೇವಡಿ ಮಾಡಿದೆ

ಚರ್ಚೆಗೆ ಕಾರಣವಾದ ಕಡತ ಪರಿಶೀಲನೆ ಚಿತ್ರ

ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕಕ್ಕೆ ವಿಮಾನದಲ್ಲಿ ಪ್ರಯಾಣ ಮಾಡುತ್ತಿರುವಾಗ ಕಡತಗಳನ್ನು ಪರಿಶೀಲಿಸುತ್ತಿರುವ ಚಿತ್ರವನ್ನು ಟ್ವೀಟ್ ಮಾಡಿದ್ದಾರೆ. ಈ ಚಿತ್ರವು ಈಗ ಭಾರಿ ಚರ್ಚೆಗೆ ಕಾರಣವಾಗಿದೆ.

ಚಿತ್ರದ ಜತೆಗೆ ಮೋದಿ ಅವರು, 'ದೀರ್ಘವಾದ ವಿಮಾನ ಪ್ರಯಾಣವೆಂದರೆ ಅದು, ಕಡತಗಳು ಮತ್ತು ಕಾಗದಗಳನ್ನು ಪರಿಶೀಲಿಸಲು ಒಂದು ಅವಕಾಶ' ಎಂದು ಬರೆದಿದ್ದರು. ಈ ಟ್ವೀಟ್ ಈಗ ವೈರಲ್ ಆಗಿದೆ. ಮೋದಿ ಅವರು ತಾವೊಬ್ಬರೇ ಸದಾ ಕೆಲಸ ಮಾಡುತ್ತೇವೆ ಎಂದು ಬಿಂಬಿಸಿಕೊಳ್ಳುತ್ತಿದ್ದಾರೆ. ಹಿಂದಿನ ಪ್ರಧಾನಿಗಳೂ ಈ ರೀತಿ ವಿಮಾನಯಾನದ ವೇಳೆ ಕೆಲಸ ಮಾಡಿದ್ದಾರೆ ಎಂದು ಹಲವರು ಟ್ವೀಟ್ ಮಾಡಿದ್ದಾರೆ.

ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರು ವಿಮಾನಯಾನದ ವೇಳೆ ಕಡತ ಪರಿಶೀಲಿಸುತ್ತಿರುವ ಚಿತ್ರವನ್ನು ಅವರ ಮೊಮ್ಮಗ ವಿಭಾಕರ್ ಶಾಸ್ತ್ರಿ ಟ್ವೀಟ್ ಮಾಡಿದ್ದಾರೆ. 'ಹಳೆಯ ಚಿತ್ರ: ನನ್ನ ತಾತ ಮತ್ತು ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರು ವಿಮಾನದಲ್ಲಿ ಕಡತ ಪರಿಶೀಲಿಸಿದ ಚಿತ್ರ' ಎಂದು ಅವರು ಟ್ವೀಟ್‌ನಲ್ಲಿ ಬರೆದುಕೊಂಡಿದ್ದಾರೆ.

ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರು ವಿಮಾನಯಾನದ ವೇಳೆ ಲ್ಯಾಪ್‌ಟಾಪ್‌ನಲ್ಲಿ ಕೆಲಸ ಮಾಡುತ್ತಿರುವ ಚಿತ್ರವನ್ನು @NotAfangirll_ ಎಂಬ ಹ್ಯಾಂಡಲ್‌ನಿಂದ ಒಬ್ಬರು ಟ್ವೀಟ್ ಮಾಡಿದ್ದಾರೆ. 'ಈಗಿನ ಆಡಳಿತದಲ್ಲಿ ನಾವು ಎಷ್ಟು ಹಿಂದೆ ಸರಿಯುತ್ತಿದ್ದೇವೆ ಅಲ್ಲವೇ? 80ರ ದಶಕದಲ್ಲಿ ಪ್ರಧಾನಿ ರಾಜೀವ್ ಗಾಂಧಿ ಅವರು ವಿಮಾನಯಾನದ ವೇಳೆ ಲ್ಯಾಪ್‌ಟಾಪ್‌ನಲ್ಲಿ ಕೆಲಸ ಮಾಡುತ್ತಿದ್ದರು. ಆದರೆ ಮೋದಿಜೀ ಅವರು ಕಾಗದ ಬಳಸುತ್ತಿದ್ದಾರೆ?' ಎಂದು ಅವರು ಬರೆದುಕೊಂಡಿದ್ದಾರೆ.

ಮತ್ತೊಬ್ಬರು ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರು ವಿಮಾನಯಾನದ ವೇಳೆ ಕಡತಗಳನ್ನು ಪರಿಶೀಲಿಸುತ್ತಿರುವ ಚಿತ್ರವನ್ನು ಟ್ವೀಟ್ ಮಾಡಿದ್ದಾರೆ. ಮಾಜಿ ಪ್ರಧಾನಿ ಪಿ.ವಿ.ನರಸಿಂಹರಾವ್ ಅವರು ವಿಮಾನಯಾನದ ವೇಳೆ ಕಡತ ಪರಿಶೀಲಿಸುತ್ತಿರುವ ಚಿತ್ರವನ್ನು ಪುನೀತ್ ಅಗರ್ವಾಲ್ ಎಂಬುವವರು ಟ್ವೀಟ್ ಮಾಡಿದ್ದಾರೆ. ಈ ಎಲ್ಲಾ ಚಿತ್ರಗಳೂ ವೈರಲ್ ಆಗಿವೆ.

'ಜಗತ್ತಿನಾದ್ಯಂತ ಭಾರತೀಯರ ಛಾಪು'

ವಾಷಿಂಗ್ಟನ್ (ಪಿಟಿಐ): 'ಭಾರತೀಯರು ಜಗತ್ತಿನಾದ್ಯಂತ ಛಾಪು ಮೂಡಿಸಿದ್ದಾರೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದ್ದಾರೆ.

ಅಮೆರಿಕ ಭೇಟಿಗಾಗಿ ಇಲ್ಲಿಗೆ ಬಂದಿಳಿದ ಮೋದಿ ಅವರನ್ನು, ಭಾರತೀಯ ಅಮೆರಿಕನ್ ಸಮುದಾಯದವರು ಸ್ವಾಗತಿಸಿದರು. ಅವರ ಜತೆ ನಡೆದ ಕಿರು ಸಂವಾದದಲ್ಲಿ ಮೋದಿ ಅವರು ಈ ಮಾತು ಹೇಳಿದ್ದಾರೆ. 'ನನ್ನನ್ನು ಭವ್ಯವಾಗಿ ಸ್ವಾಗತಿಸಿದ ವಾಷಿಂಗ್ಟನ್ ಡಿಸಿಯಲ್ಲಿರುವ ಭಾರತೀಯ ಅಮೆರಿಕನ್ ಸಮುದಾಯಕ್ಕೆ ಅಭಿನಂದನೆಗಳು. ಬೇರೆ ದೇಶಗಳಲ್ಲಿ ನೆಲೆಸಿರುವ ಭಾರತೀಯರೇ ನಮ್ಮ ಬಲ' ಎಂದು ಮೋದಿ ಹೇಳಿದ್ದಾರೆ.

ಸುದ್ದಿ 2 ನಿಮಿಷ

ಗಿರೀಶ್ ಭಾರದ್ವಾಜ್‌ಗೆ ಶಿವರಾಮ ಕಾರಂತ ಹುಟ್ಟೂರ ಪ್ರಶಸ್ತಿ

ಉಡುಪಿ: ಕೋಟತಟ್ಟು ಗ್ರಾಮ ಪಂಚಾಯಿತಿ, ಡಾ.ಕಾರಂತ ಹುಟ್ಟೂರ ಪ್ರಶಸ್ತಿ ಪ್ರತಿಷ್ಠಾನದಿಂದ ಕೊಡಮಾಡುವ ಡಾ.ಶಿವರಾಮ ಕಾರಂತ ಹುಟ್ಟೂರ ಪ್ರಶಸ್ತಿಗೆ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯದ ಗಿರೀಶ್ ಭಾರದ್ವಾಜ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಆಯ್ಕೆ ಸಮಿತಿ ಸದಸ್ಯ ಯು.ಎಸ್.ಶೆಣೈ ತಿಳಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಿವರಾಮ ಕಾರಂತರ ಆಸಕ್ತಿಯ ಕ್ಷೇತ್ರಗಳಲ್ಲಿ ಸಾಧನೆ ಮಾಡಿದರಿಗೆ ಕಳೆದ 16 ವರ್ಷಗಳಿಂದ ಪ್ರತಿಷ್ಠಾನದಿಂದ ಪ್ರಶಸ್ತಿ ನೀಡಲಾಗುತ್ತಿದೆ. ಕಾರಂತರ ಜನ್ಮದಿನವಾದ ಅ.10 ರಂದು ಮಧ್ಯಾಹ್ನ 3 ಗಂಟೆಗೆ ಕೋಟದ ಶಿವರಾಮ ಕಾರಂತ ಥೀಂ ಪಾರ್ಕ್‌ನಲ್ಲಿ ಗಿರೀಶ್ ಭಾರದ್ವಾಜ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದರು.

ಕನ್ನಡ ಸಾಹಿತ್ಯ ಪರಿಷತ್ತು: 50 ಲಕ್ಷ ಸದಸ್ಯತ್ವ ಗುರಿ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಮುಂಬರುವ ನ.1ರಿಂದ ಸದಸ್ಯತ್ವ ಅಭಿಯಾನವನ್ನು ಹಮ್ಮಿಕೊಂಡಿದ್ದು, ಸದಸ್ಯರ ಸಂಖ್ಯೆಯನ್ನು 50 ಲಕ್ಷಕ್ಕೆ ಏರಿಸುವ ಗುರಿ ಹಾಕಿಕೊಂಡಿದೆ.

ಏಳು ಕೋಟಿ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾಗಿರುವ ಪರಿಷತ್ತು ಸದ್ಯ 3.4 ಲಕ್ಷ ಆಜೀವ ಸದಸ್ಯರನ್ನು ಹೊಂದಿದೆ.

'ಅನೇಕ ಸಾಹಿತಿಗಳು, ಕನ್ನಡದ ಹಿರಿಯರು ಈ ಸಂಸ್ಥೆಯನ್ನು ಕಟ್ಟಿ ಬೆಳೆಸಿದ್ದಾರೆ. 3 ಲಕ್ಷಕ್ಕೂ ಅಧಿಕ ಆಜೀವ ಸದಸ್ಯತ್ವ ಹೊಂದಿರುವ ಇನ್ನೊಂದು ಸಂಸ್ಥೆ ರಾಜ್ಯದಲ್ಲಿ ಇಲ್ಲ. ಇದು ನಮಗೆ ಹೆಮ್ಮೆಯ ಸಂಗತಿ. ಆದರೆ, ಏಳು ಕೋಟಿ ಕನ್ನಡಿಗರಲ್ಲಿ ಇಷ್ಟು ಜನರು ಮಾತ್ರ ಪರಿಷತ್ತಿನ ಸದಸ್ಯರಾದರೆ ಸಾಕೇ ಎಂಬ ಪ್ರಶ್ನೆಯೂ ನಮ್ಮ ಮುಂದಿದೆ. ಹಾಗಾಗಿ, ಸದಸ್ಯತ್ವ ಅಭಿಯಾನವನ್ನು ಹಮ್ಮಿಕೊಳ್ಳಲಾಗುತ್ತಿದೆ' ಎಂದು ಪರಿಷತ್ತಿನ ಆಡಳಿತಾಧಿಕಾರಿ ಎಸ್. ರಂಗಪ್ಪ ತಿಳಿಸಿದ್ದಾರೆ.

'ಕನ್ನಡ ಓದು ಬರಹ ಬಲ್ಲ 18 ವರ್ಷ ಮೇಲ್ಪಟ್ಟ ಎಲ್ಲ ವ್ಯಕ್ತಿಗಳೂ ಸದಸ್ಯರಾಗಬಹುದು. ₹ 500 ಸದಸ್ಯತ್ವ ಶುಲ್ಕ ಪಾವತಿಸಬೇಕಾಗುತ್ತದೆ. 'ಕನ್ನಡ ನುಡಿ' ಸಹಿತ ಸದಸ್ಯತ್ವಕ್ಕೆ ₹ 1,000 ಶುಲ್ಕ ಇರಲಿದೆ. ಅರ್ಜಿ ಪ್ರತಿಯ ಜೊತೆಗೆ ವಯಸ್ಸು ಮತ್ತು ವಿಳಾಸದ ಪುರಾವೆ, 2 ಅಂಚೆ ಚೀಟಿ ಗಾತ್ರದ ಇತ್ತೀಚಿನ ಭಾವಚಿತ್ರವನ್ನು ಸಲ್ಲಿಸಬೇಕಾಗುತ್ತದೆ. ಅರ್ಜಿ ಪ್ರತಿಗಳು www.kasapa.in ನಲ್ಲಿ ಲಭ್ಯವಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಪರ್ಕಕ್ಕೆ ದೂ.: 080 26612991

'ಅಮೃತ ಗ್ರಾಮ ಪಂಚಾಯಿತಿ ಯೋಜನೆ'ಗೆ ಕೇಂದ್ರ ಸಚಿವ ಗಿರಿರಾಜ್ ಸಿಂಗ್ ಚಾಲನೆ

'2024ರೊಳಗೆ ಗ್ರಾ.ಪಂ.ಗಳ ಡಿಜಿಟಲ್ ಸಂಪರ್ಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಲ್ಲ ಗ್ರಾಮ ಪಂಚಾಯಿತಿಗಳು 2024ರ ಒಳಗೆ ಡಿಜಿಟಲ್ ಸಂಪರ್ಕ ಹೊಂದಿರಬೇಕು. ರಾಜ್ಯದಲ್ಲಿಯೂ ಈ ಯೋಜನೆಯನ್ನು ಆದ್ಯತೆಯ ಮೇರೆಗೆ ಜಾರಿಗೊಳಿಸಬೇಕು' ಎಂದು ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಗಿರಿರಾಜ್ ಸಿಂಗ್ ಹೇಳಿದರು

75ನೇ ಸ್ವಾತಂತ್ರ್ಯೋತ್ಸವದ ನೆನಪಿಗಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಇದೇ ಆಗಸ್ಟ್ 15ರಂದು ಘೋಷಿಸಿದ್ದ 'ಅಮೃತ ಗ್ರಾಮ ಪಂಚಾಯಿತಿ ಯೋಜನೆ'ಗೆ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಗುರುವಾರ ಚಾಲನೆ ನೀಡಿ ಅವರು ಮಾತನಾಡಿದರು.

'ಅ. 2ರಂದು ದೇಶದಾದ್ಯಂತ ಗ್ರಾಮ ಪಂಚಾಯಿತಿಗಳು ಗ್ರಾಮ ಸಭೆ ನಡೆಸಿ, 'ನನ್ನ ಗ್ರಾಮ, ನನ್ನ ಪರಂಪರೆ' ಎಂಬ ಘೋಷಣೆಯಡಿ ಗ್ರಾಮಕ್ಕಾಗಿ ಶ್ರಮಿಸಿದ ಹಿರಿಯರು, ವಿದ್ವಾಂಸರು, ಸ್ವಾತಂತ್ರ್ಯ-ಹೋರಾಟಗಾರರನ್ನು ಸ್ಮರಿಸುವ ಕೆಲಸ ಮಾಡಬೇಕು. ಅ. 1ರಿಂದ 15 ರ ವರೆಗೆ ಸ್ವಚ್ಛತಾ ಕಾರ್ಯಕ್ರಮ ಹಮ್ಮಿಕೊಳ್ಳಬೇಕು'ಎಂದರು.

'ಪಂಚಾಯಿತಿಗಳು ಸಬಲಗೊಳಿಸಲು ಕೇಂದ್ರ ಸರ್ಕಾರ ಗ್ರಾಮೀಣಾಭಿವೃದ್ಧಿಗೆ ಹೆಚ್ಚು ಅನುದಾನ ನೀಡುತ್ತಿದೆ. ಕರ್ನಾಟಕದಲ್ಲಿ 12 ಮತ್ತು 13ನೇ ಹಣಕಾಸು ಆಯೋಗದಡಿ 2008–2014ರ ನಡುವೆ ₹ 3,988 ಕೋಟಿ ಅನುದಾನ ನೀಡಲಾಗಿತ್ತು. 14 ಮತ್ತು 15ನೇ ಹಣಕಾಸು ಆಯೋಗದಲ್ಲಿ ಎರಡೂವರೆ ಪಟ್ಟು ಹೆಚ್ಚು ₹ 9,626 ಕೋಟಿ ನೀಡಲಾಗಿದೆ. ಗ್ರಾಮ ಸ್ವರಾಜ್ ಅಭಿಯಾನದಡಿ 2008-2014ರ ವರೆಗೆ ₹ 35 ಕೋಟಿ, 2014ರಿಂದ ಈವರೆಗೆ ₹ 135 ಕೋಟಿ ನೀಡಲಾಗಿದೆ' ಎಂದು ವಿವರಿಸಿದರು.

ಬಸವರಾಜ ಬೊಮ್ಮಾಯಿ ಮಾತನಾಡಿ, 'ಅಮೃತ ಯೋಜನೆಯಡಿ 750 ಗ್ರಾಮ ಪಂಚಾಯಿತಿಗಳ ಸಮಗ್ರ ಅಭಿವೃದ್ಧಿಯ ಗುರಿ ಹೊಂದಲಾಗಿದೆ. ಇದಕ್ಕಾಗಿ ಪ್ರತಿ ಪಂಚಾಯಿತಿಗೆ ಸರಾಸರಿ ₹ 3 ಕೋಟಿಯಂತೆ ಸುಮಾರು ₹2,300 ಕೋಟಿ ವೆಚ್ಚ ಮಾಡಲಾಗುತ್ತಿದೆ. ಮಾರ್ಚ್ 31ರ ಒಳಗೆ ಯೋಜನೆ ಪೂರ್ಣಗೊಳಿಸಿದ ಪಂಚಾಯಿತಿಗಳಿಗೆ ₹ 25 ಲಕ್ಷ ಪ್ರೋತ್ಸಾಹ ಧನ ನೀಡಲಾಗುವುದು' ಎಂದರು.

'ಎಲ್ಲ ಗ್ರಾಮ ಪಂಚಾಯಿತಿಗಳು ಇದನ್ನು ಪೂರ್ಣಗೊಳಿಸಿದರೆ ಮುಂದಿನ ವರ್ಷ 1,500 ಪಂಚಾಯಿತಿಗಳಲ್ಲಿ ಈ ಯೋಜನೆ ಕೈಗೆತ್ತಿಕೊಳ್ಳಲಾಗುವುದು. ರಾಜ್ಯದಲ್ಲಿ ಜಲ ಜೀವನ್ ಮಿಷನ್ ಅನುಷ್ಠಾನಗೊಳಿಸಲು ₹ 2,000 ಕೋಟಿ ಬಿಡುಗಡೆ ಮಾಡಲಾಗಿದೆ' ಎಂದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ಮಾತನಾಡಿ, 'ಯೋಜನೆಗೆ ಆಯ್ಕೆಯಾದ ಪ್ರತಿ ಗ್ರಾಮ ಪಂಚಾಯಿತಿಗಳಲ್ಲಿ ಬೀದಿದೀಪಗಳ ಅಳವಡಿಕೆ, ಪ್ರತಿ ಮನೆಗೆ ಕುಡಿಯುವ ನೀರಿನ ನಳ ಸಂಪರ್ಕ, ಶೇ 100ರಷ್ಟು ಘನ ತ್ಯಾಜ್ಯ ವಿಂಗಡಣೆ, ವಿಲೇವಾರಿ, ಅಮೃತ್ ಉದ್ಯಾನವನಗಳ ನಿರ್ಮಾಣ, ಗ್ರಂಥಾಲಯಗಳ ಡಿಜಿಟಲೀಕರಣ, ಶಾಲೆ, ಅಂಗನವಾಡಿಗಳಿಗೆ ಕುಡಿಯುವ ನೀರು, ರೈತರ ಉಪಯೋಗಕ್ಕಾಗಿ ಗ್ರಾಮೀಣ ಗೋದಾಮಗಳ ನಿರ್ಮಾಣ, ಕೆರೆಗಳ, ಕಲ್ಯಾಣಿಗಳ ಪುನಶ್ಚೇತನಗೊಳಿಸಲು ಉದ್ದೇಶಿಸಲಾಗಿದೆ' ಎಂದರು.

ಈ ಸಂದರ್ಭದಲ್ಲಿ ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯಡಿ ತರಬೇತಿ ಪಡೆದ ನಾಲ್ವರು ಯುವತಿಯರಿಗೆ ಉದ್ಯೋಗ ಪ್ರಮಾಣಪತ್ರ ನೀಡಲಾಯಿತು. ಕಲಬುರ್ಗಿಯಲ್ಲಿ ನಿರ್ಮಿಸಲಾಗಿರುವ ಅಬ್ದುಲ್ ನಝೀರ್ ಸಾಬ್ ಗ್ರಾಮೀಣಾಭಿವೃದ್ಧಿ ತರಬೇತಿ ಸಂಸ್ಥೆಯ ಪ್ರಾದೇಶಿಕ ತರಬೇತಿ ಕೇಂದ್ರವನ್ನು ಉದ್ಘಾಟಿಸಲಾಯಿತು.

ಸಚಿವರಾದ ಡಾ. ಸಿ.ಎನ್. ಅಶ್ವತ್ಥನಾರಾಯಣ, ಎಸ್.ಟಿ. ಸೋಮಶೇಖರ್, ಎನ್. ಮುನಿರತ್ನ, ಬಿ.ಸಿ. ನಾಗೇಶ್ ಇದ್ದರು.

ಗ್ರಾಮ ಪಂಚಾಯಿತಿ ಅಮೃತ ಯೋಜನೆಗೆ ಚಾಲನೆ ನೀಡಿದ ಕೇಂದ್ರ ಸಚಿವ ಗಿರಿರಾಜ ಸಿಂಗ್ ಅವರು ಗ್ರಾಮಾಭಿವೃದ್ಧಿಯ ಮಾದರಿಯನ್ನು ವೀಕ್ಷಿಸಿದರು. ಈ ಸಂದರ್ಭದಲ್ಲಿ ಶಾಸಕರಾದ ರಾಜಕುಮಾರ ಪಾಟೀಲ ತೇಲ್ಕೂರ, ಮಹಂತೇಶ ಕವಟಗಿಮಠ, ಸಚಿವ ಎಸ್‌ಟಿ. ಸೋಮಶೇಖರ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವರಾದ ಸಿ.ಎನ್ ಅಶ್ವತ್ಥನಾರಾಯಣ, ಕೆ.ಎಸ್ ಈಶ್ವರಪ್ಪ, ಬಿ.ಸಿ. ನಾಗೇಶ್ ಇದ್ದರು

ನರೇಗಾ ಅಡಿ ಶಾಲಾ ದುರಸ್ತಿಗೆ ಅವಕಾಶ ಕಲ್ಪಿಸಿ: ಈಶ್ವರಪ್ಪ

'ಶಾಲಾ ಕಟ್ಟಡಗಳ ದುರಸ್ತಿ ಕಾಮಗಾರಿಗಳನ್ನು ನರೇಗಾ ಯೋಜನೆಯಡಿ ಕೈಗೊಳ್ಳಲು ಅವಕಾಶ ಕಲ್ಪಿಸಿ' ಎಂದು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ಅವರು ಕೇಂದ್ರ ಸಚಿವರಿಗೆ ಕಾರ್ಯಕ್ರಮದಲ್ಲೇ ಮನವಿ ಮಾಡಿದರು.

'ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯಡಿ 1700 ಕಿ.ಮೀ ನಷ್ಟು ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಅನುದಾನ ನೀಡಬೇಕು' ಎಂದೂ ಕೋರಿದರು.

ಗ್ರಾ.ಪಂ.ಗೆ 'ಆನ್‌ಲೈನ್' ಸೇವೆ

'ಗ್ರಾಮ ಪಂಚಾಯಿತಿ ಹಂತದಲ್ಲಿಯೇ ಆನ್‌ಲೈನ್ ಮೂಲಕ ನಾಗರಿಕ ಸೇವೆಗಳನ್ನು ಒದಗಿಸುವ ವಿನೂತನ 'ಗ್ರಾಮ ಸೇವಾ' ಯೋಜನೆಯನ್ನು ಪ್ರಾಯೋಗಿಕವಾಗಿ ರಾಜ್ಯದ 5 ಜಿಲ್ಲೆಗಳಲ್ಲಿ ಮುಂಬರುವ ಗಣರಾಜ್ಯೋತ್ಸವ ದಿನದಂದು (ಜ. 26) ಜಾರಿಗೊಳಿಸಲಾಗುವುದು' ಎಂದು ಬಸವರಾಜ ಬೊಮ್ಮಾಯಿ ತಿಳಿಸಿದರು.

'ಅಭಿವೃದ್ಧಿ ಜನರ ಸುತ್ತ ಆಗಬೇಕು. ಜನರು ಅಭಿವೃದ್ಧಿ ಸುತ್ತ ಸುತ್ತುವಂತಾಗಬಾರದು. ಈ ಉದ್ದೇಶದಿಂದ ಗ್ರಾಮ ಪಂಚಾಯಿತಿಗಳು ಜನರಿಗೆ ವಿವಿಧ ಸೇವೆಗಳನ್ನು ಒದಗಿಸುವ ಗ್ರಾಮ ಸೇವಾ ಸಂಸ್ಥೆ ಆಗಬೇಕು. ಮನೆ ಬಾಗಿಲಿಗೆ ಸೌಲಭ್ಯಗಳು ತಲುಪಬೇಕು. ಈ ಆಶಯದೊಂದಿಗೆ ಈ ಯೋಜನೆ ಜಾರಿಗೊಳಿಸಲಾಗುವುದು' ಎಂದರು.

ಕಸಾಪ ಚುನಾವಣೆ : ಹೈಕೋರ್ಟ್ ಆದೇಶ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ ಚುನಾವಣೆಗೆ ಸಂಬಂಧಿಸಿದಂತೆ ಹೈಕೋರ್ಟ್‌ನ ಧಾರವಾಡ ಪೀಠ ನೀಡಿದ ಆದೇಶದ ಪ್ರತಿಯನ್ನು ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ. ಸೆಲ್ವಕುಮಾರ್ ಅವರಿಗೆ ಅಧ್ಯಕ್ಷ ಸ್ಥಾನದ ಅಭ್ಯರ್ಥಿ ಶೇಖರಗೌಡ ಮಾಲಿಪಾಟೀಲ ಅವರು ಸಲ್ಲಿಸಿದ್ದಾರೆ.

ಚುನಾವಣೆಯನ್ನು ಶೀಘ್ರದಲ್ಲಿ ನಡೆಸುವಂತೆ ನಿರ್ದೇಶನ ನೀಡಬೇಕು ಎಂದು ಕೋರಿ ಶೇಖರಗೌಡ ಅವರು ಸಲ್ಲಿಸಿದ್ದ ಅರ್ಜಿಯನ್ನು ನಿಯಮಾನುಸಾರ ಪರಿಗಣಿಸಿ, ಎರಡು ತಿಂಗಳ ಒಳಗಾಗಿ ಇತ್ಯರ್ಥಗೊಳಿಸಬೇಕು ಎಂದು ಪೀಠವು ಸರ್ಕಾರಕ್ಕೆ ಆದೇಶ ನೀಡಿತ್ತು.

ಹೈಕೋರ್ಟ್ ಆದೇಶದ ಪ್ರತಿ ಲಭ್ಯವಾದ ನಂತರ ಕನ್ನಡ ಸಾಹಿತ್ಯ ಪರಿಷತ್‌ಗೆ ಚುನಾವಣೆ ನಿಗದಿಪಡಿಸಲು ಮನವಿ ಮಾಡಿಕೊಳ್ಳುವಂತೆ ಶೇಖರಗೌಡ ಅವರಿಗೆ ನ್ಯಾಯಾಲಯ ಆದೇಶಿಸಿತ್ತು.

ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಮತ್ತು ಕನ್ನಡ ಸಾಹಿತ್ಯ ಪರಿಷತ್ ಚುನಾವಣಾಧಿಕಾರಿ ಅವರಿಗೂ ನ್ಯಾಯಾಲಯದ ಆದೇಶದ ಪ್ರತಿಯನ್ನು ಸಲ್ಲಿಸಲಾಯಿತು.

'ಶೀಘ್ರ ಕಸಾಪಗೆ ಚುನಾವಣೆ ನಡೆಸಬೇಕು. ಕೋವಿಡ್ ಕಾರಣಕ್ಕೆ ಸ್ಥಗಿತಗೊಂಡಿದ್ದ ಪ್ರಕ್ರಿಯೆಯನ್ನು ಮತ್ತೆ ಆರಂಭಿಸಿ ಚುನಾವಣೆ ನಡೆಸಬೇಕು' ಎಂದು ಶೇಖರಗೌಡ ಮಾಲಿಪಾಟೀಲ ಮನವಿ ಮಾಡಿದ್ದಾರೆ.

ಅಥಣಿ: ರಸ್ತೆ ಪಕ್ಕ ಪ್ರಜ್ಞಾಹೀನ ಸ್ಥಿತಿಯಲ್ಲಿ ಬಾಲಕಿ ಪತ್ತೆ

ಅಥಣಿ (ಬೆಳಗಾವಿ ಜಿಲ್ಲೆ): ಹಲ್ಯಾಳ ಗ್ರಾಮದ ಸಮೀಪ ರಸ್ತೆ ಪಕ್ಕ ಪ್ರಜ್ಞಾಹೀನವಾಗಿದ್ದ ಎರಡು ವರ್ಷದ ಬಾಲಕಿ ಬೆತ್ತಲೆ ಸ್ಥಿತಿಯಲ್ಲಿ ಗುರುವಾರ ಪತ್ತೆಯಾಗಿದ್ದು ಗ್ರಾಮಸ್ಥರು ಬಾಲಕಿಯನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ.

ಖಾಸಗಿ ಅಂಗವೂ ಸೇರಿದಂತೆ ಬಾಲಕಿಯ ಮೈ ತುಂಬ ಸಿಗರೇಟಿನಿಂದ ಸುಟ್ಟ ಗಾಯಗಳು ಆಗಿವೆ. ಬಾಲಕಿಯ ಗುರುತು ಪತ್ತೆಯಾಗಿಲ್ಲ.

ಡಿಎಸ್ಪಿ ಎಸ್. ಗಿರೀಶ, ಸಿಪಿಐ ಶಂಕರ ಗೌಡ ಬಸನಗೌಡರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಅಥಣಿ ಪೋಲಿಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕನ್ನಡ ಕಡ್ಡಾಯ ಪ್ರಶ್ನಿಸಿದ ಬಾಲಕ

ಹೈಕೋರ್ಟ್‌ಗೆ ಪಿಐಎಲ್ ಸಲ್ಲಿಸಿದ 4ನೇ ತರಗತಿ ವಿದ್ಯಾರ್ಥಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಭಾಷಾ ಕಲಿಕಾ ಕಾಯ್ದೆ–2015 ಪ್ರಶ್ನಿಸಿ ಬೆಂಗಳೂರಿನ ಬಿಷಪ್ ಕಾಟನ್ ಶಾಲೆಯ 10 ವರ್ಷ ವಯಸ್ಸಿನ ವಿದ್ಯಾರ್ಥಿ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದಾನೆ. ಸಿಬಿಎಸ್‌ಇ ಮತ್ತು ಐಸಿಎಸ್‌ಇ ಪಠ್ಯಕ್ರಮದ ವಿದ್ಯಾರ್ಥಿಗಳಿಗೆ ವಿನಾಯಿತಿ ನೀಡದಿರುವ ಈ ಕಾಯ್ದೆಯನ್ನೇ ಅಸಂವಿಧಾನಿಕ ಎಂದು ಘೋಷಿಸಬೇಕೆಂದು ಕೋರಿದ್ದಾನೆ.

4ನೇ ತರಗತಿ ವಿದ್ಯಾರ್ಥಿ ಕೀರ್ತನ್ ಸುರೇಶ್ ಈ ಅರ್ಜಿ ಸಲ್ಲಿಸಿದ್ದು, ಅವರ ಪರವಾಗಿ ಮಕ್ಕಳ ಹಕ್ಕುಗಳ ಹೋರಾಟಗಾರ್ತಿ ಎನ್. ಸುಜಾತಾ ಪ್ರತಿನಿಧಿಸುತ್ತಿದ್ದಾರೆ. ಅರ್ಜಿ ವಿಚಾರಣೆ ನಡೆಸಿದ ಪೀಠ, ರಾಜ್ಯ ಸರ್ಕಾರ ಮತ್ತು ಐಸಿಎಸ್‌ಇ ಕೌನ್ಸಿಲ್‌ಗೆ ನೋಟಿಸ್ ನೀಡಲು ಆದೇಶಿಸಿದೆ.

'ರಾಜ್ಯದ ಎಲ್ಲಾ ಶಾಲೆಗಳಲ್ಲಿ 1ರಿಂದ 10ನೇ ತರಗತಿ ತನಕ ಓದುತ್ತಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಕನ್ನಡವನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯಾಗಿ ಕಲಿಸುವುದನ್ನು ಈ ಕಾಯ್ದೆ ಕಡ್ಡಾಯಗೊಳಿಸಿದೆ. 1ರಿಂದ 4ನೇ ತರಗತಿ ತನಕ ಕನ್ನಡವನ್ನು ಎರಡನೇ ಭಾಷೆಯಾಗಿ ಕಲಿಯಬೇಕು. ಇತರ ಆದ್ಯತಾ ಭಾಷೆಯನ್ನು ಮೂರನೇ ಭಾಷೆಯಾಗಿ ಕಲಿಯಬೇಕಾಗುತ್ತದೆ ಎಂದು ಶಾಲೆಯ ಪ್ರಾಂಶುಪಾಲರು ತಿಳಿಸಿದ್ದಾರೆ. ಈ ರೀತಿ ಕಡ್ಡಾಯ ಮಾಡುವುದು ಕರ್ನಾಟಕ ಶಿಕ್ಷಣ ಕಾಯ್ದೆ 1983 ಮತ್ತು ರಾಷ್ಟ್ರೀಯ ಶಿಕ್ಷಣ ನೀತಿ 2020ಕ್ಕೆ ವಿರುದ್ಧ' ಎಂಬುದು ಅರ್ಜಿದಾರನ ವಾದ.

'ಸಂವಿಧಾನದ ವಿಧಿ 350ಎ ಪ್ರಕಾರ ಮಾತೃಭಾಷೆಯಲ್ಲಿ ಅಭಿವ್ಯಕ್ತಿಗೆ ಅವಕಾಶ ನೀಡಬೇಕು ಎಂಬ ಏಕೈಕ ಅಂಶ ಇದೆ. ಭಾಷಾ ಅಲ್ಪಸಂಖ್ಯಾತ ಮಕ್ಕಳು ತಮ್ಮದೇ ಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣ ಪಡೆಯಬೇಕು ಎಂಬ ಉದ್ದೇಶದಿಂದ ಈ ಅವಕಾಶವನ್ನು ಸಂವಿಧಾನ ನೀಡಿದೆ. ಹಾಗೆಂದ ಮಾತ್ರಕ್ಕೆ ರಾಜ್ಯ ಸರ್ಕಾರಗಳು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಮತ್ತು ಶಾಲೆಗಳ ನಿರ್ವಹಣೆಯಲ್ಲಿ ಹಸ್ತಕ್ಷೇಪ ಮಾಡಲು ಅವಕಾಶವಿಲ್ಲ' ಎಂದು ಹೇಳಿದ್ದಾನೆ. 'ಸದಾ ವರ್ಗಾವಣೆಯಾಗುವ ನೌಕರರು ತಮ್ಮ ಮಕ್ಕಳಿಗೆ ಸಿಬಿಎಸ್‌ಇ ಮತ್ತು ಐಸಿಎಸ್‌ಇ ಪಠ್ಯಕ್ರಮ ಇರುವ ಶಾಲೆಗಳಿಗೆ ಸೇರಿಸುತ್ತಾರೆ. ಅವರ ವಾಸ್ತವ್ಯ ರಾಜ್ಯದಲ್ಲಿ ತಾತ್ಕಾಲಿಕ ಆಗಿರುತ್ತದೆ. ಕನ್ನಡವನ್ನು ದ್ವಿತೀಯ ಭಾಷೆಯಾಗಿ ಕಲಿಯುವುದು ಆ ಮಕ್ಕಳಿಗೆ ಕಠಿಣವಾಗಲಿದೆ. ಒಂದು ವರ್ಷದ ಬಳಿಕ ಬೇರೆ ರಾಜ್ಯಕ್ಕೆ ವರ್ಗಾವಣೆಯಾದರೆ ಮತ್ತಷ್ಟು ಅನನುಕೂಲ ಆಗಲಿದೆ' ಎಂದು ಅರ್ಜಿದಾರ ವಾದಿಸಿದ್ದಾನೆ.

ಕಾಂಗ್ರೆಸ್: ಲಿಂಗಾಯತ ನಾಯಕರ ಸಭೆ

ಬೆಂಗಳೂರು: ಕಾಂಗ್ರೆಸ್‌ನ ಒಕ್ಕಲಿಗ ಸಮುದಾಯದ ನಾಯಕರು ಬುಧವಾರ ರಾತ್ರಿ ಸಭೆ ಸೇರಿದ ಬೆನ್ನಲ್ಲೇ, ಪಕ್ಷದಲ್ಲಿ ಸಕ್ರಿಯರಾಗಿರುವ ಲಿಂಗಾಯತ ಸಮುದಾಯದ ಎರಡನೆಯ ಹಂತದ ನಾಯಕರು ಗುರುವಾರ ಸಭೆ ನಡೆಸಿದ್ದಾರೆ.

ಕಾಂಗ್ರೆಸ್ ಯುವ ನಾಯಕ ಬಸವನ ಗೌಡ ಬಾದರ್ಲಿ ನೇತೃತ್ವದಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯರು, ಯುವ ಮುಖಂಡರು ಭಾಗವಹಿಸಿದ್ದರು.

ಪಕ್ಷದಲ್ಲಿ ಹುದ್ದೆ ನೀಡುವಾಗ, ಚುನಾವಣೆ ತಯಾರಿ ಹಾಗೂ ಸಂಘಟನೆಯ ವಿಚಾರದಲ್ಲಿ ಕಡೆಗಣಿಸಲಾಗುತ್ತಿದೆ. ಮೂರ್‍ನಾಲ್ಕು ಹಿರಿಯ ಲಿಂಗಾಯತ ನಾಯಕರನ್ನು ಬಿಟ್ಟರೆ ಉಳಿದವರಿಗೆ ಮನ್ನಣೆ ಸಿಗುತ್ತಿಲ್ಲ. ಈ ಬಗ್ಗೆ ವರಿಷ್ಠರ ಗಮನ ಸೆಳೆಯುವ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಿತು.

ಕಾಂಗ್ರೆಸ್‌ಗೆ ವೀರಶೈವ ಲಿಂಗಾಯತ ಸಮುದಾಯದ ಮತಗಳನ್ನು ಸೆಳೆಯಲು ಕಾರ್ಯತಂತ್ರ ರೂಪಿಸುವುದು, ಈ ಬಗ್ಗೆ ಮಠಾಧೀಶರ ಮನವೊಲಿಸುವುದು, ಎರಡನೇ ಹಂತದ ನಾಯಕರಿಗೆ ಪಕ್ಷದಲ್ಲಿ ಪ್ರಾತಿನಿಧ್ಯ ನೀಡುವ ಜೊತೆಗೆ ಮುಂದಿನ ಚುನಾವಣೆಯಲ್ಲಿ ಟಿಕೆಟ್ ಪಡೆಯುವುದು, ಕೆಪಿಸಿಸಿ ಮತ್ತು ಎಐಸಿಸಿ ಮಟ್ಟದಲ್ಲಿ ಪದಾಧಿಕಾರಿಗಳ ಆಯ್ಕೆ ನಡೆಯುವಾಗ ಸಮುದಾಯಕ್ಕೆ ಪ್ರಾತಿನಿಧ್ಯ ನೀಡುವುದು, ಎಂಬ ವಿಷಯಗಳ ಕುರಿತು ಚರ್ಚೆ ನಡೆಯಿತು.

ಸಭೆ ಬಳಿಕ ಮಾತನಾಡಿದ ಬಾದರ್ಲಿ, 'ಕಾಂಗ್ರೆಸ್ ನಲ್ಲಿರುವ ವೀರಶೈವ ಲಿಂಗಾಯತ ನಾಯಕರ ಸಭೆ ಮಾಡಿದ್ದೇವೆ. ಪಕ್ಷಕ್ಕೆ ವೀರಶೈವ ಲಿಂಗಾಯತರನ್ನು ಸೆಳೆಯುವ ಮೂಲಕ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರುವ ಬಗ್ಗೆ ಚರ್ಚೆ ಮಾಡಿದ್ದೇವೆ' ಎಂದರು. ನಾಗರಾಜ್ ಛಬ್ಬಿ ಮಾತನಾಡಿದರು.

ಆನಂದ್ ಅಂಗಡಿಯವರ, ಗಡ್ಡದೇವರಮಠ, ಶರಣಪ್ಪ ಮಟ್ಟೂರು, ಚಂದ್ರಶೇಖರ ಪಾಟೀಲ, ಅಲ್ಲಮಪ್ರಭು ಪಾಟೀಲ, ಅನಿಲ್ ಪಾಟೀಲ್ , ಪ್ರಕಾಶ್ ಕೋಳಿವಾಡ, ಅನಿಲ್ ಕುಮಾರ್ ತಡಕಲ್, ಲತಾ ಎಂ.ಪಿ. ಪ್ರಕಾಶ್, ದಿನೇಶ್ ಶಿವಮೊಗ್ಗ ಸಭೆಯಲ್ಲಿದ್ದರು.

ಪಂಚಮಸಾಲಿ ಸಮುದಾಯಕ್ಕೆ 2 ಎ ಮೀಸಲಾತಿಗೆ ಬೇಡಿಕೆ

ವಿಧಾನಸಭೆಯಲ್ಲಿ ಯತ್ನಾಳ, ಬೆಲ್ಲದ ಧರಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಂಚಮಸಾಲಿ ಸಮುದಾಯಕ್ಕೆ 2 ಎ ಮೀಸಲಾತಿ ನೀಡುವ ವಿಷಯಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸದನದಲ್ಲಿ ಉತ್ತರ ನೀಡಬೇಕು ಎಂದು ಆಗ್ರಹಿಸಿ ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ ಹಾಗೂ ಅರವಿಂದ ಬೆಲ್ಲದ ವಿಧಾನಸಭೆಯಲ್ಲಿ ಗುರುವಾರ ಧರಣಿ ನಡೆಸಿದರು.

ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಯತ್ನಾಳ, 'ರಾಜ್ಯದ ಕುರುಬ ಸಮುದಾಯವನ್ನು ಎಸ್‌ಟಿಗೆ ಸೇರಿಸುವುದು, ಎಸ್‌ಟಿ ಮೀಸಲಾತಿಯನ್ನು ಶೇ 3ರಿಂದ 7.5ಕ್ಕೆ ಹೆಚ್ಚಿಸಿ ವಾಲ್ಮೀಕಿ ಜನಾಂಗ ಹಾಗೂ ಉಪ್ಪಾರ ಸಮಾಜ ಮತ್ತು ಇನ್ನಿತರ ಎಸ್‌ಟಿ ಜನಾಂಗಕ್ಕೆ ಅನುಕೂಲ ಮಾಡಿಕೊಡುವುದಾಗಿ ಆರು ತಿಂಗಳ ಹಿಂದೆ ನಡೆದ ಅಧಿವೇಶನದಲ್ಲಿ ಸರ್ಕಾರ ಭರವಸೆ ನೀಡಿತ್ತು. ಪಂಚಮಸಾಲಿ ಸಮುದಾಯವನ್ನು ಹಿಂದುಳಿದ ವರ್ಗ 2 ಎ ಸೇರಿಸಲು ಆರು ತಿಂಗಳಲ್ಲಿ ಕ್ರಮ ಕೈಗೊಳ್ಳುವುದಾಗಿ ನಿಕಟಪೂರ್ವ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಭರವಸೆ ನೀಡಿದ್ದರು. ಸರ್ಕಾರಕ್ಕೆ ನೀಡಿದ್ದ ಸೆಪ್ಟೆಂಬರ್ 15ರ ಗಡುವು ಮುಗಿದಿದೆ. ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಮಲೆ ಮಹದೇಶ್ವರ ಬೆಟ್ಟದಿಂದ ಐದನೇ ಹಂತದ ಚಳವಳಿ ಆರಂಭವಾಗಿದೆ' ಎಂದರು.

ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, 'ಮುಖ್ಯಮಂತ್ರಿ ಹಾಗೂ ಕಾನೂನು ಸಚಿವರು ವಿಧಾನ ಪರಿಷತ್‌ನಲ್ಲಿ ಇದ್ದಾರೆ. ಅವರು ಬಂದ ನಂತರ ಉತ್ತರ ಕೊಡಿಸಲಾಗುವುದು' ಎಂದರು. ಈ ಮಾತಿನಿಂದ ಯತ್ನಾಳ ಸಮಾಧಾನಗೊಳ್ಳಲಿಲ್ಲ. ಯಾವಾಗ ಉತ್ತರ ಕೊಡುತ್ತಾರೆ ಎಂಬುದನ್ನು ಸ್ಪಷ್ಟಪಡಿಸಬೇಕು ಎಂದು ಯತ್ನಾಳ ಒತ್ತಾಯಿಸಿದರು. ಮುಖ್ಯಮಂತ್ರಿ ಬಂದ ಮೇಲೆ ಉತ್ತರ ಕೊಡುತ್ತಾರೆ ಎಂದು ಸಭಾಧ್ಯಕ್ಷರು ಸಮಾಧಾನಿಸಿದರು. 'ಮೀಸಲಾತಿ ನೀಡದ ಕಾರಣ ಸಮಾಜದಲ್ಲಿ ಬಹಳ ಅಸಮಾಧಾನ ಉಂಟಾಗಿದೆ' ಎಂದು ಅರವಿಂದ ಬೆಲ್ಲದ ಹೇಳಿದರು.

ಉತ್ತರ ನೀಡಲು ವಿಳಂಬ ಮಾಡಲಾಗುತ್ತಿದೆ ಎಂದು ಆರೋಪಿಸಿ ಯತ್ನಾಳ ಹಾಗೂ ಬೆಲ್ಲದ ಅವರು ಸಭಾಧ್ಯಕ್ಷರ ಪೀಠದ ಎದುರು ಧರಣಿ ನಡೆಸಿದರು. ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, 'ಮುಖ್ಯಮಂತ್ರಿಯವರು ಉತ್ತರ ನೀಡುತ್ತಾರೆ ಎಂದು ಹೇಳಿದ ಬಳಿಕವೂ ಆಡಳಿತ ಪಕ್ಷದವರೇ ಧರಣಿ ನಡೆಸುವುದು ಸರಿಯಲ್ಲ' ಎಂದು ಕಿವಿಮಾತು ಹೇಳಿದರು.

ಕಾಗೇರಿ, 'ಮುಖ್ಯಮಂತ್ರಿ ಪರಿಷತ್‌ಗೆ ಹೋಗಿದ್ದಾರೆ ಅಷ್ಟೇ, ವಿದೇಶಕ್ಕೇನೂ ಹೋಗಿಲ್ಲ. ಧರಣಿ ಕೈಬಿಡಿ' ಎಂದರು. ಬಳಿಕ ಸದಸ್ಯರಿಬ್ಬರು ಧರಣಿ ಕೈಬಿಟ್ಟರು.

ಸರ್ಕಾರದ ವಿರುದ್ಧವೇ ರಾಜು ಗೌಡ ಆಕ್ರೋಶ

'ಶ್ರೀರಾಮನ ಹೆಸರಿನಲ್ಲಿ ನಮ್ಮ ಪಕ್ಷ ಅಧಿಕಾರಕ್ಕೆ ಬಂದಿದೆ. ಆದರೆ, ವಾಲ್ಮೀಕಿ ಸಮುದಾಯಕ್ಕೆ ಮೀಸಲಾತಿ ನೀಡಲು ಹಿಂದೇಟು ಹಾಕುತ್ತಿದೆ' ಎಂದು ಬಿಜೆಪಿ ಸದಸ್ಯ ರಾಜು ಗೌಡ (ನರಸಿಂಹ ನಾಯಕ್) ಆಕ್ರೋಶ ವ್ಯಕ್ತಪಡಿಸಿದರು.

ಶೂನ್ಯ ವೇಳೆಯಲ್ಲಿ ಈ ವಿಚಾರದ ಬಗ್ಗೆ ಚರ್ಚೆಗೆ ಅವಕಾಶ ನೀಡಬೇಕು ಎಂದು ಆಗ್ರಹಿಸಿ ರಾಜು ಗೌಡ ಎದ್ದು ನಿಂತರು. ಅದಕ್ಕೆ ಸಭಾಧ್ಯಕ್ಷರು ಅವಕಾಶ ನೀಡಲಿಲ್ಲ. 'ಎಷ್ಟು ಸಲ ಬೇಕಾದರೂ ಮಾತನಾಡಲು ಕೆ.ಆರ್. ರಮೇಶ್ ಕುಮಾರ್ ಅವರಿಗೆ ಸಭಾಧ್ಯಕ್ಷರು ಅವಕಾಶ ನೀಡುತ್ತಾರೆ' ಎಂದು ರಾಜು ಗೌಡ ಅಸಮಾಧಾನ ವ್ಯಕ್ತಪಡಿಸಿದರು.

'ರಾಜು ಗೌಡ ಪ್ರಸ್ತಾಪಿಸುತ್ತಿರುವ ವಿಷಯ ಗಂಭೀರವಾದುದು. ಅವರಿಗೆ ಅವಕಾಶ ನೀಡಿ' ಎಂದು ಬಿಜೆಪಿಯ ಅರವಿಂದ ಲಿಂಬಾವಳಿ ವಿನಂತಿಸಿದರು.

'ನನ್ನ ಮೇಲೆಯೇ ರಾಜು ಗೌಡ ಆರೋಪ ಮಾಡಿ ಅಶಿಸ್ತು ತೋರಿದ್ದಾರೆ. ಸಭಾಧ್ಯಕ್ಷ ಪೀಠಕ್ಕೆ ಅಗೌರವ ತೋರಿದ್ದಾರೆ' ಎಂದು ಕಾಗೇರಿ ಎಚ್ಚರಿಕೆ ನೀಡಿದರು. ಈ ಬಗ್ಗೆ ಕ್ಷಮೆಯಾಚಿಸುತ್ತೇನೆ ಎಂದು ರಾಜು ಗೌಡ ಹೇಳಿದರು.

'ಧರ್ಮಸ್ಥಳಕ್ಕೆ ಹೋಗುತ್ತೇನೆಂದು ಬೆದರಿಕೆ: ಪಂಚಮಸಾಲಿಗಳಿಗೆ ತಪ್ಪಿದ ಸಿ.ಎಂ ಸ್ಥಾನ'

ಬೆಳಗಾವಿ: 'ಲಿಂಗಾಯತ ಪಂಚಮಸಾಲಿ ಸಮಾಜದವರನ್ನು ಮುಖ್ಯಮಂತ್ರಿ ಮಾಡಿದರೆ ಧರ್ಮಸ್ಥಳಕ್ಕೆ ಹೋಗುವುದಾಗಿ ಒತ್ತಡ ಹಾಕಿದ್ದರು. ಅದಕ್ಕೆ ಬಿಜೆಪಿ ಹೈಕಮಾಂಡ್ ಮಣಿದಿದ್ದರಿಂದಾಗಿ ಪಂಚಮಸಾಲಿಗಳಿಗೆ ಸ್ಥಾನ ತಪ್ಪಿರಬಹುದು' ಎಂದು ಕೂಡಲಸಂಗಮದ ಲಿಂಗಾಯತ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಯಾರ ಹೆಸರನ್ನೂ ಪ್ರಸ್ತಾಪಿಸದೇ ಟೀಕಿಸಿದರು.

ನಗರದಲ್ಲಿ ಪತ್ರಕರ್ತರೊಂದಿಗೆ ಗುರುವಾರ ಮಾತನಾಡಿದ ಅವರು, 'ಮುಖ್ಯಮಂತ್ರಿ ಬದಲಾವಣೆ ವೇಳೆ ನಮ್ಮ ಸಮಾಜದ ಬಸನಗೌಡ ಪಾಟೀಲ ಯತ್ನಾಳ ಅಥವಾ ಅರವಿಂದ ಬೆಲ್ಲದ ಅವರನ್ನು ಪರಿಗಣಿಸಲು ಬಿಜೆಪಿ ಹೈಕಮಾಂಡ್ ಮುಂದಾಗಿತ್ತು. ಆದರೆ, ಕೊನೆ ಕ್ಷಣದಲ್ಲಿ ಬದಲಾಯಿತು. ಧರ್ಮೇಂದ್ರ ಪ್ರಧಾನ್ ಅವರು ಬೆಂಗಳೂರಿಗೆ ಬಂದಿದ್ದ ವೇಳೆಯವರೆಗೂ, ಪಂಚಮಸಾಲಿ ಸಮುದಾಯಕ್ಕೆ ಮುಖ್ಯಮಂತ್ರಿ ಸ್ಥಾನ ಸಿಗುವ ನಿರೀಕ್ಷೆ ಇತ್ತು' ಎಂದರು.

'ಒತ್ತಡ ಹಾಕಿದವರು ಯಾರು' ಎಂಬ ಪ್ರಶ್ನೆಗೆ, 'ಗೊತ್ತಿಲ್ಲ. ಆ ಬಗ್ಗೆ ಮಾಧ್ಯಮದಲ್ಲಿ ನೋಡಿದ್ದೆ. ಹಾಗೆಯೇ ಆಗಿರಬಹುದೆಂದು ನನಗೂ ಅನಿಸಿದೆ' ಎಂದಷ್ಟೇ ಪ್ರತಿಕ್ರಿಯಿಸಿದರು.

'ನಾನು ಮೀಸಲಾತಿಗಾಗಿ ಒತ್ತಾಯಿಸಿ ಪ್ರಾಮಾಣಿಕವಾಗಿ ಪಾದಯಾತ್ರೆ ಮಾಡಿದ್ದೆ. ಹೋರಾಟದ ವೇಳೆ 10 ಲಕ್ಷ ಜನ ಸೇರಿದ್ದರು. ಲಿಂಗಾಯತರಲ್ಲಿ ಬಹುಸಂಖ್ಯಾತರೆಂದರೆ ಪಂಚಮಸಾಲಿಗಳು ಎನ್ನುವ ಸತ್ಯ ಪ್ರಧಾನಿ ನರೇಂದ್ರ ಮೋದಿ ಅವರಿಗೆ ನಮ್ಮ ಹೋರಾಟದಿಂದ ಗೊತ್ತಾಗಿದೆ' ಎಂದು ಹೇಳಿದರು.

'ಸರ್ಕಾರ ನೀಡಿದ್ದ ಭರವಸೆ ಈಡೇರಿಲ್ಲ. ಗಡುವು (ಸೆ.15) ಮೀರಿದ್ದರಿಂದಾಗಿ ರಾಜ್ಯದಾದ್ಯಂತ ಪಂಚಮಸಾಲಿ ಪ್ರತಿಜ್ಞಾ ಪಂಚಾಯತ್ ನಡೆಸುತ್ತಿದ್ದೇವೆ. ಅದು ಅ.1ರಂದು ಬೆಂಗಳೂರು ತಲುಪಲಿದೆ. ಅಷ್ಟರೊಳಗೆ ಬೇಡಿಕೆ ಈಡೇರಿಸಿದರೆ ಮುಖ್ಯಮಂತ್ರಿಗೆ ಕಲ್ಲುಸಕ್ಕರೆಯಿಂದ ತುಲಾಭಾರ ಮಾಡುತ್ತೇವೆ. ಈಗ ನಡೆದಿರುವ ವಿಧಾನಮಂಡಲ ಅಧಿವೇಶನದಲ್ಲೇ ಮುಖ್ಯಮಂತ್ರಿ ಘೋಷಿಸಬೇಕು. ಇಲ್ಲದಿದ್ದರೆ ಬೆಂಗಳೂರು ಸ್ವಾತಂತ್ರ್ಯ ಉದ್ಯಾನದಲ್ಲಿ 5ನೇ (ಪಂಚಮ) ಹಂತದ ಚಳವಳಿ ಆರಂಭಿಸುತ್ತೇವೆ' ಎಂದು ಎಚ್ಚರಿಕೆ ನೀಡಿದರು.



ಬಸವ ಜಯ ಮೃತ್ಯುಂಜಯ ಸ್ವಾಮೀಜಿ

ಶುಕ್ರವಾರ, ಸೆಪ್ಟೆಂಬರ್ 24, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 266 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಬೆಳ್ಳಿತೆರೆಗೆ ತಮ್ಮ ಬದ್ಧತೆ ಎನ್ನುವ ಜಿ.ಕೆ., ನಟನೆಯನ್ನು ಗಂಭೀರ ಉದ್ಯೋಗ ಎಂದೇ ಭಾವಿಸಿದ್ದಾರೆ

ಆಳ-ಅಗಲ — ನಗರಗಳತ್ತ ದಾಪುಗಾಲು
ಅಕಾಲಿಕ ಹೂ ತೆಗೆದ ಮಾವು ಬೆಳೆಗಾರ 4
ಹಿಂದುಳಿದ ತಾಲ್ಲೂಕುಗಳ ನಿಧಿ ವರ್ಗಾವಣೆ 5

ಸೆನ್ಸೆಕ್ಸ್	ನಿಫ್ಟಿ	₹/$
59,885 ▲	17,823 ▲	73.64 ▲

ಬೇಹುಗಾರಿಕೆ ಪ್ರಕರಣ: ತನಿಖೆಗೆ ತಾಂತ್ರಿಕ ತಂಡ ರಚನೆಯ ಆದೇಶ ಮುಂದಿನ ವಾರ

ಪೆಗಾಸಸ್: ಸಮಿತಿಗೆ 'ಸುಪ್ರೀಂ' ಒಲವು

ಪ್ರಜಾವಾಣಿ ವಾರ್ತೆ

ನವದೆಹಲಿ: ವಿರೋಧ ಪಕ್ಷಗಳ ಮುಖಂಡರು, ಪತ್ರಕರ್ತರು, ಸಾಮಾಜಿಕ ಹೋರಾಟಗಾರರು ಮುಂತಾದವರ ಮೇಲೆ ಇಸ್ರೇಲ್‌ನ ಕುತಂತ್ರಾಂಶ ಪೆಗಾಸಸ್ ಬಳಸಿ ಬೇಹುಗಾರಿಕೆ ನಡೆಸಲಾಗಿದೆ ಎಂಬ ಬಗ್ಗೆ ತನಿಖೆಗೆ ತಾಂತ್ರಿಕ ಸಮಿತಿ ನೇಮಿಸುವ ಸುಳಿವನ್ನು ಸುಪ್ರೀಂ ಕೋರ್ಟ್ ಗುರುವಾರ ನೀಡಿದೆ.

ಸಮಿತಿಗೆ ನೇಮಿಸಲು ಉದ್ದೇಶಿಸಲಾಗಿದ್ದ ಕೆಲವು ಪರಿಣತರು ವೈಯಕ್ತಿಕ ಕಾರಣದಿಂದ ಹಿಂದೆ ಸರಿದ ಕಾರಣ ಈ ಬಗ್ಗೆ ಆದೇಶ ನೀಡುವುದು ವಿಳಂಬವಾಗಿದೆ. ಈ ವಾರದಲ್ಲಿಯೇ ಸಮಿತಿಯ ನೇಮಕಕ್ಕೆ ಉದ್ದೇಶಿಸಲಾಗಿತ್ತು. ಆದರೆ, ಮುಂದಿನ ವಾರ ಆದೇಶ ಹೊರಡಿಸಲಾಗುವುದು ಎಂದು ಮುಖ್ಯ ನ್ಯಾಯಮೂರ್ತಿ ಎನ್‌. ವಿ. ರಮಣ ಅವರು ಹೇಳಿದ್ದಾರೆ.

ತಾಂತ್ರಿಕ ಸಮಿತಿಯ ಸದಸ್ಯರ ಹೆಸರನ್ನು ಶೀಘ್ರದಲ್ಲಿಯೇ ಅಂತಿಮಗೊಳಿಸಲಾಗುವುದು ಎಂದೂ ರಮಣ ಅವರು ತಿಳಿಸಿದ್ದಾರೆ.

ಪ್ರಕರಣದ ಅರ್ಜಿದಾರರೊಬ್ಬರ ಪರ ಹಿರಿಯ ವಕೀಲ ಸಿ.ಯು. ಸಿಂಗ್ ಅವರಿಗೆ ಈ ವಿಚಾರವನ್ನು ಮುಖ್ಯ ನ್ಯಾಯಮೂರ್ತಿ ರಮಣ ಅವರು ಮೌಖಿಕವಾಗಿ ತಿಳಿಸಿದರು. ಬೇರೊಂದು ಪ್ರಕರಣಕ್ಕೆ ಸಂಬಂಧಿಸಿ ಸಿಂಗ್ ಅವರು ನ್ಯಾಯಾಲಯದಲ್ಲಿ ಇದ್ದರು.

ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಮತ್ತು ಹಿಮಾ ಕೊಹ್ಲಿ ಅವರೂ ಇದ್ದ ಪೀಠವು ಇದೇ 13ರಂದು ಆದೇಶವನ್ನು ಕಾಯ್ದಿರಿಸಿತ್ತು. ಬೇಹುಗಾರಿಕೆ ಪ್ರಕರಣದಲ್ಲಿ ಮಧ್ಯಂತರ ಆದೇಶ ನೀಡುವುದಾಗಿ ತಿಳಿಸಿತ್ತು.

ಗೂಢಚರ್ಯೆಯ ಆರೋಪಗಳನ್ನು ಪರಿಶೀಲಿಸುವುದಕ್ಕಾಗಿ ಸ್ವತಂತ್ರ ಪರಿಣತರ ಸಮಿತಿ ರಚಿಸುವುದಾಗಿ ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಹೇಳಿತ್ತು. ಪ್ರಕರಣಕ್ಕೆ ಸಂಬಂಧಿಸಿದ ವಿವರಗಳನ್ನು ಪರಿಣತರ ಸಮಿತಿಯ ಮುಂದೆ ಬಹಿರಂಗಪಡಿಸುವುದಾಗಿಯೂ ಭರವಸೆ ಕೊಟ್ಟಿತ್ತು.

ಆದರೆ, ವಿವರವಾದ ಪ್ರಮಾಣಪತ್ರವನ್ನು ಕೋರ್ಟ್‌ಗೆ ಸಲ್ಲಿಸಲು ಸಾಧ್ಯವಿಲ್ಲ ಎಂದು ಸರ್ಕಾರ ಹೇಳಿತ್ತು. ಯಾವುದೇ ತಂತ್ರಾಂಶ ಬಳಸಿ ಗೂಢಚರ್ಯೆ ನಡೆಸಲಾಗಿದೆಯೇ ಇಲ್ಲವೇ ಎಂಬುದನ್ನು ಚರ್ಚಿಸಲು ಸಾಧ್ಯವಿಲ್ಲ. ಇದು ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ವಿಚಾರ. ಬೇಹುಗಾರಿಕೆಯ ವಿವರಗಳು ಬಹಿರಂಗವಾದರೆ ಭಯೋತ್ಪಾದನಾ ಸಂಘಟನೆಗಳು ಜಾಗೃತಗೊಂಡು, ತಂತ್ರಾಂಶಕ್ಕೆ ತಿರುಗೇಟು ನೀಡುವ ಪ್ರಯತ್ನ ನಡೆಸಬಹುದು ಎಂದಿತ್ತು.

ರಾಷ್ಟ್ರೀಯ ಭದ್ರತೆಗೆ ಧಕ್ಕೆ ಆಗುವಂತಹ ಯಾವುದೇ ವಿವರವನ್ನು ತಿಳಿದುಕೊಳ್ಳುವ ಇಚ್ಛೆ ಇಲ್ಲ. ಆದರೆ, ಸರ್ಕಾರವು ತನಿಖೆಗೆ ಆದೇಶಿಸಿದೆಯೇ ಎಂದು ತಿಳಿಯಲು ಬಯಸಿದ್ದಾಗಿ ಕೋರ್ಟ್ ಹೇಳಿತ್ತು.

ನಿರ್ಧಾರ ಸ್ವಾಗತಿಸಿದ ಕಾಂಗ್ರೆಸ್

ಪರಿಣತರ ಸಮಿತಿ ರಚಿಸುವ ಕೋರ್ಟ್‌ನ ನಿರ್ಧಾರವು ಸರಿಯಾದ ದಿಕ್ಕಿನಲ್ಲಿ ಇರಿಸಿದ ಹೆಜ್ಜೆ. ಆದರೆ, ಸುಪ್ರೀಂ ಕೋರ್ಟ್ ಉಸ್ತುವಾರಿಯಲ್ಲಿ ಸಮಗ್ರ ಮತ್ತು ಸ್ವತಂತ್ರ ತನಿಖೆಯೇ ಪ್ರಕರಣಕ್ಕೆ ಇರುವ ಸರಳ ಪರಿಹಾರ ಎಂದು ಕಾಂಗ್ರೆಸ್ ಪಕ್ಷವು ಹೇಳಿದೆ.

ಪ್ರಕರಣದ ತನಿಖೆಯು ರಾಷ್ಟ್ರೀಯ ಭದ್ರತೆಗೆ ಧಕ್ಕೆ ಆಗುವುದನ್ನು ತಪ್ಪಿಸುತ್ತದೆ. ಬೇಹುಗಾರಿಕೆಗೆ ಒಳಗಾಗಿದ್ದಾರೆ ಎಂಬ ಪಟ್ಟಿಯಲ್ಲಿ ಆಡಳಿತ ಪಕ್ಷದ ರಾಜಕೀಯ ಪ್ರತಿಸ್ಪರ್ಧಿಗಳು ಮಾತ್ರವಲ್ಲ, ಸಾಂವಿಧಾನಿಕ ಹುದ್ದೆಯಲ್ಲಿ ಇದ್ದವರೂ ಸೇರಿದ್ದಾರೆ ಎಂದು ಕಾಂಗ್ರೆಸ್ ವಕ್ತಾರೆ ಸುಪ್ರಿಯಾ ಶ್ರೀನಾತೆ ಹೇಳಿದ್ದಾರೆ.

ಸಮಿತಿ ರಚನೆಯ ನಿರ್ಧಾರವನ್ನು ಕಾಂಗ್ರೆಸ್ ಸ್ವಾಗತಿಸುತ್ತದೆ. ಇದು ಸಮಗ್ರ ತನಿಖೆಯೊಂದರ ಭಾಗ ಎಂದು ಪಕ್ಷವು ಭಾವಿಸಿದೆ ಎಂದು ಅವರು ಹೇಳಿದ್ದಾರೆ.

> **ಪೆಗಾಸಸ್ ಪ್ರಕರಣವು ರಾಷ್ಟ್ರೀಯ ಭದ್ರತೆಯನ್ನು ರಕ್ಷಿಸುವ ವಿಚಾರ ಅಲ್ಲ, ಅದು ರಾಷ್ಟ್ರೀಯ ಭದ್ರತೆ ಮತ್ತು ಖಾಸಗಿತನದ ಮೇಲೆ ಕೇಂದ್ರ ಸರ್ಕಾರದ ಪ್ರಹಾರ**
> **ರಣದೀಪ್ ಸುರ್ಜೇವಾಲಾ**
> ಕಾಂಗ್ರೆಸ್ ವಕ್ತಾರ

ಇಸ್ರೇಲ್‌ನ ಎನ್‌ಎಸ್‌ಒ ಗ್ರೂಪ್ ಎಂಬ ಕಂಪನಿಯು ತಯಾರಿಸುತ್ತಿರುವ ಪೆಗಾಸಸ್ ಎಂಬ ಬೇಹುಗಾರಿಕೆ ತಂತ್ರಾಂಶ ಬಳಸಿ ಜಗತ್ತಿನಾದ್ಯಂತ 50 ಸಾವಿರಕ್ಕೂ ಹೆಚ್ಚು ಜನರ ಮೇಲೆ ಬೇಹುಗಾರಿಕೆ ನಡೆಸಲಾಗಿದೆ. ಅದರಲ್ಲಿ ಭಾರತದ ಹಲವರು ಕೂಡ ಇದ್ದಾರೆ ಎಂದು ಅಂತರರಾಷ್ಟ್ರೀಯ ತನಿಖಾ ಸಹಯೋಗವು ಜುಲೈ 18ರಂದು ವರದಿ ಮಾಡಿತ್ತು.

ವಕೀಲ ಎಂ.ಎಲ್. ಶರ್ಮಾ, ಸಿಪಿಎಂ ಸಂಸದ ಜಾನ್ ಬ್ರಿಟ್ಟಾಸ್, ಪತ್ರಕರ್ತ ಎನ್. ರಾಮ್, ಭಾರತೀಯ ಸಂಪಾದಕರ ಕೂಟ ಮತ್ತು ಇತರರು ಪ್ರಕರಣದ ಬಗ್ಗೆ ತನಿಖೆಗೆ ಆದೇಶ ನೀಡುವಂತೆ ಕೋರಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

10 ದಿನದಲ್ಲಿ ಕೆಕೆಆರ್‌ಡಿಬಿ ಬಲವರ್ಧನೆ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಲ್ಲಿ (ಕೆಕೆಆರ್‌ಡಿಬಿ) ಖಾಲಿ ಇರುವ ಪ್ರಮುಖ ಹುದ್ದೆಗಳನ್ನು ಹತ್ತು ದಿನಗಳೊಳಗೆ ಭರ್ತಿ ಮಾಡುವ ಮೂಲಕ ಮಂಡಳಿಯ ಬಲವರ್ಧನೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.



ಬಸವರಾಜ ಬೊಮ್ಮಾಯಿ

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಕುರಿತು ವಿಧಾನಸಭೆಯಲ್ಲಿ ಗುರುವಾರ ನಡೆದ ಚರ್ಚೆಯಲ್ಲಿ ಪಾಲ್ಗೊಂಡಿದ್ದ ವಿರೋಧ ಪಕ್ಷಗಳ ಸದಸ್ಯರು, ಈ ಭಾಗದ ಸಮಸ್ಯೆಗಳನ್ನು ವಿವರಿಸಿ, ಘೋರ ಅನ್ಯಾಯವಾಗಿದೆ ಎಂದು ಪ್ರತಿಪಾದಿಸಿದ್ದರು.

ಚರ್ಚೆಗೆ ಉತ್ತರ ನೀಡಿದ ಬೊಮ್ಮಾಯಿ, 'ಕೆಕೆಆರ್‌ಡಿಬಿಗೆ ಕಾಯಂ ಕಾರ್ಯದರ್ಶಿಯನ್ನು ನೇಮಿಸಲಾಗುವುದು. ಮಂಡಳಿಯ ಎಲ್ಲ ಪ್ರಮುಖ ಹುದ್ದೆಗಳು ಹಾಗೂ ಎಂಜಿನಿಯರಿಂಗ್ ವಿಭಾಗದಲ್ಲಿ ಹುದ್ದೆಗಳಿಗೆ ಶೀಘ್ರದಲ್ಲೇ ನೇಮಕ ಮಾಡಲಾಗುವುದು' ಎಂದರು.

ಕೋವಿಡ್ ಕಾರಣದಿಂದ ಆರ್ಥಿಕ ಸಂಕಷ್ಟ ಉಂಟಾಗಿದ್ದರಿಂದ ನೇಮಕಾತಿ ಪ್ರಕ್ರಿಯೆಯನ್ನು ನಿರ್ಬಂಧಿಸಲಾಗಿತ್ತು. ಈ ನಿರ್ಬಂಧ ತೆರವು ಮಾಡಿ, ತುರ್ತು ಅಗತ್ಯವಿರುವ ಹುದ್ದೆಗಳನ್ನು ಮೊದಲ ಹಂತದಲ್ಲಿ ಮತ್ತು ಇತರ ಖಾಲಿ ಹುದ್ದೆಗಳನ್ನು ಎರಡನೇ ಹಂತದಲ್ಲಿ ಭರ್ತಿ ಮಾಡಲಾಗುವುದು. ವಿಧಾನಸೌಧದಲ್ಲಿರುವ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಕೋಶವನ್ನು ಕಲಬುರ್ಗಿಗೆ ಸ್ಥಳಾಂತರಿಸಲಾಗುವುದು ಎಂದರು.

'ಖಾಲಿ ಇರುವ 6,779 ಶಿಕ್ಷಕರ ಹುದ್ದೆಗಳ ಭರ್ತಿಗೆ ಒಪ್ಪಿಗೆ ನೀಡಲಾಗಿದೆ. 14,809 ಹುದ್ದೆಗಳನ್ನು ನೇರ ನೇಮಕಾತಿಯಡಿ ತುಂಬಲಾಗುವುದು' ಎಂದು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಹೇಳಿದರು.

ತನಿಖೆಯ ಭರವಸೆ

'ಕೆಕೆಆರ್‌ಡಿಬಿಗೆ ಕೊಟ್ಟ ಅನುದಾನದ ಪೈಕಿ, ₹100 ಕೋಟಿಯನ್ನು ಕಲ್ಯಾಣ ಕರ್ನಾಟಕ ಮಾನವ ಕೃಷಿ ಅಭಿವೃದ್ಧಿ ಸಂಘಕ್ಕೆ ಕೊಡಲಾಗಿದೆ. ಈ ಅನುದಾನ ದುರ್ಬಳಕೆಯಾಗಿದೆ' ಎಂಬ ಕಾಂಗ್ರೆಸ್‌ನ ಪ್ರಿಯಾಂಕ್ ಖರ್ಗೆ ಆರೋಪಿಸಿದರು.

'ಈ ಸಂಸ್ಥೆಯ ಬಗ್ಗೆಯೂ ತನಿಖೆ ನಡೆಸಿ, ತಪ್ಪು ಮಾಡಿದ್ದರೆ ಕ್ರಮ ಜರುಗಿಸುತ್ತೇವೆ' ಎಂದು ಸಚಿವ ಮಾಧುಸ್ವಾಮಿ ಹೇಳಿದರು.

ಮುಖ್ಯಾಂಶಗಳು

- ಕೆಕೆಆರ್‌ಡಿಬಿಗೆ ಕಾಯಂ ಕಾರ್ಯದರ್ಶಿ ನೇಮಕ: ಸಿ.ಎಂ ಭರವಸೆ
- ಪ್ರಮುಖ ಹುದ್ದೆಗಳಿಗೆ ಶೀಘ್ರ ನೇಮಕ

ಐ.ಟಿ. ಪೋರ್ಟಲ್: ಇನ್ನೂ ಇದೆ ಸಮಸ್ಯೆ

ನವದೆಹಲಿ (ಪಿಟಿಐ): ಆದಾಯ ತೆರಿಗೆ ಪೋರ್ಟಲ್ ಪ್ರವೇಶಿಸುವಲ್ಲಿ ಕೆಲವು ಬಳಕೆದಾರರು ಈಗಲೂ ತೊಂದರೆ ಎದುರಿಸುತ್ತಿದ್ದಾರೆ ಎಂದು ಇನ್ಫೊಸಿಸ್ ಕಂಪನಿ ಗುರುವಾರ ತಿಳಿಸಿದೆ.

ಬಳಕೆದಾರರ ಅನುಭವವನ್ನು ಮತ್ತಷ್ಟು ಸುಗಮಗೊಳಿಸಲು ಆದಾಯ ತೆರಿಗೆ ಇಲಾಖೆಯ ಸಹಯೋಗದೊಂದಿಗೆ ತ್ವರಿತಗತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವುದಾಗಿಯೂ ಕಂಪನಿ ಹೇಳಿದೆ.

ಕಳೆದ ಕೆಲವು ವಾರಗಳಲ್ಲಿ ಜಾಲತಾಣ ಬಳಕೆಯಲ್ಲಿ ಹೆಚ್ಚಳ ಕಂಡುಬಂದಿದೆ. 3 ಕೋಟಿಗೂ ಹೆಚ್ಚು ತೆರಿಗೆದಾರರು ಪೋರ್ಟಲ್‌ಗೆ ಲಾಗಿನ್ ಆಗಿ ವಿವಿಧ ವಹಿವಾಟುಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಕೆಲವು ಬಳಕೆದಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಕಂಪನಿಯು ಗುರುತಿಸಿದೆ. 1,200ಕ್ಕೂ ಅಧಿಕ ತೆರಿಗೆ ಪಾವತಿದಾರರೊಂದಿಗೆ ನೇರ ಸಂಪರ್ಕದಲ್ಲಿದ್ದು ಅವರ ಸಮಸ್ಯೆಗಳನ್ನು ಪರಿಹರಿಸುವ ಪ್ರಯತ್ನ ನಡೆಯುತ್ತಿದೆ ಎಂದೂ ಹೇಳಿದೆ.

ಸೆಪ್ಟೆಂಬರ್ ತಿಂಗಳಿನಲ್ಲಿ ಪ್ರತಿ ದಿನ ಸರಾಸರಿ 15 ಲಕ್ಷ ತೆರಿಗೆ ಪಾವತಿದಾರರು ಪೋರ್ಟಲ್‌ಗೆ ಲಾಗಿನ್ ಆಗಿದ್ದಾರೆ. ಇದುವರೆಗೆ 1.5 ಕೋಟಿಗೂ ಅಧಿಕ ರಿಟರ್ನ್ಸ್ ಸಲ್ಲಿಕೆ ಆಗಿದೆ ಎಂದು ತಿಳಿಸಿದೆ.

ಬೆಂಗಳೂರು ನಗರದ ಚಾಮರಾಜಪೇಟೆಯಲ್ಲಿರುವ ಗೋದಾಮೊಂದರಲ್ಲಿ ಭಾರಿ ಸ್ಫೋಟ ಸಂಭವಿಸಿದ ಪರಿಣಾಮ ಮುಂಭಾಗದಲ್ಲಿ ನಿಲ್ಲಿಸಿದ್ದ ವಾಹನಗಳು ನಜ್ಜುಗುಜ್ಜಾಗಿವೆ –ಪ್ರಜಾವಾಣಿ ಚಿತ್ರ

ಬೆಂಗಳೂರಿನಲ್ಲಿ ಮತ್ತೊಂದು ಅವಘಡ

ಪಟಾಕಿ ಸ್ಫೋಟ: ದೇಹಗಳು ಛಿದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೊಮ್ಮನಹಳ್ಳಿಯ ದೇವರಚಿಕ್ಕನಹಳ್ಳಿ ಆಶ್ರಿತ್ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ಬೆಂಕಿ ಹೊತ್ತಿಕೊಂಡು ತಾಯಿ–ಮಗಳು ಮೃತಪಟ್ಟ ಘಟನೆ ನೆನಪು ಮಾಸುವ ಮುನ್ನವೇ ನಗರದಲ್ಲಿ ಗುರುವಾರ ಮತ್ತೊಂದು ಅವಘಡ ಸಂಭವಿಸಿದೆ.

ಚಾಮರಾಜಪೇಟೆ ಸೀತಾಪತಿ ಅಗ್ರಹಾರದ 4ನೇ ಅಡ್ಡರಸ್ತೆಯಲ್ಲಿರುವ ಗೋದಾಮಿನಲ್ಲಿ ಭಾರಿ ಸ್ಫೋಟ ಸಂಭವಿಸಿದ್ದು, ಅದರ ತೀವ್ರತೆಗೆ ದೇಹಗಳು ಛಿದ್ರ ಛಿದ್ರವಾಗಿ ಇಬ್ಬರು ದಾರುಣವಾಗಿ ಮೃತಪಟ್ಟಿದ್ದಾರೆ.

'ಗೋರಿಪಾಳ್ಯದ ಅಸ್ಲಂಪಾಷಾ (59) ಹಾಗೂ ತಮಿಳುನಾಡಿನ ಮನೋಹರ್ (29) ಮೃತರು. ಬೆಳಿಗ್ಗೆ 11.40ರ ಸುಮಾರಿಗೆ ಸಂಭವಿಸಿದ್ದ ಸ್ಫೋಟದಿಂದಾಗಿ ಜೇಮ್ಸ್, ಅಂಗೂಸ್ವಾಮಿ, ಮಂಜುನಾಥ್, ಗಣಪತಿ ಸೇರಿ ಏಳು ಮಂದಿ ಗಾಯಗೊಂಡಿದ್ದಾರೆ. 10ಕ್ಕೂ ಹೆಚ್ಚು ವಾಹನಗಳು ಸ್ಫೋಟದ ತೀವ್ರತೆಗೆ ನಜ್ಜುಗುಜ್ಜಾಗಿವೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಮೃತ ಅಸ್ಲಂ ಪಾಷಾ, ಪಂಕ್ಚರ್ ಅಂಗಡಿ ನಡೆಸುತ್ತಿದ್ದರು. ಮನೋಹರ್, ಟಾಟಾ ಏಸ್ ಚಾಲಕ. ಅವರಿಬ್ಬರ ಮೃತದೇಹಗಳು ಛಿದ್ರ ಛಿದ್ರವಾಗಿ ಸ್ಥಳದಲ್ಲಿ ಬಿದ್ದಿದ್ದವು. ಒಟ್ಟುಗೂಡಿಸಿ ಮರಣೋತ್ತರ ಪರೀಕ್ಷೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ಸಾಗಿಸಲಾಗಿದೆ' ಎಂದೂ ತಿಳಿಸಿದರು.

5ನೇ ಪುಟ ನೋಡಿ

'ಪಟಾಕಿ ಅಕ್ರಮ ಸಂಗ್ರಹ'

'ಆರೋಪಿ ಬಾಬು, ಬಿಬಿಎಂಪಿಯಿಂದ ಯಾವುದೇ ಅನುಮತಿ ಪಡೆಯದೇ ಅಕ್ರಮವಾಗಿ ಪಟಾಕಿಗಳನ್ನು ಸಂಗ್ರಹಿಸಿದ್ದರು. ಗೋದಾಮಿನಲ್ಲಿ ಯಾವುದೇ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿರಲಿಲ್ಲ. ಅವರ ನಿರ್ಲಕ್ಷ್ಯದಿಂದಲೇ ಎರಡು ಸಾವುಗಳು ಸಂಭವಿಸಿವೆ' ಎಂದು ದಕ್ಷಿಣ ವಿಭಾಗದ ಡಿಸಿಪಿ ಹರೀಶ್ ಪಾಂಡೆ 'ಪ್ರಜಾವಾಣಿ'ಗೆ ತಿಳಿಸಿದರು.

'ಐಪಿಸಿ ಹಾಗೂ ಸ್ಫೋಟಕ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಬಾಬುನನ್ನು ಬಂಧಿಸಲಾಗಿದೆ. ಹೆಚ್ಚಿನ ತನಿಖೆಗೆ ವಿಶೇಷ ತಂಡ ರಚಿಸಲಾಗಿದೆ' ಎಂದೂ ಹೇಳಿದರು.

ತಲಾ ₹ 2 ಲಕ್ಷ ಪರಿಹಾರ: ಜಮೀರ್

'ಮೃತ ಅಸ್ಲಂ ಪಾಷಾ ಹಾಗೂ ಮನೋಹರ್ ಅವರಿಗೆ ನನ್ನ ವೈಯಕ್ತಿಕವಾಗಿ ತಲಾ ₹ 2 ಲಕ್ಷ ಪರಿಹಾರ ನೀಡುತ್ತೇನೆ. ಗಾಯಾಳುಗಳ ಚಿಕಿತ್ಸೆ ವೆಚ್ಚ ಭರಿಸುತ್ತೇನೆ' ಎಂದು ಚಾಮರಾಜಪೇಟೆ ಕ್ಷೇತ್ರದ ಕಾಂಗ್ರೆಸ್ ಶಾಸಕ ಜಮೀರ್ ಅಹ್ಮದ್ ಖಾನ್ ಸುದ್ದಿಗಾರರಿಗೆ ತಿಳಿಸಿದರು.

ಇನ್ನಷ್ಟು ಸುದ್ದಿಗಳು 3B

ಮಾಹಿತಿ ಸಂಗ್ರಹಿಸಿದ ರಾಜ್ಯ ಸರ್ಕಾರಿ ನೌಕರರ ಸಂಘ

ಅಂತರ ಜಿಲ್ಲೆ ವರ್ಗ: 9,090 ಶಿಕ್ಷಕರ ಕೋರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ, ವಿಧವೆ, ವಿಚ್ಛೇದಿತ, ಪತಿ–ಪತ್ನಿ, ಅಂಗವಿಕಲತೆ ಹೀಗೆ ನಾನಾ ಕಾರಣಗಳಿಗೆ, ರಾಜ್ಯದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿರುವ ಶಿಕ್ಷಕರಲ್ಲಿ 9,090 ಮಂದಿ ಒಂದು ಬಾರಿ ಅಂತರಜಿಲ್ಲಾ ವರ್ಗಾವಣೆ ಬಯಸಿದ್ದಾರೆ. ಈ ಪೈಕಿ, ಕಲ್ಯಾಣ ಕರ್ನಾಟಕ ಭಾಗದ 2,931 ಶಿಕ್ಷಕರಿದ್ದಾರೆ.

ರಾಜ್ಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಾಲಾ ಶಿಕ್ಷಕರ ಸಮಸ್ಯೆಗಳ ಬಗ್ಗೆ ಸೆ. 9ರಂದು ಸಭೆ ನಡೆಸಿದ್ದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್, ಅಂತರಜಿಲ್ಲಾ ವರ್ಗಾವಣೆ ಬಯಸುವ ಶಿಕ್ಷಕರ ನಿಖರ ಮತ್ತು ವಾಸ್ತವಾಂಶದ ಮಾಹಿತಿ ಸಲ್ಲಿಸುವಂತೆ ಸೂಚಿಸಿದ್ದರು. ಅದರಂತೆ ರಾಜ್ಯ ಸರ್ಕಾರಿ ನೌಕರರ ಸಂಘ ರಾಜ್ಯದಾದ್ಯಂತ ಎಲ್ಲ ಜಿಲ್ಲೆಗಳಿಂದ ಅಂತರ ಜಿಲ್ಲಾ ವರ್ಗಾವಣೆ ಬಯಸುವ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರ ಜಿಲ್ಲಾವಾರು ಮಾಹಿತಿ ಸಂಗ್ರಹಿಸಿ ಸಚಿವರಿಗೆ ಸಲ್ಲಿಸಿದೆ.

ದಾವಣಗೆರೆ (512), ವಿಜಯಪುರ (501), ತುಮಕೂರು (362), ಹಾವೇರಿ (353), ಬೆಳಗಾವಿ (330) ಜಿಲ್ಲೆಗಳಲ್ಲಿರುವ ಪ್ರಾಥಮಿಕ ಶಾಲೆಗಳ ಶಿಕ್ಷಕರು ಹಾಗೂ ವಿಜಯಪುರ (217), ದಾವಣಗೆರೆ (186), ಬಾಗಲಕೋಟೆ (182), ಕಲಬುರ್ಗಿ (169), ಬಳ್ಳಾರಿ (163) ಜಿಲ್ಲೆಯ ಪ್ರೌಢ ಶಾಲೆಗಳ ಶಿಕ್ಷಕರು ಹೆಚ್ಚಿನ ಸಂಖ್ಯೆಯಲ್ಲಿ ವರ್ಗಾವಣೆ ಬಯಸಿದ್ದಾರೆ.

'ಕುಟುಂಬ ಸದಸ್ಯರಿಂದ 10–15 ವರ್ಷಗಳಿಂದ ದೂರ ಇದ್ದು ದೂರದ ಜಿಲ್ಲೆಗಳಲ್ಲಿ ಸಾವಿರಾರು ಶಿಕ್ಷಕರು ಕೆಲಸ ನಿರ್ವಹಿಸುತ್ತಿದ್ದಾರೆ. ವರ್ಗಾವಣೆ ನಿಯಮಗಳ ನ್ಯೂನತೆಯ ಕಾರಣಕ್ಕೆ ಹಲವು ಶಿಕ್ಷಕರು ಮಾನಸಿಕ ಸ್ವಾಸ್ಥ್ಯವನ್ನೇ ಕಳೆದುಕೊಂಡಿದ್ದಾರೆ. ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಪಶ್ಚಿಮ ಬಂಗಾಳ ಸರ್ಕಾರ, ಅಲ್ಲಿನ ಶಿಕ್ಷಕರಿಗೆ ಅವರು ಇಚ್ಛಿಸಿರುವ ಜಿಲ್ಲೆಗೆ ಒಂದು ಬಾರಿ ವರ್ಗಾವಣೆ ಅವಕಾಶ ನೀಡಿದೆ. ಅದೇ ಮಾದರಿಯಲ್ಲಿ ರಾಜ್ಯದಲ್ಲೂ ವರ್ಗಾವಣೆಯ ಅವಕಾಶ ಮಾಡಿಕೊಡಬೇಕು' ಎಂದು ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಒತ್ತಾಯಿಸಿದ್ದಾರೆ.

5ನೇ ಪುಟ ನೋಡಿ

> **ಶಿಕ್ಷಕರಿಗೆ ಒಂದು ಬಾರಿಗೆ ಸೀಮಿತವಾಗಿ ಅಂತರಜಿಲ್ಲಾ ವರ್ಗಾವಣೆಗೆ ಅವಕಾಶ ಕಲ್ಪಿಸಲು ರಾಜ್ಯ ಸರ್ಕಾರ ವಿಶೇಷ ನಿಯಮ ರೂಪಿಸಬೇಕು. ಆ ಮೂಲಕ, ವರ್ಗಾವಣೆಗೆ ಅವಕಾಶ ಕಲ್ಪಿಸಬೇಕು**
> **ಸಿ.ಎಸ್. ಷಡಾಕ್ಷರಿ**
> ಅಧ್ಯಕ್ಷ, ರಾಜ್ಯ ಸರ್ಕಾರಿ ನೌಕರರ ಸಂಘ

ವರ್ಗಾವಣೆ ಬಯಸಿದ ಶಿಕ್ಷಕರು

ಶಾಲೆ	ಕಲ್ಯಾಣ ಕರ್ನಾಟಕ	ಇತರ ಜಿಲ್ಲೆ	ಒಟ್ಟು
ಪ್ರಾಥಮಿಕ	2,032	4,154	6,186
ಪ್ರೌಢ	939	1,965	2,904

ವರ್ಗಾವಣೆ ಬಯಸಿದ ಪುರುಷ-ಮಹಿಳಾ ಶಿಕ್ಷಕರು

ಶಾಲೆ	ಪುರುಷ	ಮಹಿಳೆ
ಪ್ರಾಥಮಿಕ	3,484	2,702
ಪ್ರೌಢ	1,940	964

ಯಾವ ಆರೋಗ್ಯ ಕಾರಣಕ್ಕೆ ವರ್ಗಾವಣೆ

ಶಾಲೆ	ಹೃದಯ	ಕ್ಯಾನ್ಸರ್	ಕಿಡ್ನಿ	ಇತರ	ಒಟ್ಟು
ಪ್ರಾಥಮಿಕ	89	14	25	758	611
ಪ್ರೌಢ	31	13	9	334	387

ಯಾವ ವಿಶೇಷ ಕಾರಣಕ್ಕೆ ವರ್ಗಾವಣೆ

ಶಾಲೆ	ವಿಧವೆ	ವಿಚ್ಛೇದಿತ	ಅಂಗವಿಕಲ	ಮಾಜಿ ಸೈನಿಕ	ಪತಿ–ಪತ್ನಿ	ಒಟ್ಟು
ಪ್ರಾಥಮಿಕ	116	60	148	31	1,409	1,764
ಪ್ರೌಢ	31	12	77	9	573	702

ರಾಜ್ಯ ಕೋವಿಡ್ ಅಂಕಿ–ಅಂಶ

29,71,044 ▲	ಒಟ್ಟು ಸೋಂಕಿತರು (29,70,208 ನಿನ್ನೆಯ ವಿವರ)
13,590 ▼	ಸಕ್ರಿಯ ಪ್ರಕರಣಗಳು
29,19,742 ▲	ಗುಣಮುಖರಾದವರು
37,683 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	836	▼
ಗುಣಮುಖ	852	▼
ಸಾವು	15	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಒಳ ಪುಟ
'ಪಿಎಂ ಕೇರ್ಸ್ ಸರ್ಕಾರಿ ನಿಧಿಯಲ್ಲ' 9

ಚಿನಕುರಳಿ
ಪ್ರಕಾಶ್ ಶೆಟ್ಟಿ

ರೈತರಿಂದ ಭೂಮಿ ಪಡೆದು ಬಾಳೆ ಬೆಳೆಯಲು ಮುಂದಾದ ಎಂಜಿನಿಯರ್‌ಗಳು

ಬರಡು ಭೂಮಿಯಲ್ಲಿ ಕೃಷಿಗೆ ಸಿದ್ಧತೆ

• ಬಿಳಿಗಿರಿ ಆರ್.

ಪ್ರಜಾವಾಣಿ ವಿಶೇಷ

ಜಯಪುರ(ಮೈಸೂರು ತಾಲ್ಲೂಕು): ಪಾಳು ಬಿದ್ದ ಬರಡು ಭೂಮಿಯನ್ನು ಕೃಷಿ ಯೋಗ್ಯ ಭೂಮಿಯನ್ನಾಗಿ ಪರಿವರ್ತಿಸಿ, ರೈತರಿಗೆ ಆದಾಯ ತಂದುಕೊಡಲು ಎಂಜಿನಿಯರ್‌ಗಳಿಬ್ಬರು 'ಪ್ರಾಜೆಕ್ಟ್ ಹಗ್ ಕಂಪನಿ' ಸ್ಥಾಪಿಸಿದ್ದಾರೆ. ಹೋಬಳಿಯ ದಾರಿಪುರ ಗ್ರಾಮದಲ್ಲಿ ಪ್ರಾಯೋಗಿಕವಾಗಿ 10 ಎಕರೆ ಪ್ರದೇಶದಲ್ಲಿ ಬಾಳೆ ಬೆಳೆಯಲು ಸಿದ್ಧತೆ ನಡೆಸಿದ್ದಾರೆ.

ಮೈಸೂರು ನಿವಾಸಿಗಳಾದ ಸೋಮಸುಂದರ್ ಹಾಗೂ ಲೆವಿನ್ ಲಾರೆನ್ಸ್ ಕಂಪನಿಯ ಸ್ಥಾಪಕರು. ಪ್ರಗತಿಪರ ಕೃಷಿಕ ಶರವಣ ಅವರ ಮಾರ್ಗದರ್ಶನದಲ್ಲಿ ಕೃಷಿ ಚಟುವಟಿಕೆ ನಡೆಸಲು ಮುಂದಾಗಿದ್ದಾರೆ. ಕಂಪನಿಗೆ ಶರವಣ ಅವರನ್ನೇ ಮುಖ್ಯಸ್ಥರನ್ನಾಗಿ ನೇಮಿಸಿದ್ದಾರೆ.

ರೈತರೊಂದಿಗೆ ಒಪ್ಪಂದ ಮಾಡಿಕೊಂಡು ಬರಡು ಭೂಮಿ ಪಡೆದು, ಫಲವತ್ತಾದ ಭೂಮಿಯನ್ನಾಗಿ ಪರಿವರ್ತಿಸಲಾಗುತ್ತದೆ. ಅಲ್ಲಿ ಬೆಳೆ ಬೆಳೆಯಲು ಬಿತ್ತನೆ ಬೀಜ, ಗೊಬ್ಬರ, ಕೃಷಿ ಪರಿಕರಗಳು, ಕೂಲಿಕಾರ್ಮಿಕರ ವೆಚ್ಚವನ್ನೂ ಭರಿಸಿ, ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆಯನ್ನೂ ಕಂಪನಿಯೇ ಒದಗಿಸಲಿದೆ. ರೈತ. ಜಮೀನಿನ ಬೆಳೆಯನ್ನು ನೋಡಿಕೊಳ್ಳಬೇಕಷ್ಟೇ. ಬಂದ ಆದಾಯದಲ್ಲಿ ಶೇ 50ರಷ್ಟನ್ನು ರೈತರಿಗೆ ನೀಡಲಾಗುತ್ತದೆ.

5ನೇ ಪುಟ ನೋಡಿ

ಜಯಪುರ ಹೋಬಳಿಯ ದಾರಿಪುರ ಗ್ರಾಮದಲ್ಲಿ ಬರಡು ಭೂಮಿಯನ್ನು ಯಂತ್ರದ ಸಹಾಯದಿಂದ ಹದಗೊಳಿಸುವ ಪ್ರಯತ್ನ ನಡೆದಿದೆ

'ರೈತರ ಆದಾಯ ದ್ವಿಗುಣ'

'ವೈಜ್ಞಾನಿಕ ಕೃಷಿ ಪದ್ಧತಿ ಅಳವಡಿಸಿಕೊಳ್ಳಲಿದ್ದು, ಸಾವಯವ ಕೃಷಿಗೂ ಒತ್ತು ನೀಡಲಾಗುತ್ತದೆ. ಮಳೆಯಾಶ್ರಿತ ಪ್ರದೇಶದಲ್ಲಿ ಸಿರಿಧಾನ್ಯಗಳನ್ನು ಬೆಳೆಯಲು ಯೋಜಿಸಲಾಗಿದೆ. ರೈತರಿಗೆ ನುರಿತ ಕೃಷಿ ತಂತ್ರಜ್ಞರಿಂದ ಮಾರ್ಗದರ್ಶನ ದೊರಕಿಸುವುದರ ಜೊತೆಗೆ ಹವಾಗುಣಕ್ಕೆ ಅನುಗುಣವಾಗಿ ಬೆಳೆ ಪದ್ಧತಿಯನ್ನು ನಿರ್ಧರಿಸಲಾಗುವುದು' ಎಂದು ಪ್ರಾಜೆಕ್ಟ್ ಹಗ್ ಕಂಪನಿ ಮುಖ್ಯಸ್ಥ ಶರವಣ ತಿಳಿಸಿದರು.

> **15 ಎಂಜಿನಿಯರ್‌ಗಳು ಕೃಷಿಗೆ ಆಸಕ್ತಿ ತೋರಿಸಿದ್ದಾರೆ. ಮತ್ತಷ್ಟು ರೈತರ ಬರಡು ಭೂಮಿಯಲ್ಲಿ ಕೃಷಿ ಚಟುವಟಿಕೆ ನಡೆಸಬಹುದು**
> **ಸೋಮಸುಂದರ್**
> ಪ್ರಾಜೆಕ್ಟ್ ಹಗ್ ಕಂಪನಿ ಸ್ಥಾಪಕ



ಪೇಂಟಿಂಗ್ ಟ್ರೈನಿಂಗ್ ಕೋರ್ಸ್ ಕುರಿತು ವಿವರಗಳಿಗೆ
ಈಗಲೇ ಕರೆ ಮಾಡಿ 9591572894 080 22220549
ಏಷ್ಯನ್ ಪೇಂಟ್ಸ್ ಕಲರ್ ಅಕಾಡೆಮಿ, #7/2, 2 ನೇ ಮಹಡಿ, 2 ನೇ ಕ್ರಾಸ್, ಲಾಲ್ ಬಾಗ್ ರೋಡ್, ಪೂರ್ಣಿಮಾ ಥಿಯೇಟರ್ ಬಸ್ ಸ್ಟಾಪ್ ಹತ್ತಿರ, ಸುಧಾಮನಗರ, ಬೆಂಗಳೂರು – 560027.

ಶುಕ್ರವಾರದ ಉಷ್ಣಾಂಶ 28° ಗರಿಷ್ಠ 20° ಕನಿಷ್ಠ

ಹವಾಮಾನ ಮುನ್ಸೂಚನೆ ನಗರದಲ್ಲಿ ಮೋಡ ಕವಿದ ವಾತಾವರಣ. ಬೆಂಗಳೂರು– ಮೈಸೂರು ಹೆದ್ದಾರಿಯಲ್ಲಿ ಅಲ್ಲಲ್ಲಿ ಮಳೆ ಸಾಧ್ಯತೆ.

ಹವಾಮಾನ: ಶನಿವಾರ 29° 21° | ಭಾನುವಾರ 29° 21° | ಸೋಮವಾರ 30° 21°

ಸೂರ್ಯೋದಯ: 6.08 ಸೂರ್ಯಾಸ್ತ : 6:14 ಚಂದ್ರೋದಯ: ರಾ. 8:00 ಚಂದ್ರಾಸ್ತ: ಬೆ. 7:53

ಗುರುವಾರದ ಹವಾಮಾನ : ಗರಿಷ್ಠ 28° ಕನಿಷ್ಠ 20°

ಪ್ರಜಾವಾಣಿ

₹10 ಕೋಟಿ ಸಾಲ ಸಹಾಯಧನವಾಗಿ ಪರಿವರ್ತಿಸಲು ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಅಡಿಕೆ ಸಹಕಾರ ಮಾರಾಟ ಮಂಡಳಕ್ಕೆ ಈ ಹಿಂದೆ ನೀಡಿದ್ದ ₹10 ಕೋಟಿ ಸಾಲವನ್ನು ಸಹಾಯಧನವಾಗಿ ಪರಿವರ್ತಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಮಾಡಿದೆ.

'ಹಿಂದೆ ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದಾಗ ಮಹಾಮಂಡಳಕ್ಕೆ ₹10 ಕೋಟಿ ಸಾಲ ನೀಡಿದ್ದರು. ಸಾಲಕ್ಕೆ ನಿಯಮಿತವಾಗಿ ಬಡ್ಡಿ ಪಾವತಿಸಲಾಗುತ್ತಿದೆ. ಅಡಿಕೆ ದರ ಕುಸಿದ ಸಂದರ್ಭದಲ್ಲಿ ಮಾರುಕಟ್ಟೆ ಮಧ್ಯ ಪ್ರವೇಶ ಮಾಡಿ ಅಡಿಕೆ ಖರೀದಿ ಮಾಡಲಾಗಿತ್ತು' ಎಂದು ಸಂಸ್ಥೆಯ ಅಧ್ಯಕ್ಷ ಮಂಜಪ್ಪ ಹೊಸಬಾಳೆ ಮುಖ್ಯಮಂತ್ರಿಯವರಿಗೆ ವಿವರಿಸಿದರು.

'ಇದರಿಂದ ಮಹಾಮಂಡಳ ನಷ್ಟಕ್ಕೆ ಗುರಿಯಾಗಿದೆ. ಆದ್ದರಿಂದ ಸಾಲದ ಮೊತ್ತವನ್ನು ಸಹಾಯ ಧನವನ್ನಾಗಿ ಪರಿವರ್ತಿಸುವಂತೆ ಮನವಿ ಮಾಡಿದ್ದು, ಸಹಾನುಭೂತಿಯಿಂದ ಪರಿಶೀಲಿಸುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ' ಎಂದು ಮಂಜಪ್ಪ ಹೇಳಿದ್ದಾರೆ.

ಮಹಾಮಂಡಳದ ಉಪಾಧ್ಯಕ್ಷ ಆರ್.ಎಂ.ಹೆಗಡೆ ಬಾಳೇಸರ, ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಈ ಸಂದರ್ಭದಲ್ಲಿ ಇದ್ದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಲೋಪವಿಲ್ಲದ 1 ಕಿ.ಮೀ. ರಸ್ತೆಯೂ ಇಲ್ಲ

5 ವರ್ಷ: ರಸ್ತೆಗಾಗಿ ₹ 20,060 ಕೋಟಿ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿರುವ 11,283.05 ಕಿ.ಮೀ. ಉದ್ದದ ರಸ್ತೆಗಳ ಕಾಮಗಾರಿಗೆ ಐದು ವರ್ಷಗಳಲ್ಲಿ ₹ 20,060 ಕೋಟಿ ವೆಚ್ಚ ಮಾಡಲಾಗಿದೆ. ಆದರೆ, ನಗರದ ವ್ಯಾಪ್ತಿಯಲ್ಲಿ ಸಂಪೂರ್ಣ ದೋಷರಹಿತವಾಗಿರುವ 1 ಕಿ.ಮೀ. ರಸ್ತೆ ಕೂಡ ಇಲ್ಲ!

ವಿಧಾನ ಪರಿಷತ್‌ನಲ್ಲಿ ಗುರುವಾರ ಕಾಂಗ್ರೆಸ್‌ನ ಪಿ.ಆರ್. ರಮೇಶ್ ಪ್ರಶ್ನೆಗೆ ಉತ್ತರ ನೀಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಈ ಮಾಹಿತಿ ಬಹಿರಂಗಪಡಿಸಿದರು. 'ಪಾಲಿಕೆ ವ್ಯಾಪ್ತಿಯಲ್ಲಿರುವ ಎಲ್ಲ ರಸ್ತೆಗಳು ಒಂದಿಲ್ಲೊಂದು ಸಮಸ್ಯೆಗಳಿಂದ ಕೂಡಿವೆ. ಯಾವ ರಸ್ತೆಯೂ ಪರಿಪೂರ್ಣವಾಗಿ ದೋಷಮುಕ್ತವಾಗಿದೆ ಎಂದು ಪ್ರಮಾಣೀಕರಿಸಲು ಸಾಧ್ಯವಿಲ್ಲ' ಎಂದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ 1,344.34 ಕಿ.ಮೀ. ಉದ್ದದ ವಾಹನ ಸಂಚಾರ ಯೋಗ್ಯವಾದ ಮುಖ್ಯ ಮತ್ತು ಉಪ ಮುಖ್ಯ ರಸ್ತೆಗಳಿವೆ. 9,938.71 ಕಿ.ಮೀ. ಉದ್ದದ ಚಿಕ್ಕ ರಸ್ತೆಗಳಿವೆ. ಎಲ್ಲವನ್ನೂ ಡಾಂಬರೀಕರಣ ಮಾಡಲಾಗಿದೆ. ಮೂರೂ ಬಗೆಯ ರಸ್ತೆಗಳಲ್ಲಿ ಕೆಲವು ಕಡೆ ವಿವಿಧ ಕಾಮಗಾರಿಗಳಿಗಾಗಿ ರಸ್ತೆಯ ಭಾಗವನ್ನು ಕತ್ತರಿಸಲಾಗಿದೆ. ಇದರಿಂದ ವಾಹನಗಳ ಸಂಚಾರಕ್ಕೆ ಸಮಸ್ಯೆಯಾಗಿದೆ ಎಂದು ತಿಳಿಸಿದರು.

'ಪಾಲಿಕೆ ವ್ಯಾಪ್ತಿಯಲ್ಲಿ ಯಾವುದಾದರೂ ಭಾಗದಲ್ಲಿ 1 ಕಿ.ಮೀ. ಉದ್ದವಾದರೂ ಏರುಳು ರಹಿತ, ಗುಂಡಿಗಳಿಲ್ಲದ, ಉಬ್ಬು ಮತ್ತು ತಗ್ಗುಗಳಿಲ್ಲದ, ದೋಷರಹಿತ ರಸ್ತೆ ಇದೆಯೆ' ಎಂದು ರಮೇಶ್ ಪ್ರಶ್ನಿಸಿದ್ದರು. ಇದಕ್ಕೆ ಉತ್ತರಿಸಿದ ಬೊಮ್ಮಾಯಿ, 'ಸಂಪೂರ್ಣ ದೋಷರಹಿತವಾದ ರಸ್ತೆ ಭಾರತದ ಎಲ್ಲಿಯೂ ಸಿಗುವುದು ಕಷ್ಟ. ಬಿಬಿಎಂಪಿ ವ್ಯಾಪ್ತಿಯಲ್ಲೂ ಅಂತಹ ರಸ್ತೆ ಇಲ್ಲ' ಎಂದರು.

ರಸ್ತೆಗಳ ಲೆಕ್ಕಪರಿಶೋಧನೆ: 'ರಸ್ತೆಗಳ ಕಾಮಗಾರಿಗಳಲ್ಲಿ ದೋಷ ಮತ್ತು ದುರುಪಯೋಗ ತಡೆಯಲು ರಸ್ತೆಗಳ ಲೆಕ್ಕ ಪರಿಶೋಧನೆ ನಡೆಸಲಾಗುವುದು. ಎಲ್ಲ ರಸ್ತೆಗಳ ಇತಿಹಾಸ ಮತ್ತು ಕಾಮಗಾರಿಗಳ ವಿವರಗಳನ್ನು ದಾಖಲಿಸಲಾಗುವುದು. ರಸ್ತೆ ಕಾಮಗಾರಿಗಳಲ್ಲಿ ಆಗುವ ಲೋಪ ಹಾಗೂ ಅವ್ಯವಹಾರಗಳಿಗೆ ಅಧಿಕಾರಿಗಳನ್ನು ಹೊಣೆ ಮಾಡುವ ವ್ಯವಸ್ಥೆ ಜಾರಿಗೊಳಿಸಲಾಗುವುದು' ಎಂದು ಮುಖ್ಯಮಂತ್ರಿ ಪ್ರಕಟಿಸಿದರು.

ಪ್ರತಿ ರಸ್ತೆಯ ಕಾಮಗಾರಿಯನ್ನೂ ಲೆಕ್ಕ ಪರಿಶೋಧನೆಗೆ ಒಳಪಡಿಸಲಾಗುವುದು. ಕಾಮಗಾರಿಯ ಅಂದಾಜು ಪಟ್ಟಿ, ನಿರ್ವಹಣೆ, ಬಿಲ್ ಪಾವತಿ, ಮೂರನೇ ವ್ಯಕ್ತಿಯ ತಪಾಸಣೆಯ ವಿವರಗಳನ್ನು ಪರಿಶೀಲಿಸಲಾಗುವುದು. ಗುತ್ತಿಗೆದಾರ ಮತ್ತು ಉಸ್ತುವಾರಿ ಅಧಿಕಾರಿಗಳ ವಿವರಗಳನ್ನು ದಾಖಲಿಸಿಡಲಾಗುವುದು. ಕಳಪೆ ಗುಣಮಟ್ಟದ ಕಾಮಗಾರಿ ಕಂಡುಬಂದರೆ ಗುತ್ತಿಗೆದಾರ ಮತ್ತು ಅಧಿಕಾರಿ ಇಬ್ಬರ ವಿರುದ್ಧವೂ ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದರು.

ಕಳಪೆ ಕಾಮಗಾರಿ ಆರೋಪ: 'ಮಾಗಡಿ ರಸ್ತೆಯಲ್ಲಿ ಮೂರು ತಿಂಗಳ ಹಿಂದೆ ಡಾಂಬರೀಕರಣ ಮಾಡಲಾಗಿತ್ತು. ಈಗ ರಸ್ತೆಯಲ್ಲಿ ಗುಂಡಿಗಳು ಬಿದ್ದಿವೆ. ಕಳಪೆ ಕಾಮಗಾರಿ ನಡೆಸಿರುವುದೇ ಇದಕ್ಕೆ ಕಾರಣ' ಎಂದು ರಮೇಶ್ ಆರೋಪಿಸಿದರು.

ಆ ಕಾಮಗಾರಿಯ ಕುರಿತು ಪರಿಶೀಲನೆ ನಡೆಸಲಾಗುವುದು. ಕಳಪೆ ಕಾಮಗಾರಿ ಕಂಡುಬಂದಲ್ಲಿ ಕ್ರಮ ಜರುಗಿಸಲಾಗುವುದು ಎಂದು ಬೊಮ್ಮಾಯಿ ಭರವಸೆ ನೀಡಿದರು.

ಟೆಂಡರ್ ಶ್ಯೂರ್‌ಗೆ ₹ 481 ಕೋಟಿ: ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ವತಿಯಿಂದ 13 ಟೆಂಡರ್ ಶ್ಯೂರ್ ರಸ್ತೆಗಳ ನಿರ್ಮಾಣಕ್ಕೆ ₹ 481.65 ಕೋಟಿ ವೆಚ್ಚ ಮಾಡಲಾಗಿದೆ ಎಂದು ಮುಖ್ಯಮಂತ್ರಿ ಮಾಹಿತಿ ನೀಡಿದರು.

ಬೆಂಗಳೂರಿನ ಕೃಷ್ಣರಾಜ ಮಾರುಕಟ್ಟೆ ಬಳಿ ರಸ್ತೆಯ ಗುಂಡಿಗಳನ್ನು ಸರಿಯಾಗಿ ಮುಚ್ಚದೆ ಇರುವುದರಿಂದ ಜಲ್ಲಿ ಹರಡಿಕೊಂಡಿವೆ. ಗುರುವಾರ ಅಲ್ಲಿ ಸ್ಕೂಟರ್ ಆಯತಪ್ಪಿ ಬಿದ್ದು ಮಹಿಳೆಯೊಬ್ಬರು ನೆಲಕ್ಕುರುಳಿದರು – ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

ಐದು ವರ್ಷಗಳಲ್ಲಿ ರಸ್ತೆ ಡಾಂಬರೀಕರಣದ ವೆಚ್ಚ (₹ ಕೋಟಿಗಳಲ್ಲಿ)



ಸುದ್ದಿ 2 ನಿಮಿಷ

₹10,265.33 ಕೋಟಿ ಪೂರಕ ಅಂದಾಜಿಗೆ ಒಪ್ಪಿಗೆ

ಬೆಂಗಳೂರು: 2021–22 ನೇ ಸಾಲಿಗೆ ₹10,265.33 ಕೋಟಿ ಮೊತ್ತದ ಪೂರಕ ಅಂದಾಜುಗಳ ಮೊದಲ ಕಂತಿನ ಪ್ರಸ್ತಾವನೆಗೆ ವಿಧಾನಸಭೆ ಒಪ್ಪಿಗೆ ನೀಡಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗುರುವಾರ ಪ್ರಸ್ತಾವನೆಯನ್ನು ಮಂಡಿಸಿದರು. ಕೇಂದ್ರ ಪುರಸ್ಕೃತ ಗ್ರಾಮೀಣ ಕುಡಿಯುವ ನೀರು (ಜಲ್ ಜೀವನ್ ಮಿಷನ್) ಯೋಜನೆ ಸೇರಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ವಿವಿಧ ಯೋಜನೆಗಳಿಗೆ ₹2,858.05 ಕೋಟಿ ಒದಗಿಸಲಾಗಿದೆ ಎಂದು ವಿವರಿಸಿದರು.

ಅನ್ನ ಭಾಗ್ಯ ಯೋಜನೆಗಾಗಿ ₹720 ಕೋಟಿ, ಪ್ರಧಾನಮಂತ್ರಿ ಗರೀಬ್ ಕಲ್ಯಾಣ್ ಯೋಜನೆಗೆ ₹559 ಕೋಟಿ ಮತ್ತು ಕರ್ನಾಟಕ ಆಹಾರ ನಿಗಮವು ಪಡೆದ ನಗದು ಸಾಲದ ಮೇಲಿನ ಬಡ್ಡಿ ಮರುಪಾವತಿಗೆ ₹60 ಕೋಟಿ ಸೇರಿ ₹1,339 ಕೋಟಿ ಒದಗಿಸಲಾಗಿದೆ ಎಂದರು.



ಪ್ರಮುಖ ಅಂಶಗಳು:

- ಕೋವಿಡ್‌ಗೆ ₹1400 ಕೋಟಿ ಒದಗಿಸಲಾಗಿದೆ. 1 ಕೋಟಿ ಡೋಸ್ ಕೋವಿಶೀಲ್ಡ್ ಲಸಿಕೆ ಖರೀದಿಗೆ ₹300 ಕೋಟಿ, ಔಷಧ ಮತ್ತು ಪರಿಕರಗಳ ಖರೀದಿಗೆ ₹60 ಕೋಟಿ, ಪಿಪಿಇ ಕಿಟ್ ಮತ್ತು ಎನ್–95 ಮಾಸ್ಕ್ ಖರೀದಿಗೆ ₹100 ಕೋಟಿ, ಕೋವಿಡ್ ಪರೀಕ್ಷೆಯ ಕಿರು ಪರಿಕರಗಳನ್ನು ಖರೀದಿಗೆ ₹17.72 ಕೋಟಿ ಒದಗಿಸಿದ್ದು, ಕೋವಿಡ್ ಔಷಧಿಯ ಹೆಚ್ಚುವರಿ ಖರೀದಿಗಾಗಿ ₹140 ಕೋಟಿ ಒದಗಿಸಲಾಗಿದೆ.
- ಬೆಳಗಾವಿ ಲೋಕಸಭಾ ಉಪ ಚುನಾವಣೆ ಮತ್ತು ವಿಧಾನಸಭಾ ಉಪಚುನಾವಣೆಗಳಿಗಾಗಿ ₹10.37 ಕೋಟಿ ಹೆಚ್ಚುವರಿ ಅನುದಾನ, ಪುಷ್ಪಗಿರಿ ಮಹಾಸಂಸ್ಥಾನ, ಹಳೇಬೀಡು ಸಂಸ್ಥೆಗೆ ಅನುದಾನ ಬಿಡುಗಡೆ ಮಾಡಲು ₹5 ಕೋಟಿ ಹೆಚ್ಚುವರಿಯಾಗಿ ನೀಡಲಾಗಿದೆ.

ಜನಸಂಪರ್ಕ ಸಭೆ ಇಂದು

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿಪಡಿಸುತ್ತಿರುವ ಡಾ.ಶಿವರಾಮ ಕಾರಂತ ಬಡಾವಣೆಗೆ ಸಂಬಂಧಿಸಿದಂತೆ ಇದೇ 24ರಂದು (ಶುಕ್ರವಾರ) ಬ್ಯಾಲಕೆರೆ ಸರ್ಕಾರಿ ಶಾಲೆಯಲ್ಲಿ ಬೆಳಿಗ್ಗೆ 11 ಗಂಟೆಗೆ ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ್ ಸಮಿತಿಯು ಜನ ಸಂಪರ್ಕ ಸಭೆ ಹಮ್ಮಿಕೊಂಡಿದೆ.

'ಬಡಾವಣೆಯ ಭೂಸ್ವಾಧೀನ ಪ್ರಕ್ರಿಯೆ ಜಾರಿಯಲ್ಲಿರುವ ಪ್ರದೇಶದ ಆಸ್ತಿ ಮಾಲೀಕರಲ್ಲಿ ತಪ್ಪು ಮಾಹಿತಿ, ತಪ್ಪು ತಿಳಿವಳಿಕೆ ಮತ್ತು ಗೊಂದಲಗಳಿರುವುದು ಗಮನಕ್ಕೆ ಬಂದಿದೆ. ಈ ಗೊಂದಲಗಳನ್ನು ನಿವಾರಿಸಲು ಹಾಗೂ ತಪ್ಪು ತಿಳಿವಳಿಕೆಯನ್ನು ತೊಡೆದುಹಾಕಲು ಮತ್ತು ಸುಪ್ರೀಂ ಕೋರ್ಟ್‌ನ ಆದೇಶಗಳ ವಾಸ್ತವ ಉದ್ದೇಶ ಹಾಗೂ ಪರಿಣಾಮಗಳನ್ನು ನೇರವಾಗಿ ಮಾಲೀಕರಿಗೆ ವಿವರಿಸಲು ಈ ಜನಸಂಪರ್ಕ ಸಭೆ ಏರ್ಪಡಿಸಲಾಗಿದೆ' ಎಂದು ಸಮಿತಿ ತಿಳಿಸಿದೆ.

'ಸಮಿತಿ ಮಾಡುತ್ತಿರುವ ಕಾರ್ಯಗಳ ಸರಿಯಾದ ಚಿತ್ರಣ ಪಡೆಯಲು ಎಲ್ಲಾ ಆಸ್ತಿ ಮಾಲೀಕರು ಮತ್ತು ಉತ್ತರದಾಯಿಗಳು ಈ ಸಭೆಯಲ್ಲಿ ಪಾಲ್ಗೊಳ್ಳಬೇಕು' ಎಂದು ಸಮಿತಿ ಕೋರಿದೆ.

ಮೇಕೆದಾಟು ಅಣೆಕಟ್ಟೆ: ಪಾದಯಾತ್ರೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ಕನಕಪುರ: ಕುಡಿಯುವ ನೀರು ಪೂರೈಕೆ ಮತ್ತು ವಿದ್ಯುತ್ ಉತ್ಪಾದನೆಯ ಮಹತ್ವಾಕಾಂಕ್ಷೆಯ ಮೇಕೆದಾಟು ಅಣೆಕಟ್ಟೆ ಜಲಾಶಯ ನಿರ್ಮಾಣ ಮಾಡುವಂತೆ ಒತ್ತಾಯಿಸಿ ನಡೆಸುತ್ತಿರುವ ಬೃಹತ್ ಪಾದಯಾತ್ರೆಗೆ ಗುರುವಾರ ಬೆಳಿಗ್ಗೆ ಸಂಗಮದ ಕಾವೇರಿ ನದಿಯಲ್ಲಿ ಗಂಗಾ ಪೂಜೆಯೊಂದಿಗೆ ಚಾಲನೆ ನೀಡಲಾಯಿತು.

ಕರ್ನಾಟಕ ರಾಜ್ಯ ಮೇಕೆದಾಟು ಹೋರಾಟ ಸಮಿತಿ ನೇತೃತ್ವದಲ್ಲಿ ಆಯೋಜನೆಗೊಂಡಿದ್ದ 'ಮೇಕುದಾಟಿನಿಂದ- ವಿಧಾನಸೌಧವರೆಗೆ ಬೃಹತ್ ಪಾದಯಾತ್ರೆ' ಗೆ ರಾಜ್ಯ ರೈತ ಸಂಘ, ಕರ್ನಾಟಕ ರಕ್ಷಣಾ ವೇದಿಕೆ (ಸ್ವಾಭಿಮಾನಿ ಬಣ), ಜಯ ಕರ್ನಾಟಕ ಜನಪರ ವೇದಿಕೆ, ಸ್ವತಂತ್ರ ಕರ್ನಾಟಕ ರಕ್ಷಣಾ ವೇದಿಕೆ, ಕರ್ನಾಟಕ ಯುವಶಕ್ತಿ ವೇದಿಕೆ ಸೇರಿದಂತೆ ಕನ್ನಡಪರ ಸಂಘಟನೆಯವರು ಬೆಂಬಲ ವ್ಯಕ್ತಪಡಿಸಿ ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

ಆದಿಚುಂಚನಗಿರಿ ಶಾಖಾ ಮಠದ ಅನ್ನದಾನೇಶ್ವರನಾಥಸ್ವಾಮಿ, ಮರಳವಾಡಿ ಮಠದ ಮೃತ್ಯುಂಜಯಸ್ವಾಮಿ, ಪ್ರಭು ಕಿರೀಟಸ್ವಾಮಿ, ಸಾತನೂರು ನಿಜಗುಣ ಸ್ವಾಮಿ ಸಂಗಮದಲ್ಲಿ ಪಾದಯಾತ್ರೆಗೆ ಹಸಿರು ಬಾವುಟ ತೋರಿಸುವ ಮೂಲಕ ಚಾಲನೆ ನೀಡಿದರು.

ಕಾವೇರಿ ನದಿಯಲ್ಲಿ ಗಂಗಾ ಪೂಜೆಯನ್ನು ನೆರವೇರಿಸಿದ ಮಹಿಳೆಯರು ಕಳಸದೊಂದಿಗೆ ಮೆರವಣಿಗೆಯಲ್ಲಿ ಸಾಗಿದರು.

ತೆರಿಗೆ ಬಾಕಿ ವಸೂಲಿಗೆ ಕ್ರಮ ಕೈಗೊಳ್ಳಿ: ಮುಖ್ಯ ಆಯುಕ್ತ ಸೂಚನೆ

ಬಿಬಿಎಂಪಿ: ಶೇ 53ರಷ್ಟು ಆಸ್ತಿ ತೆರಿಗೆ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಆರ್ಥಿಕ ವರ್ಷದಲ್ಲಿ ಬಿಬಿಎಂಪಿಯು ₹ 4 ಸಾವಿರ ಕೋಟಿ ಆಸ್ತಿ ತೆರಿಗೆ ಸಂಗ್ರಹಿಸುವ ಗುರಿ ಹೊಂದಿದ್ದು, ಸೆ.22ರವರೆಗೆ ₹ 2,141.51 ಕೋಟಿ (ಶೇ 53.53ರಷ್ಟು) ತೆರಿಗೆ ಸಂಗ್ರಹವಾಗಿದೆ.

ತೆರಿಗೆ ಸಂಗ್ರಹ ಗುರಿ ತಲುಪಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸಲು ಕಂದಾಯ ವಿಭಾಗದ ಅಧಿಕಾರಿಗಳ ಜೊತೆ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಗುರುವಾರ ಸಭೆ ನಡೆಸಿದರು.

'ಅನೇಕ ವರ್ಷಗಳಿಂದ ತೆರಿಗೆ ಬಾಕಿ ಉಳಿಸಿಕೊಂಡಿರುವ ಸ್ವತ್ತುಗಳ ವಲಯವಾರು ಪಟ್ಟಿ ತಯಾರಿಸಬೇಕು. ಕಂದಾಯ ಅಧಿಕಾರಿಗಳು ಹಾಗೂ ಸಹಾಯಕ ಕಂದಾಯ ಅಧಿಕಾರಿಗಳು ಎಲ್ಲಾ ಸುಸ್ತಿದಾರರಿಗೆ ನೋಟಿಸ್ ಜಾರಿಗೊಳಿಸಿ ವಾರ್ಡ್ ವ್ಯಾಪ್ತಿಯಲ್ಲಿ ತ್ವರಿತಗತಿಯಲ್ಲಿ ತೆರಿಗೆ ಸಂಗ್ರಹಿಸಲು ಕ್ರಮ ಕೈಗೊಳ್ಳಬೇಕು' ಎಂದು ಮುಖ್ಯ ಆಯುಕ್ತರು ಸೂಚಿಸಿದರು.

ಸಭೆಯಲ್ಲಿ ವಿಶೇಷ ಆಯುಕ್ತರ (ಕಂದಾಯ) ಎಸ್. ಬಸವರಾಜು, ಎಲ್ಲಾ ವಲಯಗಳ ಆಯುಕ್ತರು, ಜಂಟಿ ಆಯುಕ್ತರುಗಳು ಇದ್ದರು.

ಸಭೆಯಲ್ಲಿ ಗೌರವ್ ಗುಪ್ತ ಮಾತನಾಡಿದರು. ವಿಶೇಷ ಆಯುಕ್ತರಾದ ಎಸ್. ಬಸವರಾಜು ಹಾಗೂ ರೆಡ್ಡಿ ಶಂಕರ ಬಾಬು ಇದ್ದಾರೆ

ತೆರಿಗೆ ಸಂಗ್ರಹ: ವಲಯವಾರು ವಿವರ (ಸೆ.22ರವರೆಗೆ)

ವಲಯ	ತೆರಿಗೆ ಸಂಗ್ರಹ (₹ ಕೋಟಿ)	ಶೇ
ಯಲಹಂಕ	184.48	54.10
ಮಹದೇವಪುರ	542.14	54.43
ದಾಸರಹಳ್ಳಿ	60.57	50.38
ಆರ್.ಆರ್.ನಗರ	149.12	56.74
ಬೊಮ್ಮನಹಳ್ಳಿ	217.89	50.33
ಪಶ್ಚಿಮ	227.58	48.93
ದಕ್ಷಿಣ	342.81	55.02
ಪೂರ್ವ	416.92	54.91

'ಶಿವರಾಮ ಕಾರಂತ ಬಡಾವಣೆ ಸಮಸ್ಯೆ ಇತ್ಯರ್ಥಕ್ಕೆ ಸಭೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಾ.ಕೆ. ಶಿವರಾಮ ಕಾರಂತ ಬಡಾವಣೆಯ ಭೂಸ್ವಾಧೀನಕ್ಕೆ ಸಂಬಂಧಿಸಿದ ತೊಡಕುಗಳ ನಿವಾರಣೆಗೆ ಶೀಘ್ರದಲ್ಲಿಯೇ ಉನ್ನತಮಟ್ಟದ ಸಭೆ ನಡೆಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿರ್ಮಿಸುತ್ತಿರುವ ಶಿವರಾಮ ಕಾರಂತ ಬಡಾವಣೆಯ ಭೂಸ್ವಾಧೀನ ಪ್ರಕ್ರಿಯೆ ಕುರಿತು ವಿಧಾನ ಪರಿಷತ್‌ನಲ್ಲಿ ವಿರೋಧ ಪಕ್ಷದ ಮುಖ್ಯ ಸಚೇತಕ ಎಂ. ನಾರಾಯಣಸ್ವಾಮಿ ಗುರುವಾರ ನಿಯಮ 330ರ ಅಡಿಯಲ್ಲಿ ನಡೆಸಿದ ಚರ್ಚೆಗೆ ಉತ್ತರಿಸಿದ ಅವರು, 'ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್‌ನಲ್ಲಿ ದಾಖಲಾಗಿದ್ದ ವ್ಯಾಜ್ಯಗಳಿಂದ ಭೂಸ್ವಾಧೀನ ವಿಳಂಬವಾಗಿದೆ. ಸುಪ್ರೀಂ ಕೋರ್ಟ್ ತೀರ್ಪಿನ ವ್ಯಾಪ್ತಿಯಲ್ಲಿ ಸಮಸ್ಯೆ ಇತ್ಯರ್ಥಪಡಿಸಿ, ಬಡಾವಣೆ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು' ಎಂದರು.

ಈ ಬಡಾವಣೆ ನಿರ್ಮಾಣಕ್ಕೆ 17 ಗ್ರಾಮಗಳ 3,546 ಎಕರೆ 12 ಗುಂಟೆ ಜಮೀನು ಸ್ವಾಧೀನಕ್ಕೆ 2008ರಲ್ಲಿ ಅಧಿಸೂಚನೆ ಹೊರಡಿಸಲಾಗಿತ್ತು. ಆದರೆ, ಈ ಅಧಿಸೂಚನೆಯನ್ನು ಹೈಕೋರ್ಟ್ ಏಕಸದಸ್ಯ ಪೀಠ ರದ್ದುಗೊಳಿಸಿತ್ತು. ವ್ಯಾಜ್ಯ ಸುಪ್ರೀಂಕೋರ್ಟ್‌ವರೆಗೂ ತಲುಪಿತ್ತು. ಅಧಿಸೂಚನೆಯನ್ನು ಊರ್ಜಿತಗೊಳಿಸಿರುವ ಸುಪ್ರೀಂಕೋರ್ಟ್, ಹಳೆಯ ಭೂಸ್ವಾಧೀನ ಕಾಯ್ದೆಯ ಅನುಸಾರ ಪರಿಹಾರ ನೀಡಲು ಆದೇಶಿಸಿದೆ. ಆದ್ದರಿಂದ ಈಗ ಪ್ರತಿಭಟನೆ ನಡೆಸುತ್ತಿರುವ ರೈತರ ಬೇಡಿಕೆಯನ್ನು ಮಾನ್ಯ ಮಾಡಲು ಸರ್ಕಾರಕ್ಕೆ ಅವಕಾಶವಿಲ್ಲ ಎಂದು ಹೇಳಿದರು.

'ಅಧಿಸೂಚನೆ ಹೊರಡಿಸಿರುವ ಎಲ್ಲ ಜಮೀನುಗಳು ಬಡಾವಣೆ ನಿರ್ಮಾಣಕ್ಕೆ ಲಭ್ಯವಿಲ್ಲ. ಇರುವ ಜಮೀನನ್ನು ಬಳಸಿಕೊಂಡು ಬಡಾವಣೆ ನಿರ್ಮಿಸಲೇಬೇಕು. ಸುಪ್ರೀಂಕೋರ್ಟ್ ನೇಮಕ ಮಾಡಿರುವ ನಿವೃತ್ತ ನ್ಯಾಯಮೂರ್ತಿ ಚಂದ್ರಶೇಖರ್ ನೇತೃತ್ವದ ಸಮಿತಿಯ ಮೇಲುಸ್ತುವಾರಿಯಲ್ಲೇ ಎಲ್ಲ ಪ್ರಕ್ರಿಯೆಗಳೂ ನಡೆಯಬೇಕಿದೆ. ಈ ವಿಚಾರದಲ್ಲಿ ಸರ್ಕಾರ ತರಾತುರಿಯಲ್ಲಿ ನಿರ್ಧಾರ ಕೈಗೊಳ್ಳಲು ಅವಕಾಶವಿಲ್ಲ' ಎಂದರು.

ರೈತರಿಗೆ ಯೋಗ್ಯವಾದ ಪರಿಹಾರ ನೀಡಬೇಕು ಎಂಬ ಬೇಡಿಕೆಯ ವಿಚಾರದಲ್ಲಿ ಸರ್ಕಾರ ಮುಕ್ತ ಮನಸ್ಸು ಹೊಂದಿದೆ. ಆದರೆ, ಸುಪ್ರೀಂಕೋರ್ಟ್ ತೀರ್ಪಿನ ವ್ಯಾಪ್ತಿಯಲ್ಲೇ ಅದನ್ನು ನಿರ್ಧರಿಸಬೇಕಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅನುಮತಿ ಪಡೆದೇ ನಿರ್ಮಿಸಿರುವ ಕಟ್ಟಡಗಳ ಬಗ್ಗೆಯೂ ನಿರ್ಧರಿಸಬೇಕಿದೆ. ಈ ಕುರಿತು ಸ್ಥಳೀಯ ಚುನಾಯಿತ ಪ್ರತಿನಿಧಿಗಳು ಮತ್ತು ಹಿರಿಯ ಅಧಿಕಾರಿಗಳ ಜತೆ ಶೀಘ್ರದಲ್ಲಿ ಸಭೆ ನಡೆಸಲಾಗುವುದು. ಪ್ರತಿಭಟನಾ ರೈತರ ನಿಯೋಗವನ್ನೂ ಭೇಟಿಮಾಡಿ ಚರ್ಚಿಸಲಾಗುವುದು ಎಂದುದರು.

ನಾರಾಯಣಸ್ವಾಮಿ ಮಾತನಾಡಿ, 'ಬಿಡಿಎ ಮತ್ತು ರಾಜ್ಯ ಸರ್ಕಾರದ ಅಧಿಕಾರಿಗಳು ಮಾಡಿರುವ ತಪ್ಪಿನಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಬಿಡಿಎ ಅಧಿಕಾರಿಗಳು ಸುಳ್ಳು ಮಾಹಿತಿಯನ್ನು ಸುಪ್ರೀಂಕೋರ್ಟ್‌ಗೆ ಸಲ್ಲಿಸಿರುವುದೇ ಸಮಸ್ಯೆಗೆ ಕಾರಣ. ನೂರಾರು ವರ್ಷಗಳಿಂದ ಮನೆ ನಿರ್ಮಿಸಿಕೊಂಡು ಬದುಕುತ್ತಿರುವವರನ್ನು ಬಡಾವಣೆ ನಿರ್ಮಾಣಕ್ಕಾಗಿ ಬೀದಿಗೆ ತಳ್ಳಬಾರದು' ಎಂದು ಆಗ್ರಹಿಸಿದರು.

ಮಹಾತ್ಮರ ಚರಿತಾಮೃತ ಗ್ರಂಥ ನಾಳೆ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಥಣಿಯ ಮೋಟಗಿಮಠದ ಪ್ರಭುಚನ್ನಬಸವ ಸ್ವಾಮೀಜಿ ರಚಿಸಿರುವ 'ಮಹಾತ್ಮರ ಚರಿತಾಮೃತ' ಗ್ರಂಥದ ಲೋಕಾರ್ಪಣೆ ಸೆ.25ರಂದು ನಗರದಲ್ಲಿ ನಡೆಯಲಿದೆ.

ಗುರುಚನ್ನಬಸವೇಶ್ವರ ಗ್ರಂಥಮಾಲೆಯಿಂದ ಪ್ರಕಟಗೊಂಡಿರುವ ಈ ಗ್ರಂಥ ಬಿಡುಗಡೆ ಕಾರ್ಯಕ್ರಮವನ್ನು ವಿಜಯನಗರದ ಬಸವೇಶ್ವರ ಸುಜ್ಞಾನ ಮಂಟಪದಲ್ಲಿ ಬೆಳಿಗ್ಗೆ 10.30ಕ್ಕೆ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ ಉದ್ಘಾಟಿಸುವರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಗ್ರಂಥ ಬಿಡುಗಡೆ ಮಾಡುವರು.

ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಎಡೆಯೂರು ತೋಂಟದಾರ್ಯ ಮಠದ ತೋಂಟದ ಸಿದ್ಧರಾಮ ಸ್ವಾಮೀಜಿ, ಚಿತ್ರದುರ್ಗದ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರು, ಆದಿ ಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ತುಮಕೂರು ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ, ಭಾಲ್ಕಿಯ ಹಿರೇಮಠದ ಬಸವಲಿಂಗ ಪಟ್ಟದ್ದೇವರು, ಬೇಲಿಮಠದ ಶಿವರುದ್ರ ಸ್ವಾಮೀಜಿಗಳ ಸಾನಿಧ್ಯದಲ್ಲಿ ಕಾರ್ಯಕ್ರಮ ನಡೆಯಲಿದೆ.

ವಸತಿ ಸಚಿವ ವಿ. ಸೋಮಣ್ಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಬಿ.ಎಸ್. ಪರಮಶಿವಯ್ಯ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳುವರು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರು ಗ್ರಂಥದ ಕುರಿತು ಮಾತನಾಡುವರು. ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಮತ್ತು ಬಸವ ವೇದಿಕೆ ಅಧ್ಯಕ್ಷ ಸಿ. ಸೋಮಶೇಖರ ಆಶಯ ನುಡಿಯಾಡುವರು.

'ಗ್ರಂಥ ದಾಸೋಹಿಗಳಿಗೆ ಗೌರವ ಅಭಿನಂದನೆ, ಸಂಗೀತ ಸಂಭ್ರಮ, ಕೃತಿ ರೂಪುಗೊಳ್ಳಲು ಶ್ರಮಿಸಿದವರಿಗೆ ಸನ್ಮಾನ ಕಾರ್ಯಕ್ರಮಗಳು ನಡೆಯಲಿದೆ. ಕಾರ್ಯಕ್ರಮವನ್ನು ಫೇಸ್‌ಬುಕ್ ಮತ್ತು ಯೂಟ್ಯೂಬ್‌ನಲ್ಲಿ 'ಬುಕ್ ಬ್ರಹ್ಮ' ಸಂಸ್ಥೆ ನೇರ ಪ್ರಸಾರ ಮಾಡಲಿದೆ' ಎಂದು ಎಂದು ಮಠ ತಿಳಿಸಿದೆ.

ವಿವಿಧ ಮಸೂದೆಗಳಿಗೆ ಪರಿಷತ್ ಅಂಗೀಕಾರ

ಬೆಂಗಳೂರು: 2021ನೇ ಸಾಲಿನ ಧನ ವಿನಿಯೋಗ ಮಸೂದೆ (ಪೂರಕ ಅಂದಾಜು) ಸೇರಿದಂತೆ ವಿವಿಧ ಮಸೂದೆಗಳಿಗೆ ವಿಧಾನ ಪರಿಷತ್ ಗುರುವಾರ ರಾತ್ರಿ ಅಂಗೀಕಾರ ನೀಡಿತು.

ಧನ ವಿನಿಯೋಗ ಮಸೂದೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಂಡಿಸಿದರು. ಉಳಿದಂತೆ, ರಾಜ್ಯದಲ್ಲಿ ಆನ್‌ಲೈನ್ ಜೂಜು ಮತ್ತು ಬೆಟ್ಟಿಂಗ್ ನಿಷೇಧಿಸುವ ಕರ್ನಾಟಕ ಪೊಲೀಸ್ ತಿದ್ದುಪಡಿ ಮಸೂದೆ, ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ಮಸೂದೆ, ಕರ್ನಾಟಕ ಸರಕು ಮತ್ತು ಸೇವೆಗಳ ತೆರಗೆ (ತಿದ್ದುಪಡಿ) ಮಸೂದೆ, ಕರ್ನಾಟಕ ಪುರಸಭೆಗಳು ಮತ್ತು ಕೆಲವು ಇತರ ಕಾನೂನು (ಎರಡನೇ ತಿದ್ದುಪಡಿ) ಮಸೂದೆ, ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯಮಗಳ ತಿದ್ದುಪಡಿ ಮಸೂದೆಗಳಿಗೆ ವಿಧಾನ ಪರಿಷತ್ ಅಂಗೀಕಾರ ನೀಡಿತು.

ವಿರೋಧ ಪಕ್ಷಗಳು ಕೇಳಿದ ಪ್ರಶ್ನೆಗಳಿಗೆ ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ. ಮಾಧುಸ್ವಾಮಿ ವಿವರಣೆ ನೀಡಿದರು.

ನಗರದಲ್ಲಿ ಇಂದು

ಲೇಖಿಕಾ ಸಾಹಿತ್ಯ ವೇದಿಕೆಯ 21ನೇ ವಾರ್ಷಿಕೋತ್ಸವ, 'ಸಾಹಿತ್ಯ ಸಖೀ ಲೇಖಿಕಾ' ಪುಸ್ತಕ ಬಿಡುಗಡೆ, 2020ನೇ ಸಾಲಿನ ಪುಸ್ತಕ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಲಲಿತಾ ಶೇಷಾದ್ರಿ, ಪ್ರಶಸ್ತಿ ಪ್ರದಾನ: ವಿಜಯಾ ಸುಬ್ಬರಾಜ್, ಪುಸ್ತಕ ಬಿಡುಗಡೆ: ಕನ್ಸೆಪ್ಟಾ ಫೆರ್ನಾಂಡಿಸ್, ಅಧ್ಯಕ್ಷತೆ: ಶೈಲಜಾ ಸುರೇಶ್, ಆಯೋಜನೆ: ಲೇಖಿಕಾ ಸಾಹಿತ್ಯ ವೇದಿಕೆ, ಸ್ಥಳ: ಬಿ.ಎಂ.ಶ್ರೀ. ಕಲಾ ಭವನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

ಕನ್ನಡ ಗೇಯರತ್ನ ಮಾಲಿಕೆ: ವಿಶಿಷ್ಟ ಕನ್ನಡ ಸ್ಪರ್ಧೆ, ಮುಖ್ಯ ಅತಿಥಿ: ಪ್ರೊ. ನಾಗೇಶ್ ವಿ. ಬೆಟ್ಟಕೋಟೆ, ಅಧ್ಯಕ್ಷತೆ: ಜಿ.ವಿ. ಕೃಷ್ಣ ಪ್ರಸಾದ್, ಉಪಸ್ಥಿತಿ: ಪ್ರೊ. ಹಂಸಿಣಿ ನಾಗೇಂದ್ರ, ಪ್ರೊ. ರಾಮಕೃಷ್ಣಯ್ಯ, ಪ್ರೊ.ಎಸ್.ಎನ್. ಸುಶೀಲಾ, ಡಾ.ಎಸ್. ಶಿವಣ್ಣ, ಆಯೋಜನೆ: ಬೆಂಗಳೂರು ವಿಶ್ವವಿದ್ಯಾಲಯ, ಸ್ಥಳ: ವೆಂಕಟಗಿರಿ ಗೌಡ ಸಭಾಂಗಣ, ಬೆಂಗಳೂರು ವಿಶ್ವವಿದ್ಯಾಲಯ, ಮಧ್ಯಾಹ್ನ 2

ರಾಷ್ಟ್ರೀಯ ಪೌಷ್ಟಿಕ ಮಾಸಾಚರಣೆ: ವಿಶೇಷ ಅಂಚೆ ಲಕೋಟೆ ಬಿಡುಗಡೆ: ಎಲ್.ಕೆ. ದಾಸ್, ಮುಖ್ಯ ಅತಿಥಿ: ಅರುಂಧತಿ ಚಂದ್ರಶೇಖರ್, ಉಪಸ್ಥಿತಿ: ಪರಿಮಳಾ ಎಸ್., ಆಯೋಜನೆ: ಅಂಚೆ ಇಲಾಖೆ, ಸ್ಥಳ: ಮೇಘದೂತ ಸಭಾಂಗಣ, ಪ್ರಧಾನ ಅಂಚೆ ಕಚೇರಿ(ಜಿಪಿಒ), ಮಧ್ಯಾಹ್ನ 3.30

ವಿಚಾರ ಸಂಕಿರಣ: 'ಪೂನಾ ಒಪ್ಪಂದ– ಇಂದಿನ ಸವಾಲುಗಳು', ಉದ್ಘಾಟನೆ: ಎಸ್. ಸಿದ್ಧರಾಜು, ಮುಖ್ಯ ಅತಿಥಿಗಳು: ಎ.ಆರ್. ಗೋವಿಂದಸ್ವಾಮಿ, ಕೆ.ಎನ್. ನಾಗೇಶ್, ದೇವರಾಜು ದ್ರಾವಿಡ, ಎಂ. ಗುರುಮೂರ್ತಿ, ಆಯೋಜನೆ: ಬಹುಜನ ವಾಲೆಂಟಿಯರ್ ಫೋರ್ಸ್, ಸ್ಥಳ: ಸಜ್ಜೆಪಾಳ್ಯ ಸಮುದಾಯ ಭವನ, ಮಾಗಡಿ ರಸ್ತೆ, ಕೊಟ್ಟಿಗೆಪಾಳ್ಯ, ಮಧ್ಯಾಹ್ನ 3.30

'ದಿ ಮಲ್ಟಿವೆಲನ್ಸ್ ಆಫ್ ಆ್ಯನ್ ಎಪಿಕ್' ಕೃತಿ ಬಿಡುಗಡೆ: ಉಪಸ್ಥಿತಿ: ನಿರೂಪಮಾ ರಾವ್, ಎಚ್.ಎಸ್. ಶಿವಪ್ರಕಾಶ್, ಸುಚಂದ್ರ ಘೋಷ್, ಪಾರುಲ್ ಪಾಂಡ್ಯ ಧರ್, ಮಧು ನಟರಾಜ್, ಡಿ.ಎ. ಪ್ರಸನ್ನ, ನೀತಾ ಇನಾಂದಾರ್, ಆಯೋಜನೆ: ಮಣಿಪಾಲ್ ಯೂನಿವರ್ಸಲ್ ಪ್ರೆಸ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ಸಂಜೆ 6

ನಾಟಕ ಪ್ರದರ್ಶನ: 'ವಾರಸುದಾರ', ನಿರ್ದೇಶನ: ಎಂ.ಎಸ್. ಸತ್ಯು, ರಚನೆ: ಜಯರಾಮ್ ರಾಯಪುರ, ಸಹ ನಿರ್ದೇಶನ: ಎಂ.ಸಿ. ಆನಂದ್, ಸಂಗೀತ: ಸಮೀರ್ ಕುಲಕರ್ಣಿ, ನೃತ್ಯ ಸಂಯೋಜನೆ: ನಂದಿನಿ ಮೆಹ್ತಾ, ವಸ್ತ್ರ ವಿನ್ಯಾಸ: ಜಯಂತಿ ಮರುಳಸಿದ್ದಪ್ಪ, ಆಯೋಜನೆ: ಸಮುದಾಯ ಬೆಂಗಳೂರು, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 6

ವಿಚಾರ ಸಂಕಿರಣ ಮತ್ತು ಸಂವಾದ: 'ರಾಷ್ಟ್ರೀಯ ಶಿಕ್ಷಣ ನೀತಿ 2020ರ ಅನುಷ್ಠಾನ–ಅವಕಾಶಗಳು ಮತ್ತು ಕಾರ್ಯತಂತ್ರಗಳು', ಅತಿಥಿಗಳು: ಡಾ.ಸಿ.ಎನ್. ಅಶ್ವತ್ಥನಾರಾಯಣ, ಬಿ.ಸಿ. ನಾಗೇಶ್, ಪಿ.ಸಿ. ಮೋಹನ್, ಡಾ. ಗುರುರಾಜ ಕರಜಗಿ, ಡಾ.ಎಂ.ಕೆ. ಶ್ರೀಧರ್, ಡಾ. ಆನಂದ್ ಕೆ. ಜೋಶಿ, ಆಯೋಜನೆ: ಬಿಜೆಪಿ–ಬೆಂಗಳೂರು ಕೇಂದ್ರ ಜಿಲ್ಲೆ, ಸ್ಥಳ: ಚೌಡಯ್ಯ ಸ್ಮಾರಕ ಭವನ, ಮಲ್ಲೇಶ್ವರ, ಸಂಜೆ 5



ಡಾ ಗುರುರಾಜ ಕರಜಗಿ

ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ನಿಯಮಿತ
SRI GURU RAGHAVENDRA SAHAKARA BANK NIYAMITHA
No.15, Subbarama Chetty Road, Nettakalappa Circle, Basavanagudi, Bangalore-560004
Phone : 26620380. 26620379, Fax : 080-26506895
E-mail: sgrsbn.bank@gmail.com Website: www raghavendrabank.com

SGRSBN/OR/1578/2021-22 ದಿನಾಂಕ : 23–09–2021

ಡಿ.ಐ.ಸಿ.ಜಿ.ಸಿ. ವಿಮೆ

ಪ್ರಿಯ ಗ್ರಾಹಕರೇ,

ಈ ಮೂಲಕ ತಮಗೆ ತಿಳಿಸುವುದೇನೆಂದರೆ, ನಮ್ಮ ಬ್ಯಾಂಕಿನ ಗ್ರಾಹಕರು ಡಿ.ಐ.ಸಿ.ಜಿ.ಸಿ. ವಿಮಾ ಕ್ಲೈಮ್‌ನ್ನು ಸಲ್ಲಿಸಲು ಅರ್ಹರಿರುತ್ತಾರೆ. ವಿಮಾ ಕ್ಲೈಮ್‌ನ್ನು ಕಟ್–ಆಫ್ ದಿನಾಂಕದಿಂದ 45 ದಿನದೊಳಗೆ ಡಿ.ಐ.ಸಿ.ಜಿ.ಸಿ.ಗೆ ಸಲ್ಲಿಸಬೇಕಾಗಿರುತ್ತದೆ. ತಮ್ಮ ಕ್ಲೈಮ್‌ನ್ನು ಗ್ರಾಹಕರು ದಿನಾಂಕ : 04–10–2021ರೊಳಗೆ ನಮ್ಮ ಬ್ಯಾಂಕಿನ ಬಸವನಗುಡಿ ಶಾಖೆ ಅಥವಾ ಪ್ರಧಾನ ಕಛೇರಿಯಲ್ಲಿ ವ್ಯವಹಾರ ಸಮಯದೊಳಗೆ ಸಲ್ಲಿಸಬಹುದು. ಹೆಚ್ಚಿನ ಮಾಹಿತಿ ಹಾಗೂ ಕ್ಲೈಮ್‌ನ ಅರ್ಜಿಯನ್ನು ಗ್ರಾಹಕರು ನಮ್ಮ ಬ್ಯಾಂಕಿನ ಜಾಲತಾಣವಾದ **www.raghavendrabank.com** ನಲ್ಲಿ ಪಡೆಯಬಹುದು.

ತಮ್ಮ ವಿಶ್ವಾಸಿ
ಸಹಿ/–
(ಆರ್. ಅಶೋಕನ್)
ಆಡಳಿತಾಧಿಕಾರಿಗಳು

THE KARNATAKA STATE CRICKET ASSOCIATION
M. Chinnaswamy Stadium, Cubbon Road, Bangalore - 560 001.
TENDER NOTIFICATION

The Karnataka State Cricket Association, M.Chinnaswamy Stadium, Cubbon Road, Bangalore, invites sealed tenders from GST Compliant well established reputed vendors of IT products for the following to KSCA.

1. Supplied Required :- (a) supply & installation of Dell/HP/Acer/Asus Laptops, Apple Ipads and related IT accessories to the KSCA.
2. Estimated Cost :- Rs. 39 lakhs
3. Cost of tender form :- Rs. 2,500/- plus GST (Non Refundable)
4. Date of issue of tender form :- 27/9/2021 to 13/10/2021
5. Last date of submission of filled tender form :- 21/10/2021 before 4.30 p.m
6. Completion of work by :- Two weeks from the date of purchase order

Tender documents may be obtained from the Office of the KSCA, by submitting a requisition in the company's letter head between 11.00 a.m to 5.00 p.m on any working day. For any clarification please contact Mr. Radhakrishna T.V., Asst. Manager, IT Dept, Mobile No. 98449 40157

Sd/-
Hon. Secretary-KSCA

5ನೇ ವರ್ಷದ ಸವಿನೆನಪು
ನಮ್ಮೆಲ್ಲರ ಒಲುಮೆಯ

ಕುಮಾರಿ ಭಾವನಾ ಗಂಗಾಧರ್ ಬಿ.ಇ.
ದುಃಖತಪ್ತ: ತಂದೆ- **ಬಿ.ಗಂಗಾಧರ್**
ತಾಯಿ-**ಡಿ.ಗಿರಿಜ ಗಂಗಾಧರ್**
ಮೊ: 9480305470

SBI ಭಾರತೀಯ ಸ್ಟೇಟ್ ಬ್ಯಾಂಕ್
ಸ್ಟ್ರೆಸ್ಡ್ ಅಸೆಟ್ಸ್ ರಿಕವರಿ ಬ್ರಾಂಚ್–2, ಹೈದರಾಬಾದ್
ಮ.ನಂ. 1–8–563/1, 1ನೇ ಮಹಡಿ, ಸಂಧ್ಯಾ ಥಿಯೇಟರ್ ಎದುರು, ಆರ್‌ಟಿಸಿ 'ಎಕ್ಸ್' ರೋಡ್ಸ್, ಚಿಕ್ಕಡಪಲ್ಲಿ, ಹೈದರಾಬಾದ್–500 020. ಫೋನ್: 040–2346 1614
ಇ–ಮೇಲ್: sbi.20945@sbi.co.in

ಸ್ಥಿರಾಸ್ತಿಗಳ ಮಾರಾಟಕ ಕುರಿತಾದ ಮಾರಾಟ ಪ್ರಕಟಣೆ

ಹಣಕಾಸು ಸ್ವತ್ತುಗಳ ಸಂರಕ್ಷಣೆ ಮತ್ತು ಪುನಾರಚನೆ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ, 2002 ಅನ್ನು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002ರ ನಿಯಮ 8(6) ರೊಂದಿಗೆ ಓದಿಕೊಂಡಂತೆ ಪ್ರದತ್ತವಾದ ಹಕ್ಕುಗಳ ಅಡಿಯಲ್ಲಿ ಸ್ಥಿರಾಸ್ತಿಗಳ ಮಾರಾಟ ಕುರಿತಾದ ಇ-ಹರಾಜು ಮಾರಾಟ ಪ್ರಕಟಣೆ.

ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ಮತ್ತು ಮುಖ್ಯವಾಗಿ ಸಾಲಗಾರರಿಗೆ ಮತ್ತು ಜಾಮೀನುದಾರರಿಗೆ ತಿಳಿಸುವುದು ಏನೆಂದರೆ, ಇಲ್ಲಿ ಕೆಳಗೆ ವಿವರಿಸಲಾಗಿರುವ ಸ್ವತ್ತನ್ನು [illegible] ಸೆಕ್ಯೂರ್ಡ್ ಕ್ರೆಡಿಟರ್‌ಗೆ ಈಡು/ಅಡಮಾನ ನೀಡಲಾಗಿರುತ್ತದ್ದು, ಸದರಿ ಅಡಮಾನ ಸ್ವತ್ತನ್ನು ಭಾರತೀಯ ಸ್ಟೇಟ್ ಬ್ಯಾಂಕ್‌ನ ಮುಖ್ಯ ಪ್ರಬಂಧಕರು/ಅಧಿಕೃತ ಅಧಿಕಾರಿ, ಸೆಕ್ಯೂರ್ಡ್ ಕ್ರೆಡಿಟರ್ ರವರು ತಮ್ಮ ಸ್ವಾಧೀನತೆಗೆ ಪಡೆದುಕೊಂಡಿದ್ದು, ಸದರಿ ಸ್ವಾಧೀನ ಸ್ವತ್ತನ್ನು 30.10.2021 "ಹೇಗಿದೆಯೊ ಎಲ್ಲಿದೆಯೊ" ಮತ್ತು "ಹೇಗಿದೆಯೊ ಎಲ್ಲಿದೆಯೊ" ಆಧಾರದಲ್ಲಿ ಮಾರಾಟ ಮಾಡಲಾಗುತ್ತಿದೆ.

ಇಎಂಡಿ ಸಲ್ಲಿಸುವ ಅಂತಿಮ ದಿನಾಂಕ ಮತ್ತು ಸಮಯ 28.10.2021 ರಂದು ಸಂಜೆ 4:00 ಗಂಟೆ ಮತ್ತು ಇ–ಹರಾಜು ದಿನಾಂಕ: 30.10.2021 ರಂದು ಅಪರಾಹ್ನ 12.00 ರಿಂದ 2.00 ಗಂಟೆ

ಕ್ರ. ಸಂ.	ಸಾಲಗಾರರ ಹೆಸರು	ಸ್ವತ್ತು/ಆಸ್ತಿಗಳ ವಿವರ	ಮೀಸಲು ಬೆಲೆ	ಇಎಂಡಿ
1	**ಶ್ರೀಮತಿ. ಕಲ್ಯಾಣಿ ಅಕ್ಕರಾಜು ಕೋಂ. ಕೆ.ಶಿವರಾಮ್ ರಾವ್,** ರೆಸಿಡೆನ್ಷಿಯಲ್ ವಿಲ್ಲಾ ನಂ.: ಸಿ-29, ಸೈಕಾನ್ ಮೈತ್ರಿ, ಚಿಕ್ಕಬನಹಳ್ಳಿ ಗ್ರಾಮ, ಕಾಡುಗೋಡಿ ಅಂಚೆ, ಬೆಂಗಳೂರು-560 067. **ಮತ್ತೊಂದು ವಿಳಾಸ: ಶ್ರೀಮತಿ. ಕಲ್ಯಾಣಿ ಅಕ್ಕರಾಜು ಕೋಂ. ಕೆ.ಶಿವರಾಮ್ ರಾವ್,** 4240, ಅಲ್ಬನಿ ಡಿಆರ್, ಎಪಿಟಿ 3311, ಸ್ಯಾನ್‌ಜೋಸ್, ಕ್ಯಾಲಿಫೋರ್ನಿಯಾ, ಯುಎಸ್‌ಎ-95129.	ಎಸ್.ಆರ್.ಒ. ಬಾಣಸವಾಡಿ ಕಚೇರಿಯಲ್ಲಿ ದಿನಾಂಕ 04.04.2018 ರಂದು ನೋಂದಾಯಿತ ಸೇಲ್ ಡೀಡ್ ನಂ. 188/2018-19 ಮುಖೇನ, ಶ್ರೀಮತಿ. ಕಲ್ಯಾಣಿ ಅಕ್ಕರಾಜು ಕೋಂ. ಕೆ.ಶಿವರಾಮ್ ರಾವ್ ರವರ ಹೆಸರಿನಲ್ಲಿರುವ ಮತ್ತು ಚಿಕ್ಕಬನಹಳ್ಳಿ ಗ್ರಾಮ, ವೈಟ್‌ಫೀಲ್ಡ್, ಕಾಡುಗೋಡಿ ಅಂಚೆ, ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು-560006 ವಿಳಾಸದ ಸರ್ವೆ ನಂ. 20, 21, 22 ಮತ್ತು 23 ಗಳಲ್ಲಿ ಸ್ಥಿತಗೊಂಡಿರುವ, ಪರಿವರ್ತಿತ ಅಂದಾಜು 5946 ಚ.ಅ. ವಿಸ್ತೀರ್ಣವುಳ್ಳ ಅವಿಭಜಿತ ಪಾಲುದಾರಿಕೆಯುಳ್ಳ ಸ್ವತ್ತಿನಲ್ಲಿರುವ, ಸುಮಾರು 3964 ಚ.ಅ. ವಿಸ್ತೀರ್ಣದ 2 ವಾಹನಗಳ ಪಾರ್ಕಿಂಗ್ ಜಾಗದ ಜೊತೆಗಿರುವ, ಸೈಕಾನ್ ಮೈತ್ರಿಯ ನೆಲಮಹಡಿಯಲ್ಲಿನ 4247 ಚ.ಅ. ಸೂಪರ್ ಬಿಲ್ಟಪ್ ಪ್ರದೇಶ ಹೊಂದಿರುವ ಒಟ್ಟಾರೆ 3768 ಚ.ಅ. ಕಾರ್ಪೆಟ್ ಪ್ರದೇಶವುಳ್ಳ, ನಂ. ಸಿ-29 ಹೊಂದಿರುವ ಸೆಮಿ ಫಿನಿಷ್ಡ್ ರೆಸಿಡೆನ್ಷಿಯಲ್ ವಿಲ್ಲಾ ಸ್ವತ್ತಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನ ಚಕ್ಕುಬಂದಿ: **ಪೂರ್ವಕ್ಕೆ:** ವಿಲ್ಲಾ ನಂ. 41 "ಸೈಕಾನ್ ಮೈತ್ರಿ", **ಪಶ್ಚಿಮಕ್ಕೆ:** "ಸೈಕಾನ್ ಮೈತ್ರಿ"ಯಲ್ಲಿನ ರಸ್ತೆ, **ಉತ್ತರಕ್ಕೆ:** ವಿಲ್ಲಾ ನಂ. 30 "ಸೈಕಾನ್ ಮೈತ್ರಿ", **ದಕ್ಷಿಣಕ್ಕೆ:** ವಿಲ್ಲಾ ನಂ. 28 "ಸೈಕಾನ್ ಮೈತ್ರಿ" ಸ್ವತ್ತಿಗೆ ಭೇಟಿ ನೀಡಲು ದಯವಿಟ್ಟು ಸಂಪರ್ಕಿಸಿ: **ಶ್ರೀ ಡಿ.ನಾಗಪ್ರಸಾದ್, ಪ್ರಬಂಧಕರು, 9866235895, ಅಥವಾ ಪಿ. ಶ್ರೀನಿವಾಸ್ ರಾವ್, ಮುಖ್ಯ ಪ್ರಬಂಧಕರು, 9849024816.**	ರೂ. 204.15 ಲಕ್ಷ ಬಿಡ್ ಹೆಚ್ಚಳ ಮೊತ್ತ: ರೂ. 1,00,000/– 23.09.2021 ರಂತೆಗಿನ ಒಟ್ಟು ಬಾಕಿಮೊತ್ತ: ರೂ. 420.28 ಲಕ್ಷ ಜೊತೆಗೆ ಮುಂದಿನ ಬಡ್ಡಿ ಮತ್ತು ಸಾಂದರ್ಭಿಕ ಖರ್ಚು ವೆಚ್ಚಗಳು.	ರೂ. 20.50 ಲಕ್ಷ

ಮಾರಾಟಕ್ಕೆ ಸಂಬಂಧಿತ ಯಾವುದೇ ಸ್ಪಷ್ಟೀಕರಣಗಳಿಗಾಗಿ ಅಥವಾ ಇತರೆ ಷರತ್ತುಗಳ ಕುರಿತಾದ ಹೆಚ್ಚಿನ ವಿವರಗಳಿಗಾಗಿ ಆಸಕ್ತಿಯುಳ್ಳ ಬಿಡ್‌ದಾರರು, **ಅಧಿಕೃತ ಅಧಿಕಾರಿ ಭಾರತೀಯ ಸ್ಟೇಟ್ ಬ್ಯಾಂಕ್, ಸ್ಟ್ರೆಸ್ಡ್ ಅಸೆಟ್ಸ್ ರಿಕವರಿ ಬ್ರಾಂಚ್-2, ಹೈದರಾಬಾದ್, ಮ.ನಂ. 1-8-563/1, 1ನೇ ಮಹಡಿ, ಸಂಧ್ಯಾ ಥಿಯೇಟರ್ ಎದುರು, ಆರ್‌ಟಿಸಿ 'ಎಕ್ಸ್' ರೋಡ್ಸ್, ಚಿಕ್ಕಡಪಲ್ಲಿ, ಹೈದರಾಬಾದ್-500 020, ತೆಲಂಗಾಣ ರಾಜ್ಯ ಇವರನ್ನು ಸಂಪರ್ಕಿಸಬಹುದು. ಮಾರಾಟಕ್ಕೆ ಸಂಬಂಧಿತ ವಿವರವಾದ ಷರತ್ತು ಮತ್ತು ನಿಬಂಧನೆಗಳಿಗಾಗಿ, ದಯವಿಟ್ಟು https://ibapi.in ವೆಬ್‌ಸೈಟ್‌ನಲ್ಲಿರುವ ಲಿಂಕ್‌ನ್ನು ಪರಿಶೀಲಿಸಿರಿ.**

ಆಸಕ್ತಿಯುಳ್ಳ ಬಿಡ್‌ದಾರರು/ಖರೀದಿದಾರರು, ಹರಾಜು ದಿನಾಂಕಕ್ಕೆ ಮೂರು ದಿನಗಳು ಮುಂಚಿತವಾಗಿ, ಹರಾಜಿನಲ್ಲಿ ಪಾಲ್ಗೊಳ್ಳಲು ಇ-ಬಿಕ್‌ರೇ ಪೋರ್ಟಲ್‌ನಲ್ಲಿ ತಮ್ಮ ಕೆವೈಸಿ ಸಲ್ಲಿಸುವುದು ಮತ್ತು ನೋಂದಣಿ ಮಾಡಿಕೊಳ್ಳುವುದು. ವೆಬ್‌ಸೈಟ್: https://ibapi.in-BIDDERS REGISTRATION

ದಿನಾಂಕ: 23.09.2021, ಸ್ಥಳ: ಹೈದರಾಬಾದ್ — ಸಹಿ/– ಅಧಿಕೃತ ಅಧಿಕಾರಿ, ಎಸ್‌ಬಿಐ, ಎಸ್‌ಎಆರ್‌ಬಿ–2, ಹೈದರಾಬಾದ್.

ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ.
ಸಂ: ಕಾಪಾಅ/ಅಲ್ಪಾವಧಿ ಮರು ಟೆಂಡರ್/01(2)/2021–22 ದಿನಾಂಕ: 18.09.2021

ಅಲ್ಪಾವಧಿ ಮರು ಇ–ಟೆಂಡರ್ ಅಧಿಸೂಚನೆ

2020–21ನೇ ಸಾಲಿನ ಚಿಕ್ಕಬಳ್ಳಾಪುರ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಕಛೇರಿ ಮತ್ತು ಅದೀನ 6 ಉಪ ವಿಭಾಗ ಕಛೇರಿಗಳಿಗೆ ಅವಶ್ಯವಿರುವ ಗಣಕಯಂತ್ರ ನಿರ್ವಾಹಕರು, ವಾಹನ ಚಾಲಕರು ಮತ್ತು ಡಿ.ದರ್ಜೆ ನೌಕರರನ್ನು ಹೊರ ಸಂಪನ್ಮೂಲದಿಂದ ಪಡೆಯುವ ಸಲುವಾಗಿ ಅಲ್ಪಾವಧಿ ಮರು ಇ–ಟೆಂಡರ್ ಅಧಿಸೂಚನೆಯನ್ನು ಹೊರಡಿಸಲಾಗಿದೆ. ವಿವರಗಳನ್ನು **https://eproc.karnataka.gov.in** ನಲ್ಲಿ ಹಾಗೂ ಕಚೇರಿ ವೇಳೆಯಲ್ಲಿ ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ ವಿಭಾಗ, ಚಿಕ್ಕಬಳ್ಳಾಪುರ ಕಛೇರಿಯಲ್ಲಿ ಸಂಪರ್ಕಿಸಿ ಪಡೆಯಬಹುದು. (1) ಗಣಕಯಂತ್ರ ನಿರ್ವಾಹಕರು–08 ಮಾಹೆ 19000X08=1,52,000 (2) ವಾಹನ ಚಾಲಕರು 05 ಮಾಹೆ 17000X5=85,000 (3) ಡಿ.ದರ್ಜೆ ನೌಕರರು–02 15000X2=30,000 (ಇ.ಎಂ.ಡಿ ಮೊತ್ತ 1,00,000.00 ಒಂದು ಲಕ್ಷ ರೂಪಾಯಿಗಳು ಮಾತ್ರ) ಮೇಲ್ಕಂಡಂತೆ ನೀಡಲಾದ ದರಗಳು ಇ.ಎಸ್.ಐ, ಪಿ.ಎಫ್ ಸೇರಿದಂತೆ ಎಲ್ಲಾ ಭತ್ಯೆಗಳನ್ನು ಒಳಗೊಂಡಿರುತ್ತದೆ. ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ ದಿನಾಂಕ: **18.09.2021.** ಟೆಂಡರ್ ಪ್ರಾರಂಭದ ದಿನಾಂಕ: **20.09.2021 ಸಂಜೆ 4.30 ಗಂಟೆ ನಂತರ.** ಭರ್ತಿಮಾಡಿದ ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **27.09.2021 ಸಂಜೆ 4.30 ಗಂಟೆಯವರೆಗೆ.** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **28.09.2021 ಸಂಜೆ 4.35 ಗಂಟೆಗೆ.** ಆರ್ಥಿಕ ಬಿಡ್ ತೆರೆಯುವ ದಿನಾಂಕ: **30.09.2021 ಬೆಳಿಗ್ಗೆ 11.00 ಗಂಟೆಗೆ** (ಸಾಧ್ಯವಾದಲ್ಲಿ). ಮೇಲ್ಕಂಡಂತೆ ನಿಗಧಿಪಡಿಸಿದ ದಿನಾಂಕಗಳು ಆಕಸ್ಮಿಕವಾಗಿ ಸರ್ಕಾರಿ ರಜಾ ದಿನವೆಂದು ಘೋಷಣೆಯಾದಲ್ಲಿ ಮುಂದಿನ ದಿನವನ್ನು ಕೊನೆಯ ದಿನವೆಂದು ಪರಿಗಣಿಸಲಾಗುವುದು. ಈ ಪ್ರಕ್ರಿಯೆಯಲ್ಲಿ ಸ್ಥಳೀಯರಿಗೆ ಆದ್ಯತೆ ನೀಡಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಬಳ್ಳಾಪುರ.
ವಾ.ಸಾ.ಸಂ.ಇ./ಚಿಕ್ಕಬಳ್ಳಾಪುರ/ಆರ್.ಒ.ಸಂಖ್ಯೆ 176/ಎಂಸಿಎ/2021–22

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ವಿಧಾನಸಭೆಯಲ್ಲಿ ಕಾಂಗ್ರೆಸ್ ಆರೋಪ • ತಲಾ ₹5 ಲಕ್ಷ ಪರಿಹಾರ ನೀಡಲು ಒತ್ತಾಯ

‘ಕೋವಿಡ್‌ನಿಂದ 4 ಲಕ್ಷ ಸಾವು: ಸತ್ಯ ಮುಚ್ಚಿಟ್ಟ ಸರ್ಕಾರ’

ಪ್ರಜಾವಾಣಿ ವಾರ್ತೆ

> **ಕೊರೊನಾ ಅವಧಿಯಲ್ಲಿ ಚಿಕಿತ್ಸೆಗೆ ಹಣವಿಲ್ಲದೆ ನಾಲ್ಕು ಖಾಸಗಿ ಹಣಕಾಸು ಸಂಸ್ಥೆಗಳಲ್ಲಿ ₹ 4.17 ಲಕ್ಷ ಕೋಟಿ ಮೌಲ್ಯದ 1,500 ಮೆಟ್ರಿಕ್ ಟನ್ ಚಿನ್ನದ ಒಡವೆ ಗಿರವಿಯಿಟ್ಟಿದ್ದಾರೆ**
> **ಸಿದ್ದರಾಮಯ್ಯ,** ವಿರೋಧ ಪಕ್ಷದ ನಾಯಕ

> **ಪ್ರಧಾನಿಯನ್ನು ಟೀಕಿಸುವುದರಿಂದ ಕೋವಿಡ್ ವಾಸಿ ಆಗುವುದಾದರೆ, ಟೀಕೆ ಮಾಡೋಣ, ಪ್ರಧಾನಿ ಇಲ್ಲಿಗೆ ಬಂದು ಉತ್ತರ ಕೊಡಲು ಆಗಲ್ಲ, ವೃಥಾ ಕೆಸರೆರಚಾಟ ಬೇಡ**
> **ಎಚ್.ಡಿ.ರೇವಣ್ಣ,** ಜೆಡಿಎಸ್ ಶಾಸಕ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಸೋಂಕಿಗೆ ಒಳಗಾದವರು ಹಾಸಿಗೆ, ವೆಂಟಿಲೇಟರ್, ಆಮ್ಲಜನಕ, ಔಷಧ ಇಲ್ಲದೇ ಆಸ್ಪತ್ರೆಗಳು, ಬೀದಿ-ಬೀದಿಗಳಲ್ಲಿ ಬಿದ್ದು ದಾರುಣವಾಗಿ ಸತ್ತರು. ಈ ರೀತಿ ಸುಮಾರು 3 ರಿಂದ 4 ಲಕ್ಷ ಮಂದಿ ಮೃತಪಟ್ಟಿದ್ದು, ಸರ್ಕಾರ ಸಾವಿನ ಸಂಖ್ಯೆಯನ್ನು ಮುಚ್ಚಿಟ್ಟಿದೆ ಎಂದು ಕಾಂಗ್ರೆಸ್ ಸದಸ್ಯರು ವಿಧಾನಸಭೆಯಲ್ಲಿ ಗುರುವಾರ ಆಕ್ರೋಶ ವ್ಯಕ್ತಪಡಿಸಿದರು.

ನಿಯಮ 69 ರಡಿ ವಿಷಯವನ್ನು ಪ್ರಸ್ತಾಪಿಸಿದ ಕಾಂಗ್ರೆಸ್ ಸದಸ್ಯರು ಕೋವಿಡ್‌ನಿಂದ ಮೃತಪಟ್ಟ ಎಲ್ಲರಿಗೂ ತಲಾ ₹5 ಲಕ್ಷ ದಂತೆ ಪರಿಹಾರವನ್ನು ನೀಡಬೇಕು. ಚಾಮರಾಜನಗರದಲ್ಲಿ ಆಮ್ಲಜನಕ ಸಿಗದೇ 36 ಮಂದಿ ಮೃತಪಟ್ಟ ಪ್ರಕರಣದಲ್ಲಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದೂ ಒತ್ತಾಯಿಸಿದರು.

ವಿಷಯ ಪ್ರಸ್ತಾಪಿಸಿ ಮಾತನಾಡಿದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ‘ಕೋವಿಡ್‌ನ ಎರಡು ಅಲೆಗಳಿಂದ ಒಟ್ಟು 37,603 ಮಂದಿ ಸತ್ತಿದ್ದಾರೆ ಎಂದು ಸರ್ಕಾರ ಹೇಳಿದೆ. ಇದು ಸತ್ಯಕ್ಕೆ ದೂರವಾದ ಸಂಗತಿ. ಅರವಿಂದ್ ಸುಬ್ರಹ್ಮಣ್ಯ ಅವರ ವರದಿ ಪ್ರಕಾರ ಕರ್ನಾಟಕದಲ್ಲಿ 3 ರಿಂದ 4 ಲಕ್ಷ ಜನ ಕೋವಿಡ್‌ನಿಂದ ಮೃತಪಟ್ಟಿದ್ದಾರೆ. ನೀವು ಸತ್ಯ ಏಕೆ ಮುಚ್ಚಿಡುತ್ತಿದ್ದೀರಿ’ ಎಂದು ಪ್ರಶ್ನಿಸಿದರು.

‘ಸುವರ್ಣ ಆರೋಗ್ಯ ಟ್ರಸ್ಟ್ ಮಾಹಿತಿಯ ಪ್ರಕಾರ, ಮೊದಲ ಅಲೆಯ ಸಂದರ್ಭದಲ್ಲಿ 1.32 ಲಕ್ಷ ಮತ್ತು 2 ನೇ ಅಲೆಯ ಸಂದರ್ಭ ಈವರೆಗೆ 1.19 ಲಕ್ಷ ಕ್ಲೈಮ್‌ಗಳು ಬಂದಿವೆ. ಆದ್ದರಿಂದ ಸಾವುಗಳ ಪರಿಶೋಧನೆ (ಡೆತ್ ಆಡಿಟ್) ಮಾಡಿಸಬೇಕು’ ಎಂದು ಆಗ್ರಹಿಸಿದರು.

‘ಕರ್ನಾಟಕದಲ್ಲಿ ಆಮ್ಲಜನಕ ಇಲ್ಲದೇ ಯಾರೂ ಸತ್ತಿಲ್ಲ ಎಂದು ಕೇಂದ್ರ ಸರ್ಕಾರ ರಾಜ್ಯಸಭೆಯಲ್ಲಿ ಹೇಳಿಕೆ ನೀಡಿದೆ. ಆದರೆ, ಚಾಮರಾಜನಗರದಲ್ಲಿ ನಡೆದ ದುರಂತವೇನು? ಅಲ್ಲಿ ಆಮ್ಲಜನಕ ಸಿಗದೇ 36 ಜನ ಮೃತಪಟ್ಟಿಲ್ಲವೇ? ನನಗೆ, ನನ್ನ ಪತ್ನಿ ಮತ್ತು ಮಗನಿಗೂ ಕೋವಿಡ್ ಆಗಿತ್ತು. ಅಂತಹ ಕಾಯಿಲೆ ಯಾರಿಗೂ ಬರಬಾರದು, ಆದಷ್ಟು ಬೇಗ ಕಾಯಿಲೆ ತೊಲಗಲಿ’ ಎಂದರು.

‘ಕೋವಿಡ್‌ನಿಂದ ಸಾಕಷ್ಟು ಬಡವರು ಸತ್ತಿದ್ದಾರೆ. ಸುಮಾರು 1 ಲಕ್ಷಕ್ಕೂ ಹೆಚ್ಚು ಮಕ್ಕಳು ಅನಾಥರಾಗಿದ್ದು, ಅವರ ಭವಿಷ್ಯವೇನು? ಸರ್ಕಾರ ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ’ ಎಂದು ಪ್ರಶ್ನಿಸಿದ ಅವರು, ‘ಮೊದಲ ಅಲೆ ಮುಗಿಯುತ್ತಿದ್ದಂತೆ ಆರಾಮವಾಗಿಬಿಟ್ಟಿರಿ. ಅದರ ಪರಿಣಾಮ ಎರಡನೇ ಅಲೆಯಲ್ಲಿ ದುರಂತ ಕಾಣಬೇಕಾಯಿತು. ಆಸ್ಪತ್ರೆಗಳಿಂದ ಹಾಸಿಗೆ, ಐಸಿಯು ಹಾಸಿಗೆ, ವೆಂಟಿಲೇಟರ್ ತೆರವುಗೊಳಿಸಿದಿರಿ. ಚುನಾವಣೆ ನಡೆಸಿದಿರಿ, ಕುಂಭಮೇಳ ನಡೆಸಿದಿರಿ. ಇದರಿಂದಾಗಿಯೇ ಕೋವಿಡ್ ಎರಡನೇ ಅಲೆ ಬಂತು’ ಎಂದು ಸಿದ್ದರಾಮಯ್ಯ ಟೀಕಾ ಪ್ರಹಾರ ನಡೆಸಿದರು.

ಡಿ.ಕೆ.ಶಿವಕುಮಾರ್, ‘ಚಾಮರಾಜನಗರದ ದುರಂತಕ್ಕೆ ಸಂಬಂಧಿಸಿದಂತೆ ಈವರೆಗೂ ಯಾವುದೇ ಅಧಿಕಾರಿಯ ವಿರುದ್ಧವೂ ಕ್ರಮ ತೆಗೆದುಕೊಂಡಿಲ್ಲ. ಈಗಲಾದರೂ ಮೃತಪಟ್ಟ 36 ಜನರ ಕುಟುಂಬಗಳ ಸದಸ್ಯರಿಗೆ ಸರ್ಕಾರಿ ಉದ್ಯೋಗ ನೀಡಬೇಕು. ಬಳಿಕ ನೇಮಕಾತಿ ನಿಯಮಾವಳಿ ಪ್ರಕಾರ ಕಾಯಂಗೊಳಿಸಬೇಕು’ ಎಂದು ಒತ್ತಾಯಿಸಿದರು.

‘ಕೆಪಿಸಿಸಿ ವತಿಯಿಂದ ನಡೆಸಿರುವ ಸಮೀಕ್ಷೆಯ ಪ್ರಕಾರ ರಾಜ್ಯದಲ್ಲಿ ಕೋವಿಡ್‌ನಿಂದ 3.27 ಲಕ್ಷ ಮಂದಿ ಸಾವನ್ನಪ್ಪಿದ್ದಾರೆ. ನಮ್ಮ ಸಮೀಕ್ಷೆ ತಂಡ ಮನೆ ಮನೆಗೆ ಹೋಗಿ ಮಾಹಿತಿಯನ್ನು ಸಂಗ್ರಹಿಸಿಕೊಂಡು ಬಂದಿದೆ. ಸರ್ಕಾರ ಮಾತ್ರ ಕೋವಿಡ್‌ನಿಂದ ಮೃತಪಟ್ಟವರಿಗೆ ಕೋವಿಡ್‌ನಿಂದ ಸಾವು ಎಂಬ ಪ್ರಮಾಣಪತ್ರವನ್ನು ನೀಡಿಲ್ಲ’ ಎಂದು ಟೀಕಿಸಿದರು.

ಎಚ್.ಕೆ.ಪಾಟೀಲ, ‘ಮೃತ ವ್ಯಕ್ತಿಗಳ ಕುಟುಂಬಕ್ಕೆ ತಲಾ ₹ 4 ಲಕ್ಷ ಪರಿಹಾರ ನೀಡಬೇಕು. ಔಷಧ ಮತ್ತು ಕೋವಿಡ್ ಉಪಕರಣಗಳ ಖರೀದಿಯಲ್ಲಿ ಆಗಿರುವ ಹಗರಣದ ಬಗ್ಗೆ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ ನೀಡಿರುವ ವರದಿಯನ್ನು ಸದನದಲ್ಲಿ ಮಂಡಿಸಬೇಕು’ ಎಂದು ಒತ್ತಾಯಿಸಿದರು.

ರಾಮಲಿಂಗಾರೆಡ್ಡಿ, ‘ವಿಶ್ವ ಆರೋಗ್ಯ ಸಂಸ್ಥೆ ಎರಡನೇ ಅಲೆ ಬರುತ್ತದೆ ಎಂದು ಎಚ್ಚರಿಕೆ ನೀಡಿದ್ದರೂ ನಿರ್ಲಕ್ಷ್ಯ ವಹಿಸಲಾಯಿತು. ಎರಡನೇ ಅಲೆ ಎದುರಿಸಲು ಅಗತ್ಯ ತಯಾರಿ ಮಾಡಿಕೊಳ್ಳಲಿಲ್ಲ’ ಎಂದು ಅವರು ದೂರಿದರು.

ಕಳಪೆ ಸ್ಯಾನಿಟೈಸ್ ಪ್ರದರ್ಶನ

‘ಸುಮಾರು ₹ 9ಕೋಟಿ ಮೌಲ್ಯದಷ್ಟು ಕ್ಯಾನ್ ಮತ್ತು ಹ್ಯಾಂಡ್ ಸ್ಯಾನಿಟೈಸರ್ ಖರೀದಿಸಿದ್ದು, ಕಳಪೆ ಗುಣಮಟ್ಟದ್ದು ಎಂದು ಔಷಧ ನಿಯಂತ್ರಕರು ಅದನ್ನು ತಿರಸ್ಕರಿಸಿದ್ದಾರೆ. ಈ ಸ್ಯಾನಿಟೈಸರ್‌ನ ಬಣ್ಣ ಬದಲಾಗುತ್ತದೆ’ ಎಂದು ಸಿದ್ದರಾಮಯ್ಯ ಸ್ಯಾನಿಟೈಸರ್ ಬಾಟಲಿಗಳನ್ನು ಪ್ರದರ್ಶಿಸಿದರು. ‘ಇದೊಂದು ಹಗರಣ, ಇದರ ಬಗ್ಗೆ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಬೇಕು’ ಎಂದು ಒತ್ತಾಯಿಸಿದರು.

ಇಕ್ಕಟ್ಟಿಗೆ ಸಿಲುಕಿದ ಸಚಿವ ಶ್ರೀರಾಮುಲು

‘ರಾಜ್ಯ ಸರ್ಕಾರ ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಗಳಿಗೆ ಒಂದು ಪೈಸೆ ಪರಿಹಾರವನ್ನು ಕೊಟ್ಟಿಲ್ಲ’ ಎಂಬ ಡಿ.ಕೆ.ಶಿವಕುಮಾರ್ ಅವರ ಟೀಕಾ ಪ್ರಹಾರಕ್ಕೆ ಉತ್ತರ ನೀಡಲು ಹೋಗಿ ಸಚಿವ ಬಿ.ಶ್ರೀರಾಮುಲು ಇಕ್ಕಟ್ಟಿಗೆ ಸಿಲುಕಿದರು.

‘ಮೃತ ಪಟ್ಟ ಕುಟುಂಬಗಳಿಗೆ ತಲಾ ₹1 ಲಕ್ಷ ಪರಿಹಾರ ನೀಡಲಾಗುತ್ತಿದೆ. ನೀವು ತಪ್ಪು ಮಾಹಿತಿ ನೀಡುತ್ತಿದ್ದೀರಿ’ ಎಂದು ರಾಮುಲು ಆವೇಶ ಭರಿತರಾಗಿ ತಿರುಗೇಟು ನೀಡಲು ಹೋಗಿ ಪೇಚಿಗೆ ಸಿಲುಕಿದರು. ಇದೇ ಸಂದರ್ಭದಲ್ಲಿ ಕಾಂಗ್ರೆಸ್ ಸದಸ್ಯರು ವಾಗ್ವಾಳಿ ನಡೆಸಿದರು.

ಕೇಂದ್ರ ಸರ್ಕಾರ ಹಿಂದುಳಿದವರು ಮತ್ತು ಪರಿಶಿಷ್ಟ ಜಾತಿಯವರಿಗಾಗಿ ಉದ್ಯಮ ಚಟುವಟಿಕೆ ನಡೆಸಲು ತಲಾ ₹ 4 ಲಕ್ಷ ನೀಡುವುದಾಗಿ ಹೇಳಿದೆ. ಆದರೆ, ರಾಜ್ಯ ಸರ್ಕಾರ ಈ ಬಗ್ಗೆ ಗಮನಹರಿಸಿಲ್ಲ. ಯಾರಿಗೂ ಆ ನೆರವು ಸಿಕ್ಕಿಲ್ಲ ಎಂದು ಶಿವಕುಮಾರ್ ಹೇಳಿದಾಗ, ‘ಇಲ್ಲ ಸರ್ಕಾರ ₹ 1 ಲಕ್ಷ ನೀಡಿದೆ’ ಎಂದು ಸಚಿವರು ಪುನಃ ಸಮರ್ಥಿಸಿಕೊಂಡರು. ಇದು ಮತ್ತೆ ಗದ್ದಲಕ್ಕೆ ಕಾರಣವಾಯಿತು.

ಆಗ ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಅವರು, ‘ಯಡಿಯೂರಪ್ಪ ಸರ್ಕಾರ ತಲಾ ₹1 ಲಕ್ಷ ನೀಡುವುದಾಗಿ ಪ್ರಕಟಿಸಿ, ಆದೇಶ ಮಾಡಿದೆ. ಅದು ಕಾರ್ಯಗತ ಆಗಬೇಕಾಗಿದೆ’ ಎಂದು ಹೇಳಿದರೂ ಶ್ರೀರಾಮುಲು ಅವರಿಗೆ ಮನವರಿಕೆ ಆಗಲಿಲ್ಲ.

ಬಳಿಕ ಸಮಜಾಯಿಷಿ ನೀಡಿದ ಯಡಿಯೂರಪ್ಪ, ‘ರಾಮುಲು ಹೇಳಿದ್ದು ತಪ್ಪಾಗಿದೆ. ನನ್ನ ಅವಧಿಯಲ್ಲಿ ಹಣ ಘೋಷಿಸಿ, ₹300 ಕೋಟಿ ತೆಗೆದಿರಿಸಲಾಗಿದೆ ಪ್ರತಿ ಮನೆಗೆ ಹೋಗಿ ಪರಿಹಾರ ವಿತರಿಸಲಾಗುವುದು’ ಎಂದು ಗದ್ದಲಕ್ಕೆ ತೆರೆ ಎಳೆದರು.

ಸಂತ್ರಸ್ತರಿಗೆ ಚೆಕ್ ವಿತರಿಸಿದ ಬಳಿಕ ಸಚಿವ ಆರ್ ಅಶೋಕ ಕೈಮುಗಿದರು. ಶಾಸಕ ಎಂ. ಕೃಷ್ಣಪ್ಪ, ವಿಧಾನ ಪರಿಷತ್ತಿನ ಸದಸ್ಯ ಯು.ಬಿ. ವೆಂಕಟೇಶ್ ಇದ್ದಾರೆ

₹1 ಲಕ್ಷ ಪರಿಹಾರ ವಿತರಣೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್‌ನಿಂದ ಕುಟುಂಬದ ದುಡಿಯುವ ಸದಸ್ಯರನ್ನೇ ಕಳೆದುಕೊಂಡ ಬಡತನ ರೇಖೆಗಿಂತ ಕೆಳಗಿರುವ (ಬಿಪಿಎಲ್) ಕುಟುಂಬಕ್ಕೆ ₹1 ಲಕ್ಷ ಪರಿಹಾರ ನೀಡುವ ಕಾರ್ಯಕ್ಕೆ ಕಂದಾಯ ಸಚಿವ ಆರ್.ಅಶೋಕ ಗುರುವಾರ ಚಾಲನೆ ನೀಡಿದರು.

‘ಕೋವಿಡ್ ಸಮಯದಲ್ಲಿ ಅನೇಕ ಕುಟುಂಬಗಳು ತಂದೆ, ತಾಯಿಯನ್ನು ಕಳೆದುಕೊಂಡಿವೆ. ಇನ್ನು ಕೆಲವರು ಮಕ್ಕಳನ್ನು ಕಳೆದುಕೊಂಡಿದ್ದಾರೆ. ಅಂತಹವರ ನೆರವಿಗೆ ನಿಲ್ಲುವ ಸಲುವಾಗಿ ₹1 ಲಕ್ಷ ಪರಿಹಾರವನ್ನು ಬಿಪಿಎಲ್ ಕುಟುಂಬಗಳಿಗೆ ನೀಡಲಾಗುತ್ತಿದೆ. ಅರ್ಜಿ ಸ್ವೀಕೃತಿ, ವಿತರಣೆಗೆ ತಂತ್ರಾಂಶ ಅಭಿವೃದ್ಧಿಪಡಿಸಲಾಗಿದೆ. ಎಲ್ಲಾ ನಾಡಕಚೇರಿ, ತಾಲ್ಲೂಕು ಕಚೇರಿಗಳಲ್ಲಿ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ. ಪರಿಹಾರದ ಕುರಿತು ಆಕ್ಷೇಪಣೆಗಳನ್ನು ಬಗೆಹರಿಸಲು ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿದ್ದೇವೆ. ಒಟ್ಟು 7,729 ಅರ್ಜಿಗಳು ಬಂದಿವೆ’ ಎಂದರು.

‘₹200 ಕೋಟಿಗೂ ಹೆಚ್ಚು ಹಣ ಇದಕ್ಕಾಗಿ ಮೀಸಲಿಡಲಾಗಿದೆ. ಕೋವಿಡ್‌ನಿಂದ ಮೃತಪಟ್ಟವರ ಮಾಹಿತಿಯನ್ನು ಆರೋಗ್ಯ ಇಲಾಖೆಯಿಂದ ಪಡೆಯುತ್ತಿದ್ದೇವೆ. ಸುಪ್ರೀಂ ಕೋರ್ಟ್ ಆದೇಶದಂತೆ, ಕೋವಿಡ್‌ನಿಂದ ದಾಖಲಾಗದ ಸಾವಿನ ಮಾಹಿತಿ ಕೂಡ ಪಡೆಯುತ್ತೇವೆ. ಸಾಂಕೇತಿಕವಾಗಿ ಚೆಕ್ ವಿತರಣೆ ಮಾಡಲಾಗುತ್ತಿದ್ದು, ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿ ಹಣ ನೀಡುತ್ತಾರೆ’ ಎಂದು ವಿವರಿಸಿದರು.

‘ಕೇಂದ್ರ ಸರ್ಕಾರ ₹50 ಸಾವಿರ ಘೋಷಣೆ ಮಾಡಿದೆ. ಆ ಹಣ ಇನ್ನೂ ಬಂದಿಲ್ಲ. ಆ ಹಣ ಬಂದ ಬಳಿಕ ಅದನ್ನು ಕೊಡುತ್ತೇವೆ’ ಎಂದರು.

ಯುದ್ಧಕಾಲದಲ್ಲಿ ಶಸ್ತ್ರಾಭ್ಯಾಸ ಮಾಡುವ ಕಾಂಗ್ರೆಸ್: ‘ಜಾತಿ ಆಧಾರಿತ ರಾಜಕೀಯವನ್ನು ಬಿಜೆಪಿ ಮಾಡುವುದಿಲ್ಲ. ಸಿದ್ಧಾಂತದ ತಳಹದಿಯ ಮೇಲೆ ರಾಜಕೀಯ ಮಾಡುತ್ತದೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರು ಈಗಾಗಲೇ 15 ಬಾರಿ ರಾಜ್ಯ ಪ್ರವಾಸ ಮಾಡಿದ್ದಾರೆ. ಜನರ ಸಮಸ್ಯೆಗಳನ್ನು ಅರಿತಿದ್ದಾರೆ. ಕಾಂಗ್ರೆಸ್ ಪಕ್ಷದವರು ಚುನಾವಣಾ ಸಮಯದಲ್ಲಿ ಜಾಗೃತರಾಗುತ್ತಾರೆ. ನಾವು ಸದಾ ಜನರ ಜತೆ ಇರುತ್ತೇವೆ. ಯುದ್ಧ ಕಾಲದಲ್ಲಿ ಶಸ್ತ್ರಾಭ್ಯಾಸ ಮಾಡುವುದರಿಂದ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲ್ಲುವುದಿಲ್ಲ’ ಎಂದು ಟೀಕಿಸಿದರು.

‘60 ವರ್ಷಗಳಿಂದ ಜಾತಿ ಆಧಾರಿತ ರಾಜಕೀಯ ಮಾಡಿಕೊಂಡು ಬಂದಿದೆ. ಈ ಹಿಂದೆ ಧರ್ಮ ಒಡೆಯಲು ಪ್ರಯತ್ನ ಮಾಡಿ ಸೋತರೂ ಬುದ್ಧಿ ಕಲಿಯಲಿಲ್ಲ. ಕಾಂಗ್ರೆಸ್ ಪಕ್ಷವು ಜೆಡಿಎಸ್ ಜೊತೆ ಸಮ್ಮಿಶ್ರ ಸರ್ಕಾರ ರಚಿಸಿ, ಜೆಡಿಎಸ್‌ಗೆ ಕೈ ಕೊಟ್ಟಿದೆ. ಜನರಿಗೂ ಕಾಂಗ್ರೆಸ್ ಬಗ್ಗೆ ಭಯ ಇದೆ. ಕೈ ಕೊಡುವ ಪಕ್ಷವದು’ ಎಂದು ಲೇವಡಿ ಮಾಡಿದರು.



ತಮಿಳುನಾಡು ಪ್ರಯಾಣ ನೆಗೆಟಿವ್ ವರದಿ ಬೇಡ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ಜಿಲ್ಲೆಯ ಚೆಕ್ ಪೋಸ್ಟ್ ಮೂಲಕ ತಮಿಳುನಾಡಿಗೆ ಹೋಗುವುದಕ್ಕೆ ಹಾಗೂ ಅಲ್ಲಿಂದ ಜಿಲ್ಲೆಯನ್ನು ಪ್ರವೇಶಿಸುವುದಕ್ಕೆ ಈಗ ಆರ್‌ಟಿಪಿಸಿಆರ್ ನೆಗೆಟಿವ್ ವರದಿ ಕಡ್ಡಾಯ ಅಲ್ಲ. ಕೋವಿಡ್ ಲಸಿಕೆ ಎರಡು ಡೋಸ್ ಪಡೆದರೆ ಸಾಕು.

ಇತ್ತೀಚಿನವರೆಗೂ ಅಂತರರಾಜ್ಯ ಪ್ರಯಾಣಕ್ಕೆ ಆರ್‌ಟಿಪಿಸಿಆರ್ ನೆಗೆಟಿವ್ ವರದಿ ಕಡ್ಡಾಯವಾಗಿತ್ತು.

ಜಿಲ್ಲಾಡಳಿತವು ವಾರದ ಹಿಂದೆಯೇ, ಆರ್‌ಟಿಪಿಸಿಆರ್ ನೆಗೆಟಿವ್ ವರದಿ ಕಡ್ಡಾಯ ಮಾಡಿದ್ದ ಆದೇಶ ವಾಪಸ್ ಪಡೆದಿತ್ತು.

ಆದರೆ, ತಮಿಳುನಾಡು ಪ್ರವೇಶಕ್ಕೆ ಇ-ಪಾಸ್ ಜೊತೆಗೆ ಪರೀಕ್ಷಾ ನೆಗೆಟಿವ್ ವರದಿ ಕಡ್ಡಾಯವಾಗಿತ್ತು. ಎರಡು ದಿನಗಳಿಂದ ಅಲ್ಲಿನ ಸಿಬ್ಬಂದಿ ಕೂಡ ವರದಿಯನ್ನು ಕೇಳುತ್ತಿಲ್ಲ. ಆದರೆ, ಇ-ಪಾಸ್ ಹಾಗೂ ಕೋವಿಡ್ ಲಸಿಕೆ ಎರಡು ಡೋಸ್ ಪಡೆದಿರುವ ಪ್ರಮಾಣಪತ್ರವನ್ನು ತೋರಿಸುವುದು ಕಡ್ಡಾಯ.



ತ್ರಿಪುರವಾಸಿನಿಯಲ್ಲಿ ಪೀಠೋಪಕರಣಗಳ ಪ್ರದರ್ಶನ, ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಅರಮನೆ ಮೈದಾನದ ತ್ರಿಪುರವಾಸಿನಿಯಲ್ಲಿ ಶುಕ್ರವಾರದಿಂದ ಸೋಮವಾರದವರೆಗೆ ‘ಬಿಗ್ ಫರ್ನಿಚರ್ ಎಕ್ಸ್‌ಪೊ’ ನಡೆಯಲಿದೆ. ಪ್ರವೇಶ ಶುಲ್ಕ ಇಲ್ಲ.

ಮನೆಯ ಹಾಗೂ ಕಚೇರಿಗೆ ಬಳಕೆಗೆ ಅಗತ್ಯವಿರುವ ಪೀಠೋಪಕರಣಗಳು ಇಲ್ಲಿ ಖರೀದಿಗೆ ಲಭ್ಯ ಇರಲಿವೆ. ಗರಿಷ್ಠ ಶೇಕಡ 70ರವರೆಗೆ ರಿಯಾಯಿತಿ ಕೂಡ ಇರಲಿದೆ ಎಂದು ಪ್ರಕಟಣೆ ತಿಳಿಸಿದೆ.

ನೀತಿ ಅನುಷ್ಠಾನಕ್ಕೆ ಕಾಂಗ್ರೆಸ್ ವಿರೋಧ • ತರಾತುರಿ ಏಕೆ– ಜೆಡಿಎಸ್ ಪ್ರಶ್ನೆ

ಎನ್‌ಇಪಿ: ಮುಕ್ತ ಚರ್ಚೆಗೆ ಸಿದ್ಧ–ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಸಂಬಂಧಿಸಿದಂತೆ ಮುಕ್ತ ಚರ್ಚೆಗೆ ಸರ್ಕಾರ ಸಿದ್ಧವಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಎನ್‌ಇಪಿ ಕುರಿತು ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್ಸಿನ ಬಿ.ಕೆ. ಹರಿಪ್ರಸಾದ್ ಪ್ರಸ್ತಾಪಿಸಿದ ವಿಷಯದಲ್ಲಿ ನಡೆದ ಚರ್ಚೆಗೆ ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಉತ್ತರಿಸುವ ವೇಳೆ ಮಾತನಾಡಿದ ಮುಖ್ಯಮಂತ್ರಿ, 'ಹಳ್ಳಿಯ ವಿದ್ಯಾರ್ಥಿ ಜಾಗತಿಕವಾಗಿ ಸ್ಪರ್ಧೆ ಮಾಡಬೇಕು. ಸ್ಪರ್ಧೆ ಒಪ್ಪಿಕೊಂಡಿದ್ದೇವೆ. ಆದರೆ, ತಯಾರಿ ಮಾಡಿಲ್ಲ. ಎನ್‌ಇಪಿಯಿಂದ ಶಿಕ್ಷಣದಲ್ಲಿ ಸಾಕಷ್ಟು ಬದಲಾವಣೆ ಆಗಲಿದೆ. ಇಂಥ ಬದಲಾವಣೆ ಸಂದರ್ಭದಲ್ಲಿ ಪರ ವಿರೋಧ ಅಭಿಪ್ರಾಯ ಸಾಮಾನ್ಯ' ಎಂದರು.

'ಅಡೆತಡೆಗಳನ್ನು ಮೀರಿ ಮಕ್ಕಳ ಉತ್ತಮ ಭವಿಷ್ಯಕ್ಕಾಗಿ ಈ ನೀತಿಯನ್ನು ರೂಪಿಸಲಾಗಿದೆ. ಇನ್ನಷ್ಟು ಚರ್ಚೆ, ವಿವಿಧ ಆಯಾಮದಲ್ಲಿ ಚರ್ಚೆ ನಡೆಯಬೇಕಿದೆ. ಸರ್ಕಾರ ಎಲ್ಲ ರೀತಿಯ ಚರ್ಚೆಗೆ ಸಿದ್ಧವಿದೆ. ಮಕ್ಕಳಿಗೆ ಹಲವು ಅವಕಾಶ, ಮುಕ್ತ ವಾತಾವರಣ, ಉತ್ಕೃಷ್ಟ ಕೌಶಲ ನೀಡಲು ಈ ನೀತಿ ಸಹಕಾರಿ ಆಗಲಿದೆ' ಎಂದು ವಿವರಿಸಿದರು.

ಅದಕ್ಕೂ ಮೊದಲು ಮಾತನಾಡಿದ ಬಿ.ಕೆ. ಹರಿಪ್ರಸಾದ್ ನೀತಿಯನ್ನು ಬಲವಾಗಿ ವಿರೋಧಿಸಿದರು.'ಈ ನೀತಿಯನ್ನು ಜಾರಿಗೊಳಿಸುವ ಮೂಲಕ ಆರೆಸ್ಸೆಸ್ ಸಿದ್ಧಾಂತಗಳನ್ನು ಹೇರಲು ಸರ್ಕಾರ ಹೊರಟಿದೆ. ಆ ಮೂಲಕ ಬಹುತ್ವ ಸಂಸ್ಕೃತಿಯನ್ನು ನಾಶ ಮಾಡಲು ಮುಂದಾಗಿದೆ' ಎಂದು ವಾಗ್ದಾಳಿ ನಡೆಸಿದರು.

ಸಚಿವ ಅಶ್ವತ್ಥನಾರಾಯಣ ಮಾತನಾಡಿ, 'ಈ ನೀತಿಯು ನೆರೆ-ಹೊರೆಯಲ್ಲಿ ಸಮಾನ ಶಿಕ್ಷಣ ನೀತಿ ಎಂಬ ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿಲ್ಲ. ಎನ್‌ಇಪಿ ಗುಣಮಟ್ಟ, ಸಮಾನತೆ ಹಾಗೂ ಸೇರುವಿಕೆಗೆ ಒತ್ತು ನೀಡುತ್ತದೆ. ಸುದೀರ್ಘ ಚರ್ಚೆಯ ನಂತರ ಅನುಷ್ಠಾನ ಮಾಡಲಾಗುತ್ತಿದೆ' ಎಂದು ಸಮರ್ಥಿಸಿದರು.

'ಆನ್‌ಲೈನ್ ಮೂಲಕ 2015ರಿಂದ ಎನ್‌ಇಪಿಗೆ ಸಲಹೆ ಪಡೆಯಲಾಗಿದೆ. ಕರಡು ಸಿದ್ಧಪಡಿಸಲು ಶಿಕ್ಷಣ ಭಾಗಿದಾರರಿಂದ ಸಲಹೆ ಪಡೆಯಲಾಗಿದೆ. ದೇಶದ 2 ಲಕ್ಷ ಗ್ರಾಮ ಪಂಚಾಯತಿಯಿಂದ 1,10,623 ಸಲಹೆ ಬಂದಿದೆ. ಸಮಗ್ರವಾಗಿ ಅಧ್ಯಯನ ನಡೆಸಿ, ಎನ್‌ಇಪಿ ರೂಪಿಸಲಾಗಿದೆ' ಎಂದರು.

ಕಾಂಗ್ರೆಸ್ಸಿನ ನಸೀರ್ ಅಹಮದ್, 'ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳದೆ ಎನ್‌ಇಪಿ ಅನುಷ್ಠಾನ ಮಾಡ ಲಾಗಿದೆ. ಈ ನೀತಿಯಲ್ಲಿ ಭಾಷಾ ಮತ್ತು ಧಾರ್ಮಿಕ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ಬಗ್ಗೆ ಯಾವುದೇ ಉಲ್ಲೇಖ ಇಲ್ಲ. ವಿದೇಶಿ ಮಾದರಿಯ ಕಲಿಕೆ ಇಲ್ಲಿ ಸಾಧ್ಯವಿಲ್ಲ. ನೀತಿಯನ್ನು ಸದ್ಯ ತಡೆ ಹಿಡಿದು, ಸುದೀರ್ಘ ಚರ್ಚೆಯ ಬಳಿಕ ಅನುಷ್ಠಾನ ಮಾಡಬೇಕು' ಎಂದು ಆಗ್ರಹಿಸಿದರು.

ಜೆಡಿಎಸ್‌ನ ಕೆ.ಟಿ. ಶ್ರೀಕಂಠೇಗೌಡ, 'ಎನ್‌ಇಪಿ ಅನುಷ್ಠಾನಕ್ಕೆ ಯಾವುದೇ ತಯಾರಿ ಮಾಡಿಲ್ಲ. ನಮ್ಮಲ್ಲಿರುವ ಸರ್ಕಾರಿ ಶಾಲೆಗಳಲ್ಲಿ ಸರಿಯಾದ ಸೌಲಭ್ಯವಿಲ್ಲ. ಶಿಕ್ಷಕರ ಕೊರತೆಯಿದೆ. ಹೀಗಿರುವಾಗ ಪೂರ್ವ ಪ್ರಾಥಮಿಕ ತರಗತಿಯಿಂದ ಹೇಗೆ ಅನುಷ್ಠಾನ ಮಾಡುತ್ತೀರಿ' ಎಂದು ಪ್ರಶ್ನಿಸಿದರು.

'ಎನ್‌ಇಪಿ ಅನುಷ್ಠನ ಹಾಗೂ ಅದಕ್ಕೆ ಸಂಬಂಧಿಸಿದಂತೆ ಸದಸ್ಯರು ಕೇಳಿರುವ ಪ್ರಶ್ನೆ, ಸಲಹೆಗಳಿಗೆ ಸಂಬಂಧಿಸಿದಂತೆ ಉನ್ನತ ಶಿಕ್ಷಣ ಸಚಿವರು ಮತ್ತು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಒಟ್ಟಾಗಿ ಸಭೆ ಕರೆದು, ಸಮಸ್ಯೆಗೆ ಪರಿಹಾರ ನೀಡಬೇಕು' ಎಂದು ಸಭಾಪತಿ ಸಲಹೆ ನೀಡಿದರು.

'ಶೂದ್ರರ ಮಕ್ಕಳಿಗೆ ಅನ್ಯಾಯ'

'ಈ ನೀತಿ ಅನುಷ್ಠಾನದ ನಂತರ ಸರ್ಕಾರಿ ವಿಶ್ವವಿದ್ಯಾಲಯಗಳು ಮುಚ್ಚಲಿವೆ ಅಥವಾ ಅದು ಬಡವರಿಗೆ ಮಾತ್ರ ಸೀಮಿತವಾಗಲಿದೆ. ಶೂದ್ರರ ಮಕ್ಕಳು ಡಿಗ್ರಿ ಮಾಡಬಾರದು ಎಂಬ ದುರುದ್ದೇಶ ಇದರಲ್ಲಿದೆ. ಶೂದ್ರರ ಮಕ್ಕಳ ಮೇಲೆ ದೊಡ್ಡ ದುಷ್ಪರಿಣಾಮ ಬೀರಲಿದೆ' ಎಂದು ಜೆಡಿಎಸ್‌ನ ಮರಿತಿಬ್ಬೇಗೌಡ ಆಕ್ರೋಶ ಹೊರ ಹಾಕಿದರು.

ಮಧ್ಯರಾತ್ರಿವರೆಗೂ ನಡೆದ ಕಲಾಪ

ಎನ್‌ಇಪಿ ಮೇಲಿನ ಚರ್ಚೆಯು ಪರಿಷತ್ತಿನಲ್ಲಿ ಗುರುವಾರ ಮಧ್ಯರಾತ್ರಿ 12.35ರ ವರೆಗೂ ಮುಂದುವರಿಯಿತು. ನಂತರ ಸಭಾಪತಿ ಅವರ ಸೂಚನೆಯಂತೆ ಚರ್ಚೆಯನ್ನು ಪೂರ್ಣಗೊಳಿಸಲಾಯಿತು. ಕಲಾಪವನ್ನು ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ಮುಂದೂಡಲಾಯಿತು.

ಮೋಟಾರು ವಾಹನ (ತಿದ್ದುಪಡಿ) ಕಾಯ್ದೆ ಕುರಿತ ಸಮಾಲೋಚನಾ ಸಭೆಯಲ್ಲಿ ಪಿಎಎಫ್ ಕಾರ್ಯನಿರ್ವಾಹಕ ನಿರ್ದೇಶಕಿ ಡಾ.ಅನ್ನಪೂರ್ಣ ರವಿಚಂದರ್, ನಿವೃತ್ತ ಡಿಜಿಪಿ ಅಜಯ್ ಸಿಂಗ್, ಪಿಎಎಫ್ ನಿರ್ದೇಶಕ ಜಿ. ಗುರುಚರಣ್, ಪಿಎಎಫ್ ಅಧ್ಯಕ್ಷ ಸುಧಾಕರ್ ರಾವ್ ಮತ್ತು ಸಿಯುಟಿಎಸ್ ನಿರ್ದೇಶಕ ಜಾರ್ಜ್ ಚೆರಿಯನ್ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

ರಸ್ತೆ ಸುರಕ್ಷತೆ: ತಮಿಳುನಾಡು ಮಾದರಿ ಅಧ್ಯಯನ-ಸಾರಿಗೆ ಆಯುಕ್ತ

ಬೆಂಗಳೂರು: 'ವಿವಿಧ ಸುರಕ್ಷತಾ ಕ್ರಮಗಳನ್ನು ಅಳವಡಿಸಿಕೊಂಡಿರುವುದರಿಂದ ತಮಿಳುನಾಡಿನಲ್ಲಿ ಅಪಘಾತಗಳು ಕಡಿಮೆಯಾಗಿವೆ. ತಮಿಳುನಾಡಿನ ಈ ಮಾದರಿಯನ್ನು ಅಧ್ಯಯನ ಮಾಡಲಾಗುತ್ತಿದೆ' ಎಂದು ಸಾರಿಗೆ ಆಯುಕ್ತ ಎನ್. ಶಿವಕುಮಾರ್ ತಿಳಿಸಿದರು.

ಮೋಟಾರು ವಾಹನ (ತಿದ್ದುಪಡಿ) ಕಾಯ್ದೆ ಕುರಿತು 'ಪಬ್ಲಿಕ್ ಅಫೇರ್ಸ್ ಫೌಂಡೇಷನ್'(ಪಿಎಎಫ್) ಮತ್ತು 'ಕನ್ಸೂಮರ್ ಯುನಿಟಿ ಆ್ಯಂಡ್ ಟ್ರಸ್ಟ್ ಸೊಸೈಟಿ'(ಸಿಯುಟಿಎಸ್) ಗುರುವಾರ ಆಯೋಜಿಸಿದ್ದ ಸಮಾಲೋಚನಾ ಸಭೆಯಲ್ಲಿ ಈ ವಿಷಯ ತಿಳಿಸಿದರು.

'ತುರ್ತು ಆರೈಕೆ ಮತ್ತು ಟ್ರಾಮಾ ಕೇರ್ ಕೇಂದ್ರಗಳನ್ನು ಸ್ಥಾಪಿಸುವ ಜತೆಗೆ, ಅಪಘಾತ ಸಂಭವಿಸಿದ ಸ್ಥಳಕ್ಕೆ ತ್ವರಿತಗತಿಯಲ್ಲಿ ಆಂಬುಲೆನ್ಸ್‌ಗಳು ಧಾವಿಸುವಂತೆ ವ್ಯವಸ್ಥಿತ ಯೋಜನೆಯನ್ನು ತಮಿಳುನಾಡಿನಲ್ಲಿ ರೂಪಿಸಲಾಗಿದೆ. ಇದರಿಂದ, ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡವರಿಗೆ ತಕ್ಷಣಕ್ಕೆ ಚಿಕಿತ್ಸೆ ದೊರೆಯುತ್ತಿರುವುದರಿಂದ ಸಾವಿಗೀಡಾಗುವವರ ಸಂಖ್ಯೆ ಕಡಿಮೆಯಾಗಿದೆ' ಎಂದರು.

'ರಾಜ್ಯದಲ್ಲಿ 2.7 ಕೋಟಿ ವಾಹನಗಳ ನೋಂದಣಿಯಾಗಿವೆ. ಆದರೆ, ರಸ್ತೆಗಳ ಸಂಖ್ಯೆ ಹೆಚ್ಚಾಗಿಲ್ಲ.' ಎಂದು ಹೇಳಿದರು.

ಸಿಯುಟಿಎಸ್ ನಿರ್ದೇಶಕ ಜಾರ್ಜ್ ಚೆರಿಯನ್ ಮಾತನಾಡಿ, 'ರಸ್ತೆ ಅಪಘಾತಗಳಲ್ಲಿ ಕರ್ನಾಟಕ ನಾಲ್ಕನೇ ಸ್ಥಾನದಲ್ಲಿದೆ. ಅತಿಯಾದ ವೇಗವೇ ಅಪಘಾತಕ್ಕೆ ಪ್ರಮುಖ ಕಾರಣ. ಹೊಸ ಮೋಟಾರು ವಾಹನ ಕಾಯ್ದೆ ಜಾರಿಯಾದ ನಂತರ 2020ರಲ್ಲಿ ದೇಶದಲ್ಲಿ ಶೇಕಡ 18ರಷ್ಟು ಅಪಘಾತಗಳು ಕಡಿಮೆಯಾಗಿವೆ. ಅಂದರೆ, 6 ಲಕ್ಷ ಅಪಘಾತಗಳು ಕಡಿಮೆಯಾಗಿವೆ ಎಂದು ವಿವರಿಸಿದರು.

ಪಿಎಎಫ್ ಅಧ್ಯಕ್ಷ ಸುಧಾಕರ್ ರಾವ್, ಕಾರ್ಯನಿರ್ವಾಹಕ ನಿರ್ದೇಶಕಿ ಡಾ. ಅನ್ನಪೂರ್ಣ ರವಿಚಂದರ್, ನಿವೃತ್ತ ಪೊಲೀಸ್ ಮಹಾನಿರ್ದೇಶಕ ಅಜಯ್ ಕುಮಾರ್ ಸಿಂಗ್, ಸಂಚಾರ ವಿಭಾಗದ ಜಂಟಿ ಕಮಿಷನರ್ ಡಾ. ಬಿ.ಆರ್. ರವಿಕಾಂತೇಗೌಡ ಇದ್ದರು.

ಬಿಸಿಯುನಲ್ಲಿ ವಿದೇಶಿ ಭಾಷೆ ಪದವಿ

ಬೆಂಗಳೂರು: ರಾಜ್ಯದಲ್ಲೇ ಮೊದಲ ಬಾರಿ ಬೆಂಗಳೂರು ನಗರ ವಿಶ್ವವಿದ್ಯಾಲಯವು (ಬಿಸಿಯು) ವಿದೇಶಿ ಭಾಷೆಯಲ್ಲಿ ಬಿ.ಎ ಪದವಿ ಕೋರ್ಸ್ ಆರಂಭಿಸಲಿದೆ.

ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ಈ ಕೋರ್ಸ್‌ಗೆ ಚಾಲನೆ ದೊರೆಯಲಿದ್ದು, ಫ್ರೆಂಚ್ ಭಾಷೆ ಕಲಿಸುವಿಕೆಯನ್ನು ಮೊದಲು ಆರಂಭಿಸಲು ವಿಶ್ವವಿದ್ಯಾಲಯ ನಿರ್ಧರಿಸಿದೆ. ಇದನ್ನು ಮಲ್ಲೇಶ್ವರದಲ್ಲಿರುವ ವಿಶ್ವವಿದ್ಯಾಲಯದ ಬಹುಶಿಸ್ತೀಯ ಮಹಿಳಾ ಕಾಲೇಜಿನಲ್ಲಿ ಆರಂಭಿಸಲು ಉದ್ದೇಶಿಸಲಾಗಿದೆ.

'ಕರ್ನಾಟಕದಲ್ಲಿ ಯಾವ ವಿಶ್ವವಿದ್ಯಾಲಯವೂ ವಿದೇಶಿ ಭಾಷೆಯನ್ನು ಪ್ರಮುಖ ವಿಷಯವನ್ನಾಗಿ ಬೋಧಿಸುತ್ತಿಲ್ಲ. ಇದುವರೆಗೆ ಫ್ರೆಂಚ್ ಮತ್ತು ಜರ್ಮನ್ ಭಾಷೆಗಳನ್ನು ಐಚ್ಛಿಕ ವಿಷಯಗಳನ್ನಾಗಿ ಅಧ್ಯಯನ ಮಾಡಲಾಗುತ್ತಿತ್ತು. ಇದೇ ಮೊದಲ ಬಾರಿ ಫ್ರೆಂಚ್ ಅನ್ನು ಪ್ರಮುಖ ವಿಷಯವನ್ನಾಗಿ ಸ್ನಾತಕ ಪದವಿ ಕೋರ್ಸ್‌ನಲ್ಲಿ ಆರಂಭಿಸಲಾಗುತ್ತಿದೆ' ಎಂದು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಲಿಂಗರಾಜ ಗಾಂಧಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಈ ಕೋರ್ಸ್‌ಗೆ ಪ್ರವೇಶ ಪಡೆಯಲು ಅ. 11ರವರೆಗೆ ಕಾಲಾವಕಾಶ ನೀಡಲಾಗಿದೆ. ಆಸಕ್ತ ವಿದ್ಯಾರ್ಥಿಗಳು www.bcu.ac.in ಅಥವಾ http://bcuportal.com ಮೂಲಕ ಅರ್ಜಿ ಸಲ್ಲಿಸಬಹುದು ಅಥವಾ ಮಲ್ಲೇಶ್ವರದ 13ನೇ ಅಡ್ಡ ರಸ್ತೆಯಲ್ಲಿರುವ ಬಹುಶಿಸ್ತೀಯ ಮಹಿಳಾ ಕಾಲೇಜಿಗೆ ನೇರವಾಗಿ ಭೇಟಿ ನೀಡಬಹುದು' ಎಂದು ತಿಳಿಸಿದ್ದಾರೆ.

ಜಪಾನ್ ಮತ್ತು ಸ್ಪೇನ್ ರಾಯಭಾರಿಗಳ ಜತೆಯೂ ಒಪ್ಪಂದ ಮಾಡಿಕೊಳ್ಳಲು ವಿಶ್ವವಿದ್ಯಾಲಯ ಯೋಜನೆ ರೂಪಿಸಿದೆ. ಆ ಭಾಷೆಗಳ ಶಿಕ್ಷಕರ ಲಭ್ಯತೆಗೆ ಕ್ರಮಕೈಗೊಳ್ಳುವುದು ಈ ಯೋಜನೆಯ ಉದ್ದೇಶ.

'ಈಗಾಗಲೇ ಕೆಲವು ರಾಯಭಾರ ಕಚೇರಿಗಳು ನಮ್ಮನ್ನು ಸಂಪರ್ಕಿಸಿವೆ. ಎರಡು ವರ್ಷಗಳ ಕಾಲ ಆ ಶಿಕ್ಷಕರು ನಮ್ಮ ಶಿಕ್ಷಕರಿಗೆ ತರಬೇತಿ ನೀಡಲಿದ್ದಾರೆ. ಶೀಘ್ರದಲ್ಲೇ ಜಪಾನ್ ರಾಯಭಾರಿ ಜತೆ ಒಪ್ಪಂದ ಮಾಡಿಕೊಳ್ಳಲಿದ್ದೇವೆ' ಎಂದು ಜಾಗತಿಕ ಭಾಷೆಗಳ ಕೇಂದ್ರದ ಅಧ್ಯಕ್ಷೆ ಮತ್ತು ಮಹಿಳಾ ಕಾಲೇಜಿನ ಪ್ರಭಾರ ಪ್ರಾಂಶುಪಾಲರಾದ ಡಾ. ಜ್ಯೋತಿ ವೆಂಕಟೇಶ್ ತಿಳಿಸಿದರು.

ಹೊಸ ಕೋರ್ಸ್‌ಗಳು: 'ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಬಿಸಿಯು ಹೊಸ ವಿಭಾಗಗಳನ್ನು ಮತ್ತು ಕೋರ್ಸ್‌ಗಳನ್ನು ಆರಂಭಿಸಲಿದೆ. ಸೆಂಟ್ರಲ್ ಕಾಲೇಜಿನ ಪ್ರಾಂಗಣದಲ್ಲಿ ಸ್ನಾತಕೋತ್ತರ ಕೋರ್ಸ್‌ಗಳ ನಾಲ್ಕು ಹೊಸ ವಿಭಾಗಗಳನ್ನು ಸ್ಥಾಪಿಸಲಿದೆ. ಕಲೆ ಮತ್ತು ಸೌಂದರ್ಯ ವಿಜ್ಞಾನ ವಿಭಾಗ, ನಗರ ಅಧ್ಯಯನ ಮತ್ತು ಯೋಜನೆ ವಿಭಾಗ, ಪರಿಸರ ಮತ್ತು ಹವಾಮಾನ ಬದಲಾವಣೆ ಹಾಗೂ ತಂತ್ರಜ್ಞಾನ ವಿಭಾಗಗಳನ್ನು ಆರಂಭಿಸಲಾಗುವುದು' ಎಂದು ಕುಲಪತಿ ಪ್ರೊ. ಲಿಂಗರಾಜ ಗಾಂಧಿ ತಿಳಿಸಿದರು.

'ಈ ವಿಭಾಗಗಳಲ್ಲಿ ಅನಿಮೇಷನ್ ವಿನ್ಯಾಸ, ಒಳಾಂಗಣ ವಿನ್ಯಾಸ, ನಗರ ಅಧ್ಯಯನ ಮತ್ತು ಯೋಜನೆ, ಪರಿಸರ ವಿಜ್ಞಾನ ಮತ್ತು ಕಂಪ್ಯೂಟರ್ ವಿಜ್ಞಾನ ಕೋರ್ಸ್‌ಗಳನ್ನು ಆರಂಭಿಸಲಾಗುವುದು' ಎಂದು ತಿಳಿಸಿದರು.

ಪದವಿ ಕೋರ್ಸ್‌ಗೆ ಬೇಡಿಕೆ

ಈ ವರ್ಷ ಪದವಿ ಕೋರ್ಸ್‌ಗಳಿಗೆ ಬೇಡಿಕೆ ಹೆಚ್ಚಾಗಿದೆ. ಸೀಟುಗಳನ್ನು ಹೆಚ್ಚಿಸುವಂತೆ ಕೋರಿ ಸುಮಾರು 30 ಕಾಲೇಜುಗಳು ಅರ್ಜಿ ಸಲ್ಲಿಸಿವೆ. ಇನ್ನೂ ಹಲವು ಕಾಲೇಜುಗಳು ಇದೇ ರೀತಿ ಬೇಡಿಕೆಗೆ ಅರ್ಜಿ ಸಲ್ಲಿಸುವ ನಿರೀಕ್ಷೆ ಇದೆ' ಎಂದು ಪ್ರೊ. ಲಿಂಗರಾಜ ಗಾಂಧಿ ತಿಳಿಸಿದರು.

WEEKEND CORNER ಕ್ಲಾಸಿಫೈಡ್ಸ್

FREE SEMINAR

Organized by Life Positive Magazine

TOVAA®

(TEACHER OF VISUALIZATION AND AFFIRMATION)

Experience how & why colours, numbers, planets, directions and space energies affect your life.

Friday, 24 September
Saturday, 25 September
6pm to 7.30pm on both days

Call or WhatsApp for details :
09320010301 • 06364067604

ಬೆಂಗಳೂರಿನಲ್ಲಿ ಮಾರಾಟ

ಕಾಂಚೀಪುರಂ ಎ.ಜಿ. ಬಾಬು ಸಾಹ್ ರೇಷ್ಮೆ ಸೀರೆ ವ್ಯಾಪಾರಿಗಳು

ದಸರಾ ಹಬ್ಬದ ಮಾರಾಟ

ಶ್ರೀ ಹರಿ ಕಲ್ಯಾಣ ಮಂಟಪ

ನಂ. 5–136/17, 30ನೇ ಮೈನ್, ಬನಶಂಕರಿ 3ನೇ ಹಂತ, ಬೆಂಗಳೂರು–560 085. ಮೊ. : 080-26693378, 26917845

ದಿನಾಂಕ: 24,25,26,27,28 & 29 ಸೆಪ್ಟೆಂಬರ್ 2021

ಬೆಳಿಗ್ಗೆ 11.00 ರಿಂದ ರಾತ್ರಿ 7.00 ರವರೆಗೆ

ಯಾವುದೇ ವಿನಿಮಯವಿಲ್ಲ, ಹಿಂತಿರಿಗಿಸುವುದಿಲ್ಲ

ಮಾಸ್ಕ್ ಕಡ್ಡಾಯ
ಮಕ್ಕಳಿಗೆ ಹಾಗೂ 60 ವರ್ಷಕ್ಕಿಂತ ಮೇಲ್ಪಟ್ಟ ವ್ಯಕ್ತಿಗಳಿಗೆ ಪ್ರವೇಶವಿಲ್ಲ
At a time only 50 persons are allowed
ಕೈಚೀಲ ಮತ್ತು ಸಾಮಾನುಗಳನ್ನು ಒಳಗೆ ಅನುಮತಿಸಲಾಗುವುದಿಲ್ಲ

ನಮ್ಮ ಚಾನೆಲ್ ಅನ್ನು ಸಬ್‌ಸ್ಕ್ರೈಬ್ ಮಾಡಿ
ಎ.ಜಿ. ಬಾಬು ಸಾಹ್ YouTube
ಹೊಸ ಮಾರಾಟ ಮತ್ತು ಮಾಹಿತಿಗಾಗಿ
ಬೆಲ್ ಐಕಾನ್ ಅನ್ನು ಒತ್ತಲು ಮರೆಯದಿರಿ

ರಿಯಾಯಿತಿ ಸೀರೆಗಳು ಸಹ ಲಭ್ಯವಿದೆ

VIVEKANANDA INSTITUTE OF TECHNOLOGY

AN INSTITUTE OF JANATHA EDUCATION SOCIETY
Recognised by GOK, Affiliated to VTU & Approved by AICTE, New Delhi.
Gudimavu, Kumbalagodu, Off Mysore Road, Bengaluru – 560 074

Admissions Open 2021-22

KCET CODE: E087 COMED-K CODE: E149

Bachelor of Engineering
- Computer Science & Engineering
- Artificial Intelligence & Machine Learning
- Information Science & Engineering
- Electronics & Communication Engineering
- Mechanical Engineering
- Civil Engineering

Ph.D Program
- Computer Science
- Electronics & Communications
- Mechanical
- Mathematics
- Chemistry

R & D Center | 100% Placement | 10.5 Lac Highest, 6 Lac Avg. P.A CTC - 2021 | Startup & Incubation Center

principal@vitb.ac.in
https://vitb.ac.in

VIVEKANANDA COLLEGE OF PHARMACY KCET BO60

Affiliated to RGUHS, Approved by AICTE & Recognised by PCI, New Delhi

D.PHARM | B.PHARM | M.PHARM

PGCET B323 **VIVEKANANDA INSTITUTE OF MANAGEMENT**

Affiliated to Bengaluru City University & Approved by AICTE, New Delhi

BBA | BCA | MCOM | MBA

Admission Center:
Vivekananda Educational Institutions
Dr.Rajkumar Road, Next to Orion Mall
Rajajinagar II Stage, Bengaluru – 560 055.

9513953482
Email ID: admission@jes-edu.in
URL: http://jes-edu.in

H.C. Balakrishna, Hon'ble President | Dr. C.N. Manche Gowda, Hon. Secretary

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

ಸಾರ್ವಜನಿಕ ಪ್ರಕಟಣೆ

ಮೆ. ಒಜೊ ಅಗ್ರಿ ಕೇರ್ ಪ್ರೈ. ಲಿ., ವಾರ್ಡ್ ನಂ–16, ಸಿಟಿ ಪ್ರೆಸ್ ಕಾಂಪೌಂಡ್, ಬಳ್ಳಾರಿ, ಕರ್ನಾಟಕ–583101,

ಭಾರತ ಸರ್ಕಾರದ ಕೃಷಿ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ, ಕೃಷಿ ಸಹಕಾರ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಹೊರಡಿಸಿದ ದಿನಾಂಕ 24ನೇ ಅಕ್ಟೋಬರ್ 2015ರ ಆದೇಶ ಸಂ. ಎಸ್.ಒ.2900 (ಇ) ಮತ್ತು ದಿನಾಂಕ 30ನೇ ಡಿಸೆಂಬರ್ 2017ರ ತಿದ್ದುಪಡಿ ಮೇರೆಗೆ. ಒಜೊ ಅಗ್ರಿ ಕೇರ್ ಪ್ರೈ. ಲಿ., ಕಂಪನಿಯು ಈ ಮೂಲಕ ತಿಳಿಸುವುದು ಏನೆಂದರೆ, ಕಂಪನಿಯು ಕೆಳಗಿನ ವರ್ಗೀಕರಣಗಳನ್ನು ಹೊಂದಿರುವ 100% ನೀರಿನಲ್ಲಿ ಕರಗಬಲ್ಲ ರಸಗೊಬ್ಬರ ಮಿಶ್ರಣಗಳನ್ನು ಮಾರಾಟ ಮಾಡಲು ಉದ್ದೇಶಿಸಿರುತ್ತದೆ (1).ಎನ್‌ಪಿಕೆ 13–40–13 ಒಟ್ಟು ನೈಟ್ರೋಜನ್ 13%, ಒಟ್ಟು ಫಾಸ್ಫೇಟ್ ಪಿ205 40% ಮತ್ತು ಒಟ್ಟು ಪೊಟ್ಯಾಷ್ ಕೆ20 13% (2).ಎನ್‌ಪಿಕೆ 18–18–18 ಒಟ್ಟು ನೈಟ್ರೋಜನ್ 18%, ಒಟ್ಟು ಫಾಸ್ಫೇಟ್ ಪಿ205 18% ಮತ್ತು ಟೋಟಲ್ ಪೊಟ್ಯಾಷ್ ಕೆ20 18% (3) ಎನ್‌ಪಿಕೆ 13–5–26 ಒಟ್ಟು ನೈಟ್ರೋಜನ್ 13%, ಒಟ್ಟು ಫಾಸ್ಫೇಟ್ ಪಿ205 5% ಮತ್ತು ಒಟ್ಟು ಪೊಟ್ಯಾಷ್ ಕೆ20 26% (4) ಎನ್‌ಪಿಕೆ 6–12–36 ಒಟ್ಟು ನೈಟ್ರೋಜನ್ 6%, ಒಟ್ಟು ಫಾಸ್ಫೇಟ್ ಪಿ205 12% ಮತ್ತು ಒಟ್ಟು ಪೊಟ್ಯಾಷ್ ಕೆ20 36% (5) ಎನ್‌ಪಿಕೆ 20–20–20 ಒಟ್ಟು ನೈಟ್ರೋಜನ್ 20%, ಒಟ್ಟು ಫಾಸ್ಫೇಟ್ ಪಿ205 20% ಮತ್ತು ಒಟ್ಟು ಪೊಟ್ಯಾಷ್ ಕೆ20 20% (6) ಎನ್‌ಪಿಕೆ 19–19–19 ಒಟ್ಟು ನೈಟ್ರೋಜನ್ 19%, ಒಟ್ಟು ಫಾಸ್ಫೇಟ್ ಪಿ205 19% ಮತ್ತು ಒಟ್ಟು ಪೊಟ್ಯಾಷ್ ಕೆ20 19% (7) ಝಿಂಕ್ ಫಾಸ್ಫೇಟ್ ಜೆಡ್‌ಎನ್ 19.4% ಫಾಸ್ಫರಸ್ 12.9% (8) ಎನ್‌ಪಿಕೆಜೆಡ್‌ಎನ್‌ಬಿ 12–0–42–0.7–0.3 ನೈಟ್ರೋಜನ್ 12%, ಒಟ್ಟು ಪೊಟ್ಯಾಷ್ ಕೆ20 42%, ಝಿಂಕ್ 0.7 ಮತ್ತು ಬೋರಾನ್ 0.3% (9) ಎನ್‌ಪಿಕೆ 12–32–14 19 ಒಟ್ಟು ನೈಟ್ರೋಜನ್ 12%, ಒಟ್ಟು ಫಾಸ್ಫೇಟ್ ಪಿ205 32% ಮತ್ತು ಒಟ್ಟು ಪೊಟ್ಯಾಷ್ ಕೆ20 14% (10) ಯೂರಿಯಾ ಫಾಸ್ಫೇಟ್ ಜೊತೆಗೆ ಎಸ್‌ಒಪಿ 18–18–18 (11) ಎನ್‌ಪಿಕೆ 12–30–15 ನೈಟ್ರೋಜನ್ 12%, ಒಟ್ಟು ಫಾಸ್ಫೇಟ್ ಪಿ205 30% ಮತ್ತು ಒಟ್ಟು ಪೊಟ್ಯಾಷ್ ಕೆ20 15% (12) ಎನ್‌ಪಿಕೆಜೆಡ್‌ಎನ್ 7.6–23.5–7.6–3.5 ನೈಟ್ರೋಜನ್ 7.6%, ಒಟ್ಟು ಫಾಸ್ಫೇಟ್ ಪಿ205 23.5%, ಒಟ್ಟು ಪೊಟ್ಯಾಷ್ ಕೆ20 7.6% ಮತ್ತು ಝಿಂಕ್ ಜೆಡ್‌ಎನ್ 3.5%. ಈ ಮೇಲಿನ ಎಲ್ಲಾ ದರ್ಜೆಗಳಲ್ಲಿ (1) ಶೇಕಡವಾರು ತೇವಾಂಶ ತೂಕದಲ್ಲಿ, ಗರಿಷ್ಠ: 0.5% (2) ಒಟ್ಟು ಶೇಕಡವಾರು ಕ್ಲೋರೈಡ್, ತೂಕದಲ್ಲಿ, ಗರಿಷ್ಠ: 1.5% (3) ಶೇಕಡವಾರು ಸೋಡಿಯಂ ಎನ್‌ಎಸಿಐ, ತೂಕದಲ್ಲಿ, ಗರಿಷ್ಠ: 0.5% (4) ನೀರಿನಲ್ಲಿ ಕರಗದಿರುವ ವಸ್ತು ಶೇಕಡವಾರು, ತೂಕದಲ್ಲಿ ಗರಿಷ್ಠ: 0.5% (5) ಲೀಡ್ (ಪಿಬಿ) ಶೇಕಡವಾರು ತೂಕದಲ್ಲಿ, ಗರಿಷ್ಠ: 0.003% (6) ಕ್ಯಾಡ್ಮಿಯಂ (ಸಿಡಿ) ಶೇಕಡವಾರು ತೂಕದಲ್ಲಿ, ಗರಿಷ್ಠ: 0.0025% (7) ಆರ್ಸೆನಿಕ್ (ಎಎಸ್) ಶೇಕಡವಾರು ತೂಕದಲ್ಲಿ, ಗರಿಷ್ಠ: 0.01% ಉತ್ಪಾದನಾ ಘಟಕದ ವಿಳಾಸ: ಸರ್ವೆ ನಂ. 41ಎ, ದೇವಳಮ್ಮ ನಗರಂ (ವಿ) ಚೌಟುಪ್ಪಾಳ್ (ಎಮ್), ನಾಲ್ಗೊಂಡ–508252.
Email ID: ozoagricarepvtltd@gmail.com
Web: www.ozoagricare.com
ಫೋನ್: 040–29887134

PUBLIC NOTICE

My Client, Dinesh Krishna Reddy has a suit for specific performance of contract and Ad-Interim Temporary injunction in the court of the Principal Senior Civil Judge, Bengaluru rural, in **O.S. No 1514/2021, O.S No1515/2021, OS No.1516/2021, O.S No.1517 and O.S No. 1518/2021** . The Hon'ble VI Additional Senior Civil Judge, Bangalore Rural, was pleased to grant the Ad Interim Temporary Injunction Order, restraining the defendant, their men, agents, legal representatives from alienating or creating charge over the property or encumber the suit schedule property in any manner. The General Public are hereby Informed not to deal or transact with the Property bearing survey no. 47 and 48 measuring 4 acre, situated at Kodigehalli village, K.R. Puram Hobli, Bengaluru East taluk, Bangalore

sd/-
Advocate
K.Chandramohan
R.K. Associates,
Cunningham Rd, Bangalore

REAL ESTATE SELLING

Flat

Malleshwaram

SALE 3BHK apartment 1750 sft Renaissance Park-3, Malleshwaram behind Orion Mall. 2.1 Crores negotiable. 9342139450

Mahalakshmi Layout

READY TO Move, 3BHK Flats, 1KM from Iskcon Temple & Metro Station, 94Lakhs. Few Flats Left. 9845014364/ 9513999423

Jalahalli

AQUILA HEIGHTS, 2 BHK, with Premium Amenities, Semi-furnished, 1115 Sqft, CCP, 70 Lakhs All Inclusive Price, Call/ Whatsapp 9884101177.

Yelahanka

FLAT SALE Provident Welworth-city on Doddaballapura Main Road with all Amenities 3BHK 1073sqft 7th floor Coverd Car-parking E Katha Call:6361613734

Mysore

MYSORE: 2 BHK Apartment- 1200 sqft, 9th Cross, V.V Mohalla- 58 Lakhs- Negotiable. Contact: 9448243834

Commerical

Nagarabhavi

40X60 COMMERCIAL Site East Facing 80ft Ring Road, Near Ullal Signal, Nagarabhavi. Contact: 9845189576, 9060756616

Industrial & Factory

General

SALE, KIADB Industrial lands in and around Bengaluru and Tumkur, Kolar, Harohalli Doddaballpur, Devanahalli. 9980333333 vds@khpl.co.in

Tumkur Road

SALE 30 Acres Zone- 1 land near Dobespet- Koratagere main road facing. Single Owner. 9141326819

Sites

Begur

2,400 SQFT(40X60), East Face(30ft Rd), 'A'katha, Ward #192, Plot #23, BEGUR (Basapura), Parappana Agrahara Circle 1.2Km, Hosur NH7 Road, Metro Station under construction:700mtrs. Contact 9448010235 (No Brokers Please)

Banashankari

"BANASHANKARI 6TH Stage, 5th Block 30x40 West, BDA Site #810, near R.V.college, 7500/- negotiable. 9945309883"

Jakkur

BBMP, DC-CONVERSION, Each 30x40, 4800/-sft, Brigade Bricklane Apartment Back Side, Near Kogilu Cross. Owner.9980741687, 9591600488.

RENTAL PROPERTIES

Accommodation Available

Flats

AVAILABLE 3BHK flat for-rent, Semi-furnished with car parking at Aikya Apartment,Bannerghatta Road. 080-26632219, 9901135162

FOR RENT 2 BHK and 2.5 BHK apartments in Kumara Park West, Sheshadripuram. Contact: 9886408691.

Industrial And Factory

RENT, DODDABALLPUR, Industrial sheds 5000, 10000, 20000, 40000 sqft with all Infrastructure, power. Contact: 9900399999

REAL ESTATE BUYING

Sites

Hebbal

WANTED PLOTS/ houses/ Flats Arkavathy Layout, R.T.Nagar, Thanisandra, Hebbal Jakkur, HBR, Hennur, Yelahanka. "Spacelinks" 9845129934.

BUSINESS

Business Offers

Finance

FINANCE AGAINST Land & Building Properties Industries Schools Hospitals Projects & NRI Funds.7358729820

EDUCATIONAL

Private Tuitions

ONE-TO-ONE ONLINE Cambridge IGCSE, AS and A level Maths (P1, P3, M1, S1 and S2) and Physics. Contact: 9280205554

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

GM-Advertisement

JOB OPPORTUNITIES

Wanted

WANTED BUSINESS DEVELOPMENT MANAGER, Earn more than 1,00,000/ month, Part-time/ Full-time/ Freshers/ Retired. 8660955348

Walk-in

WALK IN INTERVIEW Restart your career as a Manager with renowned Nationalised bank. We are in the process of expansion in Bangalore. Structured 3 yr. Income plan of Rs. 15- 25 Lacs P.a. Age: 30- 65 yrs. 7828352747/ 9483325252

General

WANTED FOR Reputed Company, Graduates Age- 30-70, Bangalore only, Earn: 30,000- 50,000. Contact: 9008305194/ 9880441530.

OPPORTUNITY FOR Retd Officials, Bankers, VRS, NRI, Teachers, Professionals, CAs. Earn Salary + Incentives. CT: 8095301555

FULFILL YOUR dreams/ desires with a Corporate which looks for NRIs,Ex-Bankers, State/Central VRS,Unemployed Teachers Educated Housewives with flexible timings.Benefits: Fixed salary,flexible timings, PF+ESI, Unlimited Incentives.Call:8660526113.

Marketing & Sales

AGSAR PAINTS PVT LTD., WANTED 'Sales Executives' Posting For Bangalore, Mangalore, Goa. EMail: bangalore@agsar.net Contact: 9535910010

Kalyaan Kumar Jain

ANGEL, ORACLE, TAROT & ENERGY
Readings For Guidance

WhatsApp 09320010301
www.angelacaademy.com

PERSONAL

Change of Name

I, ANANTH KALEKAR MUKUNDARAO Residing at No. 67, near Chamundeshwari Temple, Dr.Shivarama karanth Nagar, Rachanahalli, Bangalore-560076 have changed My name to ANANTH MUKUNDARAO Vide Affidavit dated. 21-09-2021 Sworn before Notary Ambreshappa, Bangalore

I, MUBASHERA Shaik D/o. 1367663 Rank: Ex- Hav, Name: A. Nurulla r/at No.17, 7th cross, Subbanna Palya, Banaswadi main road, Jai Jawan Nagar, Blr-33, have changed my name from N. MUBASIRHA to MUBASHERA SHAIK affidavit 23/09/2021 notary L. Gopalakrishna, Bangalore

I, D. M. Savithri W/o VenkataswamyResiding At No.210, 2nd Cross, RMS Colony, Near SBI Bank, Bhattarahalli,Bangalore-560049 Have Changed My Name To SAVITHRAMMA vide Affidavit Dated21-09-2021 Sworn Before Notary K.B. Sadhashivappa, Bangalore.

ಹೆಸರು ಬದಲಾವಣೆ

ಸರಸಮ್ಮ

ತಂದೆ ದೊರೆಸ್ವಾಮಿಯವರ ಮಗಳಾದ ನಾನು ನಂಬರ್ 3/4, 2ನೇ ಕ್ರಾಸ್, ದಿನ್ನೂರ್, ಅಜ್ಜಪ್ಪ ಬ್ಲಾಕ್, ಆರ್. ಟಿ. ನಗರ ಪೋಸ್ಟ್, ಬೆಂಗಳೂರು–560032 ರಲ್ಲಿ ವಾಸವಾಗಿದ್ದು ನನ್ನ ಹೆಸರನ್ನು ಸರಳಾ ದಿಂದ ಸರಸಮ್ಮ ಎಂದು ದಿನಾಂಕ 26–08–2021 ರಂದು ನೋಟರಿ ಎ.ಎಸ್. ವಿಶ್ವನಾಥ್, ಬೆಂಗಳೂರು, ಇವರ ಮುಂದೆ ಪ್ರಮಾಣೀಕರಿಸಿ ಬದಲಾಯಿಸಿಕೊಂಡಿರುತ್ತೇನೆ.

I, PAVAN residing at No. 174/1, 3rd Floor, 1st Main Road, 3rd Cross, Malleshpalya, New Tippasandra, Bangalore North, Bangalore- 560075 have changed my Name to PAVAN SURYAWANSHI vide Affidavit Dated: 23-09-21 Sworn before Notary G.R. Rajanna, Bangalore

MITU BISWAS, Wife/o, 6498079A, NK/ASH, TARAK ADHIKARY, Vill- Panpara, Akaipur, Bongaon, North 24 Parganas, West Bengal, have changed my name from MITU BISWAS to MITU ADHIKARY, 23/09/2021, Notary K.V. Mani, Bangalore

PASOLITE LED www.pasolite.in

We Deal in all kinds of Indoor, Outdoor and Modern Hanging Product Range.

Customer Care: 080-22871845, 9844805100
Gmail:pasolite@gmail.com

Classifieds

Book Your Classifieds Ads

Online Log in to dhclassifieds.com

For More Details Call
9880856233 ▫ 9886213331
Email: Santhoshkumar@deccanherald.co.in

ಅವಘಡದಿಂದ ಭಯಗೊಂಡ ಸ್ಥಳೀಯರು • ಅಕ್ರಮ ಚಟುವಟಿಕೆ ತಡೆಯಲು ಒತ್ತಾಯ

‘ಲೋಡ್ ಬಂದು ಮೂರೇ ಗಂಟೆಯಲ್ಲಿ ಸ್ಫೋಟ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಫೋಟದ ಸದ್ದು ಸ್ಥಳೀಯರನ್ನು ಗಾಬರಿಪಡಿಸಿತು. ದೇಹದಿಂದ ಬೇರ್ಪಟ್ಟ ಕೈ, ಕಾಲು, ಬೆರಳುಗಳು ಛಿದ್ರ ಛಿದ್ರವಾಗಿ ಬಿದ್ದಿದ್ದನ್ನು ನೋಡಿ ಜನ ಭಯಗೊಂಡರು. ರಸ್ತೆ, ಗೋಡೆಯಲ್ಲಿ ರಕ್ತದ ಕಲೆಗಳು ಕಾಣುತ್ತಿದ್ದವು. ಮಳಿಗೆ ಸಾಮಗ್ರಿಗಳು ಹಾಗೂ ವಾಹನಗಳು ಚೆಲ್ಲಾಪಿಲ್ಲಿಯಾಗಿ ಬಿದ್ದು, ಸ್ಫೋಟದ ತೀವ್ರತೆ ಎಷ್ಟಿತ್ತು ಎಂಬುದನ್ನು ಒತ್ತಿ ಹೇಳಿದವು.

ಚಾಮರಾಜಪೇಟೆಯ ಸೀತಾಪತಿ ಅಗ್ರಹಾರ 4ನೇ ಅಡ್ಡರಸ್ತೆಯಲ್ಲಿ ಗುರುವಾರ ಸಂಭವಿಸಿದ ಸ್ಫೋಟದ ಸ್ಥಳದಲ್ಲಿ ಕಂಡ ದೃಶ್ಯಗಳಿವು. ಘಟನಾ ಸ್ಥಳ ನೋಡಿದರೆ ನಡುಕ ಹುಟ್ಟಿಸುವಂತಿತ್ತು. ಬಾಂಬ್ ಸ್ಫೋಟವಾಯಿತಾ ಎಂಬ ಅನುಮಾನ ಪೊಲೀಸರನ್ನು ಆರಂಭದಲ್ಲಿ ಕಾಡಿತ್ತು. ಗುಪ್ತದಳದ ಅಧಿಕಾರಿಗಳೂ ಸ್ಥಳಕ್ಕೆ ದೌಡಾಯಿಸಿದ್ದರು. ಆದರೆ, ಸ್ಥಳದಲ್ಲಿ ಪಟಾಕಿ ಬಾಕ್ಸ್‌ಗಳು ಹಾಗೂ ಅವುಗಳ ಅವಶೇಷ ಕಂಡಾಗ ಪೊಲೀಸರು ನಿಟ್ಟುಸಿರು ಬಿಟ್ಟರು.

ನ್ಯೂ ತರಗುಪೇಟೆಗೆ ಹೊಂದಿಕೊಂಡಿರುವ ಪ್ರದೇಶದಲ್ಲಿ ಇಕ್ಕಟ್ಟಾದ ಜಾಗದಲ್ಲಿ ಸಣ್ಣ ಸಣ್ಣ ಮಳಿಗೆಗಳಿವೆ. ಇಂಥ ಸ್ಥಳದಲ್ಲಿದ್ದ ಗೋದಾಮಿನಲ್ಲಿ ಅಕ್ರಮವಾಗಿ ಸಂಗ್ರಹಿಸಿದ್ದ ಪಟಾಕಿಗಳಿಂದ ಸ್ಫೋಟ ಸಂಭವಿಸಿರುವುದು ವ್ಯಾಪಾರಿಗಳು ಹಾಗೂ ಸ್ಥಳೀಯರಲ್ಲಿ ಆತಂಕವನ್ನುಂಟು ಮಾಡಿದೆ.

‘ಪಟಾಕಿ ವಿತರಕ ಬಾಬು, ಹಲವು ವರ್ಷಗಳಿಂದ ಸಗಟು ದರದಲ್ಲಿ ಪಟಾಕಿ ಮಾರುತ್ತಿದ್ದಾನೆ. ತಮಿಳುನಾಡಿನ ಶಿವಕಾಶಿಯಿಂದ ಎರಡು ದಿನಕ್ಕೊಮ್ಮೆ ಪಟಾಕಿ ಖರೀದಿಸಿ ತರುತ್ತಿದ್ದ ಅತ, ಗೋದಾಮಿನಲ್ಲಿ ಸಂಗ್ರಹಿಸುತ್ತಿದ್ದ. ಗೋದಾಮಿಗೆ ಬರುತ್ತಿದ್ದ ಬಿಡಿ ವ್ಯಾಪಾರಿಗಳು, ಬಾಕ್ಸ್‌ಗಳನ್ನು ತೆಗೆದುಕೊಂಡು ಹೋಗುತ್ತಿದ್ದರು’ ಎಂದು ಸ್ಥಳೀಯ ನಿವಾಸಿ ವೆಂಕಟೇಶ್ ಹೇಳಿದರು.

‘ಗುರುವಾರ ಬೆಳಿಗ್ಗೆ 8.30ರ ಸುಮಾರಿಗೆ ಟ್ರಕ್‌ನಲ್ಲಿ ಪಟಾಕಿ ಬಾಕ್ಸ್‌ಗಳ ಲೋಡ್ ಬಂದಿತ್ತು. 80 ಬಾಕ್ಸ್ ಇಳಿಸಿಕೊಂಡಿದ್ದ ಬಾಬು, ಗೋದಾಮಿನಲ್ಲಿ ಸಂಗ್ರಹಿಸಿದ್ದ. ಟ್ರಕ್ ಹೊರಟು ಹೋಗಿತ್ತು. ಮಧ್ಯಾಹ್ನದ ನಂತರ ಬಿಡಿ ವ್ಯಾಪಾರಿಗಳು ಬಂದು ಬಾಕ್ಸ್‌ಗಳನ್ನು ತೆಗೆದುಕೊಂಡು ಹೋಗಬೇಕಿತ್ತು. ಅಷ್ಟರಲ್ಲೇ ಈ ಸ್ಫೋಟ ಸಂಭವಿಸಿದೆ’ ಎಂದೂ ತಿಳಿಸಿದರು.

ತಳ್ಳುಗಾಡಿಯಲ್ಲಿ 10 ಪಟಾಕಿ ಬಾಕ್ಸ್: ‘ವ್ಯಾಪಾರಿಯೊಬ್ಬರು ಹೇಳಿದ್ದರಿಂದ ಪಟಾಕಿ ಬಾಕ್ಸ್‌ಗಳನ್ನು ತರಲು ಹೋಗಿದ್ದೆ. ಗೋದಾಮಿನಲ್ಲಿದ್ದ 10 ಪಟಾಕಿ ಬಾಕ್ಸ್‌ಗಳನ್ನು ತಳ್ಳುಗಾಡಿ ಮೇಲೆ ಇರಿಸಿಕೊಂಡು ಹೊರಡಲು ಸಿದ್ಧವಾಗಿದ್ದೆ. ಅದೇ ವೇಳೆ ಗೋದಾಮಿನಲ್ಲಿ ಸ್ಫೋಟ ಸಂಭವಿಸಿತು. ಗಾಯಗೊಂಡು ಸ್ಥಳದಲ್ಲೇ ಕುಸಿದು ಬಿದ್ದೆ’ ಎಂದು ಸ್ಫೋಟದಲ್ಲಿ ಗಾಯಗೊಂಡ ಗಣಪತಿ ಹೇಳಿದರು.

ಪೊಲೀಸರಿಗೆ ದೂರು ನೀಡಿರುವ ಗಣಪತಿ, ‘ಗೋದಾಮಿನಲ್ಲಿ ಯಾವುದೇ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿರಲಿಲ್ಲ’ ಎಂದಿದ್ದಾರೆ.

ವಾಹನ ಬಳಿ ನಿಂತಿದ್ದಷ್ಟೇ ಗೊತ್ತು: ಗಾಯಾಳು ಅಂಗೂಸ್ವಾಮಿ, ‘ಪಂಕ್ಚರ್ ಅಂಗಡಿ ಎದುರು ದ್ವಿಚಕ್ರ ವಾಹನ ನಿಲ್ಲಿಸಿಕೊಂಡು ನಿಂತಿದ್ದಷ್ಟೇ ಗೊತ್ತು. ದೊಡ್ಡ ಶಬ್ದ ಕೇಳಿಸಿದಾಗ ನಾನು ದೂರದಲ್ಲಿ ಹೋಗಿ ಬಿದ್ದೆ. ಬಾಂಬ್ ಸ್ಫೋಟವಾಗಿದೆ. ನಾನು ಬದುಕುವುದಿಲ್ಲ ಎಂದುಕೊಂಡೆ. ರಕ್ಷಣೆಗಾಗಿ ಚೀರಾಡಿದೆ. ಸ್ಥಳೀಯರು ನನ್ನನ್ನು ಎತ್ತಿಕೊಂಡು ಆಸ್ಪತ್ರೆಗೆ ತಂದು ಸೇರಿಸಿದರು’ ಎಂದರು.

ಗಾಯಾಳು ಜೇಮ್ಸ್, ‘ಮಳಿಗೆ ಎದುರು ನಿಂತಿದ್ದೆ. ದಿಢೀರ್ ಸ್ಫೋಟ ಸಂಭವಿಸಿ ಹಾರಿ ಬಿದ್ದೆ. ಏನಾಯಿತೆಂದು ನೋಡುವಷ್ಟರಲ್ಲಿ ಪ್ರಜ್ಞೆ ಹೋಯಿತು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ನಂತರ ಪ್ರಜ್ಞೆ ಬಂದಿದೆ’ ಎಂದರು.

ದೊಡ್ಡ ಶಬ್ದ ಕೇಳಿ ಓಡಿಬಂದೆವು: ‘ಕೂಲಿ ಕೆಲಸ ಮಾಡುತ್ತಿದ್ದೆವು. ದೊಡ್ಡ ಶಬ್ದ ಕೇಳಿ ಏನಾಯಿತೆಂದು ನೋಡಲು ಸ್ಥಳಕ್ಕೆ ಬಂದೆವು. ಬೆಂಕಿ ಹೊತ್ತಿಕೊಂಡು ಉರಿಯುತ್ತಿತ್ತು. ಗಾಯಗೊಂಡು ಬಿದ್ದಿದ್ದವರನ್ನು ಎತ್ತಿಕೊಂಡು ಆಸ್ಪತ್ರೆಗೆ ಕಳುಹಿಸಿದೆವು’ ಎಂದು ಕಾರ್ಮಿಕ ಸೆಲ್ವಂ ಹೇಳಿದರು.

‘ದಾರಿಯಲ್ಲೇ ಕೈ, ಕಾಲುಗಳು ತುಂಡರಿಸಿ ಬಿದ್ದಿದ್ದವು. ಹೆಜ್ಜೆ ಇರಿಸಲು ಭಯವಾಗುತ್ತಿತ್ತು. ಜೀವನದಲ್ಲಿ ಇಂಥ ದೃಶ್ಯ ಎಂದಿಗೂ ನೋಡಿರಲಿಲ್ಲ’ ಎಂದೂ ಸ್ಫೋಟದ ತೀವ್ರತೆ ವಿವರಿಸಿದರು.

ಸ್ಥಳೀಯರು, ‘ಘಟನೆಯಿಂದ ನಿವಾಸಿಗಳು ಭಯಗೊಂಡಿದ್ದಾರೆ. ಜನನಿಬಿಡ ಪ್ರದೇಶದಲ್ಲಿ ಪಟಾಕಿ ಸಂಗ್ರಹದಂತಹ ಅಕ್ರಮ ಚಟುವಟಿಕೆಗಳನ್ನು ತಡೆಯಲು ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು’ ಎಂದು ಒತ್ತಾಯಿಸಿದರು.

ಪಟಾಕಿ ಸ್ಫೋಟ ಸಂಭವಿಸಿದ್ದ ನಗರದ ಚಾಮರಾಜಪೇಟೆಯ ಸೀತಾಪತಿ ಅಗ್ರಹಾರದ 4ನೇ ಅಡ್ಡರಸ್ತೆಯಲ್ಲಿರುವ ಗೋದಾಮು ಎದುರು ಪೊಲೀಸರು ಪರಿಶೀಲನೆ ನಡೆಸಿದರು –ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ಅಜ್ಜಿ–ಮೊಮ್ಮಕ್ಕಳ ರಕ್ಷಣೆ

ಕಟ್ಟಡದ ಕೆಳಮಹಡಿಯಲ್ಲಿ ಗೋದಾಮು ಇದೆ. ಅದೇ ಕಟ್ಟಡದ ಮೊದಲ ಮಹಡಿಯಲ್ಲಿ ಕುಟುಂಬವೊಂದು ವಾಸವಿದೆ. ಸ್ಫೋಟ ಸಂಭವಿಸಿದ್ದ ಸಂದರ್ಭದಲ್ಲಿ ಅಜ್ಜಿ ಸಾರಮ್ಮ ಹಾಗೂ ಇಬ್ಬರು ಮೊಮ್ಮಕ್ಕಳು ಮಾತ್ರ ಮನೆಯಲ್ಲಿದ್ದರು. ಸ್ಫೋಟದಿಂದಾಗಿ ಮೂವರು ಅಪಾಯಕ್ಕೆ ಸಿಲುಕಿದ್ದರು. ಅವರನ್ನು ಸ್ಥಳೀಯರಿಬ್ಬರು ಹೊರಗೆ ಕರೆತಂದು ರಕ್ಷಿಸಿದ್ದಾರೆ.

‘ದೊಡ್ಡದಾಗಿ ಶಬ್ದ ಕೇಳಿಸಿತು. ತುಂಬಾ ಭಯವಾಯಿತು. ಆಟವಾಡುತ್ತಿದ್ದ ಮೊಮ್ಮಕ್ಕಳನ್ನು ನನ್ನತ್ತ ಕರೆದುಕೊಂಡೆ. ಎಲ್ಲರೂ ಸೇರಿ ‘ಕಾಪಾಡಿ..ಕಾಪಾಡಿ..’ ಎಂದು ಕೂಗಾಡಿದೆವು. ಇಬ್ಬರು ವ್ಯಕ್ತಿಗಳು, ಮನೆಯೊಳಗೆ ಬಂದು ನಮ್ಮನ್ನು ಹೊರಗೆ ಕರೆದೊಯ್ದರು’ ಎಂದು ಸಾರಮ್ಮ ಹೇಳಿದರು.

‘ನಾಲ್ಕು ವರ್ಷಗಳಿಂದ ಈ ಕಟ್ಟಡದಲ್ಲಿ ವಾಸವಿದ್ದೇವೆ. ನೆಲಮಹಡಿಯಲ್ಲಿ ಪಟಾಕಿ ಸಂಗ್ರಹಿಸುತ್ತಿದ್ದ ಮಾಹಿತಿ ಇರಲಿಲ್ಲ. ಸ್ಫೋಟದಿಂದ ಮನೆಯ ಕಿಟಕಿ ಗಾಜುಗಳು ಒಡೆದಿವೆ. ಪಾತ್ರೆಗಳು ಹಾಗೂ ಪೀಠೋಪಕರಣಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು’ ಎಂದೂ ತಿಳಿಸಿದರು.

‘ಕಾರ್ಮಿಕರ ನೆಚ್ಚಿನ ಚಹಾ ಅಂಗಡಿ’

‘ಗೋದಾಮು ಪಕ್ಕದಲ್ಲೇ ಚಹಾ ಅಂಗಡಿ ಇತ್ತು. ನಿತ್ಯವೂ ಕಾರ್ಮಿಕರು ಬಂದು ಚಹಾ ಕುಡಿದು ಹೋಗುತ್ತಿದ್ದರು. ಸ್ಫೋಟದಿಂದಾಗಿ ಅಂಗಡಿ ಸಂಪೂರ್ಣ ಸುಟ್ಟು ಹೋಗಿದೆ’ ಎಂದು ಸ್ಥಳೀಯರು ಹೇಳಿದರು.

‘ಗುರುವಾರ ಬೆಳಿಗ್ಗೆ ಚಹಾ ಅಂಗಡಿಯಲ್ಲಿ ಗ್ರಾಹಕರ ಸಂಖ್ಯೆ ಕಡಿಮೆ ಇತ್ತು. ರಸ್ತೆಯಲ್ಲೂ ಸಾರ್ವಜನಿಕರ ಓಡಾಟ ವಿರಳವಾಗಿತ್ತು. ಹೆಚ್ಚಿದ್ದರೆ, ಸಾವು–ನೋವಿನ ಪ್ರಮಾಣವೂ ಜಾಸ್ತಿ ಇರುತ್ತಿತ್ತು’ ಎಂದರು.

ಜಾತಿ ಗಣತಿಗೆ ಆಡಳಿತಾತ್ಮಕ ತೊಡಕು: ಕೇಂದ್ರದ ಮಾಹಿತಿ

ನವದೆಹಲಿ (ಪಿಟಿಐ): ಹಿಂದುಳಿದ ವರ್ಗಗಳ ಜಾತಿ ಗಣತಿಯು ಆಡಳಿತಾತ್ಮಕವಾಗಿ ಕಷ್ಟಕರ, ತೊಡಕಾಗಿದೆ ಎಂದು ಕೇಂದ್ರವು ಸುಪ್ರೀಂಕೋರ್ಟ್‌ಗೆ ತಿಳಿಸಿದೆ.

ಅಂತಹ ಮಾಹಿತಿಯನ್ನು ಜನಗಣತಿ ವ್ಯಾಪ್ತಿಯಿಂದ ಹೊರಗಿಡುವುದು ಒಂದು ಪ್ರಜ್ಞಾಪೂರ್ವಕ ನಿರ್ಧಾರವಾಗಿದೆ ಎಂದು ಅಭಿಪ್ರಾಯಪಟ್ಟಿದೆ.

2011ರ ಸಾಮಾಜಿಕ, ಆರ್ಥಿಕ ಮತ್ತು ಜಾತಿ ಗಣತಿಯು (ಎಸ್‌ಇಸಿಸಿ) ಸುಳ್ಳು ಮತ್ತು ತಪ್ಪುಗಳಿಂದ ಕೂಡಿದೆ ಎಂದು ಕೇಂದ್ರ ಸರ್ಕಾರವು ಸುಪ್ರೀಂಕೋರ್ಟ್‌ಗೆ ಸಲ್ಲಿಸಿದ ಅಫಿಡವಿಟ್‌ನಲ್ಲಿ ಹೇಳಿದೆ. ಇತರ ಹಿಂದುಳಿದ ವರ್ಗಗಳ 2011ರ ಎಸ್‌ಇಸಿಸಿಯ ದತ್ತಾಂಶವನ್ನು ಬಹಿರಂಗಪಡಿಸಲು ಕೇಂದ್ರ ಮತ್ತು ಇತರ ಸಂಬಂಧಿತ ಅಧಿಕಾರಿಗಳಿಗೆ ನಿರ್ದೇಶನ ನೀಡುವಂತೆ ಮಹಾರಾಷ್ಟ್ರ ಸರ್ಕಾರ ಸುಪ್ರೀಂಕೋರ್ಟ್‌ಗೆ ಸಲ್ಲಿಸಿದ ಅರ್ಜಿಗೆ ಪ್ರತಿಕ್ರಿಯೆಯಾಗಿ ಕೇಂದ್ರ ಪ್ರಮಾಣಪತ್ರ ಸಲ್ಲಿಸಿದೆ.

ಹಿಂದುಳಿದ ವರ್ಗಗಳ ನಾಗರಿಕರ ಗಣತಿಯನ್ನು ಆಡಳಿತಾತ್ಮಕವಾಗಿ ಅತ್ಯಂತ ಸಂಕೀರ್ಣ ಎಂದು ಪರಿಗಣಿಸಲಾಗುತ್ತದೆ. ಸ್ವಾತಂತ್ರ್ಯಪೂರ್ವದಲ್ಲಿ ಜಾತಿ ಗಣತಿಯನ್ನು ಕೈಗೊಂಡಾಗಲೂ ದತ್ತಾಂಶಗಳು ನಿಖರವಾಗಿಲ್ಲ ಎಂದು ಅದು ಹೇಳಿದೆ.

ಬಿಡಿಎ: ಮತ್ತೊಂದು ಮುಖ್ಯ ಎಂಜಿನಿಯರ್ ಹುದ್ದೆ ಸೃಷ್ಟಿ

ಶಾಂತರಾಜಣ್ಣ ಮರು ವರ್ಗಾವಣೆಗೆ ಸುಪ್ರೀಂ ಸೂಚಿಸಿದ ಬೆನ್ನಲ್ಲೇ ಹೊಸ ಹುದ್ದೆ ಸೃಷ್ಟಿಸಿದ ಸರ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಸರ್ಕಾರ ಹೆಚ್ಚುವರಿಯಾಗಿ ಮತ್ತೊಂದು ಮುಖ್ಯ ಎಂಜಿನಿಯರಿಂಗ್ ಹುದ್ದೆ ಸೃಷ್ಟಿಸಿದೆ. ಈ ಕುರಿತು ನಗರಾಭಿವೃದ್ಧಿ ಇಲಾಖೆ ಗುರುವಾರ ಆದೇಶ ಹೊರಡಿಸಿದೆ.

ಡಾ.ಕೆ.ಶಿವರಾಮ ಕಾರಂತ ಬಡಾವಣೆ ರಚನೆ ಕಾರ್ಯವನ್ನು ತ್ವರಿತವಾಗಿ ಕೈಗೆತ್ತಿಕೊಳ್ಳಲು ಸುಪ್ರೀಂ ಕೋರ್ಟ್ ಸೂಚನೆ ನೀಡಿದೆ. ಬಡಾವಣೆಯ ಕಾರ್ಯವನ್ನು ತ್ವರಿತ ಗತಿಯಲ್ಲಿ ಸಂಪೂರ್ಣಗೊಳಿಸಬೇಕಿರುವುದರಿಂದ ಮುಖ್ಯ ಎಂಜಿನಿಯರ್ ವೃಂದದ ಹುದ್ದೆಯನ್ನು ಸೃಜಿಸುವ ಅಗತ್ಯವಿದೆ ಎಂದು ಆದೇಶದಲ್ಲಿ ಹೇಳಲಾಗಿದೆ.

ವರ್ಗಾವಣೆಗೊಂಡ ಬಿಡಿಎ ಎಂಜಿನಿಯರಿಂಗ್ ಸದಸ್ಯರನ್ನು ಮತ್ತೆ ಅದೇ ಹುದ್ದೆಗೆ ಮರುವರ್ಗ ಮಾಡಬೇಕು ಎಂದು ಸುಪ್ರೀಂ ಕೋರ್ಟ್ ಇತ್ತೀಚೆಗೆ ಸ್ಪಷ್ಟ ನಿರ್ದೇಶನ ನೀಡಿದ್ದರೂ, ಈ ಬಗ್ಗೆ ಕ್ರಮ ಕೈಗೊಳ್ಳದ ಸರ್ಕಾರ ಅದಕ್ಕೆ ಬದಲಾಗಿ ಬಿಡಿಎಯಲ್ಲಿ ಮುಖ್ಯ ಎಂಜಿನಿಯರ್ ವೃಂದದ ಮತ್ತೊಂದು ಆಯಕಟ್ಟಿನ ಹುದ್ದೆ ಸೃಷ್ಟಿಸಿರುವುದು ಅಧಿಕಾರಿಗಳ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ.

ಬಿಡಿಎ ಎಂಜಿನಿಯರಿಂಗ್ ಸದಸ್ಯ ಡಾ.ಎಚ್.ಆರ್.ಶಾಂತರಾಜಣ್ಣ ಅವರು ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರು. ಇತರ ಹೊಣೆಗಾರಿಕೆಗಳ ಜೊತೆ ಶಿವರಾಮ ಕಾರಂತ ಬಡಾವಣೆ ನಿರ್ಮಾಣದ ಉಸ್ತುವಾರಿಯೂ ಅವರದಾಗಿತ್ತು. ಶಿವರಾಮ ಕಾರಂತ ಬಡಾವಣೆ ನಿರ್ಮಾಣಕ್ಕೆ ಸಂಬಂಧಿಸಿದ ಕಾರ್ಯ ಯೋಜನೆ ಬಗ್ಗೆ ಅವರು ಸುಪ್ರೀಂ ಕೋರ್ಟ್‌ನಲ್ಲಿ 2021ರ ಫೆ. 6ರಂದು ಪ್ರಮಾಣಪತ್ರವನ್ನು ಸಲ್ಲಿಸಿದ್ದರು. ಈ ಬಡಾವಣೆಯ ಕೆಲಸ ಕಾರ್ಯ ಪೂರ್ಣಗೊಳ್ಳುವವರೆಗೆ ಅವರನ್ನು ವರ್ಗ ಮಾಡಬಾರದು ಎಂದು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿ ಎಸ್.ಅಬ್ದುಲ್ ನಜೀರ್ ಹಾಗೂ ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರಿದ್ದ ಪೀಠ ಆ.19ರಂದು ಆದೇಶ ಮಾಡಿತ್ತು.

ಸುಪ್ರೀಂ ಕೋರ್ಟ್ ಆದೇಶವನ್ನು ಧಿಕ್ಕರಿಸಿ ರಾಜ್ಯ ಸರ್ಕಾರವು 2021ರ ಆ 31ರಂದು ಅವರನ್ನು ಗೋರೂರಿನ ಹೇಮಾವತಿ ಯೋಜನಾ ವಲಯಕ್ಕೆ ವರ್ಗ ಮಾಡಿತ್ತು. ಸರ್ಕಾರದ ಈ ನಡೆಗೆ ಸುಪ್ರೀಂ ಕೋರ್ಟ್‌ನ ಪೀಠವು ಅಸಮಾಧಾನ ವ್ಯಕ್ತಪಡಿಸಿತ್ತು.

‘ನಮ್ಮ ಆದೇಶವನ್ನು ಧಿಕ್ಕರಿಸಿ ರಾಜ್ಯ ಸರ್ಕಾರವು ಶಾಂತರಾಜಣ್ಣ ಅವರನ್ನು ಬೇರೆ ಇಲಾಖೆಗೆ ವರ್ಗ ಮಾಡಿದೆ. ಶಾಂತರಾಜಣ್ಣ ಅವರನ್ನು ಬಿಡಿಎ ಎಂಜಿನಿಯರಿಂಗ್ ಸದಸ್ಯ ಹುದ್ದೆಗೆ ಮರು ವರ್ಗ ಮಾಡಬೇಕು’ ಎಂದು ಸುಪ್ರೀಂ ಕೋರ್ಟ್‌ನ ಪೀಠವು 2021ರ ಸೆ. 7ರಂದು ನಿರ್ದೇಶನ ನೀಡಿತ್ತು.

ಈ ಬೆಳವಣಿಗೆ ಬಳಿಕ ರಾಜ್ಯ ಸರ್ಕಾರವು ಬಿಡಿಎಗೆ ಮತ್ತೊಂದು ಎಂಜಿನಿಯರಿಂಗ್ ಸದಸ್ಯ ಹುದ್ದೆಯನ್ನೇ ಸೃಷ್ಟಿಸಲು ಪ್ರಸ್ತಾವ ಸಿದ್ಧಪಡಿಸಿತ್ತು. ಆಡಳಿತಾತ್ಮಕ ಹಿತದೃಷ್ಟಿಯಿಂದ ಡಾ.ಶಿವರಾಮ ಕಾರಂತ ಬಡಾವಣೆಯ ಕರ್ತವ್ಯ ನಿರ್ವಹಣೆಯ ಉದ್ದೇಶಕ್ಕಾಗಿ ಬಿಡಿಎಗೆ ಹೆಚ್ಚುವರಿಯಾಗಿ ಒಂದು ಎಂಜಿನಿಯರಿಂಗ್ ಸದಸ್ಯ (ಮುಖ್ಯ ಎಂಜಿನಿಯರ್ ವೃಂದ) ಹುದ್ದೆಯನ್ನು ತಕ್ಷಣವೇ ಸೃಜಿಸಲು ಆದೇಶ ಹೊರಡಿಸುವಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರಿಗೆ ಇದೇ 20ರಂದು ಟಿಪ್ಪಣಿಯನ್ನೂ ಕಳುಹಿಸಿದ್ದರು. ಆದರೆ, ಈ ಕುರಿತ ಆದೇಶದಲ್ಲಿ ಹೊಸ ಹುದ್ದೆಯನ್ನು ಇನ್ನೊಂದು ಮುಖ್ಯ ಎಂಜಿನಿಯರಿಂಗ್ ಹುದ್ದೆ ಎಂದು ಮಾತ್ರ ಉಲ್ಲೇಖಿಸಲಾಗಿದೆ.

ಶಾಂತರಾಜಣ್ಣ ಅವರು ಬಿಡಿಎ ಎಂಜಿನಿಯರಿಂಗ್ ಸದಸ್ಯರಾಗಿ 1 ವರ್ಷ ಎರಡು ತಿಂಗಳುಗಳಷ್ಟೇ ಆಗಿವೆ. ಅವರಿಗೆ ಇನ್ನೂ ನಾಲ್ಕೂವರೆ ವರ್ಷ ಸೇವಾವಧಿ ಇದೆ. ಲೋಕೋಪಯೋಗಿ ಇಲಾಖೆಯ ರಾಷ್ಟ್ರೀಯ ಹೆದ್ದಾರಿ ವಿಭಾಗದ ಮುಖ್ಯ ಎಂಜಿನಿಯರ್ ಆಗಿದ್ದ ವಿ.ಗೋವಿಂದರಾಜು ಅವರನ್ನು ಆ. 31ರಂದೇ ಬಿಡಿಎ ಎಂಜಿನಿಯರಿಂಗ್ ಸದಸ್ಯ ಹುದ್ದೆಗೆ ವರ್ಗ ಮಾಡಲಾಗಿತ್ತು. ಶಾಂತರಾಜಣ್ಣ ಅವರನ್ನು ಮರು ವರ್ಗ ಮಾಡುವಂತೆ ಸುಪ್ರೀಂ ಕೋರ್ಟ್ ಸೂಚಿಸಿದ್ದರಿಂದ ಗೋವಿಂದರಾಜು ಅವರು ಅಧಿಕಾರ ವಹಿಸಿಕೊಂಡಿಲ್ಲ. ಹಾಗಾಗಿ ಸದ್ಯಕ್ಕೆ ಶಾಂತರಾಜಣ್ಣ ಅವರೇ ಈ ಹುದ್ದೆಯಲ್ಲಿದ್ದಾರೆ.

ಬಿಡಿಎ ಕಾಯ್ದೆಯಲ್ಲಿಲ್ಲ ಅವಕಾಶ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಟಿಪ್ಪಣಿಯಲ್ಲಿ ಬಿಡಿಎಗೆ ಮತ್ತೊಂದು ಎಂಜಿನಿಯರಿಂಗ್ ಸದಸ್ಯ ಹುದ್ದೆಯನ್ನು ಸೃಷ್ಟಿಸುವ ಬಗ್ಗೆ ಪ್ರಸ್ತಾಪಿಸಲಾಗಿತ್ತು. ಆದರೆ, 1976ರ ಬಿಡಿಎ ಕಾಯ್ದೆ ಪ್ರಕಾರ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಒಬ್ಬರು ಎಂಜಿನಿಯರಿಂಗ್ ಸದಸ್ಯರನ್ನು ಹೊಂದುವುದಕ್ಕೆ ಮಾತ್ರ ಅವಕಾಶ ಇದೆ. ಅವರು ಕರ್ನಾಟಕ ಎಂಜಿನಿಯರಿಂಗ್ ಸೇವೆಯ ಅಧಿಕಾರಿಯಾಗಿರಬೇಕು ಹಾಗೂ ಅವರು ಮುಖ್ಯ ಎಂಜಿನಿಯರ್ ವೃಂದಕ್ಕಿಂತ ಕಡಿಮೆ ಶ್ರೇಣಿಯ ಅಧಿಕಾರಿ ಆಗಿರುವಂತಿಲ್ಲ. ಈಗ ಹೆಚ್ಚುವರಿ ಎಂಜಿನಿಯರಿಂಗ್ ಸದಸ್ಯ ಹುದ್ದೆ ಸೃಷ್ಟಿಸಬೇಕಾದರೆ ಬಿಡಿಎ ಕಾಯ್ದೆಗೆ ತಿದ್ದುಪಡಿ ತರಬೇಕಾಗುತ್ತದೆ.

‘ಬಿಡಿಎಯಲ್ಲಿ ಎರಡು ಎಂಜಿನಿಯರಿಂಗ್ ಸದಸ್ಯ ಹುದ್ದೆಗಳನ್ನು ಸೃಷ್ಟಿಸಿದರೆ ಭವಿಷ್ಯದಲ್ಲಿ ತಿಕ್ಕಾಟಕ್ಕೆ ಕಾರಣವಾಗಬಹುದು. ಇದು ಉತ್ತಮ ಬೆಳವಣಿಗೆ ಅಲ್ಲ’ ಎಂದು ಅಧಿಕಾರಿಯೊಬ್ಬರು ಅಭಿಪ್ರಾಯಪಟ್ಟರು.

‘ಸರ್ಕಾರದ ವರ್ಗಾವಣೆ ಮಾರ್ಗಸೂಚಿಗಳ ಪ್ರಕಾರ ಒಬ್ಬ ಎ– ದರ್ಜೆಯ ಅಧಿಕಾರಿ ವಿರುದ್ಧ ಯಾವುದೇ ಗುರುತರ ಆರೋಪ ಇಲ್ಲದಿದ್ದರೆ ಅವರನ್ನು ಎರಡು ವರ್ಷಕ್ಕೆ ಮುನ್ನ ವರ್ಗ ಮಾಡುವಂತಿಲ್ಲ. ಅವಧಿಪೂರ್ವ ವರ್ಗಾವಣೆಗಳನ್ನು ಮಾಡುತ್ತಿದ್ದರೆ ಯಾವುದೇ ಕೆಲಸ ಕಾರ್ಯಗಳನ್ನು ಸಮರ್ಪಕವಾಗಿ ನಡೆಸಲು ಅವಕಾಶ ಸಿಗದು. ಪೊಲೀಸ್ ಅಧಿಕಾರಿಗಳ ವರ್ಗಾವಣೆ ಸಂಬಂಧಿಸಿದ ನಿರ್ಧಾರ ತಳೆಯಲು ಸುಪ್ರೀಂ ಕೋರ್ಟ್ ಆದೇಶದ ಮೇರೆಗೆ ಪೊಲೀಸ್ ಸಿಬ್ಬಂದಿ ಮಂಡಳಿ ರಚಿಸಿದಂತೆ ಎಂಜಿನಿಯರ್‌ಗಳ ವರ್ಗಾವಣೆ ಬಗ್ಗೆ ತೀರ್ಮಾನಕ್ಕೆ ಪ್ರತ್ಯೇಕ ಮಂಡಳಿ ರಚಿಸುವುದು ಸೂಕ್ತ’ ಎಂದು ಅವರು ಸಲಹೆ ನೀಡಿದರು.

ಅಪಹರಣ: ₹ 2 ಕೋಟಿಗೆ ಬೇಡಿಕೆ

ಬೆಂಗಳೂರು: ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದ ಸ್ನೇಹಿತನನ್ನೇ ಅಪಹರಿಸಿ, ಬಿಡುಗಡೆ ಮಾಡಲು ₹ 2 ಕೋಟಿಗೆ ಬೇಡಿಕೆ ಇಟ್ಟಿದ್ದ ಆರೋಪದಡಿ ಮೂವರನ್ನು ಕೋರಮಂಗಲ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಪ್ರಶಾಂತ್, ಅರಿವೇಗನ್ ಹಾಗೂ ಸಂತೋಷ್ ಬಂಧಿತರು. ಮೂವರು ಸೇರಿಕೊಂಡು ಸ್ನೇಹಿತ ವಿನೀತ್ ಎಂಬುವರನ್ನು ಅಪಹರಿಸಿದ್ದರು. ಈ ಬಗ್ಗೆ ಪ್ರಕರಣ ದಾಖಲಾಗಿತ್ತು. ತನಿಖೆ ಕೈಗೊಂಡಾಗ ಆರೋಪಿಗಳು ಸಿಕ್ಕಿಬಿದ್ದರು’ ಎಂದು ಪೊಲೀಸರು ಹೇಳಿದರು.

‘ನವೋದ್ಯಮದಲ್ಲಿ ಯಶಸ್ವಿಯಾಗಿದ್ದ ವಿನೀತ್, ತನ್ನದೇ ಕಂಪನಿ ನಡೆಸುತ್ತಿದ್ದರು. ಕೆಲಸ ನಿರ್ವಹಣೆ ಸಂಬಂಧ ಕಂಪನಿಯೊಂದರ ಜೊತೆ ಒಪ್ಪಂದ ಮಾಡಿಕೊಂಡಿದ್ದರು. ಇದರಿಂದ ಅವರಿಗೆ ₹ 5 ಕೋಟಿ ಬರಬೇಕಿತ್ತು. ಇದನ್ನು ತಿಳಿದುಕೊಂಡಿದ್ದ ಸ್ನೇಹಿತ ಪ್ರಶಾಂತ್, ವಿನೀತ್ ಅವರನ್ನು ಅಪಹರಿಸಿ ಹಣ ಕಿತ್ತುಕೊಳ್ಳಲು ಸಂಚು ರೂಪಿಸಿದ್ದ. ಈತನೂ ಸಾಫ್ಟ್‌ವೇರ್ ಎಂಜಿನಿಯರ್.’

ಊಟಕ್ಕೆ ಕರೆದು ಅಪಹರಣ: ‘ಔತಣಕೂಟದ ಸೋಗಿನಲ್ಲಿ ವಿನೀತ್ ಅವರನ್ನು ತಮ್ಮ ಬಳಿ ಕರೆಸಿಕೊಂಡಿದ್ದ ಆರೋಪಿಗಳು, ಒಟ್ಟಿಗೆ ಊಟ ಮಾಡಿದ್ದರು. ನಂತರ ಕಾರಿನಲ್ಲಿ ಅಪಹರಿಸಿಕೊಂಡು ತಮಿಳುನಾಡಿನತ್ತ ಹೋಗಿದ್ದರು. ಕಿರುಚಾಡದಂತೆ ಬಾಯಿಗೆ ಬಟ್ಟೆ ತುರುಕಿದ್ದರು. ಹೋಟೆಲೊಂದರಲ್ಲಿ ವಿನೀತ್ ಅವರನ್ನು ಅಕ್ರಮ ಬಂಧನದಲ್ಲಿರಿಸಿದ್ದರು’ ಎಂದೂ ಪೊಲೀಸರು ಹೇಳಿದರು.

‘ಕುಟುಂಬದವರಿಗೆ ವಾಟ್ಸ್‌ಆ್ಯಪ್ ಸಂದೇಶ ಕಳುಹಿಸಿದ್ದ ಆರೋಪಿಗಳು, ‘ವಿನೀತ್ ಅಪಹರಣ ಮಾಡಿದ್ದೇವೆ. ₹ 2 ಕೋಟಿ ಕೊಟ್ಟರೆ ಬಿಡುತ್ತೇವೆ’ ಎಂದಿದ್ದರು. ಗಾಬರಿಗೊಂಡ ಕುಟುಂಬದವರು ಠಾಣೆಗೆ ಬಂದು ದೂರು ನೀಡಿದ್ದರು.’

ಸುಳಿವು ನೀಡಿದ ಫಾಸ್ಟ್‌ಟ್ಯಾಗ್; ‘ಕೃತ್ಯಕ್ಕಾಗಿ ಆರೋಪಿಗಳು, ಸ್ನೇಹಿತರೊಬ್ಬರ ಕಾರು ಪಡೆದಿದ್ದರು. ಕಾರಿನ ನೋಂದಣಿ ಸಂಖ್ಯೆ ಆಧರಿಸಿ ತನಿಖೆ ಆರಂಭಿಸಲಾಯಿತು. ಎಲೆಕ್ಟ್ರಾನಿಕ್ ಸಿಟಿ ಟೋಲ್‌ಗೇಟ್ ಮೂಲಕ ಕಾರು ಹಾದು ಹೋಗಿದ್ದು ಫಾಸ್ಟ್‌ಟ್ಯಾಗ್‌ನಿಂದ ತಿಳಿಯಿತು. ತಮಿಳುನಾಡಿಗೆ ಹೋದ ವಿಶೇಷ ತಂಡ, ಹೋಟೆಲೊಂದರಲ್ಲಿ ಆರೋಪಿಗಳನ್ನು ಬಂಧಿಸಿತು. ವಿನೀತ್ ಅವರನ್ನು ಸುರಕ್ಷಿತವಾಗಿ ನಗರಕ್ಕೆ ಕರೆತಂದಿತು’ ಎಂದೂ ತಿಳಿಸಿದರು.

ಅರ್ಚಕರ ಮೇಲೆ ಹಲ್ಲೆ, ಸುಲಿಗೆ

ಬೆಂಗಳೂರು: ವಿಧಾನಪರಿಷತ್ ಬಿಜೆಪಿ ಸದಸ್ಯ ಆರ್. ಶಂಕರ್ ಮನೆಯಲ್ಲಿ ಪೂಜೆ ಮುಗಿಸಿಕೊಂಡು ಕಾರಿನಲ್ಲಿ ವಾಪಸು ಹೊರಟಿದ್ದ ಅರ್ಚಕ ಮಣಿಕಂಠ ಶರ್ಮಾ ಎಂಬುವವರನ್ನು ಸುಲಿಗೆ ಮಾಡಲಾಗಿದ್ದು, ಈ ಬಗ್ಗೆ ಗೋವಿಂದಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ‘ಮನೋರಾಯನಪಾಳ್ಯದ ಅರ್ಚಕ ಮಣಿಕಂಠ ಶರ್ಮಾ ಮೇಲೆ ಹಲ್ಲೆ ನಡೆಸಿದ್ದ ದುಷ್ಕರ್ಮಿಗಳು, 60 ಗ್ರಾಂ ತೂಕದ ಚಿನ್ನದ ಸರ ಹಗೂ ₹ 20 ಸಾವಿರ ನಗದು, ಮೊಬೈಲ್ ದೋಚಿಕೊಂಡು ಪರಾರಿಯಾಗಿದ್ದಾರೆ. ಸೆ. 20ರಂದು ರಾತ್ರಿ ನಡೆದಿರುವ ಘಟನೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಅತ್ಯಾಚಾರಕ್ಕೆ ಯತ್ನ; ಮೊಬೈಲ್‌ನಲ್ಲಿ ಸೆಲ್ಫಿ ಫೋಟೊ

ಬೆಂಗಳೂರು: ಹೋಟೆಲ್ ಉದ್ಯೋಗಿಯೊಬ್ಬರ ಮೇಲೆ ಅತ್ಯಾಚಾರಕ್ಕೆ ಯತ್ನಿಸಿದ ಆರೋಪದಡಿ ಉಬರ್ ಚಾಲಕ ದೇವರಾಜಲು ಎಂಬಾತನನ್ನು ಜೀವನ್‌ಬಿಮಾ ನಗರ ಠಾಣೆ ಪೊಲೀಸರು ಬಂಧಿಸಿದ್ದು, ಸಂತ್ರಸ್ತ ಯುವತಿ ಜೊತೆ ಕ್ಲಿಕ್ಕಿಸಿದ್ದ ಸೆಲ್ಫಿ ಫೋಟೊಗಳು ಆತನ ಮೊಬೈಲ್‌ನಲ್ಲಿ ಪತ್ತೆಯಾಗಿವೆ.

‘ಮುರುಗೇಶಪಾಳ್ಯದಲ್ಲಿ ವಾಸವಿದ್ದ ಯುವತಿ, ಸ್ನೇಹಿತರ ಮನೆಗೆ ಬುಧವಾರ ಹೋಗಿದ್ದರು. ರಾತ್ರಿ ಅಲ್ಲಿಂದ ವಾಪಸು ಬರಲು ಕ್ಯಾಬ್ ಕಾಯ್ದಿರಿಸಿದ್ದರು. ಸ್ಥಳಕ್ಕೆ ಬಂದಿದ್ದ ಆರೋಪಿ ದೇವರಾಜಲು, ಯುವತಿಯನ್ನು ಹತ್ತಿಸಿಕೊಂಡು ಮುರುಗೇಶಪಾಳ್ಯಕ್ಕೆ ಬಂದಿದ್ದ. ಕ್ಯಾಬ್‌ನಲ್ಲಿದ್ದ ಯುವತಿ ನಿದ್ದೆಗೆ ಜಾರಿದ್ದಳು. ನಿಗದಿತ ಸ್ಥಳ ಬಂದರೂ ಎಚ್ಚರವಾಗಿರಲಿಲ್ಲ. ಅದೇ ಸಂದರ್ಭದಲ್ಲಿ ಯುವತಿ ಜೊತೆ ಆರೋಪಿ ಸೆಲ್ಫಿ ಫೋಟೊ ಕ್ಲಿಕ್ಕಿಸಿಕೊಂಡಿದ್ದ. ನಂತರ ಯುವತಿ ಮೇಲೆ ಆರೋಪಿ ಅತ್ಯಾಚಾರಕ್ಕೆ ಯತ್ನಿಸಿದ್ದ ಎನ್ನಲಾಗಿದೆ. ಎಚ್ಚರಗೊಂಡಿದ್ದ ಯುವತಿ, ಕಿರುಚಾಡಿದ್ದರು. ಆತನಿಂದ ತಪ್ಪಿಸಿಕೊಂಡು ಕ್ಯಾಬ್‌ನಿಂದ ಹೊರಗೆ ಬಂದಿದ್ದರು.’

‘ಹೆದರಿದ ಆರೋಪಿ, ಅಲ್ಲಿಂದ ಪರಾರಿಯಾಗಿದ್ದ. ಈ ಬಗ್ಗೆ ತುರ್ತು ಸಂಖ್ಯೆ 112ಕ್ಕೆ ಕರೆ ಮಾಡಿ ಅಳಲು ತೋಡಿಕೊಂಡಿದ್ದರು.’ ಎಂದೂ ಮೂಲಗಳು ತಿಳಿಸಿವೆ.

‘ಉಬರ್ ಕಂಪನಿ ಸಂಪರ್ಕಿಸಿ, ಆರೋಪಿ ಬಗ್ಗೆ ಮಾಹಿತಿ ಕಲೆಹಾಕಲಾಯಿತು. ಬೆಂಗಳೂರು ಹೊರವಲಯದಲ್ಲಿ ಆರೋಪಿಯನ್ನು ಬಂಧಿಸಲಾಯಿತು’ ಎಂದೂ ಪೊಲೀಸ್ ಮೂಲಗಳು ಹೇಳಿವೆ.

ಅತ್ಯಾಚಾರ ಯತ್ನ: ಆರೋಪಿಗೆ ಮಹಿಳೆಯರ ಬಟ್ಟೆ ಒಗೆಯುವ ‘ಷರತ್ತಿನ ಜಾಮೀನು’

ಪಟ್ನಾ (ಎಎಫ್‌ಪಿ): ಗ್ರಾಮದಲ್ಲಿ ಇರುವ ಎಲ್ಲ ಮಹಿಳೆಯರ ಬಟ್ಟೆಗಳನ್ನು ತೊಳೆಯಬೇಕು ಮತ್ತು ಇಸ್ತ್ರಿ ಮಾಡಬೇಕು ಎಂಬ ಷರತ್ತು ವಿಧಿಸಿ ಅತ್ಯಾಚಾರ ಯತ್ನ ಪ್ರಕರಣದ ಆರೋಪಿಗೆ ಮಧುಬನಿಯ ನ್ಯಾಯಾಲಯವೊಂದು ಜಾಮೀನು ನೀಡಿದೆ.

ಲಾಲನ್ ಕುಮಾರ್ (20) ಈ ಷರತ್ತಿನನ್ವಯ ಜಾಮೀನು ಪಡೆದ ಆರೋಪಿ. ಆರು ತಿಂಗಳ ಕಾಲ ಮಹಿಳೆಯರ ಬಟ್ಟೆ ಒಗೆಯಬೇಕು, ಅದಕ್ಕೆ ಬೇಕಾದ ಡಿಟರ್ಜಂಟ್ ಮತ್ತು ಇತರೆ ವಸ್ತುಗಳನ್ನು ಸ್ವಯಂ ಖರೀದಿಸಬೇಕು ಎಂದೂ ಷರತ್ತಿನಲ್ಲಿ ಹೇಳಲಾಗಿದೆ. ಗ್ರಾಮದಲ್ಲಿರುವ ಮಹಿಳೆಯರ ಸಂಖ್ಯೆ ಸುಮಾರು 2000. ಬಿಹಾರದ ಮಜ್ಹೋರ್ ಗ್ರಾಮದ ಕುಮಾರ್ ವೃತ್ತಿಯಿಂದ ಧೋಬಿ. ಅತ್ಯಾಚಾರ ಯತ್ನ ಸೇರಿ ವಿವಿಧ ಆರೋಪಗಳಡಿ ಈ ವರ್ಷದ ಏಪ್ರಿಲ್ ತಿಂಗಳಲ್ಲಿ ಬಂಧಿಸಲಾಗಿತ್ತು ಎಂದು ಮಧುಬನಿ ಜಿಲ್ಲೆಯ ಪೊಲೀಸ್ ಅಧಿಕಾರಿಯಾದ ಸಂತೋಷ್ ಕುಮಾರ್ ಸಿಂಗ್ ತಿಳಿಸಿದರು.

ಕೋರ್ಟ್‌ನ ತೀರ್ಮಾನವು ಗ್ರಾಮದ ಎಲ್ಲ ಮಹಿಳೆಯರಿಗೆ ಸಂತಸ ತಂದಿದೆ ಎನ್ನುತ್ತಾರೆ ಗ್ರಾಮ ಪರಿಷತ್‌ನ ಮುಖ್ಯಸ್ಥೆಯಾಗಿರುವ ನಸೀಮಾ ಖತೂನ್. ‘ಇದು, ಐತಿಹಾಸಿಕ ನಿರ್ಧಾರ.’ ಎಂದು ಕುಮಾರ್ ಕಾರ್ಯವೈಖರಿ ಪರಿಶೀಲಿಸುವವರಲ್ಲಿ ಒಬ್ಬರಾದ ಖತೂನ್ ಹೇಳಿದರು.

‘ಈ ಆದೇಶವು ಸಕಾರಾತ್ಮಕ ಪರಿಣಾಮ ಬೀರಿದೆ. ಮಹಿಳೆಯರ ವಿರುದ್ಧ ದೌರ್ಜನ್ಯವು ಚರ್ಚೆಗೆ ಗ್ರಾಸವಾಗಿದೆ. ಇದು ಗಮನಾರ್ಹ ಹೆಜ್ಜೆ’ ಎಂದು ಅಂಜುಂ ಪರ್ವೀನ್ ಹೇಳಿದರು.

ಕತ್ತು ಕೊಯ್ದು ಮಹಿಳೆ ಹತ್ಯೆ; ಪತಿಯಿಂದ ಕೃತ್ಯ ಶಂಕೆ

ಬೆಂಗಳೂರು: ಅನ್ನಪೂರ್ಣೇಶ್ವರಿನಗರ ಠಾಣೆ ವ್ಯಾಪ್ತಿಯಲ್ಲಿ ರೂಪಾ (34) ಎಂಬುವರನ್ನು ಕತ್ತು ಕೊಯ್ದು ಕೊಲೆ ಮಾಡಲಾಗಿದ್ದು, ಪತಿ ಕಾಂತರಾಜ್‌ನೇ ಕೃತ್ಯ ಎಸಗಿರುವ ಶಂಕೆ ವ್ಯಕ್ತವಾಗಿದೆ.

‘ರೂಪಾ ಅವರು 9 ವರ್ಷಗಳ ಹಿಂದೆ ಕಾಂತರಾಜ್‌ನನ್ನು ಮದುವೆಯಾಗಿದ್ದರು. ದಂಪತಿಗೆ ಮಗನಿದ್ದಾನೆ’ ಎಂದು ಪೊಲೀಸರು ಹೇಳಿದರು.

‘ಬುಧವಾರ ಸಂಜೆ ದಂಪತಿ ನಡುವೆ ಗಲಾಟೆ ಆಗಿತ್ತು. ಇದೇ ಸಂದರ್ಭದಲ್ಲೇ ಕಾಂತರಾಜ್, ಚಾಕುವಿನಿಂದ ಪತ್ನಿಯ ಕತ್ತು ಕೊಯ್ದು ಪರಾರಿಯಾಗಿದ್ದಾನೆ.’

‘ಟ್ಯೂಷನ್‌ಗೆ ಹೋಗಿದ್ದ ಮಗ, ಮನೆಗೆ ವಾಪಸು ಬಂದಿದ್ದಾಗ ವಿಷಯ ಗೊತ್ತಾಗಿದೆ. ಸ್ಥಳೀಯರು ನೀಡಿದ್ದ ಮಾಹಿತಿ ಆಧರಿಸಿ ಸ್ಥಳಕ್ಕೆ ಹೋಗಿ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ’ ಎಂದೂ ತಿಳಿಸಿದರು.

ದೇಶ ಅಲಿಖಿತ ಸಂವಿಧಾನದಂತೆ ನಡೆಯುತ್ತಿದೆ: ಚಿನ್ನಸ್ವಾಮಿ ಬೇಸರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಡಾ.ಬಿ.ಆರ್. ಅಂಬೇಡ್ಕರ್ ಅವರು ನೀಡಿದ ಲಿಖಿತ ಸಂವಿಧಾನದ ಆಶಯ ಇಂದಿಗೂ ಈಡೇರಿಲ್ಲ. ಅಲಿಖಿತ ಸಂವಿಧಾನದಿಂದ ದೇಶ ನಡೆಯುತ್ತಿದೆ. ಇದನ್ನೇ ಬಂಡವಾಳವನ್ನಾಗಿಸಿಕೊಂಡ ಕೆಲವರಿಗೆ ಮಾತ್ರ ಸ್ಥಾನಮಾನಗಳು ಸೀಮಿತವಾಗಿದೆ’ ಎಂದು ಕವಿ ಮೂಡ್ನಾಕೂಡು ಚಿನ್ನಸ್ವಾಮಿ ಬೇಸರ ವ್ಯಕ್ತಪಡಿಸಿದರು.

ಪಾಂಚಜನ್ಯ ವಿದ್ಯಾಪೀಠ ಕಲ್ಯಾಣದತ್ತಿ ಹಾಗೂ ಪಾಂಚಜನ್ಯ ವಿದ್ಯಾಪೀಠ ವಿದ್ಯಾಸಂಸ್ಥೆಗಳ ಸಮೂಹವು ಡಾ.ಬಿ.ಆರ್. ಅಂಬೇಡ್ಕರ್ ತಾಂತ್ರಿಕ ಕಾಲೇಜಿನಲ್ಲಿ ಗುರುವಾರ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆಯಲ್ಲಿ ಅವರು ಮಾತನಾಡಿದರು.

‘ಶಿಕ್ಷಣ ವ್ಯವಸ್ಥೆ ಈ ದೇಶದ ಸಂದರ್ಭಕ್ಕೆ ಅನುಗುಣವಾಗಿಲ್ಲ. ಸಿಬಿಎಸ್‌ಇ, ಐಸಿಎಸ್‌ಇ ವಿಂಗಡಣೆ ವರ್ಣಾಶ್ರಮದಂತೆ. ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿಸಲು ಅಂಬೇಡ್ಕರ್ ಕನಸು ಕಂಡಿದ್ದರು. ಸಮಾನ ಶಿಕ್ಷಣ ಇಂದಿಗೂ ಸಿಗುತ್ತಿಲ್ಲ’ ಎಂದು ಅವರು ಅಭಿಪ್ರಾಯಪಟ್ಟರು.

ವಿಮರ್ಶಕ ಬೈರಮಂಗಲ ರಾಮೇಗೌಡ, ‘ಕೌಶಲ ಹಾಗೂ ಬದುಕಿನ ಬಗ್ಗೆ ಆಲೋಚಿಸುವ ಶಕ್ತಿಯನ್ನು ಮಕ್ಕಳಲ್ಲಿ ರೂಪಿಸುವ ಶಿಕ್ಷಕರು ಕಡಿಮೆ. ಬೆಲ್ ಮತ್ತು ಬಿಲ್ಲುಗಳ ಮಧ್ಯೆ ಕಾಲ ಕಳೆಯುವ ಶಿಕ್ಷಕರೂ ಇದ್ದಾರೆ. ಶಿಕ್ಷಕರು ಸಂಪಾದನೆಗೆ ಸೀಮಿತವಾಗಬಾರದು’ ಎಂದರು.

ಕಾರ್ಯಕ್ರಮದಲ್ಲಿ ಡಾ.ಎಸ್.ರಾಧಾಕೃಷ್ಣ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ಮೂಡ್ನಾಕೂಡು ಚಿನ್ನಸ್ವಾಮಿ, ಬೈರಮಂಗಲ ರಾಮೇಗೌಡ, ಪಿವಿಪಿ ವೆಲ್‌ಫೇರ್ ಟ್ರಸ್ಟಿಗಳಾದ ಡಾ.ಎಂ.ಮಹಾದೇವ್, ಎಸ್.ಶಿವಮಲ್ಲು, ಎ.ಆರ್. ಕೃಷ್ಣಮೂರ್ತಿ, ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯ ಬಿ.ಎನ್. ಉಮೇಶ್ ಇದ್ದಾರೆ

ನಷ್ಟದಲ್ಲಿ ಸಕ್ಕರೆ ಕಾರ್ಖಾನೆ– ಅ.15ರ ಬಳಿಕ ಸಭೆ: ಸೋಮಶೇಖರ್

ಬೆಂಗಳೂರು: 'ಇಂಧನ, ಸಕ್ಕರೆ ಸಚಿವರನ್ನೂ ಸೇರಿಸಿಕೊಂಡು ಅಪೆಕ್ಸ್ ಬ್ಯಾಂಕ್, ಡಿಸಿಸಿ ಬ್ಯಾಂಕ್ ಮತ್ತು ಅಧಿಕಾರಿಗಳ ಸಭೆಯನ್ನು ಅ. 15ರ ನಂತರ ನಡೆಸಿ, ಸಕ್ಕರೆ ಕಾರ್ಖಾನೆಗಳು, ಕಬ್ಬು ಬೆಳೆಗಾರರು ಹಾಗೂ ಸಹಕಾರಿ ಬ್ಯಾಂಕ್‌ಗಳ ಸಮಸ್ಯೆಗಳ ಬಗ್ಗೆ ಚರ್ಚಿಸಲಾಗುವುದು' ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಭರವಸೆ ನೀಡಿದರು.

ವಿಧಾನ ಪರಿಷತ್‌ನಲ್ಲಿ ವಿರೋಧ ಪಕ್ಷದ ನಾಯಕ ಎಸ್.ಆರ್. ಪಾಟೀಲ ಅವರು ವಿಷಯ ಪ್ರಸ್ತಾಪಿಸಿ, 'ಉತ್ತರ ಕರ್ನಾಟಕ ಭಾಗದ ದುಸ್ಥಿತಿಯಲ್ಲಿರುವ ಸಕ್ಕರೆ ಕಾರ್ಖಾನೆಗಳ ಪುನಶ್ಚೇತನಕ್ಕೆ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

'ನಷ್ಟದಲ್ಲಿರುವ ಸಕ್ಕರೆ ಕಾರ್ಖಾನೆಗಳಿಗೆ ಆರ್ಥಿಕ ನೆರವು ನೀಡಬೇಕು. ಈ ಕಾರ್ಖಾನೆಗಳಿಗೆ ಆರ್ಥಿಕ ಸಹಕಾರ ನೀಡುತ್ತಿದ್ದ ಸಹಕಾರಿ ಬ್ಯಾಂಕುಗಳು ಕೂಡ ಇಂದು ದುಸ್ಥಿತಿಯಲ್ಲಿವೆ. ಅವುಗಳನ್ನು ಸುಸ್ಥಿತಿಗೆ ತರುವ ಸಂಬಂಧ ಸೂಕ್ತ ಮಾರ್ಗೋಪಾಯ ಕಂಡುಕೊಳ್ಳಬೇಕು' ಎಂದು ಒತ್ತಾಯಿಸಿದರು.

'87 ಸಕ್ಕರೆ ಕಾರ್ಖಾನೆಗಳೂ ರಾಜ್ಯದಲ್ಲಿದ್ದು, 22 ಮುಚ್ಚಿವೆ. ಉತ್ತರ ಕರ್ನಾಟಕದಲ್ಲಿ 33 ಸಕ್ಕರೆ ಕಾರ್ಖಾನೆಗಳಿವೆ. ಇಲ್ಲಿಯೇ ಶೇ 75ರಷ್ಟು ಕಾರ್ಖಾನೆ ಇದ್ದು ಬೆಳಗಾವಿ, ಬಾಗಲಕೋಟೆ, ವಿಜಯಪುರದಲ್ಲಿ ಹೆಚ್ಚು ಕಾರ್ಖಾನೆಗಳಿವೆ. ಶೇ 80ರಷ್ಟು ಸಕ್ಕರೆ ಉತ್ಪಾದನೆ ಆಗುತ್ತದೆ. ಇಲ್ಲಿನ ಕಾರ್ಖಾನೆಗಳಲ್ಲಿ ಬರುವ ಆದಾಯ ಬ್ಯಾಂಕ್ ಸಾಲದ ಬಡ್ಡಿ ಕಟ್ಟಲು ವ್ಯಯ ಆಗುತ್ತಿದೆ. ಸರ್ಕಾರ ಸಹಾಯಕ್ಕೆ ಧಾವಿಸಬೇಕು' ಎಂದರು.



ಸೋಮಶೇಖರ್

ಉತ್ತರ ನೀಡಿದ ಸಚಿವರು, 'ಸಕ್ಕರೆ ಉತ್ಪಾದನೆಯಲ್ಲಿ ದೇಶದಲ್ಲೇ ರಾಜ್ಯ ಮೂರನೇ ಸ್ಥಾನದಲ್ಲಿದೆ. ಇಲ್ಲಿ ಸಹಕಾರಿ ಸಂಘದಿಂದ ಸಾಲ ಪಡೆದವರು ತೀರಿಸಿಲ್ಲ. 34 ಸಕ್ಕರೆ ಕಾರ್ಖಾನೆಗಳಲ್ಲಿ ಅರ್ಧದಷ್ಟು ಮಂದಿ ಮಾತ್ರ ಸರಿಯಾಗಿ ನಡೆದುಕೊಳ್ಳುತ್ತಾರೆ. ಉಳಿದವರಲ್ಲಿ ಕೆಲವರು ಬಡ್ಡಿ ಕಟ್ಟುತ್ತಾರೆ. ಕೆಲವು ಶಾಸಕರು ಕಾರ್ಖಾನೆ ಹೊಂದಿದ್ದು ಅವರು ಕೂಡಾ ಇದುವರೆಗೂ ಒಂದು ರೂಪಾಯಿ ಭರಿಸಿಲ್ಲ. ಸಾಲ ಪಡೆದು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಸಕ್ಕರೆ ಲಾಬಿ ರಾಜ್ಯದಲ್ಲಿ ಪ್ರಬಲವಾಗಿದೆ' ಎಂದರು.

ದೀಪಾವಳಿಗೆ ಬನ್ನೇರುಘಟ್ಟದಲ್ಲಿ ಚಿರತೆ ಸಫಾರಿ: ಮಹದೇವಸ್ವಾಮಿ

ಬೆಂಗಳೂರು: ದೀಪಾವಳಿ ಹಬ್ಬದ ವೇಳೆಗೆ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದಲ್ಲಿ ‘ಚಿರತೆ ಸಫಾರಿ’ ಆರಂಭವಾಗಲಿದೆ ಎಂದು ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ತಿಳಿಸಿದರು.

ಗುರುವಾರ ಭೇಟಿ ನೀಡಿ ಅಭಿವೃದ್ಧಿ ಕಾಮಗಾರಿಗಳ ಪರಿಶೀಲನೆ ನಡೆಸಿದ ಅವರು, ‘₹ 2 ಕೋಟಿ ಅನುದಾನದಲ್ಲಿ 50 ಎಕರೆ ಪ್ರದೇಶದಲ್ಲಿ ಸಫಾರಿ ಆರಂಭಿಸುವ ಕಾರ್ಯ ಅಂತಿಮ ಹಂತದಲ್ಲಿದೆ’ ಎಂದರು.

‘ಆರಂಭಿಕ ಹಂತದಲ್ಲಿ 8 ಚಿರತೆ ಬಿಟ್ಟು, ಪ್ರಾಯೋಗಿಕ ಸಫಾರಿ ನಡೆಸಲಾಗುವುದು. ಮತ್ತಷ್ಟು ಅಭಿವೃದ್ಧಿ ಕಾರ್ಯಗಳಿಗಾಗಿ ₹ 80 ಲಕ್ಷ ಅನುದಾನ ನೀಡುವಂತೆ ಪ್ರವಾಸೋದ್ಯಮ ಇಲಾಖೆಯನ್ನು ಕೋರಲಾಗಿದ್ದು, ಸಚಿವ ಆನಂದ್ ಸಿಂಗ್ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ’ ಎಂದು ಹೇಳಿದರು.

‘ಪ್ರಾಣಿಗಳ ಆರೋಗ್ಯ ರಕ್ಷಣೆಗೆ ಉದ್ಯಾನದಲ್ಲಿ ಸುಸಜ್ಜಿತ ಆಸ್ಪತ್ರೆಗೆ ಮನವಿ ಮಾಡಲಾಗಿದೆ. ಸುಮಾರು ₹ 7 ಕೋಟಿ ವೆಚ್ಚದಲ್ಲಿ ಆಸ್ಪತ್ರೆ ನಿರ್ಮಾಣಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ. ಪಶುಸಂಗೋಪನೆ ಹಾಗೂ ಅರಣ್ಯ ಸಚಿವರ ಜೊತೆಯೂ ಚರ್ಚಿಸಲಾಗಿದೆ’ ಎಂದರು.

ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕಿ ವನಶ್ರೀ, ಕಾರ್ಯನಿರ್ವಾಹಕ ಎಂಜಿನಿಯರ್ ನಾಗೇಂದ್ರಪ್ಪ, ಉಪನಿರ್ದೇಶಕ ಹರೀಶ್, ಆನೆಗಳ ಮೇಲ್ವಿಚಾರಕ ಸುರೇಶ್ ಇದ್ದರು.

‘ಇಲ್ಲದ ಖಾತೆಗೆ ₹ 2.12 ಕೋಟಿ ಪಾವತಿಸಲು ನೋಟಿಸ್’

ಬೆಂಗಳೂರು: ‘ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್‌ನಲ್ಲಿ ಯಾವುದೇ ವ್ಯವಹಾರ ನಡೆಸದಿದ್ದರೂ ₹ 35 ಲಕ್ಷ ಸಾಲಕ್ಕೆ ಬಡ್ಡಿ ಸಹಿತ ₹ 2.12 ಕೋಟಿ ಕಟ್ಟಬೇಕೆಂದು ಬ್ಯಾಂಕ್ ನೋಟಿಸ್ ನೀಡಿದೆ’ ಎಂದು ಹೊಸಕೆರೆಹಳ್ಳಿ ನಿವಾಸಿ ಚಂಪಕವತಿ ಎಂಬುವವರು ದೂರಿದರು.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ನೋಟಿಸ್ ನೀಡಿದ ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್‌ನಲ್ಲಿ ಖಾತೆಯನ್ನು ಹೊಂದಿಲ್ಲ. ಆದರೆ, ಕಳೆದ ಸೆ.3ರಂದು ಬ್ಯಾಂಕ್ ನೋಟಿಸ್ ನೀಡಿದ್ದು, ಬಡ್ಡಿ ಸಹಿತ ಸಾಲವನ್ನು ಮರುಪಾವತಿಸುವಂತೆ ಸೂಚಿಸಿದೆ. ಇದು ಆಘಾತವನ್ನುಂಟು ಮಾಡಿದ್ದು, ಈ ಬಗ್ಗೆ ಪೊಲೀಸ್ ಕಮಿಷನರ್‌ಗೆ ದೂರು ನೀಡಲಾಗಿದೆ. ಬ್ಯಾಂಕ್‌ಗೆ ಕೂಡ ಈ ಬಗ್ಗೆ ಸ್ಪಷ್ಟನೆ ಕೇಳಲಾಗಿದೆ. ಆದರೆ, ಉತ್ತರ ಬಂದಿಲ್ಲ’ ಎಂದು ತಿಳಿಸಿದರು.

‘ನೋಟಿಸ್ ಪ್ರತಿಯಲ್ಲಿ 2011ರ ಮಾರ್ಚ್‌ನಲ್ಲಿ ಸಾಲ ಪಡೆದಿರುವುದಾಗಿ ನಮೂದಿಸಲಾಗಿದೆ. ಖಾತೆ ಹೊಂದಿರದಿದ್ದರೂ ನನ್ನ ಎಲ್ಲ ದಾಖಲೆಗಳು ಬ್ಯಾಂಕ್ ಆಡಳಿತ ಮಂಡಳಿಗೆ ಹೇಗೆ ತಲುಪಿತು ಎನ್ನುವುದು ತಿಳಿಯದಾಗಿದೆ. ಈ ಸಂಬಂಧ ಬ್ಯಾಂಕ್ ಆಡಳಿತ ಮಂಡಳಿಗೆ ವಕೀಲರ ಮೂಲಕ ನೋಟಿಸ್ ನೀಡಿದ್ದೇನೆ. ಇದೇ ರೀತಿ ಹಲವರಿಗೆ ಬ್ಯಾಂಕ್‌ನಿಂದ ನೋಟಿಸ್ ಹೋಗಿರುವ ಸಾಧ್ಯತೆಯಿದೆ. ಈ ಪ್ರಕರಣ ಸಂಪೂರ್ಣ ತನಿಖೆಯಾದಲ್ಲಿ ಸತ್ಯಾಂಶ ತಿಳಿಯಲಿದೆ.’ ಎಂದರು.

ನಿಧನ ವಾರ್ತೆ

ಮುನಿಲಕ್ಷ್ಮಮ್ಮ

ಬೆಂಗಳೂರು: ನಗರದ ಲಕ್ಕಸಂದ್ರದ ಲಾಲ್‌ಜಿ ನಗರದ ನಿವಾಸಿ ಪಿ.ಮುನಿಲಕ್ಷ್ಮಮ್ಮ (80) ಅವರು ಹೃದಯಾಘಾತದಿಂದ ಗುರುವಾರ ನಿಧನರಾದರು. ಅವರು ಕರ್ನಾಟಕ ರಸ್ತೆ ಸಾರಿಗೆ ನಿಗಮದ ನಿವೃತ್ತ ಮುಖ್ಯ ಸಂಚಾರ ನಿಯಂತ್ರಕ ಹಾಗೂ ಕಾಳಿದಾಸ ಗೆಳೆಯರ ಬಳಗದ ಕಾರ್ಯದರ್ಶಿ ಬೀರಪ್ಪ ಅವರ ಪತ್ನಿ. ಅವರಿಗೆ ಇಬ್ಬರು ಪುತ್ರರು ಹಾಗೂ ಮೂವರು ಪುತ್ರಿಯರು ಇದ್ದಾರೆ. ಮೃತರ ಅಂತ್ಯಕ್ರಿಯೆಯು ಹೊಸಕೋಟೆಯ ನೆಲವಾಗಿಲು ಗ್ರಾಮದಲ್ಲಿ ಇದೇ 24ರಂದು (ಶುಕ್ರವಾರ) ಮಧ್ಯಾಹ್ನ 12ಕ್ಕೆ ನಡೆಯಲಿದೆ ಎಂದು ಕುಟುಂಬದ ಸದಸ್ಯರೊಬ್ಬರು ತಿಳಿಸಿದರು.

ಕನ್ನಡ ಕಲಿಯುತ್ತಿರುವ ರಾಜ್ಯಪಾಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಕನ್ನಡ ಕಲಿಯಲು ಮುಂದಡಿ ಇಟ್ಟಿದ್ದಾರೆ.

ಇದೇ ವರ್ಷದ ಜುಲೈನಲ್ಲಿ ರಾಜ್ಯಪಾಲರಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಕನ್ನಡ ಕಲಿಕೆಗೆಆಸಕ್ತಿ ವಹಿಸಿರುವ ಗೆಹಲೋತ್ ಅವರು, ರಾಜಭವನದ ಅಧಿಕಾರಿಗಳು, ಸಿಬ್ಬಂದಿ ಮತ್ತು ನಿಘಂಟುಗಳ ನೆರವಿನೊಂದಿಗೆ ಈ ಪ್ರಯತ್ನ ಕೈಗೊಂಡಿದ್ದಾರೆ.

ರಾಜಭವನದ ಅಧಿಕಾರಿಗಳು ಮತ್ತು ಸಿಬ್ಬಂದಿ ನಿತ್ಯ ಅವರಿಗೆ ಹೊಸ ಶಬ್ದಗಳು ಮತ್ತು ವಾಕ್ಯ ರಚನೆ ಕುರಿತು ಕನ್ನಡ ಕಲಿಸುವ ಪ್ರಯತ್ನದಲ್ಲಿ ತೊಡಗಿದ್ದಾರೆ.ಅಧಿಕಾರಿಗಳು ಮತ್ತು ಸಿಬ್ಬಂದಿ ಜತೆಯೂ ಕನ್ನಡದಲ್ಲೇ ಮಾತನಾಡುವ ಪ್ರಯತ್ನವನ್ನು ರಾಜ್ಯಪಾಲರು ಮಾಡುತ್ತಿದ್ದಾರೆ.

ಮಧ್ಯ ಪ್ರದೇಶದ ಗೆಹಲೋತ್ ಅವರು, ಕನ್ನಡ ಕಲಿಯುವ ಮೂಲಕ ರಾಜ್ಯ ಭಾಷೆಯ ಬಗ್ಗೆ ತಮ್ಮ ಪ್ರೇಮ ವ್ಯಕ್ತಪಡಿಸಿದ್ದಾರೆ ಎಂದು ರಾಜಭವನದ ಅಧಿಕಾರಿಗಳು ‘ಪ್ರಜಾವಾಣಿ’ಗೆ ತಿಳಿಸಿದರು.

ಥಾವರಚಂದ್ ಗೆಹಲೋತ್

ಹಿಂದಿನ ರಾಜ್ಯಪಾಲ ವಜುಭಾಯಿ ವಾಲಾ ಅವರು ಅಧಿವೇಶನದಲ್ಲಿನ ಭಾಷಣ ಸೇರಿದಂತೆ ಎಲ್ಲ ಕಾರ್ಯಕ್ರಮಗಳಲ್ಲಿ ಹಿಂದಿಯಲ್ಲೇ ಭಾಷಣ ಮಾಡುತ್ತಿದ್ದರು. ಅಲ್ಲದೇ, ವಿಧಾನಮಂಡಲದ ಜಂಟಿ ಅಧಿವೇಶನ ಉದ್ದೇಶಿಸಿ ರಾಜ್ಯಪಾಲರು ಮಾಡುತ್ತಿದ್ದ ಭಾಷಣದ ಪ್ರತಿ ಮೊದಲು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಇರುತ್ತಿತ್ತು. ವಾಲಾ ಬಂದ ಬಳಿಕ ಹಿಂದಿಯಲ್ಲಿ ಮುದ್ರಿತವಾದ ಭಾಷಣದ ಪ್ರತಿ ನೀಡುವ ಪದ್ಧತಿ ಜಾರಿಗೆ ಬಂದಿತ್ತು. ಆದರೆ, ರಾಜಭವನದಿಂದ ಹೊರಡಿಸುತ್ತಿದ್ದ ಪತ್ರಿಕಾ ಪ್ರಕಟಣೆಗಳು ಅಲ್ಲಿಯವರೆಗೆ ಇಂಗ್ಲಿಷ್‌ನಲ್ಲಿ ಇರುತ್ತಿದ್ದವು. ವಾಲಾ ಬಂದ ಬಳಿಕ ಹಿಂದಿ ಮತ್ತು ಕನ್ನಡದಲ್ಲೂ ಪ್ರಕಟಣೆಗಳನ್ನು ಹೊರಡಿಸಲಾಗುತ್ತಿತ್ತು.

ಅದಕ್ಕೂ ಮೊದಲು ರಾಜ್ಯಪಾಲರಾಗಿದ್ದ ಎಚ್.ಆರ್. ಭಾರದ್ವಾಜ್ ಅವರು, ಕನ್ನಡ ಕಲಿಯುವುದಾಗಿ ಹೇಳಿಕೊಂಡಿದ್ದರು. ಆದರೆ ಕಲಿತಿರಲಿಲ್ಲ. ರಾಜ್ಯಪಾಲರಾಗಿದ್ದ ವಿ.ಎಸ್. ರಮಾದೇವಿ ಕನ್ನಡದಲ್ಲೇ ಮಾತನಾಡುತ್ತಿದ್ದರು.

ದಾಖಲೆ ತಿದ್ದುಪಡಿ ಸಾಬೀತು: ಶಿಕ್ಷಕನಿಗೆ ಕಡ್ಡಾಯ ನಿವೃತ್ತಿ

ಪ್ರಜಾವಾಣಿ ವಾರ್ತೆ

ಮಧುಗಿರಿ: ಶಿಕ್ಷಕರೊಬ್ಬರು ಕಂದಾಯ ಇಲಾಖೆಯ ದಾಖಲೆಯನ್ನು ತಿದ್ದಿರುವ ಆರೋಪ ಸಾಬೀತಾಗಿದ್ದು, ಲೋಕಾಯುಕ್ತರು ನೀಡಿದ ದೂರಿನ ಮೇರೆಗೆ ಆ ಶಿಕ್ಷಕರಿಗೆ ಕಡ್ಡಾಯ ನಿವೃತ್ತಿ ನೀಡಿ ಅದೇಶಿಸಲಾಗಿದೆ.

ಮಧುಗಿರಿ ತಾಲ್ಲೂಕಿನ ಮಿಡಿಗೇಶಿ ಹೋಬಳಿಯ ಗೊಲ್ಲರಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಶಿಕ್ಷಕ ಕೆ.ಕೆಂಪಯ್ಯ ಅವರನ್ನು ಬುಧವಾರ ಶಿಕ್ಷಣ ಇಲಾಖೆಯ ಅಧಿಕಾರಿಗಳ ಸಮ್ಮುಖದಲ್ಲಿ ಕಡ್ಡಾಯ ನಿವೃತ್ತಿಗೊಳಿಸಿ ಶಾಲೆಯಿಂದ ಬಿಡುಗಡೆ ಮಾಡಲಾಯಿತು.

ಶಿಕ್ಷಕ ಕೆ.ಕೆಂಪಯ್ಯ ನೇರಳೆಕೆರೆ ಗ್ರಾಮದ ಸರ್ವೆ ನಂಬರ್ 88/3ರ ಜಮೀನಿಗೆ ಸಂಬಂಧಿಸಿದ ಎಂ.ಆರ್. ರಿಜಿಸ್ಟರ್‌ನಲ್ಲಿ ಬಾದಯ್ಯ ಬಿನ್ ಅವನಪ್ಪ ಎಂದು ಇರುವುದನ್ನು ಬಾದಯ್ಯ ಬಿನ್ ಮಾಸಣ್ಣ ಎಂದು ತಿದ್ದಿದ್ದಾರೆ. ಈ ಸಂಬಂಧ ಗೊಲ್ಲರಹಟ್ಟಿಯ ಈರಣ್ಣ ಬಿನ್ ಅವನಪ್ಪ ಅವರು ತಹಶೀಲ್ದಾರ್ ಮತ್ತು ಪೋಲಿಸರಿಗೆ ದೂರು ಸಲ್ಲಿಸಿದ್ದರು. ಆದರೆ ಕೆಂಪಯ್ಯ ಅವರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದ ಕಾರಣ ಲೋಕಾಯುಕ್ತ ಇಲಾಖೆಗೆ ದೂರು ನೀಡಿದ್ದರು.

ಘಟನೆಯ ವಿವರ: 2003ರ ಏಪ್ರಿಲ್ 22ರಂದು ಕೆಂಪಯ್ಯ ತಾಲ್ಲೂಕು ಕಚೇರಿಯ ದಾಖಲೆ ವಿಭಾಗದ ಎಫ್‌ಡಿಸಿ ಬಳಿ ತೆರಳಿ ಸರ್ವೆ ನಂಬರ್ 88/3 ರಿಜಿಸ್ಟರ್ ಕೇಳಿ ಪಡೆದಿದ್ದಾರೆ. ಎಫ್‌ಡಿಸಿ ಅವರು ಬೇರೆ ಕೆಲಸದಲ್ಲಿ ನಿರತರಾಗಿದ್ದಾಗ ಎಂ.ಆರ್ ರಿಜಿಸ್ಟರ್‌ನಲ್ಲಿ ಹೆಸರನ್ನು ತಿದ್ದಿದ್ದರು. ಆರೋಪ ಸಾಬೀತಾದ ಕಾರಣ ಶಿಕ್ಷಣ ಇಲಾಖೆ (ಪ್ರಾಥಮಿಕ) ಅಧೀನ ಕಾರ್ಯದರ್ಶಿ ಎಚ್.ಎಸ್. ಶಿವಕುಮಾರ್ ಅವರು ಕಡ್ಡಾಯ ನಿವೃತ್ತಿಗೆ ಆದೇಶಿಸಿದ್ದಾರೆ. ಈ ಆದೇಶದನ್ವಯ ಮಧುಗಿರಿ ಬಿಇಒ ಶಾಲೆಗೆ ತೆರಳಿ ಶಿಕ್ಷಕನನ್ನು ಬುಧವಾರ ಶಾಲೆಯಿಂದ ಬಿಡುಗಡೆಗೊಳಿಸಿದ್ದಾರೆ.

ಅಕಾಲಿಕ ಹೂ ತೆಗೆದ ಮಾವು ಬೆಳೆಗಾರ

● ಆರ್.ಚೌಡರೆಡ್ಡಿ

ಶ್ರೀನಿವಾಸಪುರ: ತಾಲ್ಲೂಕಿನ ನೀಲಟೂರು ಗ್ರಾಮದ ಮಾವು ಬೆಳೆಗಾರರೊಬ್ಬರು ವೈಜ್ಞಾನಿಕ ವಿಧಾನ ಬಳಸಿ ಅಕಾಲದಲ್ಲಿ ಮಾವಿನ ಹೂ ತೆಗೆಯುವುದರ ಮೂಲಕ ಗಮನ ಸೆಳೆದಿದ್ದಾರೆ.

ಪ್ರಗತಿಪರ ರೈತ ಚಂದ್ರಶೇಖರ್ ಕಳೆದ ಏಪ್ರಿಲ್‌ನಲ್ಲಿ ಮಾವಿನ ಮರಗಳ ಬುಡದ ಸುತ್ತಲೂ 'ಕಲ್ಟಾರ್' ಎಂಬ ಔಷಧಿ ಸುರಿಯುವ ಮೂಲಕ ಅಕಾಲದಲ್ಲಿ ಮಾವಿನ ಫಸಲು ಪಡೆಯುವ ಪ್ರಯತ್ನ ಮಾಡಿದ್ದರು. ಈಗ ಅವರ ಪ್ರಯತ್ನ ಸಫಲವಾಗಿದೆ. ಮರಗಳು ಹೂವನ್ನು ಮುಡಿಗೇರಿಸಿಕೊಂಡು ಕಂಗೊಳಿಸುತ್ತಿವೆ.

ಕೃಷಿ ಹಾಗೂ ತೋಟಗಾರಿಕಾ ಕ್ಷೇತ್ರದಲ್ಲಿ ಪ್ರಯೋಗಶೀಲರಾದ ಚಂದ್ರಶೇಖರ್, ಪ್ರತಿವರ್ಷ ಮಾವಿನ ಕಾಯಿ ಬೆಲೆ ಕುಸಿತದಿಂದ ಬೇಸತ್ತು ಆನ್‌ಲೈನ್ ಮೂಲಕ ಮಾವು ವಹಿವಾಟು ಮಾಡಿ ಲಾಭ ಮಾಡಿಕೊಂಡಿದ್ದರು. ಅಕಾಲದಲ್ಲಿ ಮಾವು ಬೆಳೆದು ಉತ್ತಮ ಬೆಲೆ ಪಡೆಯುವ ಬಗ್ಗೆ ಚಿಂತನೆ ನಡೆಸಿದರು. ಅದಕ್ಕೆ ಪೂರಕವಾಗಿ ಮಾವು ತಜ್ಞರನ್ನು ಭೇಟಿ ಮಾಡಿ ಚರ್ಚಿಸಿದರು. ತಜ್ಞರ ಸಲಹೆಯಂತೆ 'ಕಲ್ಟಾರ್' ಔಷಧಿ ಬಳಸಿದರು.

ನಿರೀಕ್ಷೆಯಂತೆ 'ಕಲ್ಟಾರ್' ಭೂಮಿಗೆ ಸೇರಿಸಿದ 90 ದಿನಗಳಲ್ಲಿ ಮರಗಳಲ್ಲಿ ಹೂ ಬಂದಿತ್ತು. ಆದರೆ, ಆ ಸಮಯದಲ್ಲಿ ಸುರಿದ ಭಾರಿ ಮಳೆಯಿಂದಾಗಿ ಹೂ ಉದುರಿ ನೆಲಕಚ್ಚಿತು. ಆದರೆ, ಕಲ್ಟಾರ್ ಪ್ರಭಾವದಿಂದಾಗಿ ಮತ್ತೆ ಹೂ ಬಂದಿದೆ. ಹೂ ಆರೋಗ್ಯವಾಗಿದೆ. ಶಿಲೀಂಧ್ರನಾಶಕ ಸಿಂಪಡಣೆ ಮಾಡಿದರೆ ಸಾಕು ಕಾಯಿ ಕಟ್ಟುತ್ತದೆ ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಜಿಲ್ಲೆಯಲ್ಲಿಯೇ ಮೊದಲ ಬಾರಿಗೆ ಪ್ರಯೋಗಾತ್ಮಕವಾಗಿ ಎರಡೂವರೆ ಎಕರೆ ವಿಸ್ತೀರ್ಣದಲ್ಲಿ ಬೆಳೆಯಲಾಗಿರುವ ಮಾವಿನ ಮರಗಳಿಗೆ 'ಕಲ್ಟಾರ್' ಬಳಸಿ ಹೂ ತರಿಸಿದ್ದಾರೆ. ಡಿಸೆಂಬರ್‌ನಲ್ಲಿ ಫಸಲು ಬರುವ ನಿರೀಕ್ಷೆಯಿದೆ. ಅಂದರೆ ಅದು ಸ್ವಲ್ಪ ಹೆಚ್ಚು ಕಡಿಮೆ ಸಕಾಲಿಕ ಹೂ ಬರುವ ಕಾಲ. ಸಾಮಾನ್ಯವಾಗಿ ಡಿಸೆಂಬರ್ ಕೊನೆ ಅಥವಾ ಜನವರಿಯಲ್ಲಿ ಮಾವಿನ ಹೂ ಬರುತ್ತದೆ.

'ಹೂ ಬರುವ ಕಾಲದಲ್ಲಿ ಕಾಯಿ ಕೊಯ್ಲಿಗೆ ಬರುತ್ತದೆ. ಹಾಗಾಗಿ ಮಾವಿನ ಹಣ್ಣಿಗೆ ಒಳ್ಳೆಯ ಬೆಲೆ ಸಿಗುತ್ತದೆ. ತೋತಾಪುರಿ ಜಾತಿಯ ಮಾವು ಕೆ.ಜಿಯೊಂದಕ್ಕೆ ₹ 70 ರಿಂದ ₹ 100 ರವರೆಗೆ ಮಾರಾಟವಾಗುವ ನಿರೀಕ್ಷೆ ಇದೆ. ಕಳೆದ ವರ್ಷ ತಮಿಳುನಾಡಿನಲ್ಲಿ ಅಕಾಲದಲ್ಲಿ ಬೆಳೆದ ತೋತಾಪುರಿ ಮಾವು ಕೆ.ಜಿಯೊಂದಕ್ಕೆ ₹ 140 ಹಾಗೂ ಬಾದಾಮಿ ಮಾವು ₹ 280ರಂತೆ ಮಾರಾಟವಾಗಿತ್ತು' ಎಂದು ಚಂದ್ರಶೇಖರ್ ಮಾಹಿತಿ ನೀಡಿದರು.

'ವೈಜ್ಞಾನಿಕ ವಿಧಾನ ಬಳಸಿ ವರ್ಷಕ್ಕೆ ಎರಡು ಮಾವಿನ ಫಸಲು ಪಡೆದುಕೊಳ್ಳಬಹುದು. ಆದರೆ, ಮರಗಳ ಹಿತದೃಷ್ಟಿಯಿಂದ ವರ್ಷ ಬಿಟ್ಟು ವರ್ಷ ಅಕಾಲಿಕ ಫಸಲು ಬೆಳೆಯುವುದು ಕ್ಷೇಮಕರ. ಅಕಾಲಿಕ ಮಾವು ಮಾರಾಟಕ್ಕೆ ಮಾರುಕಟ್ಟೆ ಸಮಸ್ಯೆ ಉಂಟಾಗುವುದಿಲ್ಲ. ಮಾವಿನ ಕಾಯಿ ಅಪರೂಪವಾಗಿರುವ ಸಂದರ್ಭದಲ್ಲಿ ಮಾವು ಪ್ರಿಯರು ಖರೀದಿಗೆ ಮುಗಿಬೀಳುತ್ತಾರೆ. ಆನ್‌ಲೈನ್ ವ್ಯವಹಾರದಿಂದ ಹೆಚ್ಚು ಲಾಭಗಳಿಸಬಹುದಾಗಿದೆ' ಎಂದರು.

'ಬೇರೆ ಬೇರೆ ಕಾರಣಗಳಿಂದ ಪ್ರತಿವರ್ಷ ಮಾವಿನ ಬೆಲೆ ಕುಸಿತಕ್ಕೆ ಒಳಗಾಗುತ್ತಿದೆ. ಮಾವು ಬೆಳೆಗಾರರು ನಷ್ಟ ಅನುಭವಿಸುತ್ತಿದ್ದಾರೆ. ವೈಜ್ಞಾನಿಕ ವಿಧಾನ ಅನುಸರಿಸಿ, ಅಕಾಲದಲ್ಲಿ ಫಸಲು ತೆಗೆದರೆ ಕಷ್ಟಕ್ಕೆ ತಕ್ಕ ಪ್ರತಿಫಲ ಸಿಗುವ ನಿರೀಕ್ಷೆ ಇದೆ. ಚಂದ್ರಶೇಖರ್ ಅವರ ತೋಟದಲ್ಲಿ ಅಕಾಲದಲ್ಲಿ ಬಂದಿರುವ ಹೂ ಇತರ ಮಾವು ಬೆಳೆಗಾರರ ಕಣ್ಣು ಕುಕ್ಕುತ್ತಿದೆ. ಅವರು ಮಾಡಿರುವ ಪ್ರಥಮ ಪ್ರಯತ್ನ ಇತರ ರೈತರಿಗೆ ಪ್ರೇರಣೆ ಆಗುವುದರಲ್ಲಿ ಎರಡು ಮಾತಿಲ್ಲ' ಎನ್ನುತ್ತಾರೆ ಮಾವು ಕೃಷಿಕ ಎನ್. ಶ್ರೀರಾಮರೆಡ್ಡಿ.

ಬಳಕೆಗೆ ವಿವೇಚನೆ ಅಗತ್ಯ: 'ಕಲ್ಟಾರ್ ಅನ್ನು ವಿವೇಚನೆಯಿಂದ ಬಳಸಬೇಕು. ಅಕಾಲದಲ್ಲಿ ಫಲ ಪಡೆದು ಲಾಭಗಳಿಸುವ ಉದ್ದೇಶದಿಂದ ಅತಿಯಾಗಿ ಬಳಸಿದರೆ ಮರಗಳು ಸಹಜವಾಗಿ ಹೂ ಬಿಡುವ ಶಕ್ತಿ ಕಳೆದುಕೊಳ್ಳುವ ಅಪಾಯವಿದೆ. ಆಯಸ್ಸು ಕಡಿಮೆ ಆಗಬಹುದು. ಅನಿವಾರ್ಯ ಸಂದರ್ಭದಲ್ಲಿ ಮಾತ್ರ ಈ ಔಷಧ ಬಳಸಬೇಕು. 5 ರಿಂದ 6 ವರ್ಷಗಳಿಗೊಮ್ಮೆ ಈ ಔಷಧ ಬಳಸಿದರೆ ಒಳ್ಳೆಯದು. ಇಂತಹ ಹಣ್ಣು ಸೇವನೆಯಿಂದ ದೇಹದ ಮೇಲೆ ಯಾವುದೇ ದುಷ್ಪರಿಣಾಮ ಉಂಟಾಗುವುದಿಲ್ಲ' ಎಂದು ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕ ಶ್ರೀನಿವಾಸ್ 'ಪ್ರಜಾವಾಣಿ'ಗೆ ತಿಳಿಸಿದರು.

'ಏನಿದು ಕಲ್ಟಾರ್?'

ಕಲ್ಟಾರ್ ಮರಗಳಲ್ಲಿ ಹೂ ಬರುವಂತೆ ಮಾಡುವ ಒಂದು ಹಾರ್ಮೋನ್. ಮುಖ್ಯವಾಗಿ ಬರಡಾದ ಯಾವುದೇ ಹಣ್ಣಿನ ಮರಗಳಲ್ಲಿ ಹೂ ತರಿಸಲು ಬಳಸಲಾಗುತ್ತದೆ. ಇದು ಕೀಟನಾಶಕ ಮಾರಾಟ ಮಾಡುವ ಅಂಗಡಿಗಳಲ್ಲಿ ಸಿಗುತ್ತದೆ.

ಇದನ್ನು ಪ್ರತಿ ಲೀಟರ್ ನೀರಿಗೆ 1 ಎಂಎಲ್‌ನಂತೆ ಬೆರೆಸಬೇಕು. ಮಾವಿನ ಮರದ ಬುಡದ ಸುತ್ತ 7 ರಿಂದ 8 ಅಡಿ ದೂರದಲ್ಲಿ ಒಂದು ಅಡಿ ಆಳದ ಕಾಲುವೆ ನಿರ್ಮಿಸಿ ಫಸಲು ಕೊಡುವ ಮರದ ವಯಸ್ಸಿಗೆ ತಕ್ಕಂತೆ 12 ರಿಂದ 15 ಲೀಟರ್ ದ್ರಾವಣವನ್ನು ಕಾಲುವೆಯಲ್ಲಿ ಸುರಿದು ಮಣ್ಣು ಮುಚ್ಚಬೇಕು. ತೇವಾಂಶ ಇರುವಂತೆ ನೋಡಿಕೊಳ್ಳಬೇಕು. ಔಷಧೋಪಚಾರ ಮಾಡಿದ 90 ದಿನಗಳಲ್ಲಿ ಹೂ ಬರುತ್ತದೆ.

ಚಂದ್ರಶೇಖರ್

ಭಾರತ್ ಬಂದ್: ರೈತ ಸಂಘ ಬೆಂಬಲ

ಬೆಂಗಳೂರು: 'ರೈತವಿರೋಧಿ ಕೃಷಿ ಕಾಯ್ದೆಗಳನ್ನು ಹಿಂಪಡೆಯಬೇಕು' ಎಂದು ಒತ್ತಾಯಿಸಿ ಸಂಯುಕ್ತ ಕಿಸಾನ್ ಮೋರ್ಚಾ ಇದೇ 27ಕ್ಕೆ ಕರೆ ನೀಡಿರುವ ಭಾರತ್ ಬಂದ್‌ಗೆ ಅಖಂಡ ಕರ್ನಾಟಕ ರೈತ ಸಂಘ ಬೆಂಬಲ ನೀಡಿದೆ. ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ರಾಜ್ಯ ಘಟಕದ ಅಧ್ಯಕ್ಷ ಸಿದ್ದನಗೌಡ ಎಸ್. ಪಾಟೀಲ ಮಾತನಾಡಿ, 'ಭಾರತ್ ಬಂದ್ ಯಶಸ್ವಿಯಾಗಲು ಪೂರ್ಣ ಪ್ರಮಾಣದ ಸಹಕಾರ ನೀಡುತ್ತೇವೆ. ಅಂದು ರೈತರಿಂದ ಪಥಸಂಚಲನವನ್ನೂ ಏರ್ಪಡಿಸಲಾಗುತ್ತದೆ. ಈ ಮೂಲಕ ಕೇಂದ್ರ ಸರ್ಕಾರಕ್ಕೆ ಸೂಕ್ತ ಸಂದೇಶ ರವಾನಿಸಲಾಗುವುದು' ಎಂದರು. 'ಕೇಂದ್ರ ಸರ್ಕಾರವು ರೈತ ವಿರೋಧಿ ಧೋರಣೆ ತಾಳಿದೆ. ಇದರ ಭಾಗವಾಗಿ ರೈತರ ಜಮೀನುಗಳನ್ನು ಖಾಸಗಿ ಸಂಸ್ಥೆಗಳಿಗೆ ಒಪ್ಪಿಸುವ ಸಂಚು ನಡೆದಿದೆ' ಎಂದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	114.35	4,199	7,820
ಹಾರಂಗಿ	2,859	2,858.63	1,136	1,450
ಕಬಿನಿ	2284.00	2,283.2	1,000	1,500
ಹೇಮಾವತಿ	2,922	2,915.74	3,479	5,192
ಲಿಂಗನಮಕ್ಕಿ	1,819	1,816.10	3,025	-
ಸೂಪಾ (ಮೀ)	564	557.04	2,588	2,141
ಮಾಣಿ	594	587.74	1,443	-
ತುಂಗಭದ್ರಾ	1,633	1,632.90	10,748	10,569
ಮಲಪ್ರಭಾ	2079.5	2,079.30	98	1,694
ಘಟಪ್ರಭಾ	2175	2,175.00	3,284	3,284
ಭದ್ರಾ	186	185.30	3,320	3,621
ಆಲಮಟ್ಟಿ (ಮೀ)	519.6	519.60	11,097	11,097
ನಾರಾಯಣಪುರ (ಮೀ)	492.25	492.15	14,000	3,900

*ನೆಲಮಟ್ಟದಿಂದ

ಪರಸ್ಪರ ಅಂತರ ಕಾಯ್ದುಕೊಳ್ಳಿ

ಮಳೆಗೆ ಹೊಸಪೇಟೆ ತಾಲ್ಲೂಕಿನ ಕಮಲಾಪುರದಲ್ಲಿ ಬಾಲರಾಜ್ ನಾಯಕರ ನರಸಿಂಹ ಅವರ ಮನೆಗೆ ಹಾನಿಯಾಗಿದೆ

ಸತತ ಮಳೆ: ಮನೆಗೆ ಹಾನಿ

ಹುಬ್ಬಳ್ಳಿ: ಹೊಸಪೇಟೆ ನಗರ ಸೇರಿದಂತೆ ಗ್ರಾಮೀಣ ಭಾಗಗಳಲ್ಲಿ ಸತತ ಮೂರನೇ ದಿನ ಗುರುವಾರವೂ ಮಳೆ ಮುಂದುವರೆದಿದೆ.

ಸತತ ಸುರಿಯುತ್ತಿರುವ ಮಳೆಗೆ ಜನಜೀವನ ಅಸ್ತವ್ಯಸ್ತಗೊಂಡಿದೆ. ತಾಲ್ಲೂಕಿನ ಕಮಲಾಪುರದ ಆರನೇ ವಾರ್ಡ್‌ನಲ್ಲಿ ಮನೆಯೊಂದಕ್ಕೆ ಹಾನಿಯಾಗಿದೆ. ಗೋಡೆ ಕುಸಿದು ಚಾವಣಿಯ ಸಿಮೆಂಟ್ ಶೀಟ್‌ಗಳು ಮುರಿದು ಬಿದ್ದಿವೆ. ತಾಲ್ಲೂಕಿನ ಕಡ್ಡಿರಾಂಪುರ, ಹೊಸೂರು, ಹಂಪಿಯಲ್ಲಿ ಬಾಳೆತೋಟಕ್ಕೆ ನೀರು ನುಗ್ಗಿದೆ.

ಬಾಗಲಕೋಟೆ ಜಿಲ್ಲೆಯ ಕೆರೂರ ಪಟ್ಟಣದಲ್ಲಿ ಎರಡು ತಾಸು ಧಾರಾಕಾರವಾಗಿ 'ಉತ್ತರಿ' ಮಳೆ ಸುರಿಯಿತು.

ಕಲಬುರ್ಗಿ ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಗುರುವಾರ ಸಂಜೆ ಧಾರಾಕಾರ ಮಳೆಯಾಯಿತು. ಯಾದಗಿರಿ ನಗರ ಸೇರಿ ಶಹಾಪುರ, ಸುರಪುರ ಮತ್ತು ಹುಣಸಗಿಯಲ್ಲಿ ಉತ್ತಮ ಮಳೆಯಾಯಿತು.

ಲಸಿಕಾ ಅಭಿಯಾನ: ಸಿಬ್ಬಂದಿಗೆ ಭಾನುವಾರ ವಿರಾಮ

ಬೆಂಗಳೂರು: ಕೋವಿಡ್ ಲಸಿಕಾ ಅಭಿಯಾನದಲ್ಲಿ ನಿರತರಾಗಿರುವ ಸಿಬ್ಬಂದಿ ಇನ್ನು ಮುಂದೆ ಭಾನುವಾರ ವಿರಾಮ ಪಡೆಯುವಂತೆ ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕಿ ಅರುಂಧತಿ ಚಂದ್ರಶೇಖರ್ ಸೂಚಿಸಿದ್ದಾರೆ.

ಈ ಬಗ್ಗೆ ಅವರು ಸುತ್ತೋಲೆ ಹೊರಡಿಸಿದ್ದು, 'ಕಳೆದ ಜ.16ರಿಂದ ಲಸಿಕಾ ಅಭಿಯಾನವನ್ನು ರಾಜ್ಯದಲ್ಲಿ ನಡೆಸಲಾಗುತ್ತಿದೆ. ಹಂತ ಹಂತವಾಗಿ ಲಸಿಕೆಯನ್ನು ಫಲಾನುಭವಿಗಳಿಗೆ ಒದಗಿಸಲಾಗುತ್ತಿದೆ. ಈ ಕಾರ್ಯಕ್ಕೆ ಆರೋಗ್ಯ ಸಿಬ್ಬಂದಿ ನಿರಂತರ ಶ್ರಮಿಸುತ್ತಿದ್ದಾರೆ. ಅವರು ಭಾನುವಾರ ವಿರಾಮ ಪಡೆಯಬಹುದಾಗಿದೆ' ಎಂದು ತಿಳಿಸಿದ್ದಾರೆ.

ರಾಜ್ಯದಲ್ಲಿ ಗುರುವಾರ 1.93 ಲಕ್ಷ ಡೋಸ್‌ಗಳಷ್ಟು ಲಸಿಕೆಯನ್ನು ವಿತರಿಸಲಾಗಿದೆ. 4,870 ಸರ್ಕಾರಿ ಕೇಂದ್ರಗಳು ಹಾಗೂ 385 ಖಾಸಗಿ ಆಸ್ಪತ್ರೆಗಳಲ್ಲಿ ಲಸಿಕೆ ವಿತರಿಸಲಾಗಿದೆ. ಈವರೆಗೆ ನೀಡಲಾದ ಲಸಿಕೆಯ ಒಟ್ಟು ಡೋಸ್‌ಗಳ ಸಂಖ್ಯೆ 5.39 ಕೋಟಿ ದಾಟಿದೆ. 3.82 ಕೋಟಿ ಮಂದಿ ಮೊದಲ ಡೋಸ್ ಹಾಗೂ 1.56 ಕೋಟಿ ಮಂದಿ ಎರಡನೇ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ.

ಹಾವೇರಿಯಲ್ಲೂ 'ದೆಹಲಿ ಮಾದರಿ ಚಳವಳಿ'

ಪ್ರಜಾವಾಣಿ ವಾರ್ತೆ



ಮಾಲತೇಶ ಪೂಜಾರ

ಹಾವೇರಿ: 'ರೈತರ ವಿವಿಧ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರ ತವರು ಕ್ಷೇತ್ರ ಶಿಗ್ಗಾವಿ–ಸವಣೂರಿನಲ್ಲಿ ಟೆಂಟ್ ಹಾಕಿ, 'ದೆಹಲಿ ಮಾದರಿ'ಯಲ್ಲೇ ಚಳವಳಿ ಆರಂಭಿಸುತ್ತೇವೆ' ಎಂದು ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಮಾಲತೇಶ ಪೂಜಾರ ತಿಳಿಸಿದರು.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, 'ರೈತರಿಗೆ ಮಾರಕವಾಗಿರುವ ಮೂರು ಕೃಷಿ ಕಾನೂನುಗಳನ್ನು ರದ್ದುಪಡಿಸಬೇಕು. ರೈತರ ಮೇಲೆ ಹಣಕಾಸು ಸಂಸ್ಥೆಗಳು ನಡೆಸುತ್ತಿರುವ ದಬ್ಬಾಳಿಕೆ ತಡೆಗಟ್ಟಬೇಕು, ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ಹಾಗೂ ಖರೀದಿ ಕೇಂದ್ರ ತೆರೆಯಬೇಕು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು. ಈ ಬಗ್ಗೆ ಕೋಡಿಹಳ್ಳಿ ಚಂದ್ರಶೇಖರ್ ನೇತೃತ್ವದ ರಾಜ್ಯ ಸಮಿತಿ ಶೀಘ್ರ ದಿನಾಂಕ ಪ್ರಕಟಿಸಲಿದೆ' ಎಂದು ಹೇಳಿದರು.

ಕರ್ನಾಟಕ ಸರ್ಕಾರ
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ
(An Autonomous Institute of Govt. Of Karnataka)
SRI CHAMARAJENDRA HOSPITAL CAMPUS, HASSAN-573201
Website: www.hims-hassan.org Phone/Fax No.08172-231699/231599
ಇ-ಟೆಂಡರ್ ಪ್ರಕಟಣೆ
ಕ್ರ.ಸಂ.01)ಟೆಂಡರ್ ಅಧಿಸೂಚನೆ ಸಂಖ್ಯೆ: ಹಿಮ್ಸ್/ಎಸ್‌ಸಿಹೆಚ್/ಡ್ರಗ್ಸ್/ಟಿಡಿಆರ್/30/2021–22 ವಿವರ:ಹಿಮ್ಸ್ ಸಂಸ್ಥೆಯ ಬೋಧಕ ಆಸ್ಪತ್ರೆಗೆ ಔಷಧಿ ಮತ್ತು ಇತರೆ ಪರಿಕರಗಳನ್ನು ಇ-ಟೆಂಡರ್ ಮೂಲಕ ಸರಬರಾಜು ಪಡೆಯುವ ಬಗ್ಗೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆ ದಿನಾಂಕ: **24.09.2021** ರಿಂದ **25.10.2021** ರವರೆಗೆ. ಅಂದಾಜು ಮೊತ್ತ: **195.86** ಲಕ್ಷಗಳು. ಇ.ಎಂ.ಡಿ ಮೊತ್ತ:ಇಲ್ಲ. ಟೆಂಡರ್ ಪ್ರಕ್ರಿಯೆ ದಿನಾಂಕಗಳನ್ನು ಹಾಗೂ ಇತರೆ ವಿವರಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಂ ಮುಖಾಂತರ https://www.eproc.karnataka.gov.in ವೆಬ್‌ಸೈಟ್ ನಲ್ಲಿ ವೀಕ್ಷಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕಛೇರಿ ಕೆಲಸದ ವೇಳೆಯಲ್ಲಿ (ರಜಾ ದಿನಗಳನ್ನು ಹೊರತುಪಡಿಸಿ) ಸಂಪರ್ಕಿಸಬಹುದಾಗಿದೆ.
ಸಹಿ/– ಮುಖ್ಯ ಆಡಳಿತಾಧಿಕಾರಿಗಳು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.
ವಾಸಾಸಂಇ/ಹಿಸನಿ/ಹಾಸನ/ಎಂಸಿಎ/409/2021–22

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
Ref: 1)No: EE /KNNL/UTP/DN/TND/Roads and Drains/PB-2/2021-22/ 1779 Date:- 17 -09 -2021
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮುಖಾಂತರ)
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು ಇವರು ಇ-ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮುಖಾಂತರ ಲೆಕ್ಕ ಶೀರ್ಷಿಕೆ 4701 ರಡಿ Asphalt Road, Concrete Road, Drain & Building (13 works) ಕಾಮಗಾರಿಗಳನ್ನು ದ್ವಿ-ಲಖೋಟೆ ಪದ್ಧತಿಯಡಿ ಶೇಕಡಾವಾರು ಟೆಂಡರ್‌ಗಳನ್ನು ನೊಂದಾಯಿತ KPWD Class-I or Category-III enrolled under KNNL & above for SL No 4 & Category-III enrolled under KNNL & above for SL No 1 to 13 (Except SL No 4) ಅರ್ಹ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ.
ಸದರಿ ಕಾಮಗಾರಿಗಳ ಕನಿಷ್ಠ ರೂ. 79.88 ಲಕ್ಷ (GST ಸೇರಿ) ರಿಂದ ಗರಿಷ್ಠ ಮೊತ್ತ ರೂ. 499.63 ಲಕ್ಷ (GST ಸೇರಿ) ಹಾಗೂ ಇ.ಎಮ್.ಡಿ. ಕನಿಷ್ಠ ರೂ. 0.80 ಲಕ್ಷ ರಿಂದ ಗರಿಷ್ಠ ಮೊತ್ತ ರೂ 5.00 ಲಕ್ಷ ಮತ್ತು ಕ್ರಮವಾಗಿ ಇರುತ್ತದೆ. ಟೆಂಡರ್ ಪ್ರಕ್ರಿಯೆ ಶುಲ್ಕವನ್ನು (ಹಿಂದಿರುಗಿಸಲಾಗದ್ದು) www.eproc.karnataka.gov.in ನಲ್ಲಿ ನೋಡಿಕೊಂಡು ತುಂಬತಕ್ಕದ್ದು. ಟೆಂಡರ್ ಅಕ್ಸೆಸ್ ಮಾಡುವ ದಿನಾಂಕ: 23.09.2021 ರಿಂದ 01.10.2021 ಸಂಜೆ 5.30 ರ ವರೆಗೆ ಇರುವುದು. ಟೆಂಡರ್‌ನ ಬಗ್ಗೆ ವಿಚಾರಣೆಗೆ ಕೊನೆಯ ದಿನಾಂಕ 30–09–2021 ಸಂಜೆ 5.00 ರ ವರೆಗೆ ಇರುತ್ತದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ಇ-ಪ್ರೊಕ್ಯುರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ 01–10–2021 ಸಂಜೆ 5.30 ರ ವರೆಗೆ ಸಲ್ಲಿಸತಕ್ಕದ್ದು. ತಾಂತ್ರಿಕ ಬಿಡ್‌ನ್ನು ದಿ: 04–10–2021 ಬೆಳಿಗ್ಗೆ 11.35 ರ ಗಂಟೆಗೆ ಮತ್ತು ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್ಡಿನ ಅನುಮೋದನೆ ಪಡೆದ ನಂತರ ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೆಬೆನ್ನೂರು ಇವರ ಕಚೇರಿಯಲ್ಲಿ ತೆರೆಯಲಾಗುವುದು.
ಸದರಿ ಟೆಂಡರ್‌ನಲ್ಲಿ ಏನಾದರೂ ತಿದ್ದುಪಡಿ ಮಾಡಿದಲ್ಲಿ ಇ-ಪ್ರೊಕ್ಯುರ್‌ಮೆಂಟ್ ಪೋರ್ಟಲ್‌ನಲ್ಲಿ/ದಿನ ಪತ್ರಿಕೆಗಳಲ್ಲಿ ಪ್ರಚುರ ಪಡಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂ. (08373) 267071 ಕ್ಕೆ ಸಂಪರ್ಕಿಸುವುದು. ಷರತ್ತು ಬದ್ಧ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಟೆಂಡರ್ ಅಂಗೀಕರಿಸುವ ಅಧಿಕಾರಿಯು ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ರದ್ದು ಪಡಿಸುವ ಅಧಿಕಾರ ಹೊಂದಿರುತ್ತಾರೆ.
ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ
ಸರ್ ಸಿದ್ದಪ್ಪ ಕಂಬಳಿ ರಸ್ತೆ ದೂರವಾಣಿ : 2213898, 2213888 website : www.hdmc.gov.in
ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ)
ಪತ್ರ ಸಂಖ್ಯೆ ನಂ. ಎಚ್‌ಡಿಎಮ್‌ಸಿ/61/12/2021–22 ದಿನಾಂಕ : 23–09–2021
ಅಲ್ಪಾವಧಿ ಇ–ಟೆಂಡರ ಅಧಿಸೂಚನೆ
ಉಲ್ಲೇಖ : ಜಾಹಿರಾತು ನಂ : 222 ದಿನಾಂಕ : 25–06–2021
ಜಾಹಿರಾತು ನಂ : 288 ದಿನಾಂಕ : 09–07–2021
ಜಾಹಿರಾತು ನಂ : 296 ದಿನಾಂಕ : 23–07–2021
ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ಸನ್ 2020–21 ನೇ ಸಾಲಿನ ಪಾಲಿಕೆಯ ಸಾಮಾನ್ಯ ನಿಧಿಯ ಅನುದಾನ, ಅಡಿಯಲ್ಲಿ ಮಂಜೂರಾದ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದೇಶ 1999–2000ರ ಪ್ರಕಾರ ಆ್ಯಕ್ಟ್ 2000 ನಿಯಮದನ್ವಯ PWD/HDMC/ಇತರೇ ಸರ್ಕಾರಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರು ಇ–ಪ್ರೋಕ್ಯೂರಮೆಂಟ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರಗಳನ್ನು ಆಹ್ವಾನಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಯಾವುದಾದರೂ ಬದಲಾವಣೆಯಾದಲ್ಲಿ, ಸದರಿ ಬದಲಾವಣೆಯ ವಿವರಗಳನ್ನು ಇ–ಪ್ರೊಕ್ಯೂರಮೆಂಟನಲ್ಲಿ ಮಾತ್ರ ಪ್ರಕಟಿಸಲಾಗುವುದು.
ಮರು ಕರೆ ಕಾಮಗಾರಿಗಳು
ಪರಿಶಿಷ್ಟ ಜಾತಿಯ (SC) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿಗಳು
1) ಇಂಡೆಂಟ್ ನಂ–116445 ರೂ. **31.60** ಲಕ್ಷ (2ನೇ ಕರೆ) (2) ಇಂಡೆಂಟ್ ನಂ–117764 ರೂ. **13.50** ಲಕ್ಷ (2ನೇ ಕರೆ)
ಪರಿಶಿಷ್ಟ ಪಂಗಡದ (ST) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿಗಳು
3) ಇಂಡೆಂಟ್ ನಂ–117189 ರೂ. **12.00** ಲಕ್ಷ (2ನೇ ಕರೆ)
ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿರುವ ಕಾಮಗಾರಿಗಳು.
4) ಇಂಡೆಂಟ್ ನಂ–116321 ರೂ. **30.00** ಲಕ್ಷ (3ನೇ ಕರೆ) (5) ಇಂಡೆಂಟ್ ನಂ–116354 ರೂ. **2.45** ಲಕ್ಷ (3ನೇ ಕರೆ) (6) ಇಂಡೆಂಟ್ ನಂ–114312 ರೂ. **18.75** ಲಕ್ಷ (3ನೇ ಕರೆ) (7) ಇಂಡೆಂಟ್ ನಂ–117053 ರೂ. **15.00** ಲಕ್ಷ (2ನೇ ಕರೆ) (8) ಇಂಡೆಂಟ್ ನಂ–114548 ರೂ. **22.00** ಲಕ್ಷ (4ನೇ ಕರೆ) (9) ಇಂಡೆಂಟ್ ನಂ–109885 ರೂ. **3.50** ಲಕ್ಷ (7ನೇ ಕರೆ) (10) ಇಂಡೆಂಟ್ ನಂ–104541 ರೂ. **3.50** ಲಕ್ಷ (5ನೇ ಕರೆ) (11) ಇಂಡೆಂಟ್ ನಂ–117763 ರೂ. **17.00** ಲಕ್ಷ (2ನೇ ಕರೆ)
ಇ.ಎಂ.ಡಿ, ಕಾಮಗಾರಿ ಅವಧಿ ಹಾಗೂ ಇತರ ವಿವರಗಳನ್ನು ವೆಬ್ ಸೈಟ್ ಮೂಲಕ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಗುತ್ತಿಗೆದಾರರು ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ) ಇವರ ಕಚೇರಿಯ ಕೆಲಸದ ವೇಳೆಯಲ್ಲಿ ಮಾಹಿತಿಯನ್ನು ಪಡೆಯಬಹುದಾಗಿದೆ. ಕಚೇರಿಯ ದೂರವಾಣಿ ಸಂಖ್ಯೆ:0836:2213834ನ್ನು ಸಂಪರ್ಕಿಸಬಹುದಾಗಿದೆ ಮತ್ತು ಅಂತರ್‌ಜಾಲದ ವೆಬ್‌ಸೈಟ್ ವಿಳಾಸ http:/www.eproc.karnataka.gov.in ರಲ್ಲಿ ಪಡೆಯಬಹುದು. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರ ಇ–ಪ್ರೋಕ್ಯೂರಮೆಂಟ್‌ನಲ್ಲಿ ದಿನಾಂಕ : **23–09–2021** ರಿಂದ ಪಡೆಯಬಹುದಾಗಿದೆ.
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **01–10–2021** ರಂದು ಸಾಯಂಕಾಲ 4.00 ಘಂಟೆಯವರೆಗೆ
ಟೆಂಡರ್ ತೆರೆಯುವ ದಿನಾಂಕ: **04–10–2021** ಸಾಯಂಕಾಲ 4.30 ಘಂಟೆಯ ನಂತರ.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು(ಉತ್ತರ) ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ
ವಾಸಾಸಂಇ/ಧಾ/ಎಂಸಿಎ/525/2021–22

ತೋಟಗಾರಿಕೆ ಉಪನಿರ್ದೇಶಕರು
ಜಿಲ್ಲಾ ಪಂಚಾಯತ್, ಮೈಸೂರು
ಟೆಂಡರ್ ಪ್ರಕಟಣೆ
2021–22ನೇ ಸಾಲಿನಲ್ಲಿ ತೋಟಗಾರಿಕೆ ಉಪನಿರ್ದೇಶಕರು, ಜಿಲ್ಲಾ ಪಂಚಾಯತ್, ಮೈಸೂರುರವರ ನಿಯಂತ್ರಣದಲ್ಲಿರುವ, ಸಹಾಯಕ ತೋಟಗಾರಿಕೆ ನಿರ್ದೇಶಕರು, ಉದ್ಯಾನವನ & ತೋಟಗಳು, ಮೈಸೂರು ರವರ ಅಧೀನ ಉದ್ಯಾನವನಗಳು/ನರ್ಸರಿ/ಸಸ್ಯಕಾಶಿಗಳ ನಿರ್ವಹಣೆಗಾಗಿ ವಿವಿಧ ಕೆಲಸಗಳನ್ನು ಗುತ್ತಿಗೆ ಆಧಾರದ ಮೇಲೆ ನಿರ್ವಹಿಸಲು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಕೆಳಕಂಡಂತಿರುತ್ತದೆ. ಟೆಂಡರ್ ಸಂಖ್ಯೆ: DDH/ZP/MYS/CW2/24/2021-22 ಆಸಕ್ತರು ಹೆಚ್ಚಿನ ಮಾಹಿತಿಯನ್ನು https://eproc.karnataka.gov.inನ್ನು ಸಂಪರ್ಕಿಸಿ ಪಡೆದು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ.
DIPR/DDMYS/MCA/527/2021-22 ಸಹಿ/– ತೋಟಗಾರಿಕೆ ಉಪನಿರ್ದೇಶಕರು

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಚಿತ್ರದುರ್ಗ
ಜಿಲ್ಲಾ ಕುಷ್ಟರೋಗ ನಿವಾರಣಾಧಿಕಾರಿಗಳ ಕಛೇರಿ, ಚಿತ್ರದುರ್ಗ.
(ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ವಿಭಾಗ)
Ph: 08194–235983 , e-Mail: dlochit@gmail.com
DLO(MH)/REC/49/2021-22 Date: 16.09.2021
ನೇಮಕಾತಿ ಪ್ರಕಟಣೆ–2ನೇ ಕರೆ
ಚಿತ್ರದುರ್ಗ ಜಿಲ್ಲೆಯಲ್ಲಿ ಮಾಸಿಕ ಆರೋಗ್ಯ ಕಾರ್ಯಕ್ರಮದಡಿಯಲ್ಲಿ (Terms and As per Govt of India Approved ROP 2020-21) ಗುತ್ತಿಗೆ ಆಧಾರದ ಮೇಲೆ ಮನೋವೈದ್ಯರಾಗಿ ಕರ್ತವ್ಯ ನಿರ್ವಹಿಸಲು ಈ ಕೆಳಕಂಡ ಹುದ್ದೆ ಮತ್ತು ಅದರ ವಿವರಗಳೊಂದಿಗೆ ನಿಯಮಾನುಸಾರ ಮತ್ತು ನಿಬಂಧನೆಗಳಿಗೆ ಒಳಪಟ್ಟು ನಿರ್ದಿಷ್ಟ ಕರ್ತವ್ಯ ಜವಾಬ್ದಾರಿ ಮತ್ತು (Terms and reference) ಇರುವ ಮೆರಿಟ್ ಮತ್ತು ರೋಸ್ಟರ್ (ಕರ್ನಾಟಕ ಸರ್ಕಾರದ ಸಚಿವಾಲಯ, ವಿಕಾಸ ಸೌಧ, ಬೆಂಗಳೂರು ರವರ ಸುತ್ತೋಲೆ ಸಂಖ್ಯೆ: ಆಕುಕ/25/ಎಂ.ಎಸ್.ಎನ್/2016/ ದಿನಾಂಕ: 14.02.2016) ಆಧಾರದ ಮೇಲೆ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ಹುದ್ದೆಯ ಹೆಸರು:– ಮಾಸಿಕ ವೈದ್ಯರು. ವಿದ್ಯಾರ್ಹತೆ:–(1) MBBS & MD/DNB/PSYCHIATRY (2) Diploma in Psychological Medicine from Institution recognized by MCI (3) 2 Year Experience of working as a Specialist in a Hospital 4) Age limit: upto 65 Years. ಮಾಸಿಕ ಸಂಚಿತ ವೇತನ:– ರೂ. 1,10,000/–ಒಟ್ಟು ಹುದ್ದೆ:– 01. ಜಿಲ್ಲಾ ಮಾಸಿಕ ಆರೋಗ್ಯ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳು ಕಛೇರಿ, ಜಿಲ್ಲಾ ಆರೋಗ್ಯ ಮತ್ತು ಕು.ಕ. ಕಛೇರಿ, ಆವರಣ, ಚಿತ್ರದುರ್ಗ ಇಲ್ಲಿ ನಡೆಯುವ ನೇರ ಸಂದರ್ಶನಕ್ಕೆ ಸಂಬಂಪಟ್ಟ ಆಸಕ್ತ ಅಭ್ಯರ್ಥಿಗಳು ಸದರಿ ವಿಳಾಸದಲ್ಲಿ ದಿನಾಂಕ: 01.10.2021ರ ಒಳಗಾಗಿ ಅವಶ್ಯಕ ಪೂರಕ ದಾಖಲಾತಿಗಳೊಂದಿಗೆ (ವಿದ್ಯಾರ್ಹತೆ, ಗ್ರಾಮೀಣ, ಕನ್ನಡ ಮಾಧ್ಯಮ, ಜಾತಿ ಪ್ರಮಾಣಪತ್ರ ಮೂಲ ಮತ್ತು ನಕಲು ಪ್ರತಿಯೊಂದಿಗೆ) ಈ ಕಛೇರಿಗೆ ಸಲ್ಲಿಸಿ ನಂತರ ದಿನಾಂಕ: 02.10.2021 ರಂದು ಬೆಳಿಗ್ಗೆ 10.00 ರಿಂದ 2.00 ಗಂಟೆಯವರೆಗೆ ನಡೆಯುವ ನೇರ ಸಂದರ್ಶನಕ್ಕೆ ಹಾಜರಾಗಿ ಹಾಗೂ ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 7899931676ನ್ನು ಸಂಪರ್ಕಿಸಲು ಕೋರಲಾಗಿದೆ.
DIPR/CTA/MCA/479/2021-22 ಸಹಿ/–ಜಿಲ್ಲಾ ಕುಷ್ಟರೋಗ ನಿವಾರಣಾಧಿಕಾರಿಗಳು, ಚಿತ್ರದುರ್ಗ.

KMF
ಧಾರವಾಡ, ಹಾವೇರಿ, ಗದಗ ಮತ್ತು ಉತ್ತರಕನ್ನಡ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ಧಾರವಾಡ
ಲಕ್ಕಮ್ಮನಹಳ್ಳಿ ಕೈಗಾರಿಕಾ ಪ್ರದೇಶ, ಪಿ ಬಿ ರಸ್ತೆ, ವಿದ್ಯಾಗಿರಿ ಅಂಚೆ, ಧಾರವಾಡ–580004
☎: 0836–2467603 E-mail-dharwarnin@gmail.com ಫ್ಯಾಕ್ಸ್: 0836–2468268
IFT No.DMU/PROD/HOUSE KEEPING/2021/1831 ದಿನಾಂಕ:-22-09-2021
ಹೌಸ್ ಕೀಪಿಂಗ್ ಕೆಲಸಗಳ ನಿರ್ವಹಣೆ & ಕಾರ್ಮಿಕರನ್ನು ಒದಗಿಸುವ ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
ಧಾರವಾಡ, ಹಾವೇರಿ, ಗದಗ ಮತ್ತು ಉತ್ತರಕನ್ನಡ ಜಿಲ್ಲಾ ಹಾಲು ಒಕ್ಕೂಟ ನಿಯಮಿತ., ಧಾರವಾಡವು (ಧಾಮುಲ್) ವಿವಿಧ ವಿಭಾಗಗಳಲ್ಲಿ ಹೌಸ್ ಕೀಪಿಂಗ್ ಕಾರ್ಯನಿರ್ವಹಣೆ ಸಲುವಾಗಿ ಹಾಗೂ ದೈನಂದಿನ ಸ್ವಚ್ಚತಾ ಕೆಲಸಗಳಿಗೆ ಅಗತ್ಯವಿರುವ ಕಾರ್ಮಿಕರನ್ನು ಒದಗಿಸಲು ಭವಿಷ್ಯನಿಧಿ, ಇ.ಎಸ್.ಐ. ಹಾಗೂ ಕಾರ್ಮಿಕ ಇಲಾಖೆಗಳಿಂದ ಅಧಿಕೃತವಾಗಿ ನೊಂದಣಿ ಹೊಂದಿರುವ ಹಾಗೂ ಯಾವುದೇ ಸಂಸ್ಥೆಗೆ ಅಂದರೆ ಕಹಾಮ/ಅದರ ಅಂಗ ಸಂಸ್ಥೆ/ಒಕ್ಕೂಟಗಳಲ್ಲಿ ಹೌಸ್ ಕೀಪಿಂಗ್ ಕಾರ್ಯನಿರ್ವಹಣೆ ಸೇವೆ ಮತ್ತು ಕಾರ್ಮಿಕರನ್ನು ಒದಗಿಸಿ 2 ವರ್ಷ ಅನುಭವ ಹೊಂದಿರುವ ಆಸಕ್ತಿಯುಳ್ಳ ಮತ್ತು ಅರ್ಹ ಟೆಂಡರದಾರರಿಂದ 02 ವರ್ಷಗಳ ಅವಧಿಗೆ ಇ–ಟೆಂಡರ್ ಆಹ್ವಾನಿಸಲಾಗಿದೆ. ಕಾರಣ ಟೆಂಡರದಾರರು ಇ–ಟೆಂಡರನ್ನು ಸಲ್ಲಿಸುವ ಮೊದಲು ಸ್ಥಳ ಪರಿಶೀಲಿಸಿ ಇ–ಟೆಂಡರ ಸಲ್ಲಿಸಬಹುದಾಗಿದೆ.

ಕ್ರ. ಸಂ.	ಸೇವೆ ಮತ್ತು ಸೇವೆಯ ವಿಧಾನ	ಬೇಕಾಗುವ ಸಂಖ್ಯೆ	ಇಎಂಡಿ ಮೊತ್ತ
(ಎ) ಸಿಬ್ಬಂದಿ			
1	ಹೌಸ್ ಕೀಪಿಂಗ್ ಸೂಪರ್‌ವೈಜರ್ (ನುರಿತ)	01	ರೂ.1,00,000/–
2	ಹೌಸ್ ಕೀಪಿಂಗ್ ಸಿಬ್ಬಂದಿ (ಅರೆ ನುರಿತ)	15	
(ಬಿ) ಸ್ವಚ್ಛತೆಗಾಗಿ ಮಶಿನರಿ ಮತ್ತು ಸಲಕರಣೆಗಳು			
1	ಮಶಿನರಿ (ಮಾಹೆಯಾನ ಬಾಡಿಗೆ)	ಲಮ್‌ಸಮ್	
(ಸಿ) ಸ್ವಚ್ಛತೆಗಾಗಿ ಟೂಲ್ಸ್ & ಟ್ಯಾಕಲ್ಸ್			
1	ಟೂಲ್ಸ್ & ಟ್ಯಾಕಲ್ಸ್ (ಮಾಹೆಯಾನ ಬಾಡಿಗೆ)	ಲಮ್‌ಸಮ್	
(ಡಿ) ಹೌಸ್ ಕೀಪಿಂಗ್‌ಗೆ ಬೇಕಾಗುವ ಕೆಮಿಕಲ್ಸ್ ಮತ್ತು ಸಲಕರಣೆ			
1	ಹೌಸ್ ಕೀಪಿಂಗ್‌ಗೆ ಬೇಕಾಗುವ ಕೆಮಿಕಲ್ಸ್ ಮತ್ತು ಸಲಕರಣೆ (ಮಾಹೆಯಾನ ಬಾಡಿಗೆ)	ಲಮ್‌ಸಮ್	

ಇ–ಟೆಂಡರ ಪ್ರೊಸೆಸಿಂಗ್ ಶುಲ್ಕ (ಮರು ಪಾವತಿಸಲಾಗದ) ಮತ್ತು ಇಎಂಡಿಯನ್ನು ಇ–ಪೋರ್ಟಲ್ ನಿಯಮಾನುಸಾರ ಟೆಂಡರ ದಾಖಲಾತಿಯಲ್ಲಿ ನಮೂದಿಸಿದಂತೆ ಪಾವತಿಸಬಹುದಾಗಿದೆ. ಹೆಚ್ಚಿನ ವಿವರಗಳಾದ ಭದ್ರತಾ ಠೇವಣಿ, ಟೆಂಡರ ಕರಾರು ಮತ್ತು ಷರತ್ತುಗಳನ್ನು ವೆಬ್‌ಸೈಟ್ http://eproc.karnataka.gov.in ನಲ್ಲಿ ಲಾಗ್‌ಇನ್ ಆಗಿ ಅಥವಾ ಸಹಾಯವಾಣಿ ಸಂಖ್ಯೆ:– 080–46010000/080–68948777 ರ ಮೂಲಕ ಸಂಪರ್ಕಿಸಿ ಟೆಂಡರ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ವೆಬ್‌ಸೈಟ್‌ನ ಯಾವುದೇ ತಾಂತ್ರಿಕ ಅಡಚಣೆಯಿಂದ, ಕೊನೆ ಘಳಿಗೆಯಲ್ಲಿ ಟೆಂಡರ ಸಲ್ಲಿಸುವಿಕೆಯಲ್ಲಿ ಅಥವಾ ಸ್ವೀಕರಿಸುವಲ್ಲಿ ಏನಾದರೂ ತೊಂದರೆ ಆದಲ್ಲಿ ಧಾಮುಲ್ ಯಾವುದೇ ರೀತಿ ಜವಾಬ್ದಾರರಲ್ಲ.

1	ಇ–ಟೆಂಡರ ಸಲ್ಲಿಸುವ ಕೊನೆಯ ದಿನಾಂಕ & ವೇಳೆ	ದಿನಾಂಕ:–11–10–2021 ರ ಸಂಜೆ 4–00 ರವರೆಗೆ
2	ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ವೇಳೆ	ದಿನಾಂಕ:–12–10–2021 ರ ಸಂಜೆ 4–30 ರ ನಂತರ
3	ವಾಣಿಜ್ಯ ಬಿಡ್ ತೆರೆಯುವ ದಿನಾಂಕ & ವೇಳೆ	ದಿನಾಂಕ:–18–10–2021 ರ ಬೆಳಿಗ್ಗೆ 10–00 ರ ನಂತರ

ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು

ಕರ್ನಾಟಕ ಸರ್ಕಾರ
(ಲೋಕೋಪಯೋಗಿ, ಇಲಾಖೆ)
ಕಾರ್ಯನಿರ್ವಾಹಕ ಇಂಜಿನಿಯರ್‌ರ ಕಚೇರಿ, ಲೋಕೋಪಯೋಗಿ ಇಲಾಖೆ ವಿಭಾಗ ಬೀದರ
ಸಂಖ್ಯೆ: ಕಾನಿಇಂ/ಲೋಇ/ವಿಬಿ/ಜೆಇ:2/2021–22/2152 ದಿನಾಂಕ: 21.09.2021
:: ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಅಲ್ಪಾವಧಿ ಟೆಂಡರ್ ಪ್ರಕಟಣೆ ::
ಕರ್ನಾಟಕ ರಾಜ್ಯಪಾಲರ ಪರವಾಗಿ 2021–22 ನೇ ಸಾಲಿಗೆ ಈ ಕೆಳಕಂಡ ಕಾಮಗಾರಿಗಳ, ಕನಿಷ್ಠ ರೂ. 338.54 ಲಕ್ಷಗಳ ಮತ್ತು ಗರಿಷ್ಠ ರೂ. 382.80 ಲಕ್ಷಗಳ ಮೊತ್ತದ ಲೆಕ್ಕ ಶೀರ್ಷಿಕೆ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಅಡಿಯ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಾಲ್ ಮುಖಾಂತರ ಟೆಂಡರ್‌ಗಳನ್ನು ಕರೆಯಲಾಗಿದೆ.
ವರ್ಕ್ ಇಂಡೆಂಟ್ ಸಂಖ್ಯೆ :– KPWD/2021-22/RD/BD/WORK_INDENT, ಸಾಮಾನ್ಯ (02 ಕಾಮಗಾರಿ) 140620, ಮತ್ತು 141486.
ಇ–ಪ್ರೊಕ್ಯುರ್‌ಮೆಂಟ್ ಪೋರ್ಟಾಲ್ http://eproc.karnataka.gov.in ರಿಂದ ದಾಖಲಾತಿಗಳನ್ನು ದಿನಾಂಕ: 21.09.2021 ರಿಂದ ಡೌನ್‌ಲೋಡ್ ಮಾಡಿಕೊಂಡು ದಿನಾಂಕ: 05.10.2021 ರ ಸಂಜೆ 4.00 ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಅಂತರ್ಜಾಲ ತಾಣ ಅಥವಾ ಈ ಕಚೇರಿಗೆ ಸಂಪರ್ಕಿಸುವುದು.
ವಿಶೇಷ ಸೂಚನೆ: –//ಯು.ಡಿ.ಐ ನಂಬರ ಹೊಂದಿರುವ ಟರ್ನಓವರ್ ಸರ್ಟಿಫಿಕೆಟ್ ಗಳನ್ನು ಮಾತ್ರ ಪರಿಗಣಿಸಲಾಗುವುದು ಎಂದು ಗುತ್ತಿಗೆದಾರರ ಗಮನಕ್ಕೆ ತರಲಾಗಿದೆ.
ಸಹಿ/– ಕಾರ್ಯನಿರ್ವಾಹಕ ಇಂಜಿನಿಯರರು, ಲೋಕೋಪಯೋಗಿ ಇಲಾಖೆ ವಿಭಾಗ ಬೀದರ
ವಾ.ಸಾ.ಸಂ.ಇ/ಬೀದರ/171/ಎಂಸಿ&ಎ/2021–22

ಜಂಟಿ ನಿರ್ದೇಶಕರ ಕಾರ್ಯಾಲಯ
ಸಮಾಜ ಕಲ್ಯಾಣ ಇಲಾಖೆ, ತುಮಕೂರು ಜಿಲ್ಲೆ, ತುಮಕೂರು ದೂರವಾಣಿ ಸಂ:0816–2278132,
ಫ್ಯಾಕ್ಸ್ ಸಂಖ್ಯೆ:0816–2278132 E-mail:tumkur.dswo@gmail.com
ಸಂಖ್ಯೆ:ಜಂನಿ:ಆಟೆಂಡರ್:ಸಿಆರ್:05/2020–21 ದಿನಾಂಕ:17.09.2021
ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
2021–22ನೇ ಸಾಲಿಗೆ ತುಮಕೂರು ಜಿಲ್ಲಾ ಸಮಾಜ ಕಲ್ಯಾಣ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖಾ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ, ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಹಾಗೂ ವಸತಿ/ಆಶ್ರಮಶಾಲೆಗಳಿಗೆ ಆಹಾರ ಪದಾರ್ಥಗಳು ಮತ್ತು ಇತರೆ ಸಾಮಗ್ರಿಗಳನ್ನು ಖರೀದಿಸಲು ದ್ವಿ ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಹಾಗೂ ಟೆಂಡರ್ ದಸ್ತಾವೇಜುಗಳನ್ನು **ದಿನಾಂಕ:20.09.2021 ರಿಂದ ದಿ:21.10.2021 ರವರೆಗೆ Website: www.eproc.karnataka.gov.in** ನಲ್ಲಿ ಪಡೆಯಬಹುದಾಗಿದೆ. e-portal ನಲ್ಲಿ ಟೆಂಡರ್ ಸಲ್ಲಿಸಲು ಅಂತಿಮ **ದಿನಾಂಕ:20.10.2021ರ 3.00 ಗಂಟೆಗೆ** ನಿಗದಿಪಡಿಸಿದೆ.

ಕ್ರ ಸಂ	ತುಮಕೂರು ಜಿಲ್ಲೆ (ಗ್ರೂಪ್‌ವಾರು ವಿವರ)	ವಿವರ	ಟೆಂಡರ್‌ಗಿಟ್ಟ ಅಂದಾಜು ಮೊತ್ತ (ರೂ.ಗಳಲ್ಲಿ)	ಎ.ಎಂ.ಡಿ. ಮೊತ್ತ (ರೂ.ಗಳಲ್ಲಿ)
1	ಗ್ರೂಪ್–ಎ	ಆಹಾರ ಮತ್ತು ಇತರೆ ಸಾಮಗ್ರಿಗಳನ್ನು ಖರೀದಿಸುವ ಬಗ್ಗೆ	ರೂ.9,87,60,000/–	ರೂ.14,81,000/–
2	ಗ್ರೂಪ್ – ಬಿ		ರೂ.1,04,30000/–	ರೂ.2,09,000/–
3	ಗ್ರೂಪ್ – ಸಿ		ರೂ.2,61,57000/–	ರೂ.5,23,000/–
4	ಗ್ರೂಪ್ – ಡಿ		ರೂ.1,05,45000/–	ರೂ.2,11,000/–
	ಒಟ್ಟು		**14,58,92000/–**	**ರೂ. 24,24,000/–**

ಸಹಿ/– ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ತುಮಕೂರು ಜಿಲ್ಲೆ
DIPR/TUM/307/MCA/2021-22

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು – 560 001. website: www.kiadb.in
ನಂ. ಐಎಡಿಬಿ/ಇಎನ್‌ಜಿಜಿ/ಪಿ.ಎಂ.ಸಿ/ಇಪಿಟಿಎನ್‌ಡಿ–ಇಪಿ–05/7656/2021–22 ದಿನಾಂಕ: 22.09.2021
ಯೋಜನಾ ನಿರ್ವಹಣಾ ಸೇವೆಗಳಿಗಾಗಿ ಟೆಂಡರ್ ಆಹ್ವಾನ ಪ್ರಕಟಣೆ
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕೆ.ಐ.ಎ.ಡಿ.ಬಿ ಯು ಈ ಕೆಳಕಂಡ ಕಾಮಗಾರಿಗಳಿಗೆ ಯೋಜನಾ ನಿರ್ವಹಣಾ ಸೇವೆಗಳಿಗಾಗಿ ಅರ್ಹ ಸಲಹಾ ಸಂಸ್ಥೆಗಳಿಂದ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
ಕಾಮಗಾರಿ ಹೆಸರು: (1) ರಾಮನಗರ ಜಿಲ್ಲೆ, ಹಾರೋಹಳ್ಳಿ 3ನೇ ಹಂತ ಕೈಗಾರಿಕಾ ಪ್ರದೇಶದಲ್ಲಿ ದೊಡ್ಡ ನಿವೇಶನಗಳಲ್ಲಿ ಉಪ ಬಡಾವಣೆ ನಿರ್ಮಾಣ ಮಾಡುವ ಕಾಮಗಾರಿಗೆ ಪಿಎಂಸಿ ಸೇವೆ ಒದಗಿಸುವುದು. (2) ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ದಾಬಸ್‌ಪೇಟೆ 4ನೇ ಹಂತ (ಅವ್ವೇರಹಳ್ಳಿ) ಕೈಗಾರಿಕಾ ಪ್ರದೇಶದಲ್ಲಿ ಆರ್.ಸಿ.ಸಿ ರಸ್ತೆ ಬದಿ ಚರಂಡಿ, ಆರ್.ಸಿ.ಸಿ ಮಳೆ ನೀರು ಚರಂಡಿ, ಸ್ಪರ್ ಕಲ್ವರ್ಟ್ಸ್, ಬಾಕ್ಸ್ ಕಲ್ವರ್ಟ್ಸ್ ಹಾಗೂ 24 ಮೀ ಅಗಲ ರಸ್ತೆ (ರಸ್ತೆ ಸಂಖ್ಯೆ: 34), 18ಮೀ ಅಗಲ ರಸ್ತೆ (ರಸ್ತೆ ಸಂಖ್ಯೆ 2ಎ, 2ಬಿ,3,4ಸಿ,4ಡಿ, 13, 14ಎ,27,31, 33, 37, 38), 15ಮೀ ಅಗಲ ರಸ್ತೆ (ರಸ್ತೆ ಸಂಖ್ಯೆ37), 12ಮೀ ಅಗಲ ರಸ್ತೆ (ರಸ್ತೆ ಸಂಖ್ಯೆ: 36) ಹಾಗೂ 7ಮೀ ಅಗಲ ರಸ್ತೆ (ರಸ್ತೆ ಸಂಖ್ಯೆ: 35 & 39) ಡಾಂಬರಿಕರಣದ ರಸ್ತೆಗಳನ್ನು ನಿರ್ಮಾಣ ಮಾಡುವ ಕಾಮಗಾರಿಗೆ ಪಿಎಂಸಿ ಸೇವೆ ಒದಗಿಸುವುದು.
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 11.10.2021, ಸಂಜೆ 4.00 ಗಂಟೆವರೆಗೆ.
ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/– ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು
DIPR/DDU/Zen/R.O:1642/2021-22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನಕಲಿ ಡಾಕ್ಟರೇಟ್ ನೀಡಿದರೆ ಎಫ್‌ಐಆರ್

ಡಾ.ಸಿ.ಎನ್. ಅಶ್ವತ್ಥನಾರಾಯಣ

ಬೆಂಗಳೂರು: ರಾಜ್ಯದಲ್ಲಿ ಯಾವುದೇ ಸಂಸ್ಥೆಗಳು ನಕಲಿ ಅಥವಾ ಅನಧಿಕೃತ ಪದವಿ, ಡಾಕ್ಟರೇಟ್ ನೀಡುವುದು ಕಂಡುಬಂದಲ್ಲಿ ಎಫ್‌ಐಆರ್ ದಾಖಲಿಸುವಂತೆ 2021ರ ಫೆಬ್ರುವರಿ 26ರಂದು ಆದೇಶ ಹೊರಡಿಸಲಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ. ಎನ್. ಅಶ್ವತ್ಥನಾರಾಯಣ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಗುರುವಾರ ಬಿಜೆಪಿಯ ಡಾ. ತೇಜಸ್ವಿನಿ ಗೌಡ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ರಾಜ್ಯದಲ್ಲಿ 23 ಸರ್ಕಾರಿ ವಿಶ್ವವಿದ್ಯಾಲಯಗಳಿವೆ. ಅವುಗಳು ಈವರೆಗೆ 1,856 ಜನರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಿವೆ. 21 ಖಾಸಗಿ ವಿಶ್ವವಿದ್ಯಾಲಯಗಳಿದ್ದು, ಅವುಗಳಲ್ಲಿ ಐದು ವಿಶ್ವವಿದ್ಯಾಲಯಗಳು 23 ಮಂದಿಗೆ ಗೌರವ ಡಾಕ್ಟರೇಟ್ ನೀಡಿವೆ' ಎಂದರು.

ವಿಶ್ವವಿದ್ಯಾಲಯಗಳಲ್ಲಿ ಗೌರವ ಡಾಕ್ಟರೇಟ್ ನೀಡುವುದಕ್ಕೆ ನಿಯಮಾವಳಿಗಳಿವೆ. ಅವುಗಳ ಅಡಿಯಲ್ಲಿ ಸೂಕ್ತ ಪ್ರಕ್ರಿಯೆ ನಡೆಸಿದ ಬಳಿಕವೇ ತೀರ್ಮಾನ ಕೈಗೊಳ್ಳಲಾಗುತ್ತದೆ. ವಿಶ್ವವಿದ್ಯಾಲಯಗಳು ಶಿಫಾರಸು ಮಾಡುವ ಹೆಸರುಗಳನ್ನು ರಾಜ್ಯಪಾಲರು ನೇಮಿಸುವ ತಜ್ಞರ ಸಮಿತಿಯ ಪರಿಶೀಲನೆಗೂ ಒಳಪಡಿಸಲಾಗುತ್ತದೆ. ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿ ಗೌರವ ಡಾಕ್ಟರೇಟ್ ನೀಡುವುದರಲ್ಲಿ ಯಾವುದೇ ಲೋಪ ಕಂಡುಬಂದಿಲ್ಲ ಎಂದು ಉತ್ತರಿಸಿದರು.

ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿ ಆಕ್ರೋಶ ವ್ಯಕ್ತಪಡಿಸಿದ ಜೆಡಿಎಸ್ ಸದಸ್ಯರು

ಹಿಂದುಳಿದ ತಾಲ್ಲೂಕುಗಳ ನಿಧಿ ವರ್ಗಾವಣೆ

ಪ್ರಜಾವಾಣಿ ವಾರ್ತೆ

ವಿಧಾನಸಭೆಯಲ್ಲಿ ಗುರುವಾರ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಮಾತನಾಡಿದರು.

ಬೆಂಗಳೂರು: ನಂಜುಂಡಪ್ಪ ವರದಿಯ ಪ್ರಕಾರ ಹಿಂದುಳಿದ ತಾಲ್ಲೂಕುಗಳಿಗೆ ಹಂಚಿಕೆ ಮಾಡಿದ ವಿಶೇಷ ಅಭಿವೃದ್ಧಿ ಯೋಜನೆಯ ಅನುದಾನವನ್ನು ಬೇರೆ ತಾಲ್ಲೂಕುಗಳಿಗೆ ವರ್ಗಾವಣೆ ಮಾಡಲಾಗಿದೆ ಎಂದು ಜೆಡಿಎಸ್ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು.

ವಿಧಾನಸಭೆಯಲ್ಲಿ ಗುರುವಾರ ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಜೆಡಿಎಸ್‌ನ ಸುರೇಶ್ ಗೌಡ, 'ರಾಜ್ಯ ಸರ್ಕಾರವು ಹಿಂದುಳಿದ ತಾಲ್ಲೂಕುಗಳಿಗೆ ₹997 ಕೋಟಿ ಹಂಚಿಕೆ ಮಾಡಿತ್ತು. ಈ ಮೊತ್ತವನ್ನು ಬೇರೆ ತಾಲ್ಲೂಕುಗಳಿಗೆ ವರ್ಗಾವಣೆ ಮಾಡಲಾಗಿದೆ. ಎರಡೇ ಹಿಂದುಳಿದ ತಾಲ್ಲೂಕುಗಳು ಇರುವ ಶಿವಮೊಗ್ಗ ಜಿಲ್ಲೆಗೆ ₹145 ಕೋಟಿ ವರ್ಗಾಯಿಸಲಾಗಿದೆ. ಧಾರವಾಡ ಹಾಗೂ ಕೋಲಾರ ಜಿಲ್ಲೆಗೆ ನಯಾಪೈಸೆ ಅನುದಾನ ನೀಡಿಲ್ಲ. ಮಂಡ್ಯಕ್ಕೆ ₹35 ಕೋಟಿ ನೀಡಲಾಗಿತ್ತು. ಅದರಲ್ಲಿ ₹16 ಕೋಟಿ ಕಡಿತ ಮಾಡಲಾಗಿದೆ. ಇದರಿಂದ ನಂಜುಂಡಪ್ಪ ವರದಿಯ ಆಶಯ ಈಡೇರುತ್ತದೆಯೇ' ಎಂದು ಪ್ರಶ್ನಿಸಿದರು.

ಇದಕ್ಕೆ ಜೆಡಿಎಸ್‌ನ ಡಾ.ಕೆ. ಅನ್ನದಾನಿ, ಕೆ.ಎಂ.ಶಿವಲಿಂಗೇಗೌಡ ಮತ್ತಿತರರು ಧ್ವನಿಗೂಡಿಸಿದರು.

'ಈ ಪ್ರಶ್ನೆ ಜಲಸಂಪನ್ಮೂಲ ಇಲಾಖೆಯನ್ನು ಉದ್ದೇಶಿಸಿ ಇದೆ. ಜಲಸಂಪನ್ಮೂಲ ಸಚಿವರು ಸದನದಲ್ಲಿ ಇಲ್ಲ. ಮತ್ತೆ ಅವರಿಂದ ಉತ್ತರ ಕೊಡಿಸಲಾಗುವುದು' ಎಂದು ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಭರವಸೆ ನೀಡಿದರು. ಇದಕ್ಕೆ ಸದಸ್ಯರು ಒಪ್ಪಲಿಲ್ಲ. ಯೋಜನಾ ಸಚಿವ ಮುನಿರತ್ನ ಇಲ್ಲೇ ಇದ್ದಾರೆ. ಅವರು ಉತ್ತರ ಕೊಡಲಿ ಎಂದು ಜೆಡಿಎಸ್ ಸದಸ್ಯರು ಪಟ್ಟು ಹಿಡಿದರು.

'ಸಚಿವರು ಈಗಲೇ ಉತ್ತರ ನೀಡಬೇಕು ಎಂದರೆ ಹೇಗೆ. ಅವರಲ್ಲಿ ಮಾಹಿತಿ ಇರಬೇಕಲ್ಲ' ಎಂದು ಸಭಾಧ್ಯಕ್ಷರು ಹೇಳಿದರು. 'ಇದರ ಉತ್ತರವನ್ನು ತರಿಸಿಕೊಡುವೆ' ಎಂದು ಮುನಿರತ್ನ ಹೇಳಿದರು. ಅದಕ್ಕೂ ಜೆಡಿಎಸ್ ಸದಸ್ಯರು ಒಪ್ಪಲಿಲ್ಲ.

'ಅನುದಾನವನ್ನು ಮರು ಹಂಚಿಕೆ ಮಾಡುವ ಮೂಲಕ ತಾರತಮ್ಯ ಮಾಡಲಾಗಿದೆ. ಹೀಗಾದರೆ, ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿ ಸಾಧ್ಯವೇ' ಎಂದು ಜೆಡಿಎಸ್‌ನ ಎ.ಟಿ.ರಾಮಸ್ವಾಮಿ ಪ್ರಶ್ನಿಸಿದರು.

'ಸರ್ಕಾರ ಉತ್ತರ ನೀಡಲು ನಿರ್ಲಕ್ಷ್ಯ ಮಾಡಿದರೆ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ದಾವೆ ಹೂಡುವೆ' ಎಂದು ಸುರೇಶ್ ಗೌಡ ಎಚ್ಚರಿಸಿದರು. 'ಅನುದಾನ ಹಂಚಿಕೆ ಲೋಪವನ್ನು ಸರಿಪಡಿಸುವೆ' ಎಂದು ಮುನಿರತ್ನ ಭರವಸೆ ನೀಡಿದರು.

ಅಶಿಸ್ತಿನ ಸದಸ್ಯರ ಪಟ್ಟಿ ಬಿಡುಗಡೆ: ಕಾಗೇರಿ

'ಸದನದಲ್ಲಿ ಹಲವು ಸದಸ್ಯರು ಅಶಿಸ್ತಿನಿಂದ ವರ್ತಿಸುತ್ತಿದ್ದಾರೆ. ಅವರ ಪಟ್ಟಿಯನ್ನು ಮುಂದಿನ ಅಧಿವೇಶನದಲ್ಲಿ ಬಿಡುಗಡೆ ಮಾಡುತ್ತೇನೆ' ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

ಹಿಂದುಳಿದ ತಾಲ್ಲೂಕುಗಳಿಗೆ ಅನುದಾನ ಹಂಚಿಕೆ ತಾರತಮ್ಯದ ಬಗ್ಗೆ ಚರ್ಚಿಸಲು ಅವಕಾಶ ನೀಡಬೇಕು ಎಂದು ಕಾಂಗ್ರೆಸ್‌ನ ಭೀಮಾ ನಾಯ್ಕ್ ಪದೇ ಪದೇ ಕೇಳಿದರು. ಅದಕ್ಕೆ ಸಭಾಧ್ಯಕ್ಷರು ಅವಕಾಶ ನೀಡಲಿಲ್ಲ. ಭೀಮಾ ನಾಯ್ಕ್ ಮತ್ತೆ ಅವಕಾಶ ಕೇಳಿದರು. 'ಶೂನ್ಯ ವೇಳೆಯಲ್ಲಿ ಈ ರೀತಿ ಕೇಳುವುದು ಸರಿಯಲ್ಲ. ಹಲವು ಸದಸ್ಯರು ಹೇಳಿದರೂ ಅರ್ಥ ಮಾಡಿಕೊಳ್ಳುತ್ತಿಲ್ಲ. ಅಶಿಸ್ತಿನಿಂದ ವರ್ತಿಸುತ್ತಿದ್ದಾರೆ. ಅವರ ಪಟ್ಟಿಯನ್ನು ಸಿದ್ಧಪಡಿಸಿಕೊಂಡಿದ್ದೇವೆ' ಎಂದು ಕಾಗೇರಿ ಹೇಳಿದರು.

'ಮೂರು ಪಕ್ಷಗಳ ಶಾಸಕಾಂಗ ಪಕ್ಷದ ನಾಯಕರು ಸದಸ್ಯರಿಗೆ ಸದನದ ನಿಯಮಗಳ ಬಗ್ಗೆ ತಿಳಿ ಹೇಳಬೇಕು. ಇಲ್ಲದಿದ್ದರೆ ಸದನ ನಡೆಸುವುದು ಕಷ್ಟವಾಗುತ್ತದೆ' ಎಂದೂ ಸಭಾಧ್ಯಕ್ಷರು ಹೇಳಿದರು.

ಕಾಂಗ್ರೆಸ್‌ನ ಶ್ರೀನಿವಾಸ್ ಮಾನೆ ಪ್ರಶ್ನೆಗೆ ಉತ್ತರ

ಪೋಕ್ಸೊ ಕಾಯ್ದೆಯಡಿ ದಾಖಲಾದ ಪ್ರಕರಣಗಳ ತನಿಖೆಯನ್ನು 60 ದಿನಗಳೊಳಗೆ ಪೂರ್ಣಗೊಳಿಸಿ, ಆರೋಪಪಟ್ಟಿ ಸಲ್ಲಿಸಲಾಗುತ್ತಿದೆ

ದೌರ್ಜನ್ಯ ಪ್ರಕರಣಗಳು ತ್ವರಿತ ನ್ಯಾಯಾಲಯಕ್ಕೆ: ಆರಗ

ಬೆಂಗಳೂರು: ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯಕ್ಕೆ ಸಂಬಂಧಿಸಿದ ಅಪರಾಧ ಪ್ರಕರಣಗಳ ವಿಚಾರಣೆಯನ್ನು ತ್ವರಿತ ನ್ಯಾಯಾಲಯಗಳಿಗೆ ವರ್ಗಾಯಿಸಲು ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಲಾಗಿದೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಗುರುವಾರ ಕಾಂಗ್ರೆಸ್‌ನ ಶ್ರೀನಿವಾಸ್ ಮಾನೆ ಪ್ರಶ್ನೆಗೆ ಉತ್ತರಿಸಿದ ಅವರು, 'ಇಂತಹ ದೌರ್ಜನ್ಯ ಪ್ರಕರಣಗಳ ವಿಚಾರಣೆಯನ್ನು ತ್ವರಿತವಾಗಿ ಮುಗಿಸಿ, ಅಪರಾಧಿಗಳಿಗೆ ಶಿಕ್ಷೆಯಾಗುವಂತೆ ಮಾಡಬೇಕಿದೆ. ಅದಕ್ಕಾಗಿ ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳ ವಿಚಾರಣೆಯನ್ನು ತ್ವರಿತ ನ್ಯಾಯಾಲಯಗಳಿಗೆ ವರ್ಗಾಯಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದೇನೆ' ಎಂದರು.

ಮಹಿಳೆಯರು ಮತ್ತು ಮಕ್ಕಳ ರಕ್ಷಣೆಗಾಗಿ ದಿನದ 24 ಗಂಟೆಯೂ ಕೆಲಸ ಮಾಡುವ 'ಪಿಂಕ್ ಹೊಯ್ಸಳ' ಗಸ್ತು ವಾಹನಗಳನ್ನು ನೀಡಲಾಗಿದೆ. ರಾಜ್ಯದಾದ್ಯಂತ ಸಹಾಯವಾಣಿ ತೆರೆಯಲಾಗಿದೆ. 36 ಮಹಿಳಾ ಪೊಲೀಸ್ ಠಾಣೆಗಳನ್ನು ಆರಂಭಿಸಲಾಗಿದೆ. ಮಹಿಳೆಯರ ಸುರಕ್ಷತೆಗಾಗಿ ಜನನಿಬಿಡ ಸ್ಥಳಗಳಲ್ಲಿ ಕಣ್ಗಾವಲು ಹೆಚ್ಚಿಸಲಾಗಿದೆ ಎಂದು ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಭರವಸೆ

2011ರ ಗೆಜೆಟೆಡ್ ಪ್ರೊಬೇಷನರಿ ಅಭ್ಯರ್ಥಿಗಳ ರಕ್ಷಣೆ

ಪ್ರಜಾವಾಣಿ ವಾರ್ತೆ

ವಿಧಾನ ಪರಿಷತ್‌ನಲ್ಲಿ ಗುರುವಾರ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಮಾತನಾಡಿದರು

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) 2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ಅಧಿಕಾರಿಗಳ ನೇಮಕಾತಿ ಪರೀಕ್ಷೆಯಲ್ಲಿ ಆಯ್ಕೆಯಾಗಿರುವ ಎಲ್ಲ ಅಭ್ಯರ್ಥಿಗಳ ರಕ್ಷಣೆಗೆ ಸರ್ಕಾರ ಬದ್ಧವಾಗಿದೆ. ಕಾನೂನು ತಜ್ಞರ ಸಲಹೆ ಆಧರಿಸಿ ಈ ವಿಚಾರದಲ್ಲಿ ಮುಂದಡಿ ಇಡಲಾಗುವುದು ಎಂದು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಭರವಸೆ ನೀಡಿದರು.

ವಿಧಾನ ಪರಿಷತ್‌ನಲ್ಲಿ ಗುರುವಾರ ಕಾಂಗ್ರೆಸ್‌ನ ಪಿ.ಆರ್. ರಮೇಶ್ ಅವರು ನಿಯಮ 330ರ ಅಡಿಯಲ್ಲಿ ನಡೆಸಿದ ಚರ್ಚೆಗೆ ಉತ್ತರಿಸಿದ ಸಚಿವರು, '2011ನೇ ಸಾಲಿನ 362 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳಿಗೆ ಆಯ್ಕೆಯಾದ ಯಾರಿಗೂ ಅನ್ಯಾಯ ಆಗಬಾರದು ಎಂಬುದು ಸರ್ಕಾರದ ನಿಲುವು. ವಿರೋಧ ಪಕ್ಷಗಳು, ಸಾರ್ವಜನಿಕರು ಎಲ್ಲರೂ ಈ ಅಭ್ಯರ್ಥಿಗಳ ಪರವಾಗಿ ಇದ್ದಾರೆ. ಹೀಗಾಗಿ ಸರ್ಕಾರ ಕೂಡ ಅವರ ಪರವಾಗಿಯೇ ನಿಂತಿದೆ' ಎಂದರು.

ಆಯ್ಕೆಯಾಗಿರುವ ಅಭ್ಯರ್ಥಿಗಳನ್ನು ಹೇಗೆ ರಕ್ಷಿಸಬಹುದು ಎಂಬುದರ ಕುರಿತು ಸರ್ಕಾರ ಯೋಚಿಸುತ್ತಿದೆ. ಕಾರ್ಯಕಾರಿ ಆದೇಶ ಅಥವಾ ಮಸೂದೆ ಮಂಡಿಸಿ ಈ ಎಲ್ಲರ ನೇಮಕಾತಿಯನ್ನೂ ಊರ್ಜಿತಗೊಳಿಸುವ ಸಾಧ್ಯತೆಯ ಕುರಿತು ಪರಿಶೀಲಿಸಲಾಗುತ್ತಿದೆ. ಈ ಬಗ್ಗೆ ಹಾಲಿ ಅಡ್ವೊಕೇಟ್ ಜನರಲ್ ಮತ್ತು ಮಾಜಿ ಅಡ್ವೊಕೇಟ್ ಜನರಲ್‌ಗಳ ಅಭಿಪ್ರಾಯ ಕೋರಲಾಗಿದೆ. ಅವರ ಸಲಹೆ ಆಧರಿಸಿ ಮುಂದಿನ ಹೆಜ್ಜೆ ಇಡಲಾಗುವುದು ಎಂದು ತಿಳಿಸಿದರು.

ಪ್ರಕ್ರಿಯೆಯಲ್ಲಿ ಲೋಪ: ಕೆಪಿಎಸ್‌ಸಿಯ ಆಗಿನ ಅಧ್ಯಕ್ಷರು ಮತ್ತು ಸದಸ್ಯರು ನಿವೃತ್ತರಾಗಿರುವುದರಿಂದ ಅವರ ವಿರುದ್ಧದ ಕ್ರಿಮಿನಲ್ ಪ್ರಕರಣದ ವಿಚಾರಣೆಗೆ ಅವಕಾಶವಿಲ್ಲ ಎಂಬ ತೀರ್ಮಾನ ಕೈಗೊಳ್ಳಲಾಗಿತ್ತು. ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ವಿಚಾರಣೆ ನಡೆಸಲು ರಾಷ್ಟ್ರಪತಿಯವರು ಅನುಮತಿ ನೀಡಿಲ್ಲ. ನೇಮಕಾತಿ ಅಧಿಸೂಚನೆಯನ್ನು ರದ್ದುಪಡಿಸುವ ತೀರ್ಮಾನವನ್ನು ವಿಧಾನಮಂಡಲದಲ್ಲಿ ಮಂಡಿಸಿ, ಒಪ್ಪಿಗೆ ಪಡೆಯದೇ ಇರುವುದರಿಂದ ಇಡೀ ಪ್ರಕ್ರಿಯೆಯಲ್ಲಿ ಲೋಪಗಳಾಗಿವೆ ಎಂದು ಮಾಧುಸ್ವಾಮಿ ಹೇಳಿದರು.

ವಿಷಯ ಪ್ರಸ್ತಾಪಿಸಿ ಮಾತನಾಡಿದ ಪಿ.ಆರ್. ರಮೇಶ್, 'ನೇಮಕಾತಿ ಪ್ರಕ್ರಿಯೆ ನಡೆಸಲು ಹೊರಡಿಸಿದ್ದ ಅಧಿಸೂಚನೆ ರದ್ದುಪಡಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿಲ್ಲ. ಈ ವಿಷಯದಲ್ಲಿ ಸರ್ಕಾರದಿಂದ ತಪ್ಪಾಗಿದೆ. ಲೋಪ ಮುಚ್ಚಿಕೊಳ್ಳಲು 362 ಮಂದಿ ಅಭ್ಯರ್ಥಿಗಳನ್ನು ಬಲಿಪಶು ಮಾಡಬಾರದು. ತಕ್ಷಣವೇ ಎಲ್ಲ ಅಭ್ಯರ್ಥಿಗಳಿಗೂ ನೇಮಕಾತಿ ಆದೇಶ ನೀಡಬೇಕು. ಸೇವಾ ಜೇಷ್ಠತೆಯನ್ನೂ ನೀಡುವ ಮೂಲಕ ಅವರಿಗೆ ನ್ಯಾಯ ಒದಗಿಸಬೇಕು' ಎಂದು ಒತ್ತಾಯಿಸಿದರು.

ಒಕ್ಕೊರಲ ಬೆಂಬಲ

2011ರ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಯಲ್ಲಿ ಆಯ್ಕೆಯಾಗಿದ್ದ 362 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ವಿತರಿಸಬೇಕೆಂಬ ಬೇಡಿಕೆಯನ್ನು ಎಲ್ಲ ಪಕ್ಷಗಳ ಸದಸ್ಯರೂ ಬೆಂಬಲ ಸೂಚಿಸಿದರು.

'ನೇಮಕಾತಿ ಅಧಿಸೂಚನೆಯನ್ನು ರದ್ದುಪಡಿಸುವ ಸಂದರ್ಭದಲ್ಲಿ ನಾನು ಸಚಿವನಾಗಿದ್ದೆ. ಆದರೆ, ವೈಯಕ್ತಿಕವಾಗಿ ನನ್ನ ಅಭಿಪ್ರಾಯ ಅದಕ್ಕೆ ವಿರುದ್ಧವಾಗಿತ್ತು' ಎಂದು ವಿರೋಧ ಪಕ್ಷದ ನಾಯಕ ಎಸ್. ಆರ್. ಪಾಟೀಲ ಹೇಳಿದರು.

ಬಿಜೆಪಿಯ ರುದ್ರೇಗೌಡ ಮತ್ತು ಎನ್. ರವಿಕುಮಾರ್ ಕೂಡ ರಮೇಶ್ ಅವರ ಆಗ್ರಹವನ್ನು ಬೆಂಬಲಿಸಿದರು.

ವಿಧಾನಸಭಾ ಕ್ಷೇತ್ರಗಳಲ್ಲಿ 26 ರಿಂದ 'ಗಾಂಧಿ ನಡಿಗೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಕ್ಷ ಸಂಘಟನೆ ಗುರಿಯೊಂದಿಗೆ ಇದೇ 26ರಿಂದ ರಾಜ್ಯದ ಎಲ್ಲ ವಿಧಾನಸಭಾ ಕ್ಷೇತ್ರಗಳಲ್ಲಿ 'ಗಾಂಧಿ ನಡಿಗೆ' ಎಂಬ ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಲು ಕಾಂಗ್ರೆಸ್ ನಿರ್ಧರಿಸಿದೆ.

ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ಮತ್ತು ಸಲೀಂ ಅಹ್ಮದ್ ಜೊತೆ ಕೆಪಿಸಿಸಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಕಾಂಗ್ರೆಸ್ ನಾಯಕ ವೀರಪ್ಪ ಮೊಯಿಲಿ, 'ಇದೇ 26ರಂದು ದೇವನಹಳ್ಳಿಯಲ್ಲಿ ಹಾಗೂ 29ರಂದು ಯಲಹಂಕ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕಾರ್ಯಕ್ರಮ ನಡೆಯಲಿದೆ' ಎಂದರು.

'ಮುಂದಿನ ತಿಂಗಳು ಹೊಸಕೋಟೆ, ನೆಲಮಂಗಲ, ದೊಡ್ಡಬಳ್ಳಾಪುರ ವಿಧಾನಸಭಾ ಕ್ಷೇತ್ರಗಳಲ್ಲಿ ಈ ಕಾರ್ಯಕ್ರಮ ನಡೆಸಲಾಗುವುದು' ಎಂದರು.

'ನವೆಂಬರ್ ನಲ್ಲಿ ಚಿಕ್ಕಬಳ್ಳಾಪುರ ವ್ಯಾಪ್ತಿಯ ಬಾಗೇಪಲ್ಲಿ, ಗೌರಿಬಿದನೂರಿನಲ್ಲಿ 10ರಿಂದ ಸಂಜೆ 6ರವರೆಗೂ ನಡೆಯಲಿದೆ. ಈ ಕಾರ್ಯಕ್ರಮಕ್ಕೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಸ್ಥಳೀಯ ವಾರ್ಡ್, ತಾಲ್ಲೂಕು, ಜಿಲ್ಲಾ ಮಟ್ಟದ ನಾಯಕರು, ಅಭ್ಯರ್ಥಿಗಳು ಭಾಗವಹಿಸಲಿದ್ದು, ಕಾರ್ಯಕರ್ತರಲ್ಲಿ ಹುರುಪು ತುಂಬಲು ಈ ಕಾರ್ಯಕ್ರಮ ನಡೆಸುತ್ತಿದ್ದೇವೆ' ಎಂದರು.

'ದೇವರಾಜ ಅರಸು ಅವರ ಕಾಲದಲ್ಲಿ ಹಾಗೂ ಇಂದಿರಾ ಅವರು ಸೋತ ನಂತರ ಈ ರೀತಿ ಕಾರ್ಯಕ್ರಮ ಮಾಡಿ ಪಕ್ಷ ಸಂಘಟನೆ ಮಾಡಿದ್ದೆವು. ಆಗ ಪಕ್ಷ ವಿಧಾನಸಭೆ ಹಾಗೂ ಲೋಕಸಭೆ ಚುನಾವಣೆಗಳಲ್ಲಿ ಗೆಲುವು ಸಾಧಿಸಿತ್ತು. ಈಗ ಹಣ ಹಾಗೂ ಜಾತಿ ಚುನಾವಣೆಯಲ್ಲಿ ಪ್ರಾಧಾನ್ಯತೆ ಪಡೆದ ವಿಕೃತ ರಾಜಕಾರಣ ಬೆಳೆದಿವೆ. ಇದಕ್ಕೆ ಕಾರಣ ಬಿಜೆಪಿ. ಅವರು ಬ್ರಿಟಿಷರಂತೆ ಮತಗಳು, ಧರ್ಮಗಳ ನಡುವೆ ಒಡೆದು ಆಳುವ ನೀತಿ ಅನುಸರಿಸುತ್ತಿವೆ. ಇದು ಯಾವಾಗಲೂ ಯಶಸ್ವಿಯಾಗುವುದಿಲ್ಲ. ಪ್ರಧಾನಿ ಖ್ಯಾತಿ ಕುಸಿತವೇ ಇದಕ್ಕೆ ಸಾಕ್ಷಿ' ಎಂದರು.

ರಾಮಲಿಂಗಾ ರೆಡ್ಡಿ ಮಾತನಾಡಿ, 'ಗಾಂಧಿ ನಡಿಗೆ ಕಾರ್ಯಕ್ರಮವನ್ನು ರಾಜ್ಯವ್ಯಾಪಿ ನಡೆಸುವ ಬಗ್ಗೆ ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಜತೆ ಚರ್ಚಿಸಲಾಗುವುದು' ಎಂದರು.

ಸಲೀಂ ಅಹ್ಮದ್ ಮಾತನಾಡಿದರು.

ಬರಡು ಭೂಮಿಯಲ್ಲಿ ಕೃಷಿಗೆ ಸಿದ್ಧತೆ

ಒಂದನೇ ಪುಟದಿಂದ

ಗುರು

'ಕೇಂದ್ರ ಸರ್ಕಾರದ 'ಒಂದು ಜಿಲ್ಲೆ–ಒಂದು ಬೆಳೆ'ಯ ಮಾರ್ಗಸೂಚಿಯಡಿ ಮೈಸೂರು ಜಿಲ್ಲೆಗೆ 'ಬಾಳೆ' ಬೆಳೆ ನೀಡಲಾಗಿದೆ. ತೋಟಗಾರಿಕೆ ಇಲಾಖೆ ಅಧಿಕಾರಿಗಳ ಸಹಯೋಗದಲ್ಲಿ 10 ಎಕರೆ ಪ್ರದೇಶದಲ್ಲಿ ಬಾಳೆ ಬೆಳೆಯಲು ಯೋಜಿಸಲಾಗಿದೆ. ಮುಂದಿನ ದಿನಗಳಲ್ಲಿ ಬರಡಾಗಿರುವ ಭೂಮಿಗಳನ್ನು ಗುರುತಿಸಿ ರೈತರು ಸಂಪೂರ್ಣ ಕೃಷಿಯಲ್ಲಿ ತೊಡಗಿಸಿಕೊಳ್ಳುವಂತೆ ಮಾಡಲಾಗುವುದು. ರೈತರು ವಾರ್ಷಿಕ ಕನಿಷ್ಠ ₹2 ಲಕ್ಷ ಆದಾಯ ಪಡೆಯಬಹುದು' ಎಂದು ಲೆವಿನ್ ಲಾರೆನ್ಸ್ 'ಪ್ರಜಾವಾಣಿ'ಗೆ ತಿಳಿಸಿದರು.

'ಕೋವಿಡ್‌ನಿಂದಾಗಿ ಅನೇಕ ರೈತರು ಕೃಷಿಯಿಂದ ವಿಮುಖರಾಗಿದ್ದಾರೆ. ಪ್ರಾಜೆಕ್ಟ್ ಹಗ್ ಕಂಪನಿಯು ಅಂಥವರನ್ನು ಗುರುತಿಸಿ ಉತ್ತೇಜನ ನೀಡಿದೆ. ಅವರೇ ಖರ್ಚು ಭರಿಸಿ, ಅರ್ಧ ಆದಾಯ ನೀಡುವುದು ಒಳ್ಳೆಯ ಕಲ್ಪನೆ. ಅದರಿಂದ ರೈತರಿಗೆ ಅನುಕೂಲವಾಗಲಿದೆ' ಎಂದು ದಾರಿಪುರ ಗ್ರಾಮದ ರೈತ ಗುರು ಸಂತಸ ವ್ಯಕ್ತಪಡಿಸಿದರು.

'ಬರಡು ಭೂಮಿಯನ್ನು ಹಸನುಗೊಳಿಸಿ ಬೆಳೆ ತೆಗೆಯಲು ಮುಂದಾಗಿರುವ ಸಾಫ್ಟ್‌ವೇರ್ ಎಂಜಿನಿಯರ್‌ಗಳ ಕಾರ್ಯ ಮಾದರಿಯಾಗಿದೆ' ಎಂದು ತೋಟಗಾರಿಕೆ ಇಲಾಖೆ ನಿರ್ದೇಶಕ ಕೆ.ರುದ್ರೇಶ್ ಶ್ಲಾಘಿಸಿದ್ದಾರೆ.

'ಲಸಿಕೆಗೆ ಕಾರ್ಮಿಕ ನಿಧಿ ಬಳಸಿಲ್ಲ'

ಪ್ರಜಾವಾಣಿ ವಾರ್ತೆ

ವಿಧಾನಪರಿಷತ್ತಿನಲ್ಲಿ ಮಾತನಾಡಿದ ಕಾರ್ಮಿಕ ಶಿವರಾಂ ಹೆಬ್ಬಾರ್. ಅಬಕಾರಿ ಸಚಿವ ಕೆ.ಗೋಪಾಲಯ್ಯ ಇದ್ದಾರೆ ಪ್ರಜಾವಾಣಿ ಚಿತ್ರ

ಬೆಂಗಳೂರು: 'ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರಿಗೆ ಕೋವಿಡ್ ಲಸಿಕೆ ನೀಡಲು ಕಾರ್ಮಿಕ ಕಲ್ಯಾಣ ಮಂಡಳಿಯ ನಯಾಪೈಸೆ ಹಣವನ್ನೂ ಬಳಸಿಲ್ಲ. ಕೋವಿಡ್ ಲಸಿಕೆಗೆ ವೆಚ್ಚ ಪಾವತಿಸುವ ಸಂಬಂಧ ಹೊರಡಿಸಿದ್ದ ಆದೇಶವನ್ನೇ ಹಿಂಪಡೆಯಲಾಗಿದೆ' ಎಂದು ಕಾರ್ಮಿಕ ಸಚಿವ ಅರಬೈಲ್ ಶಿವರಾಂ ಹೆಬ್ಬಾರ್ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಗುರುವಾರ ಕಾಂಗ್ರೆಸ್‌ನ ಕೆ. ಪ್ರಕಾಶ್ ರಾಥೋಡ್ ಪರವಾಗಿ ಸಚಿವರಿಗೆ ಪ್ರಶ್ನೆ ಕೇಳಿದ ವಿಧಾನ ಪರಿಷತ್ ಮುಖ್ಯ ಸಚೇತಕ ಎಂ. ನಾರಾಯಣಸ್ವಾಮಿ, 'ಲಸಿಕೆಗೆ ಕಾರ್ಮಿಕ ನಿಧಿಯ ₹ 700 ಕೋಟಿ?' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಪ್ರಕಟವಾಗಿದ್ದ ವಿಶೇಷ ವರದಿಯನ್ನು ಪ್ರಸ್ತಾಪಿಸಿದರು.

ಈ ಬಗ್ಗೆ ಉತ್ತರಿಸಿದ ಸಚಿವರು, 'ರಾಜ್ಯದಲ್ಲಿ 27 ಲಕ್ಷ ಮಂದಿ ಕಟ್ಟಡ ನಿರ್ಮಾಣ ಕಾರ್ಮಿಕರಿದ್ದಾರೆ. ಅವರಿಗೆ ತ್ವರಿತವಾಗಿ ಕೋವಿಡ್ ಲಸಿಕೆ ನೀಡುವ ಉದ್ದೇಶದಿಂದ ಕಾರ್ಮಿಕ ಕಲ್ಯಾಣ ಮಂಡಳಿಯಿಂದ ಲಸಿಕೆಯ ವೆಚ್ಚ ಭರಿಸಲು ನಿರ್ಧರಿಸಲಾಗಿತ್ತು. ಆದರೆ, ಉಚಿತವಾಗಿ ಪೂರೈಸುತ್ತಿರುವ ಲಸಿಕೆ ಹೆಚ್ಚಿನ ಪ್ರಮಾಣದಲ್ಲಿ ಲಭ್ಯವಿದೆ. ಈ ಕಾರಣದಿಂದ ಕೋವಿಡ್ ಲಸಿಕೆಯ ವೆಚ್ಚ ಭರಿಸುವ ಆದೇಶವನ್ನು ರದ್ದು ಮಾಡಲಾಗಿದೆ' ಎಂದರು.

ಕೋವಿಡ್ ಮೊದಲ ಅಲೆಯ ಸಂದರ್ಭ 16.48 ಲಕ್ಷ ಕಾರ್ಮಿಕರಿಗೆ ತಲಾ ₹ 5,000ದಂತೆ ₹ 824.21 ಕೋಟಿ ನೆರವು ನೀಡಲಾಗಿದೆ. ₹ 53.94 ಕೋಟಿ ವೆಚ್ಚದಲ್ಲಿ 7.15 ಲಕ್ಷ ಆಹಾರ ಕಿಟ್ ವಿತರಿಸಲಾಗಿದೆ. 89.87 ಲಕ್ಷ ಸಿದ್ಧ ಆಹಾರ ಪೊಟ್ಟಣಗಳ ವಿತರಣೆಗೆ ₹ 26.71 ಕೋಟಿ ವೆಚ್ಚ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಎರಡನೆ ಅಲೆಯ ಸಂದರ್ಭದಲ್ಲಿ 18.20 ಲಕ್ಷ ಕಾರ್ಮಿಕರಿಗೆ ತಲಾ ₹ 2,000ದಂತೆ ₹ 546.21 ಕೋಟಿ ನೆರವು ನೀಡಲಾಗಿದೆ. ₹ 227.41 ಕೋಟಿ ವೆಚ್ಚದಲ್ಲಿ 23.42 ಲಕ್ಷ ಆಹಾರ ಕಿಟ್‌ಗಳನ್ನು ವಿತರಿಸಲಾಗಿದೆ. 21.07 ಲಕ್ಷ ರಕ್ಷಣೆ ಮತ್ತು ನೈರ್ಮಲ್ಯ ಕಿಟ್ ವಿತರಣೆಗೆ ₹ 118.69 ಕೋಟಿ ವೆಚ್ಚ ಮಾಡಲಾಗಿದೆ ಎಂದು ಹೆಬ್ಬಾರ್ ತಿಳಿಸಿದರು.

₹ 91 ಕೋಟಿ ಸಹಾಯಧನ: ಸದಸ್ಯತ್ವ ನವೀಕರಿಸದ 3.54 ಲಕ್ಷ ಕಾರ್ಮಿಕರ ಪೈಕಿ 2.49 ಲಕ್ಷ ಮಂದಿಗೆ ಕಾರ್ಮಿಕ ಅದಾಲತ್ ಮೂಲಕ ₹ 91 ಕೋಟಿ ನೆರವು ನೀಡಲಾಗಿದೆ ಎಂದರು.

ಕಾರ್ಮಿಕ ಕಲ್ಯಾಣ ಸೆಸ್ ರೂಪದಲ್ಲಿ 2021ರ ಆಗಸ್ಟ್ 31ರ ಅಂತ್ಯಕ್ಕೆ ₹ 7,709.06 ಕೋಟಿಯಷ್ಟು ಮೊತ್ತ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ಸಂಗ್ರಹವಾಗಿದೆ ಎಂದರು.

ಬಾಲ ಪೀಠಾಧಿಪತಿ ಪ್ರಕರಣ: ತೀರ್ಪು ಕಾಯ್ದಿರಿಸಿದ ಹೈಕೋರ್ಟ್

ಬೆಂಗಳೂರು: ಉಡುಪಿಯ ಶೀರೂರು ಮಠದ ನೂತನ ಪೀಠಾಧಿಪತಿಯಾಗಿ ಅಪ್ರಾಪ್ತರನ್ನು ನೇಮಕ ಮಾಡಿರುವ ಪ್ರಕರಣದಲ್ಲಿ ಹೈಕೋರ್ಟ್ ಆದೇಶ ಕಾಯ್ದಿರಿಸಿದೆ.

ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ನೇತೃತ್ವದ ವಿಭಾಗೀಯ ಪೀಠ, ಈ ತೀರ್ಪು ಕಾಯ್ದಿರಿಸುವ ಮುನ್ನ ವಿಚಾರಣೆ ನಡೆಸಿತು.

ಅಪ್ರಾಪ್ತರ ಮೇಲೆ ಸನ್ಯಾಸ ಹೇರುವುದು ಸಂವಿಧಾನದ ಪರಿಚ್ಛೇದ 21 ಮತ್ತು 39(ಇ) ಮತ್ತು (ಎಫ್) ಉಲ್ಲಂಘನೆ ಎಂದು ಅರ್ಜಿದಾರರು ವಾದಿಸಿದರು. ಈ ಪ್ರಕರಣದಲ್ಲಿ ಪೀಠಕ್ಕೆ ಸಲಹೆ ನೀಡಲು ನೇಮಕವಾಗಿರುವ ವಕೀಲ ಎಸ್.ಎಸ್. ನಾಗಾನಂದ ಅವರು, '18 ವರ್ಷಕ್ಕಿಂತ ಕೆಳಗಿನವರಿಗೆ ಸನ್ಯಾಸ ನೀಡಬಾರದು ಎಂಬುದಕ್ಕೆ ಯಾವುದೇ ಶಾಸನ ಇಲ್ಲ ಮತ್ತು ಅದು ಹಾನಿಕಾರಕ ಸಂಪ್ರದಾಯವೂ ಅಲ್ಲ' ಎಂದು ತಿಳಿಸಿದರು. 'ಉಡುಪಿಯ ಎಂಟು ಮಠಗಳು ಬ್ರಹ್ಮಚಾರಿಗಳಿಗೆ ಸನ್ಯಾಸ ನೀಡುವ ಸಂಪ್ರದಾಯ ಬೆಳೆಸಿಕೊಂಡು ಬಂದಿವೆ. ಕೌಟುಂಬಿಕ ಹಿನ್ನೆಲೆ, ಶಾಸ್ತ್ರೀಯ ಅಧ್ಯಯನದ ಒಲವು ಸೇರಿ ಹಲವು ವಿಷಯಗಳನ್ನು ಪರಿಗಣಿಸಲಾಗುತ್ತದೆ' ಎಂದು ಅವರು ಹೇಳಿದರು. 'ಪಿ. ಲಾತವ್ಯ ಆಚಾರ್ಯ ವೈಯಕ್ತಿಕ ಹಿತಾಸಕ್ತಿಯಿಂದ ಈ ಅರ್ಜಿ ಸಲ್ಲಿಸಿದ್ದಾರೆ.

ರಾಜ್ಯದಲ್ಲಿ ಎರಡು ತಿಂಗಳಲ್ಲಿ 1,777 ಪ್ರಕರಣಗಳು ದೃಢ

ಮತ್ತೆ ಏರುಗತಿಯಲ್ಲಿ ಡೆಂಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕಳೆದ ವರ್ಷ ನಿಯಂತ್ರಣಕ್ಕೆ ಬಂದಿದ್ದ ಡೆಂಗಿ ಪ್ರಕರಣಗಳು ಈ ವರ್ಷ ಏರುಗತಿ ಪಡೆದಿದ್ದು, ಎರಡು ತಿಂಗಳಲ್ಲಿ 1,777 ಪ್ರಕರಣಗಳು ದೃಢಪಟ್ಟಿವೆ.

'ಕರ್ನಾಟಕ ಸೇರಿದಂತೆ 11 ರಾಜ್ಯಗಳಲ್ಲಿ ಹೊಸ ಮಾದರಿಯ ಸೆರೋಟೈಪ್–2 ವೈರಾಣುವಿಂದ ಅಪಾಯಕಾರಿ ಡೆಂಗಿ ಜ್ವರ ಕಾಣಿಸಿಕೊಳ್ಳುತ್ತಿದೆ' ಎಂದು ಕಳೆದ ವಾರವಷ್ಟೇ ಕಳವಳ ವ್ಯಕ್ತಪಡಿಸಿದ್ದ ಕೇಂದ್ರ ಸರ್ಕಾರ, ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಿತ್ತು.

ಈ ವರ್ಷ ಮೊದಲ ಏಳು ತಿಂಗಳ ಅವಧಿಯಲ್ಲಿ ಡೆಂಗಿ ಪ್ರಕರಣಗಳ ಸಂಖ್ಯೆ 1,500ರ ಗಡಿಯ ಆಸುಪಾಸಿನಲ್ಲಿತ್ತು. ಮಳೆ ಚುರುಕುಗೊಂಡ ಬಳಿಕ ಪ್ರಕರಣಗಳ ಸಂಖ್ಯೆ ಕೂಡ ಏರಿಕೆಯ ಹಾದಿ ಹಿಡಿದಿದೆ. ಈವರೆಗೆ ಒಟ್ಟು 3,279 ಪ್ರಕರಣಗಳು ವರದಿಯಾಗಿವೆ. ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಡೆಂಗಿ ಪ್ರಕರಣಗಳು ಪತ್ತೆಯಾಗಿವೆ.

ಬೆಂಗಳೂರಿನಲ್ಲಿ 575 ಪ್ರಕರಣಗಳು ದೃಢಪಟ್ಟಿವೆ. ಕಲಬುರ್ಗಿಯಲ್ಲಿ 313, ಉಡುಪಿಯಲ್ಲಿ 312, ಶಿವಮೊಗ್ಗದಲ್ಲಿ 235, ದಕ್ಷಿಣ ಕನ್ನಡದಲ್ಲಿ 190, ಕೊಪ್ಪಳದಲ್ಲಿ 160, ಬಳ್ಳಾರಿಯಲ್ಲಿ 145, ದಾವಣಗೆರೆಯಲ್ಲಿ 138, ಹಾವೇರಿಯಲ್ಲಿ 125, ಗದಗದಲ್ಲಿ 116 ಹಾಗೂ ವಿಜಯಪುರದಲ್ಲಿ 114 ಮಂದಿ ಡೆಂಗಿ ಪೀಡಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 100ರ ಗಡಿಯೊಳಗೆ ಇವೆ.

ಸೋಂಕಿತ ಈಡಿಸ್ ಈಜಿಪ್ಟೈ ಸೊಳ್ಳೆಗಳ ಕಡಿತದಿಂದ ಹರಡುವ ಈ ಜ್ವರಕ್ಕೆ 2019ರಲ್ಲಿ 18 ಸಾವಿರಕ್ಕೂ ಅಧಿಕ ಮಂದಿ ಬಳಲಿದ್ದರು. ಅವರಲ್ಲಿ 17 ಮಂದಿ ಮೃತಪಟ್ಟಿದ್ದರು. 10 ಸಾವಿರಕ್ಕೂ ಅಧಿಕ ಪ್ರಕರಣಗಳು ರಾಜಧಾನಿ ಬೆಂಗಳೂರಿನಲ್ಲೇ ವರದಿಯಾಗಿದ್ದವು. ದಶಕದಲ್ಲೇ ಅತಿ ಹೆಚ್ಚು ಮಂದಿ ಈ ಜ್ವರಕ್ಕೆ ಒಳಪಟ್ಟಿದ್ದರು. ಕಳೆದ ವರ್ಷ 3,823 ಮಂದಿಯಲ್ಲಿ ಡೆಂಗಿ ಜ್ವರ ಕಾಣಿಸಿಕೊಂಡಿತ್ತು. ಅವರಲ್ಲಿ 5 ಮಂದಿ ಮೃತಪಟ್ಟಿದ್ದರು.

ಮರಣ ಸಂಭವಿಸಿಲ್ಲ: ಆರೋಗ್ಯ ಇಲಾಖೆಯ ದೈನಂದಿನ ಡೆಂಗಿ ವರದಿಯಲ್ಲಿ ಈ ವರ್ಷ ಯಾವುದೇ ಮರಣ ಸಂಭವಿಸಿಲ್ಲ ಎಂದು ತಿಳಿಸಲಾಗಿದೆ.

ರಾಜ್ಯದಲ್ಲಿ ಈವರೆಗೆ 1,042 ಚಿಕೂನ್‌ಗುನ್ಯಾ ಪ್ರಕರಣಗಳು ದೃಢಪಟ್ಟಿವೆ. ಉತ್ತರ ಕನ್ನಡ, ರಾಯಚೂರು ಹಾಗೂ ದಕ್ಷಿಣ ಕನ್ನಡ ಬಿಟ್ಟು ಉಳಿದ ಎಲ್ಲ ಜಿಲ್ಲೆಗಳಲ್ಲಿಯೂ ಪ್ರಕರಣಗಳು ಖಚಿತಪಟ್ಟಿವೆ. ಎರಡು ತಿಂಗಳಲ್ಲಿ 534 ಮಂದಿ ಈ ಜ್ವರಕ್ಕೆ ಒಳಗಾಗಿದ್ದಾರೆ. ಕಲಬುರ್ಗಿ (143), ಕೋಲಾರ (108) ಹಾಗೂ ಶಿವಮೊಗ್ಗದಲ್ಲಿ (106) ಅಧಿಕ ಪ್ರಕರಣಗಳು ವರದಿಯಾಗಿವೆ.

ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 100ರ ಗಡಿಯೊಳಗಡೆ ಇವೆ.

3 ಲಕ್ಷ ಜನರಿಗೆ ಸಿಪಿಆರ್ ತರಬೇತಿ

ಚಿತ್ರದುರ್ಗ: 'ಹೃದಯ ಮತ್ತು ಶ್ವಾಸಕೋಶ ಕಾಯಿಲೆ ಸಂಬಂಧ (ಸಿಪಿಆರ್) ತರಬೇತಿಯನ್ನು ಒಟ್ಟು 3 ಲಕ್ಷ ಜನರಿಗೆ ಕೊಡುವ ಉದ್ದೇಶವಿದೆ' ಎಂದು ಶರಣ ಸಂಸ್ಕೃತಿ ಉತ್ಸವ ಸಮಿತಿ ಕಾರ್ಯಾಧ್ಯಕ್ಷ ಕೆ.ಎಸ್. ನವೀನ್ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ದೇಶದ ವಿಪತ್ತು ಬೆಂಬಲ ಕಾರ್ಯಪಡೆ, ಕೋವಿಡ್ ಇಂಡಿಯಾ ಅಭಿಯಾನ, ಹಾರ್ಟ್ ಅಂಡ್ ಸ್ಟ್ರೋಕ್ ಫೌಂಡೇಷನ್ ಆಫ್ ಇಂಡಿಯಾ ವತಿಯಿಂದ ಅ. 4ರಿಂದ 14ರವರೆಗೂ ತರಬೇತಿ ನಡೆಯಲಿದೆ. ವಿಶ್ವ ದಾಖಲೆಯ ಗುರಿ ಹೊಂದಲಾಗಿದೆ' ಎಂದರು.

ಅಂತರ ಜಿಲ್ಲೆ ವರ್ಗ: 9,090 ಶಿಕ್ಷಕರ ಕೋರಿಕೆ

ಒಂದನೇ ಪುಟದಿಂದ

'ಕೆಲವು ಶಿಕ್ಷಕರು ತಮ್ಮ ಕುಟುಂಬದಿಂದ ಸುಮಾರು 400 ಕಿ.ಮೀಟರ್‌ಗೂ ಹೆಚ್ಚು ದೂರದಲ್ಲಿ 10–15 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಅಂಥವರಲ್ಲಿ ಕೆಲವರು ದಾಂಪತ್ಯ ತೊರೆದು ಪ್ರತ್ಯೇಕವಾಗಿ ಮದುವೆಯಾಗಿರುವ ಉದಾಹರಣೆಗಳೂ ಇವೆ. ಇದರಿಂದ ಕೆಲವು ಮಹಿಳಾ ಶಿಕ್ಷಕಿಯರು ಮಾನಸಿಕ ಖಿನ್ನತೆಗೆ ಒಳಗಾಗಿರುವ ಪ್ರಕರಣಗಳಿವೆ. ಪತಿ– ಪತ್ನಿ ಪ್ರಕರಣಗಳಲ್ಲಿ 10–15 ವರ್ಷಗಳಿಂದ ಸಂಸಾರದಿಂದ ದೂರ ಇರುವವರು ಇದ್ದಾರೆ. ಅಂಥ ಶಿಕ್ಷಕ, ಶಿಕ್ಷಕಿಯರು ಕೌಟುಂಬಿಕ ಸಮಸ್ಯೆಗಳಿಗೆ ಸಿಲುಕಿದ್ದಾರೆ. ಇಂಥ ಪರಿಸ್ಥಿತಿ ಶೈಕ್ಷಣಿಕ ವ್ಯವಸ್ಥೆಯ ಮೇಲೆ ಕೆಟ್ಟ ಪರಿಣಾಮ ಬೀರಿದೆ' ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

'ರಾಜ್ಯ ಸರ್ಕಾರ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಶಿಕ್ಷಕರ ವರ್ಗಾವಣೆಗೆ ಅವಕಾಶ ಕಲ್ಪಿಸಬೇಕು. ಈ ರೀತಿ ವರ್ಗಾವಣೆಯಿಂದ ಖಾಲಿಯಾಗುವ ಹುದ್ದೆಗಳಿಗೆ ಹೊಸತಾಗಿ ನೇಮಕಾತಿ ಅಥವಾ ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳಬಹುದು' ಎಂದೂ ಅವರು ಸಲಹೆ ನೀಡಿದ್ದಾರೆ.

ಸುಪ್ರೀಂ ಕೋರ್ಟ್ ತೀರ್ಪು ಬದಿಗೊತ್ತಿದ ಮಾನಿಟರಿಂಗ್ ಸಮಿತಿ- ಕೆಐಎಸ್‌ಎಂಎ ಆರೋಪ

ಅದಿರು ಖರೀದಿಗೆ ಹೊರಗಿನ ಕಂಪನಿಗಳಿಗೂ ಅವಕಾಶ

ಪ್ರಜಾವಾಣಿ ವಾರ್ತೆ

ಸಾಂದರ್ಭಿಕ ಚಿತ್ರ

ಬಳ್ಳಾರಿ: 'ರಾಜ್ಯದ ಗಣಿಗಳಲ್ಲಿ ಹೊರತೆಗೆಯುತ್ತಿರುವ ಅದಿರಿನ ಇ-ಹರಾಜಿನಲ್ಲಿ ಕರ್ನಾಟಕ ಮತ್ತು ನೆರೆಹೊರೆಯ ರಾಜ್ಯಗಳನ್ನು ಹೊರತುಪಡಿಸಿ, ಬೇರೆ ರಾಜ್ಯಗಳ ಕೆಲವು ಕಂಪನಿಗಳೂ ಭಾಗವಹಿಸಲು ಅವಕಾಶ ಮಾಡಿಕೊಡುವ ಮೂಲಕ ಸುಪ್ರೀಂ ಕೋರ್ಟ್ ತೀರ್ಪನ್ನು ಕಡೆಗಣಿಸಲಾಗುತ್ತಿದೆ' ಎಂಬ ಆರೋಪ ಕೇಳಿಬಂದಿದೆ.

ಬಳ್ಳಾರಿ, ಚಿತ್ರದುರ್ಗ ಹಾಗೂ ತುಮಕೂರು ಜಿಲ್ಲೆಗಳ ಗಣಿಗಳಲ್ಲಿ ಹೊರ ತೆಗೆಯಲಾಗುತ್ತಿರುವ ಅದಿರನ್ನು ಇ-ಹರಾಜಿನ ಮೂಲಕ ಕರ್ನಾಟಕ ಹಾಗೂ ನೆರೆಹೊರೆಯ ರಾಜ್ಯಗಳ ಉಕ್ಕು ಕಾರ್ಖಾನೆಗಳಿಗೆ ಮಾತ್ರ ಮಾರಾಟ ಮಾಡಬೇಕೆಂದು ಸುಪ್ರೀಂ ಕೋರ್ಟ್ 2012ರ ಮಾರ್ಚ್ 13ರಂದು ಹೊರಡಿಸಿದ್ದ ಆದೇಶದಲ್ಲಿ ಹೇಳಿತ್ತು.

ಇ- ಹರಾಜು ಪ್ರಕ್ರಿಯೆ ನಡೆಸುವ ಜವಾಬ್ದಾರಿಯನ್ನು ತನ್ನ ಅಧೀನದ 'ಮಾನಿಟರಿಂಗ್ ಸಮಿತಿ'ಗೆ (ಸಿಇಸಿ) ನೀಡಿದೆ. 2013ರ ಏಪ್ರಿಲ್ 13ರಂದು ಕೊಟ್ಟ ತೀರ್ಪಿನಲ್ಲೂ ಕೋರ್ಟ್ ಈ ಷರತ್ತನ್ನು ಪುನರುಚ್ಚರಿಸಿದೆ. ಆದರೆ, ಈ ವರ್ಷ ಏಪ್ರಿಲ್ 16, 20, ಮೇ 12, 13, ಜೂನ್ 10,15,18,22 ಮತ್ತು 24ರಂದು ನಡೆದ ಇ–ಹರಾಜಿನಲ್ಲಿ ಸಂಬಂಧಿಸದ ಕೆಲ ರಾಜ್ಯಗಳ ಕಂಪನಿಗಳೂ ಭಾಗವಹಿಸಲು ಅವಕಾಶ ಮಾಡಿಕೊಡುವ ಮೂಲಕ ಕೋರ್ಟ್ ತೀರ್ಪನ್ನು ಮಾನಿಟರಿಂಗ್ ಸಮಿತಿ ಬದಿಗೊತ್ತಿದೆ ಎಂದು 'ಕರ್ನಾಟಕ ಕಬ್ಬಿಣ ಮತ್ತು ಉಕ್ಕು ಉತ್ಪಾದಕರ ಸಂಘ' (ಕೆಐಎಸ್‌ಎಂಎ) ದೂರಿದೆ.

'ಬೇರೆ ರಾಜ್ಯಗಳ ಕಂಪನಿಗಳಿಗೆ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ಬಿಡಬಾರದು' ಎಂದು ಕೆಐಎಸ್‌ಎಂಎ ಮಾನಿಟರಿಂಗ್ ಸಮಿತಿಗೆ ಜುಲೈ 29ರಂದು ಮನವಿ ಸಲ್ಲಿಸಿತ್ತು. ಈ ಮನವಿಗೆ ಸೂಕ್ತ ಸ್ಪಂದನೆ ಸಿಕ್ಕಿಲ್ಲ. ಆಗಸ್ಟ್ 3, 10 ಹಾಗೂ 12ರಂದು ನಡೆಸಿರುವ ಹರಾಜು ಪ್ರಕ್ರಿಯೆಯಲ್ಲೂ ಈ ಕಂಪನಿಗಳು ಪಾಲ್ಗೊಂಡಿವೆ ಎಂದು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಮಧ್ಯಂತರ ಅರ್ಜಿಯಲ್ಲಿ ಕೆಐಎಸ್‌ಎಂಎ ಹೇಳಿದೆ.

2012ರ ಮಾರ್ಚ್ 13ರ ಆದೇಶ ಮತ್ತು 2013ರ ಏಪ್ರಿಲ್ 13ರಂದು ನೀಡಿರುವ ತೀರ್ಪನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಮಾನಿಟರಿಂಗ್ ಸಮಿತಿಗೆ ಸೂಚಿಸುವಂತೆಯೂ ಅದು ಕೋರ್ಟ್‌ಗೆ ಮನವಿ ಮಾಡಿದೆ. ಈ ಅರ್ಜಿ ವಿಚಾರಣೆಗೆ ಬರಬೇಕಿದೆ. ಆದರೆ, ಕೆಐಎಸ್‌ಎಂಎ ಈ ಅರ್ಜಿಯನ್ನು ವಾಪಸ್ ಪಡೆಯುವ ಕುರಿತು ಚಿಂತಿಸುತ್ತಿದೆ ಎಂದು ಮೂಲಗಳು ತಿಳಿಸಿವೆ. ಈ ಅರ್ಜಿಗೆ ಭಾರತೀಯ ಖನಿಜ ಉದ್ಯಮಗಳ ಒಕ್ಕೂಟ (ಫಿಮಿ) ಆಕ್ಷೇಪಣೆ ಸಲ್ಲಿಸುವ ಸಾಧ್ಯತೆಯಿದೆ ಎಂದ ಗೊತ್ತಾಗಿದೆ

ಅದಿರಿನ ಕೊರತೆ

ರಾಜ್ಯದ ಉಕ್ಕು ಕಾರ್ಖಾನೆಗಳಿಗೆ ವಾರ್ಷಿಕ 45 ದಶಲಕ್ಷ ಟನ್ ಅದಿರು ಅಗತ್ಯವಿದ್ದು, ಮೂರು ಜಿಲ್ಲೆಗಳಿಂದ ಕೇವಲ 27–28 ದಶಲಕ್ಷ ಟನ್ ಅದಿರು ಉತ್ಪಾದನೆಯಾಗುತ್ತಿದೆ ಎಂದು ಕೆಐಎಸ್‌ಎಂಎ ತನ್ನ ಮಧ್ಯಂತರ ಅರ್ಜಿಯಲ್ಲಿ ಪ್ರಸ್ತಾಪಿಸಿದೆ.

ಬಳ್ಳಾರಿ ಜಿಲ್ಲೆ ಗಣಿಗಳಿಂದ 25 ದಶಲಕ್ಷ ಟನ್, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳ ಗಣಿಗಳಿಂದ 5 ದಶಲಕ್ಷ ಟನ್ ಸೇರಿದಂತೆ 30 ದಶಲಕ್ಷ ಟನ್ ಅದಿರನ್ನು ಹೊರತೆಗೆಯಲು ಸುಪ್ರೀಂ ಕೋರ್ಟ್ 2012ರ ಮಾರ್ಚ್ 13ರಂದು ಒಪ್ಪಿಗೆ ನೀಡಿತ್ತು.

2017ರ ಡಿಸೆಂಬರ್ 14ರಂದು 30 ದಶಲಕ್ಷ ಟನ್ ಅದಿರು ಉತ್ಪಾದನೆ ಮಿತಿಯನ್ನು 35 ಲಕ್ಷ ದಶಲಕ್ಷ ಟನ್‌ಗೆ ಕೋರ್ಟ್ ಏರಿಸಿದೆ.

ಪಟಾಕಿ ಸ್ಫೋಟ: ದೇಹಗಳು ಛಿದ್ರ

ಒಂದನೇ ಪುಟದಿಂದ

ಸುಮಾರು 40 ಕೆ.ಜಿ ಪಟಾಕಿ ಸ್ಫೋಟ: 'ಅವಘಡ ಸಂಬಂಧ ವಿ.ವಿ.ಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆರೋಪಿಯೂ ಆಗಿರುವ ಪಟಾಕಿ ವಿತರಕ ಬಾಬು ಎಂಬಾತನನ್ನು ಬಂಧಿಸಲಾಗಿದ್ದು, ಆತನ ನಿರ್ಲಕ್ಷ್ಯವೇ ಸ್ಫೋಟಕ್ಕೆ ಕಾರಣವೆಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ' ಎಂದು ಪೊಲೀಸ್ ಅಧಿಕಾರಿ ಹೇಳಿದರು.

'ಸ್ಥಳೀಯ ನಿವಾಸಿ ಬಾಬು, ತಮಿಳುನಾಡಿನ ಶಿವಕಾಶಿಯಿಂದ ಪಟಾಕಿ ಖರೀದಿಸಿ ತಂದು ನಗರದ ಅಂಗಡಿಗಳಿಗೆ ಪೂರೈಕೆ ಮಾಡುತ್ತಿದ್ದ. ಬಾಕ್ಸ್‌ಗಳ ಸಂಗ್ರಹಕ್ಕಾಗಿ ಸಣ್ಣ ಗೋದಾಮು ಮಾಡಿಕೊಂಡಿದ್ದ. ಅದೇ ಗೋದಾಮು ಅಕ್ಕ–ಪಕ್ಕದಲ್ಲಿ ಪಂಕ್ಚರ್ ಅಂಗಡಿ, ಲಾರಿ ದುರಸ್ತಿ ಮಳಿಗೆ, ಟೀ ಅಂಗಡಿ ಹಾಗೂ ಮನೆಗಳು ಇದ್ದವು. ಗುರುವಾರವೂ 80 ಬಾಕ್ಸ್ ಪಟಾಕಿ ತರಿಸಿದ್ದ ಆರೋಪಿ, ಗೋದಾಮಿನಲ್ಲಿ ಸಂಗ್ರಹಿಸಿದ್ದ. ಒಂದು ಬಾಕ್ಸ್‌ನಲ್ಲಿ 15 ಕೆ.ಜಿ.ಯಿಂದ 20 ಕೆ.ಜಿ. ಯಷ್ಟು ಪಟಾಕಿ ಇತ್ತು' ಎಂದೂ ಅವರು ವಿವರಿಸಿದರು.

'ಬೆಳಿಗ್ಗೆ 11.40ರ ಸುಮಾರಿಗೆ ಪಟಾಕಿಯ 80 ಬಾಕ್ಸ್‌ಗಳ ಪೈಕಿ ಎರಡು ಬಾಕ್ಸ್‌ಗಳು ಸ್ಫೋಟಗೊಂಡಿದ್ದವು. ಏನಾಯಿತೆಂದು ನೋಡಲು ಸ್ಥಳೀಯರು ಬಂದಾಗ, ದೇಹಗಳು ಛಿದ್ರವಾಗಿ ಬಿದ್ದಿದ್ದವು. ಹಲವೆಡೆ ರಕ್ತ ಚೆಲ್ಲಾಡಿತ್ತು. ಗೋದಾಮು ಹಾಗೂ ಅಕ್ಕ–ಪಕ್ಕದ ಮಳಿಗೆಗಳಲ್ಲಿ ಬೆಂಕಿ ಹೊತ್ತಿಕೊಂಡಿತ್ತು. ಕೆಲ ಮನೆಗಳ ಕಿಟಕಿ ಗಾಜುಗಳು ಒಡೆದಿದ್ದವು. ಅಗ್ನಿಶಾಮಕದ ದಳದ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಬೆಂಕಿ ನಂದಿಸಿದರು' ಎಂದೂ ಅವರು ತಿಳಿಸಿದರು.

'ಗೋದಾಮಿನ ಪಕ್ಕದಲ್ಲಿದ್ದ ಪಂಕ್ಚರ್ ಅಂಗಡಿ ಮಾಲೀಕ ಅಸ್ಲಂ ಪಾಷಾ, ಅಂಗಡಿಯೊಳಗಿದ್ದ ಹೊರಗೆ ಹಾರಿ ಬಿದ್ದು ಮೃತಪಟ್ಟರು. ಇನ್ನೊಂದು ಮಳಿಗೆಗೆ ಸಾಮಗ್ರಿಗಳನ್ನು ಪೂರೈಸಲು ಬಂದಿದ್ದ ಟಾಟಾ ಏಸ್ ಚಾಲಕ ಮನೋಹರ್, ವಾಹನ ಬಳಿಯಿಂದ ಹಾರಿ ಗೋಡೆಗೆ ತಾಗಿ ಮೃತಪಟ್ಟಿದ್ದರು. ಚಹಾ ಅಂಗಡಿ, ರಸ್ತೆಯಲ್ಲಿ ಹೋಗುತ್ತಿದ್ದವರು ತೀವ್ರ ಗಾಯಗೊಂಡರು' ಎಂದೂ ಅವರು ಹೇಳಿದರು.

ವಿಧಿವಿಜ್ಞಾನ ಪ್ರಯೋಗಾಲಯದ ತಜ್ಞರು, ಶ್ವಾನ ದಳದ ಹಾಗೂ ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ಸ್ಥಳದಲ್ಲಿ ಪರಿಶೀಲನೆ ನಡೆಸಿದರು. ಸ್ಫೋಟದ ಅವಶೇಷಗಳ ಮಾದರಿಗಳನ್ನು ತಜ್ಞರು ಸಂಗ್ರಹಿಸಿದರು.

ಲೋಕಸಭೆ ಸ್ಪೀಕರ್ ಭಾಷಣಕ್ಕೆ ಕಾಂಗ್ರೆಸ್ ಬಹಿಷ್ಕಾರ

ಬೆಂಗಳೂರು: ಲೋಕಸಭೆ ಅಧ್ಯಕ್ಷ ಓಂ ಬಿರ್ಲಾ ಅವರು ವಿಧಾನ ಮಂಡಲದ ಉಭಯ ಸದನಗಳ ಸದಸ್ಯರನ್ನುದ್ದೇಶಿಸಿ ಶುಕ್ರವಾರ ಮಾಡಲಿರುವ ಭಾಷಣವನ್ನು ಕಾಂಗ್ರೆಸ್ ಬಹಿಷ್ಕರಿಸಲಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ವಿಧಾನಸೌಧದಲ್ಲಿ ಗುರುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಸಂಸದೀಯ ವ್ಯವಸ್ಥೆಯ ನಡವಳಿಕೆ ಪ್ರಕಾರ, ವಿಧಾನಸಭೆಯಲ್ಲಿ ಸದನದ ಸದಸ್ಯರ ಹೊರತಾಗಿ ರಾಷ್ಟ್ರಪತಿ ಮತ್ತು ರಾಜ್ಯಪಾಲರು ಮಾತ್ರ ಮಾತನಾಡಬಹುದು. ಆದರೆ, ಬಿಜೆಪಿ ಸರ್ಕಾರ ಲೋಕಸಭೆಯ ಸ್ಪೀಕರ್ ಅವರನ್ನು ಭಾಷಣಕ್ಕೆ ಆಹ್ವಾನಿಸುವ ಮೂಲಕ ಕೆಟ್ಟ ಸಂಪ್ರದಾಯಕ್ಕೆ ನಾಂದಿಹಾಡಿದೆ' ಎಂದರು.

ಈ ಕಾರ್ಯಕ್ರಮದ ಕುರಿತು ಸರ್ಕಾರವು ವಿರೋಧ ಪಕ್ಷದ ನಾಯಕರ ಜತೆ ಚರ್ಚೆಯನ್ನೇ ನಡೆಸಿಲ್ಲ. ಈ ರೀತಿಯ ನಡವಳಿಕೆಯ ಮೂಲಕ ಸಂಸದೀಯ ವ್ಯವಸ್ಥೆ ಕುಸಿಯುತ್ತಿದೆ. ಈ ಸಭೆಯಲ್ಲಿ ಕಾಂಗ್ರೆಸ್ ಭಾಗವಹಿಸುವುದಿಲ್ಲ ಎಂದರು.

ಟಾಂಗಾ ಜಾಥಾ: ವಿಧಾನಮಂಡಲ ಅಧಿವೇಶನದ ಕೊನೆ ದಿನ ಶುಕ್ರವಾರವೂ ಕಾಂಗ್ರೆಸ್ ಶಾಸಕರು ಬೆಲೆ ಏರಿಕೆ ವಿರುದ್ಧ ಪ್ರತಿಭಟನೆ ನಡೆಸಲಿದ್ದಾರೆ.

'ರಾಜ್ಯದಲ್ಲಿ ಮತಾಂತರ ನಿಷೇಧ ಕಾಯ್ದೆಯ ಅಗತ್ಯ ಇದೆಯೇ?' ವಿಷಯದ ಕುರಿತು ಸಂವಾದ

ಮತಾಂತರ ನಿಷೇಧ ಕಾಯ್ದೆ ರಾಜಕೀಯ ಅಸ್ತ್ರ

'ಒಂದು ಧರ್ಮದಲ್ಲಿರುವ ಲೋಪಗಳೇ ಮತ್ತೊಂದು ಧರ್ಮಕ್ಕೆ ಜನರು ವಲಸೆ ಹೋಗಲು ಕಾರಣವಾಗುತ್ತವೆ. ಅಂತರ ಧರ್ಮೀಯ ವಿವಾಹಗಳನ್ನು ತಡೆಯುವ ಗುಪ್ತ ಕಾರ್ಯಸೂಚಿಯಿಂದ ಮತಾಂತರ ನಿಷೇಧ ಕಾಯ್ದೆಯನ್ನು ಜಾರಿಗೆ ತರಲಾಗುತ್ತಿದೆ. ಮನುಷ್ಯನ ಆಯ್ಕೆ ಸ್ವಾತಂತ್ರ್ಯಕ್ಕೆ ನಿಯಂತ್ರಣ ಹೇರುವುದು ಸರಿಯಲ್ಲ'- ಇದು 'ರಾಜ್ಯದಲ್ಲಿ ಮತಾಂತರ ನಿಷೇಧ ಕಾಯ್ದೆಯ ಅಗತ್ಯ ಇದೆಯೇ?' ಎಂಬ ವಿಷಯದ ಕುರಿತು 'ಪ್ರಜಾವಾಣಿ' ಏರ್ಪಡಿಸಿದ್ದ ಸಂವಾದದಲ್ಲಿ ವ್ಯಕ್ತವಾದ ಅಭಿಪ್ರಾಯ.

ಚಿತ್ರದುರ್ಗ ಜಿಲ್ಲೆಯಲ್ಲಿ ಆಮಿಷದ ಮತಾಂತರ ನಡೆಯುತ್ತಿದೆ ಎಂದು ಶಾಸಕ ಗೂಳಿಹಟ್ಟಿ ಶೇಖರ್ ಅವರು ಸದನದಲ್ಲಿ ಪ್ರಸ್ತಾಪಿಸಿದ್ದರು. ತಮ್ಮ ತಾಯಿ ಸೇರಿದಂತೆ ಜಿಲ್ಲೆಯಲ್ಲಿ 15–20 ಸಾವಿರ ಜನರನ್ನು ಕ್ರೈಸ್ತ ಧರ್ಮಕ್ಕೆ ಮತಾಂತರ ಮಾಡಲಾಗಿದೆ ಎಂದಿದ್ದರು. ಹೀಗಾಗಿ ಶೀಘ್ರದಲ್ಲೇ ಮತಾಂತರ ನಿಷೇಧ ಕಾಯ್ದೆ ಜಾರಿಗೆ ತರುವುದಾಗಿ ಸರ್ಕಾರ ಘೋಷಿಸಿತ್ತು.

ಸಂವಾದದ ವೀಕ್ಷಣೆಗೆ:
https://bit.ly/3AlicEI

'ಮತಾಂತರ ಇಂದು ನಿನ್ನೆಯದಲ್ಲ'

'ಬಡಜನರನ್ನು ಕ್ರೈಸ್ತ ಮಿಷನರಿಗಳು ಆಮಿಷವೊಡ್ಡಿ ಮತಾಂತರ ಮಾಡುತ್ತಿವೆ ಎಂಬ ವಿಷಯವನ್ನು ಹಲವು ವರ್ಷಗಳಿಂದ ಹೇಳುತ್ತಾ ಬಂದಿದ್ದೇವೆ. ಕ್ರೈಸ್ತ ಮಿಷನರಿಗಳು ಆಸ್ಪತ್ರೆಗೆ ಹೋಗಿ ರೋಗಿ ಹುಷಾರಾಗುತ್ತಾನೆ ಎಂದು ನಂಬಿಸಿ ಬೈಬಲ್ ನೀಡುತ್ತಾರೆ. ಅವರ ಜೊತೆ ನಿರಂತರ ಸಂಪರ್ಕ ಸಾಧಿಸುತ್ತಾರೆ. ತುಳಸಿ ಗಿಡ ತೆಗೆಯಲು ಹೇಳುತ್ತಾರೆ. ಹೆಣ್ಣುಮಕ್ಕಳ ಗಾಜಿನ ಬಳೆ ತೆಗೆಸುತ್ತಾರೆ. ಕುಂಕುಮ ಇಡಬೇಡಿ ಎನ್ನುತ್ತಾರೆ. ಹಿಂದೂ ಧರ್ಮದಲ್ಲಿ ಅಸ್ಪೃಶ್ಯತೆ ಎಂಬ ನ್ಯೂನತೆ ಇರುವುದು ನಿಜ. ಒಬ್ಬ ಶಾಸಕರ ತಾಯಿಯನ್ನೂ ಮತಾಂತರ ಮಾಡುತ್ತಾರೆ ಎಂದರೆ ಅವರು ಎಷ್ಟು ಪ್ರಭಾವಶಾಲಿ ಇರಬಹುದು ಎಂದು ಯೋಚಿಸಿ. ತಂದೆ–ತಾಯಿಯ ಜೊತೆ ಅವರ ಮಕ್ಕಳನ್ನೂ ಮತಾಂತರಕ್ಕೆ ತಳ್ಳಲು ಯಾವ ಕಾನೂನಿನಲ್ಲಿ ಅನುಮತಿ ಇದೆ? ಕೇವಲ ₹5 ಸಾವಿರಕ್ಕೆ ಮತಾಂತರ ಆದವರನ್ನು ನಾನು ನೋಡಿದ್ದೇನೆ. ಹೀಗೆ ಹಣಕ್ಕಾಗಿ ಮತಾಂತರ ಆದವರು, ತಮ್ಮ ಹಿಂದಿನ ಧರ್ಮದಲ್ಲಿ ಪಡೆಯುತ್ತಿದ್ದ ಸರ್ಕಾರಿ ಸೌಲಭ್ಯಗಳನ್ನು ಮುಂದುವರಿಸುವುದು ಸರಿಯಲ್ಲ. ಈಗಿರುವ ಕಾನೂನು ಹಲ್ಲಿಲ್ಲದ ಹಾವಾಗಿದೆ. ಆ ಹಾವಿಗೆ ವಿಷದ ಹಲ್ಲು ನೀಡಲು ಈ ಕಾಯ್ದೆ ಜಾರಿಗೆ ತರಲಾಗುತ್ತಿದೆ.'

ಜಗದೀಶ್ ಶೇಣವ, ದಕ್ಷಿಣ ಕನ್ನಡ ಬಿಜೆಪಿ ಜಿಲ್ಲಾ ಘಟಕದ ವಕ್ತಾರ

'ಧರ್ಮದ ಆಯ್ಕೆ ಸ್ವಾತಂತ್ರ್ಯ ಇದೆ'

'ರಾಜಕಾರಣವು ಧರ್ಮದಲ್ಲಿ ಮಿಳಿತವಾಗಬಾರದು ಎಂದು ಗಾಂಧೀಜಿ ಪ್ರತಿಪಾದಿಸಿದ್ದರು. ಸಂವಿಧಾನದ ಕಲಂ 25ರ ಅಡಿ ಧರ್ಮವನ್ನು ಆಯ್ಕೆ ಮಾಡಿಕೊಳ್ಳುವ ಮೂಲಭೂತ ಹಕ್ಕು ದೇಶದ ಜನರಿಗೆ ಇದೆ. ಸ್ವಾತಂತ್ರ್ಯ ಬಂದು 75 ವರ್ಷಗಳು ಸಂದಿರುವಾಗ ಈಗ ಕಾಯ್ದೆ ಜಾರಿ ಮಾಡುತ್ತಿರುವುದು ರಾಜಕೀಯ ಪ್ರೇರಿತ. ಧರ್ಮ ಪ್ರಚಾರ ನಿಷಿದ್ಧವಲ್ಲ. 18ನೇ ಶತಮಾನದಲ್ಲಿ ಹಿಂದೂ ಧರ್ಮವನ್ನು ಪ್ರಚಾರ ಮಾಡಲಾಗಿದೆ. ಆದರೆ ಯಾರನ್ನೂ ಬಲವಂತವಾಗಿ ಮತಾಂತರ ಮಾಡುವಂತಿಲ್ಲ. ಹೀಗೆ ಮಾಡಿದರೆ ಕ್ರಮ ತೆಗೆದುಕೊಳ್ಳಲು ಕಾನೂನಿನಲ್ಲಿ ಅವಕಾಶ ಇದ್ದು, ಪ್ರತ್ಯೇಕ ಕಾಯ್ದೆ ಅನಗತ್ಯ.

'ಕರ್ನಾಟಕದಲ್ಲಿ ಒತ್ತಾಯದ ಮತಾಂತರ ನಡೆಯುತ್ತಿಲ್ಲ ಎಂದು ಬಿಜೆಪಿ ಸರ್ಕಾರವೇ 2019ರಲ್ಲಿ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದೆ. ಈ ವಿಚಾರ ಸುಪ್ರೀಂ ಕೋರ್ಟ್‌ನಲ್ಲಿ ಇರುವುದರಿಂದ ಅದರ ತೀರ್ಪನ್ನು ಕಾದುನೋಡೋಣ. ಬಿಜೆಪಿ ಪ್ರಭಾವವಿರುವ ಎಂಟು ರಾಜ್ಯಗಳಲ್ಲಿ ಈಗಾಗಲೇ ಕಾಯ್ದೆ ಜಾರಿಗೊಳಿಸಲಾಗಿದೆ. 18 ವರ್ಷದ ಬಳಿಕ ಅಂತರ್ಜಾತಿ ವಿವಾಹವಾದರೆ, ಪೋಷಕರ ಅನುಮತಿ ಬೇಕು ಎಂಬುದು ಈ ರಾಜ್ಯಗಳಲ್ಲಿ ತಂದಿರುವ ಕಾಯ್ದೆಗಳಲ್ಲಿ ಉಲ್ಲೇಖವಾಗಿದೆ. ಹಾಗಾದರೆ ಮೂಲಭೂತ ಹಕ್ಕು ಎಲ್ಲಿ ಹೋಯಿತು? ರಾಜಕೀಯ ಕಾರಣಕ್ಕೋಸ್ಕರ ಧರ್ಮದ ಆಯ್ಕೆ ಸ್ವಾತಂತ್ರ್ಯ ಕಿತ್ತುಕೊಳ್ಳುವುದು ಸರಿಯಲ್ಲ. ಒತ್ತಾಯದ ಮತಾಂತರ ಆಗಿದ್ದರೆ, ದೂರು ದಾಖಲಿಸುವ ಆಯ್ಕೆಗಳಿವೆ'.

ರಮೇಶ್ ಬಾಬು, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ವಕ್ತಾರ

ಜನರ ಗಮನ ಬೇರೆಡೆ ಸೆಳೆಯುವ ಯತ್ನ'

'ತಮ್ಮ ಜಿಲ್ಲೆಯಲ್ಲಿ ಹತ್ತಿಪ್ಪತ್ತು ಸಾವಿರ ಜನರು ಮತಾಂತರ ಆಗುತ್ತಿದ್ದಾರೆ ಎಂದರೆ ಆ ಪ್ರದೇಶದ ಸಾಮಾಜಿಕ, ಆರ್ಥಿಕ ಪರಿಸ್ಥಿತಿಯನ್ನು ಅರಿಯಲು ಒಬ್ಬ ಶಾಸಕರಾಗಿ ಗೂಳಿಹಟ್ಟಿ ಅವರಿಗೆ ಏಕೆ ಆಗಿಲ್ಲ ಎಂದು ಪ್ರಶ್ನಿಸಲು ಬಯಸುತ್ತೇನೆ. ಒಬ್ಬ ಶಾಸಕರಿಂದ ತಮ್ಮ ತಾಯಿಯನ್ನೇ ತಡೆಯಲಾಗದ್ದು, ಕಾಯ್ದೆ ಮೂಲಕ ತಡೆಯಲು ಸಾಧ್ಯವೇ? ದೇಶದಲ್ಲಿ ಎಷ್ಟೋ ನಿಷೇಧ ಕಾಯ್ದೆಗಳಿವೆ. ಆದರೆ ತಡೆಯಲು ಆಗಿದೆಯೇ? ಶಾಸಕರ ತಾಯಿ ಮತಾಂತರವಾದ ಹಳೆಯ ಸುದ್ದಿ ಈಗ ಮುನ್ನೆಲೆಗೆ ಬರಲು ರಾಜಕೀಯ ಕಾರಣವಿದೆ.

'ಬೆಲೆ ಏರಿಕೆ ಹಾಗೂ ಅತ್ಯಾಚಾರದ ಬಗ್ಗೆ ಗಂಭೀರ ಚರ್ಚೆ ನಡೆಯುವ ವೇಳೆ ಸದನದ ಮತ್ತು ರಾಜ್ಯದ ಜನರ ಗಮನವನ್ನು ಬೇರೆಡೆಗೆ ಸೆಳೆಯಲು ಇಂತಹ ಭಾವನಾತ್ಮಕ ವಿಚಾರವನ್ನು ಬಿಜೆಪಿ ಎತ್ತಿಕೊಂಡಿದೆ. ಜಮೀನ್ದಾರರು, ಬ್ರಾಹ್ಮಣರ ಒತ್ತಡದಿಂದ ಪಾರಾಗಲು ಜನರು ಮತಾಂತರ ಆಗುತ್ತಾರೆ ಎಂದು ಸ್ವಾಮಿ ವಿವೇಕಾನಂದರು ತಮ್ಮ ಪುಸ್ತಕದಲ್ಲಿ ಅಂದೇ ಉಲ್ಲೇಖಿಸಿದ್ದರು. ಅದರ ಲೋಪಗಳನ್ನು ಸರಿಪಡಿಸಲು ಈಗಲೂ ಆಗಿಲ್ಲ. ದೇಶದಲ್ಲಿ ಮುಸ್ಲಿಮರ ಸಂಖ್ಯೆ ಶೇ 35ಕ್ಕೆ ಹೆಚ್ಚಳವಾಗಿದೆ ಎಂದು ಸುಳ್ಳು ಹೇಳಲಾಗುತ್ತಿದೆ. ಆದರೆ ದತ್ತಾಂಶಗಳು ಹೀಗೆ ಹೇಳುವುದಿಲ್ಲ. ಇದು ಧರ್ಮದ ಹೆಸರಿನಲ್ಲಿ ಸಮಾಜವನ್ನು ಒಡೆಯುವ ಯತ್ನ'.

ಕೆ.ಎಸ್. ವಿಮಲಾ, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಉಪಾಧ್ಯಕ್ಷೆ

'ಬದಲಾವಣೆಯ ಸಹಜ ಪ್ರಕ್ರಿಯೆ ಗೌರವಿಸಬೇಕು'

'ರಾಜ್ಯದಲ್ಲಿ ಮತಾಂತರ ನಿಷೇಧ ಕಾಯ್ದೆ ಖಂಡಿತವಾಗಿ ಅಗತ್ಯವಿಲ್ಲ. ಜನರು ಪ್ರಜ್ಞಾವಂತರು ಎಂದು ಯಾವ ಸರ್ಕಾರ ಒಪ್ಪಿಕೊಳ್ಳುತ್ತದೆಯೋ ಅಲ್ಲಿ ಇಂತಹ ಕಾಯ್ದೆಗಳ ಅಗತ್ಯವಿರುವುದಿಲ್ಲ. ಹೇಗೆ ಬದುಕಬೇಕು ಎಂಬುದು ಜನರಿಗೆ ಬಿಟ್ಟ ವಿಷಯ. ಅಂತರ್ಜಾತಿ, ಅಂತರ ಧರ್ಮೀಯ ವಿವಾಹಗಳನ್ನು ಮೊದಲು ಮನೆಯವರು ವಿರೋಧಿಸುತ್ತಿದ್ದರು. ಆದರೆ ಈಗ ಸಂಬಂಧಪಡದ ವ್ಯಕ್ತಿಗಳು ನಿಯಂತ್ರಿಸಲು ಯತ್ನಿಸುತ್ತಿರುವುದು ಆತಂಕಕಾರಿ ವಿದ್ಯಮಾನ.

'ಈ ಕಾಯ್ದೆಯನ್ನು ಬಹುಸಂಖ್ಯಾತ ದಲಿತರು ಮತ್ತು ಮಹಿಳೆಯರನ್ನು ಗುರಿಯಾಗಿಸಿ ರೂಪಿಸಲಾಗುತ್ತಿದೆ. ಜೀವಿಯೊಂದು ತಾನು ಜೀವಿಸುತ್ತಿರುವ ಪರಿಸರ ಉಸಿರುಗಟ್ಟುವಂತಿದೆ ಎಂದೆನಿಸಿದಾಗ, ಒಳ್ಳೆಯ ವಾತಾವರಣವನ್ನು ಬಯಸುವುದು ಸಹಜ ಪ್ರಕ್ರಿಯೆ. ಇದು ಮನುಷ್ಯರಿಗೂ ಅನ್ವಯ. ಅನ್ಯಾಯದಿಂದ ಕೂಡಿರುವ ಸಮಾಜವನ್ನು ತೊರೆದು, ನ್ಯಾಯಪರ ವಾತಾವರಣಕ್ಕೆ ಬದಲಾಗುವ ಸಹಜ ಪ್ರಕ್ರಿಯೆಯನ್ನು ಗೌರವಿಸಬೇಕು. ಕೇವಲ ಬಡತನದಿಂದ ಮತಾಂತರ ಆಗುತ್ತಿದೆ ಎಂಬುದು ಸರಿಯಲ್ಲ. ಅದು ಆಂಶಿಕ ಮಾತ್ರ. ಸಮಾಜದ ಅನಿಷ್ಟ ಪದ್ಧತಿಗಳನ್ನು ನಿವಾರಿಸದ ಹೊರತು ಇದು ನಿರಂತರ ಪ್ರಕ್ರಿಯೆಯಾಗಿ ಉಳಿಯುತ್ತದೆ'.

ಸಬಿಹಾ ಭೂಮಿಗೌಡ, ವಿಶ್ರಾಂತ ಕುಲಪತಿ, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ

ಪ್ರಜಾವಾಣಿ ಸಂವಾದ

'ಬಿಜೆಪಿ ಮತ್ತೆ ಕೋಮು ರಾಜಕೀಯಕ್ಕೆ ಮರಳುತ್ತಿದೆ'

ಲಖನೌ (ಪಿಟಿಐ): ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಗೆ ಮುನ್ನ ಬಿಜೆಪಿಯು ತನ್ನ ಸಂಕುಚಿತ ಕೋಮು ಕಾರ್ಯಸೂಚಿಯೊಂದಿಗೆ ಮರಳಿದೆ ಎಂದು ಬಿಎಸ್‌ಪಿ ಅಧ್ಯಕ್ಷೆ ಮಾಯಾವತಿ ಗುರುವಾರ ಆರೋಪಿಸಿದ್ದಾರೆ.

'ಚುನಾವಣೆಗೂ ಮುನ್ನ ಬಿಜೆಪಿ ಮತ್ತೆ ತನ್ನ ಸಂಕುಚಿತ ರಾಜಕೀಯ ಆರಂಭಿಸಿದೆ. ಆದರೆ, ಅವರ ಅಭಿವೃದ್ಧಿ ಯೋಜನೆಗಳು ಪೊಳ್ಳು ಎಂದು ಈಗಾಗಲೇ ಸಾಬೀತಾಗಿದೆ' ಎಂದು ಎಂದು ಅವರು ಟ್ವೀಟ್‌ನಲ್ಲಿ ಟೀಕಿಸಿದ್ದಾರೆ.

'ಪಕ್ಷವು ಈಗ ಧಾರ್ಮಿಕ ಭಾವನೆಗಳು, ಹಿಂದೂ–ಮುಸ್ಲಿಂ ವಿಭಜನೆ ಮೊದಲಾದ ವಿಚಾರಗಳಲ್ಲಿ ರಾಜಕೀಯ ಮಾಡಲು ಆರಂಭಿಸಿದೆ. ಆದರೆ, ಜನರು ಮತ್ತೊಮ್ಮೆ ಮೋಸ ಹೋಗುವುದಿಲ್ಲ.' ಎಂದು ಅವರು ಹೇಳಿದರು.

'ರಾಜ್ಯದ ಜನರ ತಲಾ ಆದಾಯ ಕುಂಠಿತವಾಗಿರುವುದು ಮತ್ತು ಇನ್ನೂ ಬಡವರು ಹಾಗೂ ಹಿಂದುಳಿದವರಾಗಿ ಉಳಿದಿರುವುದನ್ನು ಇತ್ತೀಚಿನ ರಿಸರ್ವ್ ಬ್ಯಾಂಕಿನ ಅಂಕಿ ಅಂಶಗಳು ತೋರಿಸುತ್ತಿವೆ. ಇವು ಬಿಜೆಪಿಯ ಅಭಿವೃದ್ಧಿ ಯೋಜನೆಗಳು ಕೇವಲ ಬಿಸಿ ಗಾಳಿಯಂತೆ ಎಂಬುದನ್ನು ಸಾಬೀತುಪಡಿಸುತ್ತದೆ' ಎಂದು ಹೇಳಿದರು.

ಸಂಕ್ಷಿಪ್ತ ಸುದ್ದಿ

ಕಾಂಗ್ರೆಸ್‌ಗೆ ಲಲಿತೇಶ್‌ಪತಿ ರಾಜೀನಾಮೆ

ಲಲಿತೇಶ್‌ಪತಿ ತ್ರಿಪಾಠಿ

ಲಖನೌ: ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಗೆ ಆರು ತಿಂಗಳು ಇರುವಂತೆಯೇ, ಕಾಂಗ್ರೆಸ್ ಪಕ್ಷಕ್ಕೆ ಹಿನ್ನಡೆಯಾಗಿದೆ. ಮಾಜಿ ಮುಖ್ಯಮಂತ್ರಿ ಕಮಲಾಪತಿ ತ್ರಿಪಾಠಿ ಅವರ ಮೊಮ್ಮಗ ಲಲಿತೇಶ್‌ಪತಿ ತ್ರಿಪಾಠಿ ಪಕ್ಷಕ್ಕೆ ರಾಜೀನಾಮೆ ನೀಡಿದ್ದಾರೆ.

ಹಿರಿಯರು, ನಿಷ್ಠರಾದ ಕಾರ್ಯಕರ್ತರಿಗೆ ಪಕ್ಷದಲ್ಲಿ ಅವಮಾನ ಆಗುತ್ತಿದೆ ಎಂದು ರಾಜೀನಾಮೆಗೆ ಕಾರಣ ನೀಡಿದ್ದಾರೆ. ಮಾಜಿ ಶಾಸಕರೂ ಆದ ಅವರು, ಉತ್ತರ ಪ್ರದೇಶ ಕಾಂಗ್ರೆಸ್ ಘಟಕದ ಉಪಾಧ್ಯಕ್ಷ ಸ್ಥಾನಕ್ಕೂ ರಾಜೀನಾಮೆ ಸಲ್ಲಿಸಿದ್ದಾರೆ.

'ಪಕ್ಷಕ್ಕೆ ನಿಷ್ಠರಾಗಿರುವ ಕಾರ್ಯಕರ್ತರ ಹಿತಾಸಕ್ತಿ ರಕ್ಷಿಸಲು ನಾನು ವಿಫಲವಾಗಿದ್ದೇನೆ' ಎಂದು ಹೇಳಿದ್ದಾರೆ. ಪಕ್ಷದ ಮೂಲಗಳ ಪ್ರಕಾರ, ಉತ್ತರಪ್ರದೇಶದ ಕಾಂಗ್ರೆಸ್ ಘಟಕದ ಅಧ್ಯಕ್ಷ ಅಜಯ್ ಕುಮಾರ್ ಲಲ್ಲು ಅವರ ಕಾರ್ಯವೈಖರಿಗೆ ಕುರಿತು ಅಸಮಾಧಾನ ಇತ್ತು. ಉಪಾಧ್ಯಕ್ಷರಾಗಿದ್ದರೂ ಕಡೆಗಣಿಸಲಾಗುತ್ತಿದೆ ಎಂಬ ಬೇಸರವಿತ್ತು.

ಮುಂದಿನ ಹೆಜ್ಜೆ ಕುರಿತು ಇನ್ನೂ ತೀರ್ಮಾನಿಸಿಲ್ಲ. ಬೆಂಬಲಿಗರ ಜೊತೆಗೆ ಚರ್ಚಿಸಿ ನಿರ್ಧರಿಸುತ್ತೇನೆ ಎಂದು ತಿಳಿಸಿದರು.

ಧನ್‌ಬಾದ್ ನ್ಯಾಯಾಧೀಶರಿಗೆ ಉದ್ದೇಶ ಪೂರ್ವಕವಾಗಿಯೇ ಡಿಕ್ಕಿ: ಸಿಬಿಐ ಹೇಳಿಕೆ

ರಾಂಚಿ (ಪಿಟಿಐ): ಧನ್‌ಬಾದ್ ಕೋರ್ಟ್‌ನ ನ್ಯಾಯಾಧೀಶರಾಗಿದ್ದ ಉತ್ತಮ್ ಆನಂದ್ ಅವರಿಗೆ ಆಟೊ ಚಾಲಕ ಉದ್ದೇಶ ಪೂರ್ವಕವಾಗಿಯೇ ಡಿಕ್ಕಿ ಹೊಡೆದಿದ್ದ ಎಂದು ಸಿಬಿಐ ಗುರುವಾರ ಜಾರ್ಖಂಡ್ ಹೈಕೋರ್ಟ್‌ಗೆ ಹೇಳಿಕೆ ನೀಡಿತು.

ಶಂಕಾಸ್ಪದ ಸಾವಿನ ಪ್ರಕರಣ ಸಂಬಂಧ ಆಟೊಚಾಲಕನನ್ನು ಬಂಧಿಸಲಾಗಿದೆ. ಪ್ರಕರಣದ ವಿಚಾರಣೆ ವೇಳೆ ಸಿಬಿಐ ಅಧಿಕಾರಿಗಳು, ನ್ಯಾಯಾಧೀಶರ ಸಾವಿನ ಪ್ರಕರಣದಲ್ಲಿ ಭಾಗಿಯಾದವರ ಪತ್ತೆಗೆ ತನಿಖೆ ಮುಂದುವರಿದಿದೆ ಎಂದು ಹೇಳಿದರು.

ನ್ಯಾಯಾಧೀಶ, 49 ವರ್ಷದ ಉತ್ತಮ್ ಆನಂದ್ ಅವರು ಜುಲೈ 28ರ ಮುಂಜಾನೆ ಜಾಗಿಂಗ್‌ಗೆ ಹೋಗಿದ್ದಾಗ ಶಂಕಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದರು. ಆಟೊರಿಕ್ಷಾ ಡಿಕ್ಕಿ ಹೊಡೆದಿದ್ದುದು ಬಳಿಕ ಗೊತ್ತಾಗಿತ್ತು.

ಸಿಬಿಐ ವಲಯ ಜಂಟಿ ನಿರ್ದೇಶಕ ಶರದ್ ಅಗರವಾಲ್ ಅವರು, 'ನ್ಯಾಯಾಧೀಶರ ಸಾವು ಅಪಘಾತವಲ್ಲ. ಅವರ ಸಾವಿನ ಹಿಂದಿನ ಸತ್ಯ ತಿಳಿಯಲು ಸಿಬಿಐ ತನಿಖೆಯನ್ನು ಚುರುಕುಗೊಳಿಸಿದೆ' ಎಂದು ಹೇಳಿದರು.

'ಈ ಕೃತ್ಯ ನ್ಯಾಯಾಂಗದ ನೈತಿಕತೆಯನ್ನು ಕುಂದಿಸಿದೆ. ತನಿಖೆ ವಿಳಂಬವಾದಷ್ಟೂ ಸತ್ಯ ತಿಳಿಯುವುದು ಕಷ್ಟವಾಗಬಹುದು' ಎಂದು ಮುಖ್ಯ ನ್ಯಾಯಮೂರ್ತಿ ರವಿ ರಂಜನ್, ನ್ಯಾಯಮೂರ್ತಿ ಸುಜಿತ್ ನಾರಾಯಣ್ ಪ್ರಸಾದ್ ಅವರಿದ್ದ ಪೀಠ ಹೇಳಿತು.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಪಾಡ್‌ಕಾಸ್ಟ್: ಈದಿನದ ವಿಶೇಷ: ಸಂಜೆ 4 **ಸಿನಿ ಮ್ಯಾಟನಿ,** ಪ್ರತೀ ದಿನ: ಬೆಳಿಗ್ಗೆ 7 **ವಚನವಾಣಿ,** ಬೆ. 7.30 **ದಿನದ ಸೂಕ್ತಿ,** ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 **ಪ್ರಜಾವಾಣಿ ವಾರ್ತೆ ಬುಲೆಟಿನ್,** ಬೆಳಿಗ್ಗೆ 9.30 **ಸಂಪಾದಕೀಯ,** ಬೆಳಿಗ್ಗೆ 9 **ಪ್ರಚಲಿತ**
ಪ್ರಜಾವಾಣಿ ಕನ್ನಡ ಧ್ವನಿ
ಭಾನುವಾರ, 26-9-2021
ಕ್ಲಬ್ ಹೌಸ್
ಕಂಗ್ಲಿಷ್, ಇಂಗ್ಲಿಷ್ ಮತ್ತು ಕನ್ನಡ
ಎಂ.ಎಸ್. ನರಸಿಂಹಮೂರ್ತಿ, ಹಾಸ್ಯ ಲೇಖಕ, ಕಿರುತೆರೆ ಸಾಹಿತಿ. **ಎಚ್. ಡುಂಡಿರಾಜ್,** ಚುಟುಕು ಕವಿ, ಕುಟುಕು ವಾಗ್ಮಿ. **ಮನು ಹಂದಾಡಿ,** ನಗೆ ಭಾಷಣಕಾರ, ಕಲಾವಿದ, ಶಿಕ್ಷಕ. **ಸಂಧ್ಯಾ ಶೆಣೈ ಉಡುಪಿ,** ಹಾಸ್ಯ ಭಾಷಣಕಾರ್ತಿ. **ಅಸಾದುಲ್ಲಾ ಬೇಗ್,** ಶಾಯರಿ ಕವಿ
ಪ್ರಜಾವಾಣಿ ಆಲದಮರ
10.30 ರಿಂದ 12.30

ಪಿಟಿಐ ಅಧ್ಯಕ್ಷರಾಗಿ ಅವೀಕ್ ಸರ್ಕಾರ್ ಪುನರಾಯ್ಕೆ

ನವದೆಹಲಿ (ಪಿಟಿಐ): 'ಆನಂದ್ ಬಜಾರ್' ಪತ್ರಿಕಾ ಸಮೂಹದ ಗೌರವ ಸಂಪಾದಕ ಮತ್ತು ಉಪಾಧ್ಯಕ್ಷರಾಗಿರುವ ಅವೀಕ್ ಸರ್ಕಾರ್ ಅವರು ದೇಶದ ಪ್ರಮುಖ ಸುದ್ದಿ ಸಂಸ್ಥೆ ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾದ (ಪಿಟಿಐ) ಅಧ್ಯಕ್ಷರಾಗಿ ಪುನರಾಯ್ಕೆಯಾಗಿದ್ದಾರೆ.

ಪಿಟಿಐ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಅವರನ್ನು ಮುಂದಿನ ಎರಡು ವರ್ಷಗಳ ಅವಧಿಗೆ ಪುನರಾಯ್ಕೆ ಮಾಡಲಾಗಿದೆ. 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಪತ್ರಿಕೆಗಳ ಮಾತೃಸಂಸ್ಥೆಯಾದ 'ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್'ನ ನಿರ್ದೇಶಕ ಕೆ.ಎನ್. ಶಾಂತ ಕುಮಾರ್ ಅವರು ಉಪಾಧ್ಯಕ್ಷರಾಗಿ ಆಯ್ಕೆ ಆಗಿದ್ದಾರೆ.

ಇತರ ಪದಾಧಿಕಾರಿಗಳು: ಆಡಳಿತ ಮಂಡಳಿಯ ಪದಾಧಿಕಾರಿಗಳಾಗಿ ವಿಜಯ್ ಕುಮಾರ್ ಚೋಪ್ರಾ (ಪಂಜಾಬ್ ಕೇಸರಿ), ವಿನೀತ್ ಜೈನ್ (ಟೈಮ್ಸ್ ಆಫ್ ಇಂಡಿಯಾ), ಎನ್. ರವಿ (ದ ಹಿಂದು), ವಿವೇಕ್ ಗೋಯೆಂಕಾ (ದ ಎಕ್ಸ್‌ಪ್ರೆಸ್ ಗ್ರೂಪ್), ಮಹೇಂದ್ರ ಮೋಹನ್ ಗುಪ್ತಾ (ದೈನಿಕ್ ಜಾಗ್ರತ್), ರಿಯಾದ್ ಮ್ಯಾಥ್ಯು (ಮಲಯಾಳ ಮನೋರಮ), ಎಂ.ವಿ. ಶ್ರೇಯಾಂಶ್ ಕುಮಾರ್ (ಮಾತೃಭೂಮಿ), ಆರ್. ಲಕ್ಷ್ಮೀಪತಿ (ದಿನಮಲರ್), ಹೊರ್‌ಮುಸ್ಜಿ ಎನ್. ಕಾಮಾ (ಬಾಂಬೆ ಸಮಾಚಾರ್), ಪ್ರವೀಣ್ ಸೋಮೇಶ್ವರ (ಹಿಂದುಸ್ತಾನ್ ಟೈಮ್ಸ್), ಖ್ಯಾತ ಅರ್ಥಶಾಸ್ತ್ರಜ್ಞ ಪ್ರೊ. ದೀಪಕ್ ನಯ್ಯರ್, ಮಾಜಿ ವಿದೇಶಾಂಗ ಕಾರ್ಯದರ್ಶಿ ಶಿವಶಂಕರ್ ಮೆನನ್, ಹಿರಿಯ ಪತ್ರಕರ್ತ ಮತ್ತು ಬಿಸಿನೆಸ್ ಸ್ಟ್ಯಾಂಡರ್ಡ್ ಪತ್ರಿಕೆಯ ಮಾಜಿ ಅಧ್ಯಕ್ಷ ಟಿ.ಎನ್. ನಿನಾನ್ ಮತ್ತು ಟಾಟಾ ಸನ್ಸ್ ಲಿಮಿಟೆಡ್‌ನ ಮಾಜಿ ಕಾರ್ಯಕಾರಿ ನಿರ್ದೇಶಕ ಆರ್. ಗೋಪಾಲಕೃಷ್ಣನ್ ಆಯ್ಕೆಯಾಗಿದ್ದಾರೆ.

ಪರಸ್ಪರ ಅಂತರ ಕಾಯ್ದುಕೊಳ್ಳಿ

ಕರ್ನಾಟಕ ರಾಜ್ಯ ವಕ್ಫ್ ಮಂಡಳಿ
[ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ವಕ್ಫ್ ಕಾಯ್ದೆ 1995 ರ ಅಡಿಯಲ್ಲಿ ರಚಿಸಲಾದ ಶಾಸನಬದ್ಧ ಸಂಸ್ಥೆ]
(ಕೇಂದ್ರ ಕಾಯಿದೆ –43–1995)]
'ದಾರುಲ್ ವಕ್ಫ್', #6, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು – 560 052, ದೂರವಾಣಿ : 080–22264594/22264595, ಫ್ಯಾಕ್ಸ್ : 080–22255663, ವೆಬ್‌ಸೈಟ್: www.karwakf.org ಇ–ಮೇಲ್ : info@karwakf.org
ಸಂಖ್ಯೆ : ಕರಾವಮಂ/ಎಂಎಸ್‌ಸಿ/09/ಸಿಎನ್‌ಆರ್/20–21 ದಿನಾಂಕ:23.09.2021

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಚಾಮರಾಜನಗರ ಜಿಲ್ಲೆ, ಕೊಳ್ಳೇಗಾಲ ತಾಲ್ಲೂಕು, ಬಸ್ತಿಪುರ ಗ್ರಾಮದಲ್ಲಿರುವ ಎಸ್‌ಎಫ್ ನಂ.125ರ ಒಟ್ಟು 8 ಎಕರೆ 77 ಸೆಂಟ್ಸ್ ಜಮೀನು ನೋಂದಣಿ ಸಂಖ್ಯೆ: KTW(REG) 5 MYE /1981-82 at Sl. No. 6 ರನ್ವಯ ವಕ್ಫ್ ಆಸ್ತಿ ಎಂದ ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯಲ್ಲಿ ನೋಂದಾಯಿಸಲಾಗಿದೆ.

SF.No.125 ಸಂಖ್ಯೆಯುಲ್ಲಿರುವ ಈ ಜಮೀನುಗಳು SF.No.125/1 ಅಳತೆ:03ಎ–12ಸೆಂಟ್ಸ್, SF.No.125/2 ಅಳತೆ:02ಎ–02ಸೆಂಟ್ಸ್, SF.No.125/3 ಅಳತೆ:01ಎ–31ಸೆಂಟ್ಸ್, SF.No.125/4 ಅಳತೆ:02ಎ–32ಸೆಂಟ್ಸ್ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕು, ಬಸ್ತಿಪುರ ಗ್ರಾಮಲ್ಲಿದೆ.

ಈ ಆಸ್ತಿಯು ಅಂಜುಮನ್–ಇ–ಇಸ್ಲಾಮಿಯಾ (ಸುನ್ನಿ), ಕೊಳ್ಳೇಗಾಲ ನಗರ & ತಾಲೂಕು, ಇವರ ಆಡಳಿತ ಅಧೀನದಲ್ಲಿರುತ್ತದೆ. ಸದರಿ ಆಸ್ತಿಯು ವಿವಿಧ ಪ್ರಕರಣಗಳ ವಿಷಯವಾಗಿದೆ. ಪ್ರಸ್ತಾಪಿತ ಆಸ್ತಿಯ ಹಕ್ಕು ಘೋಷಣೆ, ಸ್ವಾಧೀನ ಮತ್ತು ಲಾಭದ ಪ್ರಾರ್ಥನೆಯೊಂದಿಗೆ ಕೊಳ್ಳೇಗಾಲದ ಮುನ್ಸಿಫ್ ನ್ಯಾಯಾಲಯದಲ್ಲಿ ಸಂಸ್ಥೆಯು, ಶ್ರೀ ಸೈಯದ್ ಅಮೀರ್ ಮತ್ತು ಇತರರ ವಿರುದ್ಧ ದಾಖಲಿಸಿದ ಮೊಕದ್ದಮೆ ನಂ.269/1989 ಯಲ್ಲಿ ಗೌರವಾನ್ವಿತ ನ್ಯಾಯಾಲಯವು ಈ ಕೆಳಗಿನಂತೆ ಸಂಸ್ಥೆಯ ಪರವಾಗಿ ತೀರ್ಪು ನೀಡಿದೆ.

"In the result, it is hereby declared that the plaintiff No.1 is the absolute owner of the suit schedule property. Consequentially, the alienations by the defendants inter se are not binding on the plaintiffs and the defendants are hereby directed to hand over the possession of the suit schedule property to the plaintiff No.1 within three months from the date of decree."

ಈ ಆದೇಶವನ್ನು ಪ್ರಶ್ನಿಸಿ ಪ್ರತಿವಾದಿಗಳು ಆರ್.ಎ. ನಂ.72/2009 ಅನ್ನು ಚಾಮರಾಜನಗರದ ಸಿವಿಲ್ ನ್ಯಾಯಾಲಯದಲ್ಲಿ ದಾಖಲಿಸಿದ್ದು, ಮಾನ್ಯ ನ್ಯಾಯಾಲಯವು O.S. No.269/1989ರ ಆದೇಶವನ್ನು ರದ್ದುಗೊಳಿಸಿದೆ. ತದನಂತರ ಸಂಸ್ಥೆಯು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ R.S.A.No.1232/2012 ದಾಖಲಿಸಿದ್ದು, ಪ್ರಕರಣವು ಇತ್ಯಾರ್ಥಕ್ಕೆ ಬಾಕಿ ಇರುತ್ತದೆ.

ವಕ್ಫ್ ಕಾಯ್ದೆ, 1995ರ ಕಲಂ 104ಎ ಅನುಸಾರ ಯಾವುದೇ ವಕ್ಫ್ ಆಸ್ತಿಯ ಮಾರಾಟ, ಉಡುಗೊರೆ, ವಿನಿಮಯ, ಅಡಮಾನ ಅಥವಾ ವರ್ಗಾವಣೆ ಆರಂಭದಿಂದಲೇ ನಿರರ್ಥಕವಾಗುವುದೆಂದಿದೆ. ಮೇಲೆ ವಿವರಿಸಿದ ವಕ್ಫ್ ಆಸ್ತಿ ಬಗ್ಗೆ ಯಾವುದೇ ವ್ಯಕ್ತಿಗಳಿಂದ ವಹಿವಾಟು ಅಥವಾ ಅಕ್ರಮ ಶಿಕ್ಷಾರ್ಹವಾಗುವುದು.

ಯಾವುದೇ ವ್ಯಕ್ತಿಯು ಮೇಲೆ ವಿವರಿಸಿದ ಸ್ವತ್ತಿನ ಮಾರಾಟ, ಉಡುಗೊರೆ, ವಿನಿಮಯ, ಗುತ್ತಿಗೆ, ವಹಿವಾಟುಗಳನ್ನು ತನ್ನ ಸ್ವಂತ ಅಪಾಯದಿಂದ ಹಾಗೆ ಮಾಡುವನು. ಈ ರೀತಿಯ ಸದರಿ ಸ್ಥಿರ ಸ್ವತ್ತಿನ ವಹಿವಾಟುಗಳು ಅನೂರ್ಜಿತವಾಗುತ್ತದೆ.

ವಾಸಾಸಂಇ/ಬೆಂನ/ಜಿಎ/1633/2021–22 ಸಹಿ/– ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಜಿಲ್ಲಾ ಪಂಚಾಯತಿ ಕಟ್ಟಡ, ಮೊದಲನೇ ಮಹಡಿ, ಎಸ್.ಕರಿಯಪ್ಪ ರಸ್ತೆ, (ಬನಶಂಕರಿ ದೇವಸ್ಥಾನದ ಹತ್ತಿರ) ಬನಶಂಕರಿ ಬೆಂಗಳೂರು – 560070.
No. BUZP/CR-40/REP(EAST)/24/2021-22 Date: 23-09-2021

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ನೋಟೀಸ್ (ದ್ವಿ–ಲಕೋಟೆ)

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಕೆರೆಗಳ ಸಂರಕ್ಷಣೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದಂತೆ ವಿವರವಾದ ಯೋಜನಾ ವರದಿಯನ್ನು ಸಿದ್ಧಪಡಿಸಲು ತಾಂತ್ರಿಕ ಸಮಾಲೋಚಕರನ್ನು ನೇಮಕ ಮಾಡಲು ಅರ್ಹ ಮತ್ತು ಆಸಕ್ತ ಸೇವಾದಾರರಿಂದ ಕರ್ನಾಟಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿ–ಲಕೋಟೆ ಪದ್ಧತಿಯಡಿ ಇ–ಬಿಡ್ ಆಹ್ವಾನಿಸಲಾಗಿದೆ. ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಸಂಸ್ಕರಿಸಲಾಗುವುದು. ಬಿಡ್‌ದಾರರು ಟೆಂಡರ್ ಡಾಕ್ಯುಮೆಂಟನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: www.eproc.karnataka.gov.in ನಿಂದ ದಿನಾಂಕ: 24.09.2021 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 25.10.2021. 4:00 ಗಂಟೆವರೆಗೆ. ಹೆಚ್ಚಿನ ವಿವರಗಳನ್ನು ಟೆಂಡರ್ ಡಾಕ್ಯುಮೆಂಟ್‌ನಿಂದ ಅಥವಾ ಕಾರ್ಯಪಾಲಕ ಅಭಿಯಂತರರ ಕಛೇರಿ, ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ (ಬನಶಂಕರಿ ದೇವಸ್ಥಾನದ ಹತ್ತಿರ) ಬೆಂಗಳೂರು–560070 ಕಛೇರಿಯಿಂದ ಪಡೆಯಬಹುದು. (ಇ–ಮೇಲ್–predurban@gmail.com).

ಸಹಿ/–
ಕಾರ್ಯಪಾಲಕ ಅಭಿಯಂತರರು,
ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ,
ಬೆಂಗಳೂರು ನಗರ, ಬೆಂಗಳೂರು
DIPR/DDU/Zen/RO-1658/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರವರ ಕಛೇರಿ, ರಾಜಾಜಿನಗರ ವಿಭಾಗ, ಸರ್. ಎಂ. ವಿಶ್ವೇಶ್ವರಯ್ಯ ವಾಣಿಜ್ಯ ಕಟ್ಟಡ, 12ನೇ ಮುಖ್ಯ ರಸ್ತೆ, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560 010.
ಸಂಖ್ಯೆ:ಕಾ.ಪಾ.ಅ/ರಾಜಾಜಿ/ಇ-ಪ್ರೋ/04/2021-22 ದಿನಾಂಕ: 23-09-2021

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ ಲಕೋಟೆ ಪದ್ಧತಿ) ಕೆಡಬ್ಲ್ಯೂ-4
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು ರಾಜಾಜಿನಗರ ವಿಭಾಗ ಬೃಬೆಂಮಪಾ, ಬೆಂಗಳೂರು ಇವರು ಕೆಳಗೆ ತಿಳಿಸಿರುವ ನಿರ್ಮಾಣ ಕಾಮಗಾರಿಗಳಿಗೆ ಬಿ.ಬಿ.ಎಂ.ಪಿ/ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ರೈಲ್ವೆ/ಎಂಇಎಸ್/ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಐಟಂದರದ ಟೆಂಡರ್‌ಗಳನ್ನು ಕೆಡಬ್ಲ್ಯೂ-4 ರೀತಿಯಲ್ಲಿ ಆಹ್ವಾನಿಸಿದ್ದಾರೆ.

ಕ್ರ. ಸಂ.	ಅನುಮೋದನೆಗೊಂಡ ಕೆಲಸದ ಹೆಸರು	ಕಾಮಗಾರಿಯ ಅಂದಾಜು ವೆಚ್ಚ (ಲಕ್ಷ ರೂ. ಗಳಲ್ಲಿ)
	ಸಾಮಾನ್ಯ ವರ್ಗಕ್ಕೆ ಮೀಸಲಾತಿ	
1)	ರಾಜಾಜಿನಗರ ವಿಧಾನ ಸಭಾ ಕ್ಷೇತ್ರದ ವಾರ್ಡ್ ನಂ.100, 101 ಮತ್ತು 108ರ ರಸ್ತೆಗಳು ಒಳಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳ ಸಮಗ್ರ ಅಭಿವೃದ್ಧಿ ಕಾಮಗಾರಿ (ಅನುಮೋದನೆಯಾದ ಕ್ರಿಯಾ ಯೋಜನೆ ಕ್ರ.ಸಂ.729 (ಎ ನಿಂದ ಒ ವರೆಗೆ) ಅನುಬಂಧ-02 ಪ್ಯಾಕೇಜ್-01ರಲ್ಲಿ ಕ್ರಮವಾಗಿ ನಮೂದಿಸಿರುವಂತೆ/2ನೇ ಕರೆ.	3000.00
2)	ರಾಜಾಜಿನಗರ ವಿಧಾನ ಸಭಾ ಕ್ಷೇತ್ರದ ವಾರ್ಡ್ ನಂ.108, 100, 99, 97 ಮತ್ತು 107ರ ರಸ್ತೆಗಳು ಒಳಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳ ಸಮಗ್ರ ಅಭಿವೃದ್ಧಿ ಕಾಮಗಾರಿ (ಅನುಮೋದನೆಯಾದ ಕ್ರಿಯಾ ಯೋಜನೆ ಕ್ರ.ಸಂ.1294, 1295, 1296, 1298, 1312, 726, 727, 1289, 1290, 1323 ಮತ್ತು 1292 ಅನುಬಂಧ-2 ಪ್ಯಾಕೇಜ್-3ರಲ್ಲಿ ಕ್ರಮವಾಗಿ ನಮೂದಿಸಿರುವಂತೆ/2ನೇ ಕರೆ.	1875.00
3)	ರಾಜಾಜಿನಗರ ವಿಧಾನ ಸಭಾ ಕ್ಷೇತ್ರದ ವಾರ್ಡ್ ನಂ.100, 99 ಮತ್ತು 107ರ ರಸ್ತೆಗಳು ಒಳಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳ ಸಮಗ್ರ ಅಭಿವೃದ್ಧಿ ಕಾಮಗಾರಿ (ಅನುಮೋದನೆಯಾದ ಕ್ರಿಯಾ ಯೋಜನೆ ಕ್ರ.ಸಂ.1305, 1308, 1311, 1313 ಮತ್ತು 1325 ಅನುಬಂಧ-2 ಪ್ಯಾಕೇಜ್-4ರಲ್ಲಿ ಕ್ರಮವಾಗಿ ನಮೂದಿಸಿರುವಂತೆ/2ನೇ ಕರೆ.	1050.00
4)	ರಾಜಾಜಿನಗರ ವಿಧಾನ ಸಭಾ ಕ್ಷೇತ್ರದ ವಾರ್ಡ್ ನಂ.98ರ ರಸ್ತೆಗಳು ಒಳಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳ ಸಮಗ್ರ ಅಭಿವೃದ್ಧಿ ಕಾಮಗಾರಿ (ಅನುಮೋದನೆಯಾದ ಕ್ರಿಯಾ ಯೋಜನೆ ಕ್ರ.ಸಂ.607, 608 ಮತ್ತು 1324 ಅನುಬಂಧ-2 ಪ್ಯಾಕೇಜ್-5ರಲ್ಲಿ ಕ್ರಮವಾಗಿ ನಮೂದಿಸಿರುವಂತೆ/2ನೇ ಕರೆ.	1300.00

ಇಎಂಡಿ ರೂ.ಗಳಲ್ಲಿ : ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 675 ವೆಚ್ಚ 12, 2020 ದಿನಾಂಕ: 22-12-2020 (31-12-2021ರವರೆಗೆ ಮಾನ್ಯ) ಪ್ರಕಾರ ರಿಯಾಯಿತಿ ನೀಡಲಾಗಿದೆ. ಟೆಂಡರ್‌ನ ಕಾರ್ಯಸೂಚಿ: 1. ವಿಚಾರಣೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 04-10-2021 ಸಂಜೆ 4:00 ಗಂಟೆಯವರೆಗೆ. 2. ಪೂರ್ವ ಬಿಡ್ ಸಭೆಯನ್ನು ದಿನಾಂಕ: 01-10-2021 ಬೆಳಗ್ಗೆ 11:30 ಗಂಟೆಗೆ ಮೇಲ್ಕಂಡ ಕಚೇರಿಯಲ್ಲಿ ನಡೆಸಲಾಗುವುದು. 3. ಭರ್ತಿಯಾದ ಪ್ರಸ್ತಾವನೆಯನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ: 16-10-2021 ಸಂಜೆ 4:00 ಗಂಟೆಯವರೆಗೆ. 4. ತಾಂತ್ರಿಕ ಪ್ರಸ್ತಾವನೆಯನ್ನು ತೆರೆಯುವ ದಿನಾಂಕ: 18-10-2021 ಸಂಜೆ 4:00 ಗಂಟೆಗೆ. 5. ಆರ್ಥಿಕ ಪ್ರಸ್ತಾವನೆಗಳನ್ನು ತಾಂತ್ರಿಕ ಪ್ರಸ್ತಾವನೆಯ ಅನುಮೊದನೆಯ ನಂತರ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಅಥವಾ https://eproc.karnataka.gov.in ಇಲ್ಲಿಗೆ ಲಾಗಿನ್‌ಮಾಡಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ರಾಜಾಜಿನಗರ ವಿಭಾಗ, ಬೃಬೆಂಮಪಾ.

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಯೋಜನಾ ನಿರ್ದೇಶಕರ ಕಾರ್ಯಾಲಯ KSHIP
ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ
(ಲೋಕೋಪಯೋಗಿ ಇಲಾಖೆ)
ಲೋಕೋಪಯೋಗಿ ಇಲಾಖೆ ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು – 560001
ಟೆಲಿಫೋನ್ ನಂ 080–22126758/59/61, ಫ್ಯಾಕ್ಸ್: 22229666, 22230510
E-mail : piukship@gmail.com

ಸಾರ್ವಜನಿಕ ತಿಳುವಳಿಕೆ ಪತ್ರ
(ಕರ್ನಾಟಕ ಹೆದ್ದಾರಿ ಕಾಯ್ದೆ 1964 ಕಲಂ 17(1)(2)ರ ಅಡಿಯಲ್ಲಿ)

ಸಂಖ್ಯೆ: ಕರಾಹೆಅಯೋ/ಯೋಅಧ/ಭೂಸ್ವಾ/ಎಸ್‌ಆರ್–01/2021–22 ದಿನಾಂಕ : 22.09.2021

ಕರ್ನಾಟಕ ಸರ್ಕಾರವು ತನ್ನ ಅಧಿಸೂಚನೆ ಸಂಖ್ಯೆ: ಲೋಇ/ಇ–127/ಇಎಪಿ/2021 ಬೆಂಗಳೂರು, ದಿನಾಂಕ: 13.09.2021 ಕರ್ನಾಟಕ ರಾಜ್ಯ ಪತ್ರದ ದಿನಾಂಕ : 16.09.2021 ರಂತೆ **ರಾಜ್ಯ ಹೆದ್ದಾರಿ ಸಂಖ್ಯೆ : 85 ರಲ್ಲಿ ಪ್ಯಾಕೇಜ್ ಸಂಖ್ಯೆ: 2 (ಮಾಗಡಿಯಿಂದ ಸೋಮವಾರಪೇಟೆ)** ರಸ್ತೆ ಅಭಿವೃದ್ಧಿಪಡಿಸುವ ಉದ್ದೇಶಕ್ಕಾಗಿ ಅವಶ್ಯಕವಾಗಿರುವ ಗ್ರಾಮಠಾಣ ಸ್ವತ್ತುಗಳು/ಜಮೀನುಗಳನ್ನು ಕರ್ನಾಟಕ ಹೆದ್ದಾರಿ ಕಾಯ್ದೆ 1964ರ ಕಲಂ 15ರ ಅಡಿಯಲ್ಲಿ ಅಧಿಸೂಚಿಸಿದೆ. ಈ ಪ್ರಕಟಣೆಯಿಂದ ತಿಳಿಯಪಡಿಸುವುದೇನೆಂದರೆ ಈ ಕೆಳಗೆ ನಮೂದಿಸಿದ ವಿವರಗಳುಳ್ಳ ಗ್ರಾಮಠಾಣ ಸ್ವತ್ತು/ಜಮೀನುಗಳಲ್ಲಿನ ಹಕ್ಕು ಸ್ವಾಮಿತ್ವವನ್ನು ಪರಿಶಮನಗೊಳಿಸಿ ರಾಜ್ಯ ಸರ್ಕಾರವು ತನ್ನ ಸ್ವಾಧೀನಕ್ಕೆ ತೆಗೆದುಕೊಳ್ಳಲು ಉದ್ದೇಶಿಸಿದೆ. ಸದರಿ ಜಮೀನುಗಳಲ್ಲಿ ಯಾವುದೇ ರೀತಿಯ ಆಸಕ್ತಿವುಳ್ಳವರು ಖುದ್ದಾಗಿ ಅಥವಾ ಅವರ ಪ್ರತಿನಿಧಿ ಮುಖಾಂತರ ಉಪವಿಭಾಗಾಧಿಕಾರಿಗಳು, ತುಮಕೂರು ಉಪವಿಭಾಗ, ತುಮಕೂರು (ದೂರವಾಣಿ ಸಂಖ್ಯೆ: 0816–2278493)ರವರ ಸಮಕ್ಷಮದಲ್ಲಿ ಅಥವಾ ಲಿಖಿತ ರೂಪದಲ್ಲಿ (ಅಂಚೆ ಮೂಲಕ) ತಮ್ಮ ಹಕ್ಕು ಬಾಧ್ಯತೆಗಳ ಬಗ್ಗೆ, ದಿನಾಂಕ: **21.10.2021** ರ ಒಳಗಾಗಿ ದಾಖಲೆಗಳನ್ನು ಹಾಜರುಪಡಿಸಿ ಪರಿಹಾರ ಕುರಿತು ಕ್ಲೈಮ್ (Claim) ಮಾಡಲು ಅಥವಾ ಯೋಜನಾ ಅನುಷ್ಠಾನ ಘಟಕದಿಂದ ನೇಮಕಗೊಂಡಿರುವ ಕೆಶಿಪ್ ಸಿಬ್ಬಂದಿ ತಮ್ಮನ್ನು ಸಂಪರ್ಕಿಸಿದಲ್ಲಿ ಅವರಿಗೆ ದಾಖಲೆಗಳನ್ನು ನೀಡಲು ಸೂಚಿಸಿದೆ.

–: ಷೆಡ್ಯೂಲ್:–
ಗ್ರಾಮ : ಚೌಡನಕುಪ್ಪೆ ತಾಲ್ಲೂಕು : ಕುಣಿಗಲ್
ಹೋಬಳಿ : ಹುಲಿಯೂರುದುರ್ಗ ಜಿಲ್ಲೆ : ತುಮಕೂರು

ಕ್ರಮ ಸಂಖ್ಯೆ	ಖಾತೆದಾರರ ಹೆಸರು ಪಹಣಿಯಂತೆ ಶ್ರೀಯುತರು/ಶ್ರೀಮತಿ	ಸ್ವತ್ತಿನ ಸಂಖ್ಯೆ/ಸರ್ವೆ ನಂ.	ಭೂಸ್ವಾಧೀನಕ್ಕೆ ಒಳಪಡುವ ವಿಸ್ತೀರ್ಣ ಚ.ಮೀ/ಚ.ಅಡಿ
1	ನಾರಾಯಣರಾವ್ ಬಿನ್ ಲೇಟ್ ಗಣೇಶರಾವ್	90	27.88
2	ಜಯಲಕ್ಷ್ಮಮ್ಮ ಕೋಂ ಲೇ.ಮಹದೇವಯ್ಯ	105/ಎ1	18.275
3	ಮಂಜುಳ ಕೆ ಕೋಂ ಗಿರಿಗೌಡ	105/ಎ	18.5
4	ಶಿವಲಿಂಗಯ್ಯ ಬಿನ್ ಮರಿಯಪ್ಪ	115/69	76.56
5	ಸಿ.ಎಂ.ಕೃಷ್ಣೇಗೌಡ ಬಿನ್ ಮರಿದೊಡ್ಡಯ್ಯ	121/70	43.07
6	ಕಮಲ ಕೋಂ ಲೇ.ಪುಟ್ಟಸ್ವಾಮಿ	206	31.92
7	ಚಿಕ್ಕಮ್ಮ ಕೋಂ ಲೇಟ್ ಮೋಟಯ್ಯ	212/123	56.25
8	ಶಿವಾಜಿರಾವ್ ಬಿನ್ ಲೇ.ವೆಂಕೋಬರಾವ್	7	67.5
9	ಶಿವಾಜಿರಾವ್ ಬಿನ್ ಲೇ.ವೆಂಕೋಬರಾವ್	8	22.5
		ಒಟ್ಟು	362.455

ಗ್ರಾಮ : ಡಿ.ಹೊಸಹಳ್ಳಿ ತಾಲ್ಲೂಕು : ಕುಣಿಗಲ್
ಹೋಬಳಿ : ಹುಲಿಯೂರುದುರ್ಗ ಜಿಲ್ಲೆ : ತುಮಕೂರು

ಕ್ರಮ ಸಂಖ್ಯೆ	ಖಾತೆದಾರರ ಹೆಸರು ಪಹಣಿಯಂತೆ ಶ್ರೀಯುತರು/ಶ್ರೀಮತಿ	ಸ್ವತ್ತಿನ ಸಂಖ್ಯೆ/ಸರ್ವೆ ನಂ.	ಭೂಸ್ವಾಧೀನಕ್ಕೆ ಒಳಪಡುವ ವಿಸ್ತೀರ್ಣ ಚ.ಮೀ/ಚ.ಅಡಿ
10	ವಿಜಯಲಕ್ಷ್ಮೀ ಕೋಂ ಲೇಟ್ ರಾಜಣ್ಣ ಜಂಟಿ ಹೆಚ್ ಬಿ ಲಕ್ಷ್ಮಮ್ಮ ಕೋಂ ಲೇಟ್ ಹೆಚ್ ಕೆ ಶಾಂತ ಹೆಚ್ ಎಸ್ ಗೀತಾ ಕೋಂ ಹೆಚ್ ಬಿ ರಮೇಶ್	ಸ ನಂ 380/2	20
11	ವಿಜಯಲಕ್ಷ್ಮೀ ಕೋಂ ಲೇಟ್ ರಾಜಣ್ಣ ಜಂಟಿ ಹೆಚ್ ಬಿ ಲಕ್ಷ್ಮಮ್ಮ ಕೋಂ ಲೇಟ್ ಹೆಚ್ ಕೆ ಶಾಂತ ಹೆಚ್ ಎಸ್ ಗೀತಾ ಕೋಂ ಹೆಚ್ ಬಿ ರಮೇಶ್	ಸ ನಂ 390	805.6
12	ಕೆ ಕೆ ವೆಂಕಟೇಶ್ ಬಿನ್ ಲೇಟ್ ಕೆಂಪಯ್ಯ	246	124.4
13	ಕೆ ಕೆ ಕುಮಾರ್ ಬಿನ್ ಲೇಟ್ ಕೆಂಪಯ್ಯ	247	141.9
14	ಹೆಚ್ ಎಂ ವಿದ್ಯಾರಾಣಿ (ಪೆಟ್ರೋಲ್ ಬಂಕ್)	177	170.5
15	ಶಶಿಕಲಾ ಕೊಂ ಕೆ ಕೆ ರಾಜು	69	170.5
16	ಪಿ ಜೀವನ್ ಕುಮಾರ್	70	310.20
17	ವಿಜಯಲಕ್ಷ್ಮೀ ಕೋಂ ಲೇಟ್ ರಾಜಣ್ಣ ಮತ್ತು ಇತರರು	ಸ ನಂ 388	1602.7
18	ಹೆಚ್ ಟಿ ಹೊನ್ನಪ್ಪ ಬಿನ್ ತಿರುಮಲಯ್ಯ ಹೆಚ್ ಟಿ ಕೃಷ್ಣಪ್ಪ ಬಿನ್ ತಿರುಮಲಯ್ಯ	251	607.02
19	ಸುಶೀಲ ಕೋಂ ದೀಲಿಪ್ ಕುಮಾರ್	104	147.5
20	ಲಕ್ಷ್ಮೀದೇವಿ ಎನ್ ನಿರ್ಮಲ ಎನ್ ಕೋಂ ನೇಮಿಚಂದ್ ಪಟೇಲ್	104/1	416.7
21	ಸೌಭಾಗ್ಯಮ್ಮ ಕೋಂ ಜಯರಾಜು	346	502.7
		ಒಟ್ಟು	5559.72

ಗ್ರಾಮ : ಉಂಗ್ರ ತಾಲ್ಲೂಕು : ಕುಣಿಗಲ್
ಹೋಬಳಿ : ಹುಲಿಯೂರುದುರ್ಗ ಜಿಲ್ಲೆ : ತುಮಕೂರು

ಕ್ರಮ ಸಂಖ್ಯೆ	ಖಾತೆದಾರರ ಹೆಸರು ಪಹಣಿಯಂತೆ ಶ್ರೀಯುತರು/ಶ್ರೀಮತಿ	ಸ್ವತ್ತಿನ ಸಂಖ್ಯೆ/ಸರ್ವೆ ನಂ.	ಭೂಸ್ವಾಧೀನಕ್ಕೆ ಒಳಪಡುವ ವಿಸ್ತೀರ್ಣ ಚ.ಮೀ/ಚ.ಅಡಿ
22	ಲಕ್ಷ್ಮಮ್ಮ ಕೋಂ ಚಂದ್ರಪ್ಪ	224	33.55
23	ಶಾಂತಮ್ಮ ಕೊಂ ಭಯರಯ್ಯ	23	30.8
24	ಜಯಮ್ಮ ಕೋಂ ಲೇ.ಭದ್ರಯ್ಯ	15	62.1
25	ಶ್ರೀಕಂಠಶೆಟ್ಟಿ ಬಿನ್ ಲೇ.ಭದ್ರಯ್ಯ	184/100	40.02
26	ಕೆಂಪಮ್ಮ ಕೋಂ ಮಾಯಪ್ಪಗೌಡ	13	40.02
27	ರಾಜು ಬಿನ್ ಸಂಜೀವಶೆಟ್ಟಿ	16	54
28	ಸಣ್ಣಮರಿಯಪ್ಪ ಬಿನ್ ಲೇ.ಭದ್ರೇಗೌಡ	25	51
29	ತಿಮ್ಮಮ್ಮ ಕೋಂ ವೀರಭದ್ರಯ್ಯ	181/191	48.8
30	ಕೃಷ್ಣಪ್ಪ ಬಿನ್ ಮಾಯಪ್ಪಗೌಡ	202	92
31	ನಾರಾಯಣಪ್ಪ ಬಿನ್ ಮಾಯಪ್ಪಗೌಡ	26	72.16
32	ಶಿವಲಿಂಗಯ್ಯ ಉ. ರಾಮಲಿಂಗಯ್ಯ ಬಿನ್ ಲಿಂಗಯ್ಯ	27/59	68.88
33	ಲಕ್ಷ್ಮಮ್ಮ ಕೋಂ ಚನ್ನಯ್ಯ ಉ.ಗಾಂಧಿ	28/ಎ	51
34	ವಿಜಯಲಕ್ಷ್ಮೀ ಕೋಂ ರಾಮಕೃಷ್ಣಯ್ಯ	29/165	51
35	ಮಂಗಳಗೌರಮ್ಮ ಕೋಂ ಮಾಸ್ತಯ್ಯ	199/180	73.2
36	ಶಿವಮ್ಮ ಕೋಂ	10	52.8
37	ಸೋಮಶೇಖರ್ ನರಸಿಂಹಮೂರ್ತಿ ಬಿನ್ ನರಸಿಂಹಯ್ಯ	9ಎ	54.6
38	ಗುಂಡಯ್ಯ ಬಿನ್ ಚಿಕ್ಕಪುಟ್ಟಯ್ಯ	9	54.6
39	ಶಿವಮ್ಮ ಕೋಂ ಕಾಳೇಗೌಡ	8	50.05
40	ಸಣ್ಣನಿಂಗಮ್ಮ ಕೋಂ ನಿಂಗಯ್ಯ	200/ 163	39.13
41	ನಿಂಗಮ್ಮ ಕೋಂ ಮಾಯಣ್ಣ	7	20.93
42	ಜಯಲಕ್ಷ್ಮಮ್ಮ ಕೋಂ ಲೇ.ಗಂಗಯ್ಯ	6	9.1
43	ಸರೋಜಮ್ಮ ಕೋಂ ರಾಮಯ್ಯ	197/181	26
44	ನಿಂಗಮ್ಮ ಕೋಂ ಕಾಳಯ್ಯ	4	9
45	ಜಗಧೀಶ್ ಬಿನ್ ಕೆಂಪಶೆಟ್ಟಿ	222	34.5
46	ಬಿ.ಕೆ.ಶ್ರೀನಿವಾಸ ಗೌಡ ಬಿನ್ ಕಾಳೇಗೌಡ	3/17	34.5
47	ಹೆಚ್.ಶಂಕರ ಲಿಂಗಯ್ಯ ಬಿನ್ ಹೊನ್ನೇಗೌಡ	2/4	60.75
48	ಗುಂಡಯ್ಯ ಬಿನ್ ಮಾಯಣ್ಣ	1	40.5
		ಒಟ್ಟು	1254.99

ಗ್ರಾಮ : ಪಲ್ಲೇರಾಯನಹಳ್ಳಿ ತಾಲ್ಲೂಕು : ಕುಣಿಗಲ್
ಹೋಬಳಿ : ಹುಲಿಯೂರುದುರ್ಗ ಜಿಲ್ಲೆ : ತುಮಕೂರು

ಕ್ರಮ ಸಂಖ್ಯೆ	ಖಾತೆದಾರರ ಹೆಸರು ಪಹಣಿಯಂತೆ ಶ್ರೀಯುತರು/ಶ್ರೀಮತಿ	ಸ್ವತ್ತಿನ ಸಂಖ್ಯೆ/ಸರ್ವೆ ನಂ.	ಭೂಸ್ವಾಧೀನಕ್ಕೆ ಒಳಪಡುವ ವಿಸ್ತೀರ್ಣ ಚ.ಮೀ/ಚ.ಅಡಿ
49	ಅಲಮೇಲಮ್ಮ ಕೋಂ ಲೇ.ಪುಟ್ಟಸ್ವಾಮಯ್ಯ	102/83	167.64
50	ಚಿಕ್ಕಚೆನ್ನಯ್ಯ. ನಾಥಯ್ಯ ಬಿನ್ ಚಿಕ್ಕಕಾಡಯ್ಯ	103/84/27	97.536
		ಒಟ್ಟು	265.176

ಸಹಿ/–
ಆರ್. ಲೋಕನಾಥ್, ಕೆ.ಎ.ಎಸ್. (ಹಿ.ಶ್ರೇ)
ವಿಶೇಷ ಜಿಲ್ಲಾಧಿಕಾರಿ (ಭೂಸ್ವಾ),
ಯೋ.ಅ.ಘ., ಕ.ರಾ.ಹೆ.ಅ.ಯೋ
ಕೆ.ಆರ್.ವೃತ್ತ, ಬೆಂಗಳೂರು.
ವಾ.ಸಾ.ಸಂ.ಇ/ಬೆಂ.ನಗರ/1651/ಆಕಾರ್/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ಸಾಮಾಜಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕಾರ್ತಿಕ್ ಜಯರಾಮ್

ನಟನೆ ಗಂಭೀರ ಉದ್ಯೋಗ

ಶರತ್ ಹೆಗ್ಡೆ

● ಖಳ ಪಾತ್ರಗಳಲ್ಲಿದ್ದ ಜೆ.ಕೆ. ಪ್ರಧಾನ ಪಾತ್ರದೆಡೆಗೆ ಹೊರಳಿದ್ದು ಹೇಗೆ?

'ಅಶ್ವಿನಿ ನಕ್ಷತ್ರ' ಧಾರಾವಾಹಿಯವರೆಗೆ ನನಗೆ ಹೆಚ್ಚು ಖಳ ಪಾತ್ರಗಳೇ ಬರುತ್ತಿದ್ದವು. ಆ ಧಾರಾವಾಹಿ ನನಗೊಂದು ಹೆಸರು ತಂದುಕೊಟ್ಟಿತು. ಜೆ.ಕೆ. ಹೆಸರು ಮನೆಮಾತಾಯಿತು. ಆ ಬಳಿಕ ನನಗೆ ಪ್ರಧಾನ ಪಾತ್ರಗಳೇ ಬಂದಿವೆ. 'ಚಂದ್ರಿಕಾ', 'ಬೆಂಗಳೂರು -23', 'ಆ ಕರಾಳ ರಾತ್ರಿ', 'ಪುಟ -109', 'ಓ ಪುಷ್ಪಾ ಐ ಹೇಟ್ ಟಿಯರ್ಸ್ (ಕನ್ನಡ- ಹಿಂದಿ)', ಮಾಳಿಗೆ (ತಮಿಳು) ಹೀಗೆ ಹಲವಾರು ಅವಕಾಶಗಳು ಬಂದಿವೆ. ನಿಧಾನಗತಿಯಲ್ಲಿ ಒಳ್ಳೆಯ ಬೆಳವಣಿಗೆ ಇದೆ. ಈಗ 'ಐರಾವನ್' ಮುಕ್ತಾಯವಾಗಿದೆ. 'ಕಾಡ' ಕೂಡಾ ಇತ್ತೀಚೆಗೆ ಮುಗಿದಿದೆ.

● ಯಾರು 'ಐರಾವನ್', ಮತ್ತು 'ಕಾಡ'?

'ಐರಾವನ್' ಎಂದರೆ ಪುರಾಣದಲ್ಲಿ ಅರ್ಜುನನ ಮಗ. ಅವನು ಸಮುದ್ರದ ರಾಜ. ಆ ಹಿನ್ನೆಲೆ ಇಟ್ಟುಕೊಂಡು ಪ್ರಸ್ತುತ ಕಾಲಮಾನಕ್ಕೆ ಅಳವಡಿಸಿದ್ದೇವೆ. ಇಲ್ಲಿ ನಾನೊಬ್ಬ ಫಾರ್ಮಾಸ್ಯುಟಿಕಲ್ ಉದ್ಯಮಿ. ಆ ಕ್ಷೇತ್ರದಲ್ಲಿ ಏನೇನಾಗುತ್ತದೆ ಎಂಬುದನ್ನು ಹೇಳಲು ಹೊರಟಿದ್ದೇವೆ. ಅವನು ಒಳ್ಳೆಯವನೋ ಕೆಟ್ಟವನೋ ಎನ್ನುವುದು ಸನ್ನಿವೇಶದ ಪ್ರಕಾರ ನಿರ್ಧಾರವಾಗುತ್ತದೆ.

'ಕಾಡ'ದಲ್ಲಿ ಮನುಷ್ಯನಲ್ಲಿ ಹುಟ್ಟುತ್ತಲೇ ಬಂದಿರುವ ಸಮಸ್ಯೆಯೊಂದನ್ನು ಚಿತ್ರಿಸಿದ್ದೇವೆ. ಅವನಿಗೆ ಕೋಪವನ್ನು ತಡೆದುಕೊಳ್ಳಲಾಗುವುದಿಲ್ಲ. ಅವನು ಯಾವುದು ಸರಿ-ತಪ್ಪು ಎಂಬುದನ್ನು ನಿರ್ಧರಿಸುವುದಿಲ್ಲ. ನಮ್ಮ ನಿರ್ದೇಶಕರ ಸಂಶೋಧನೆ ಪ್ರಕಾರ, ವಿಶ್ವದಲ್ಲಿ ಶೇ 2ರಷ್ಟು ಜನರಿಗೆ ಈ ಸಮಸ್ಯೆ ಇದೆ. ಅದಕ್ಕೆ ಚಿಕಿತ್ಸೆ ಇಲ್ಲ. ಅವರ ಕೋಪವನ್ನು ನಿಯಂತ್ರಿಸಬಹುದು ಅಷ್ಟೇ. ಹೀಗೆ ಇದು ಮನೋವೈಜ್ಞಾನಿಕ ಚಿತ್ರ.

● ಸಿನಿಮಾ ಕ್ಷೇತ್ರಕ್ಕೆ ಬಂದದ್ದು?

ಎಂಜಿನಿಯರಿಂಗ್ ಓದುತ್ತಲೇ ನಟನೆ ಮಾಡುತ್ತಿದ್ದೆ. ನನಗೆ ಸುದೀಪ್ ಅವರು ಸ್ಫೂರ್ತಿ. ಇದೊಂದು ಗಂಭೀರ ಉದ್ಯೋಗ ಎಂದು ಪರಿಗಣಿಸಿ ಇದರಲ್ಲಿ ತೊಡಗಿಕೊಂಡೆ. ಸುಮಾರು 12 ವರ್ಷಗಳ ಕಾಲ ಮಾಡೆಲಿಂಗ್‌ನಲ್ಲೂ ತೊಡಗಿದ್ದೆ. ಅಶ್ವಿನಿ ನಕ್ಷತ್ರದಿಂದ ಖ್ಯಾತಿ ಮತ್ತು ವಿಶ್ವಾಸ ಬಂದಿತು. ಈ ಕ್ಷೇತ್ರದಲ್ಲಿ ಏನಾದರೂ ಮಾಡಬಹುದು ಅಂದುಕೊಂಡೆ.

● ಎಂಥ ಪಾತ್ರ ಇಷ್ಟ?

ಅದು ಪ್ರಾಜೆಕ್ಟ್ ಮೇಲೆ ಅವಲಂಬಿತ. ಸಬ್ಜೆಕ್ಟ್ ಒಳ್ಳೆಯದಿರಬೇಕು. ಉದಾಹರಣೆಗೆ 'ಚಂದ್ರಿಕಾ'ದಲ್ಲಿ ತುಂಬಾ ರೊಮ್ಯಾಂಟಿಕ್ ಗಂಡ. 'ಬೆಂಗಳೂರು -23'ಯಲ್ಲಿ ಹಾಸ್ಯದ ಪಾತ್ರ. ಅದೊಂದು ಸೆಟಲ್ಡ್ ಕಾಮಿಡಿ. 'ಅಶ್ವಿನಿ ನಕ್ಷತ್ರ' ಎಲ್ಲ ಪಾತ್ರಗಳ ಮಿಶ್ರಣ. 'ಐರಾವನ್'ನಲ್ಲಿ ಅತ್ಯಂತ ಶಿಸ್ತಿನ, ವ್ಯವಸ್ಥಿತ ಪಾತ್ರ. ಯಾವುದೇ ಪಾತ್ರ ಇರಲಿ ಅದಕ್ಕೆ ಸರಿಯಾದ ನ್ಯಾಯ ಕೊಡಬೇಕು.

● ಕಿರುತೆರೆ ಮೋಹ ಇದೆಯಾ?

ಇಲ್ಲ. ಹಿರಿತೆರೆಯೇ ಬೇಕು. ಏಕೆಂದರೆ ಕಿರುತೆರೆಗೆ ಸಾಕಷ್ಟು ಸಮಯ ಕೊಡಬೇಕು. ಅದು ಟೈಂ ಪಾಸ್ ಅಲ್ಲ. ಎರಡು ದೋಣಿಯಲ್ಲಿ ಕಾಲಿಟ್ಟು ಪ್ರಯಾಣಿಸುವುದು ಸರಿಯಲ್ಲ. ಈಗಿನ ಪ್ರಾಜೆಕ್ಟ್‌ಗಳಲ್ಲಿ ಬದ್ಧತೆಯಿಂದ ತೊಡಗಿಕೊಳ್ಳಬೇಕು. ಈಗ 'ಶಹಬ್ಬಾಷ್ ಮಿಟ್ಟು' ಅನ್ನುವ ಚಿತ್ರದಲ್ಲೂ ತೊಡಗಿಕೊಂಡಿದ್ದೇನೆ.

● ಪ್ಯಾನ್ ಇಂಡಿಯಾ ಕನಸುಗಳಿವೆಯಾ?

ನೋಡಿ ಪ್ಯಾನ್ ಇಂಡಿಯಾ ಚಿತ್ರಗಳಿಗೆ ದೊಡ್ಡ ಬಜೆಟ್ ಬೇಕು. ಮತ್ತು ಎಲ್ಲ ಪ್ರಾದೇಶಿಕತೆಗೂ ಹೊಂದಿಕೊಳ್ಳುವಂತೆ ಇರಬೇಕು. ಅ ಅಂಥವು ಒಂದೋ ಪೌರಾಣಿಕ ಅಥವಾ ಸದ್ಯದ ನೈಜ ಘಟನೆ ಆಧರಿತ ವಿಷಯ ಇರಬೇಕು. ಈಗ ನಾನು ಮಾಡುತ್ತಿರುವ ಶಹಬ್ಬಾಷ್ ಮಿಟ್ಟು (ಕ್ರಿಕೆಟ್ ಆಟಗಾರ್ತಿ ಮಿಥಾಲಿ ರಾಜ್ ಅವರ ಜೀವನಗಾಥೆ) ಇದು ಕ್ರಿಕೆಟ್ ಆಧರಿಸಿದ ಸಿನಿಮಾ ಆಗಿರುವುದರಿಂದ ಪ್ಯಾನ್ ಇಂಡಿಯಾಕ್ಕೆ ಸರಿಹೊಂದುವ ಸಿನಿಮಾ.

> ಅಶ್ವಿನಿ ನಕ್ಷತ್ರದ ಜೆ.ಕೆ. ಪಾತ್ರದ ಮೂಲಕ ಕನ್ನಡ ಕಿರುತೆರೆಯ ಮನೆ ಮಾತಾಗಿದ್ದ ಕಾರ್ತಿಕ್ ಜಯರಾಮ್ ಈಗ ಸಾಕಷ್ಟು ಚಿತ್ರಗಳ ಪ್ರಧಾನ ಪಾತ್ರಗಳಲ್ಲೇ ಮಿಂಚುತ್ತಿದ್ದಾರೆ. ಅವರ ಅಭಿನಯದ 'ಐರಾವನ್', 'ಕಾಡ' ಚಿತ್ರಗಳು ತೆರೆಗೆ ಬರಲು ಸಿದ್ಧವಾಗಿವೆ. ತೆಲುಗು, ತಮಿಳಿನ ಪ್ರಮುಖ ಚಿತ್ರಗಳಲ್ಲೂ ಸಾಕಷ್ಟು ಬ್ಯುಸಿ ಆಗಿದ್ದಾರೆ. ಬೆಳ್ಳಿತೆರೆಗೆ ತಮ್ಮ ಬದ್ಧತೆ ಎನ್ನುವ ಜೆ.ಕೆ. ಸಿನಿಕನಸುಗಳನ್ನು ತೆರೆದಿಟ್ಟರು.

● ಮುಂದಿನ ಕನಸುಗಳೇನು?

ಒಳ್ಳೆಯ ಪ್ರಾಜೆಕ್ಟ್ ಬರುತ್ತಿವೆ. ಕೆಲಸ ಮಾಡುತ್ತಲೇ ಹೋಗಬೇಕು. ಅದರಲ್ಲಿ ಅತ್ಯುತ್ತಮವಾದ ಪ್ರದರ್ಶನ ನೀಡಬೇಕು. ಉದಾಹರಣೆಗೆ 'ಕಾಡ' ಸಿನಿಮಾದಲ್ಲಿ ನನ್ನ ಅಭಿನಯ ನಿರ್ದೇಶಕರಿಗೆ ತುಂಬಾ ಹಿಡಿಸಿದೆ. ಹೀಗಾಗಿ ನಾನು ಸ್ಟಾರ್ ಆಗುವುದು ಬೇಡ. ಒಳ್ಳೆಯ ಪರ್ಫಾರ್ಮರ್ ಆಗಬೇಕು ಅಷ್ಟೆ.

● ಸಿನಿಮಾದಿಂದಾಚೆಗಿನ ಜೆ.ಕೆ.?

ಫಿಟ್‌ನೆಸ್ ನನ್ನ ಬ್ರೆಡ್ ಆ್ಯಂಡ್ ಬಟರ್ ಇದ್ದ ಹಾಗೆ. ಫಿಟ್‌ನೆಸ್ ಇದ್ದರೆ ತೆರೆಯ ಮೇಲೆ ನಾನು ಚೆನ್ನಾಗಿ ಕಾಣಿಸಿಕೊಳ್ಳಲು ಸಾಧ್ಯ. ಇವು ಪೂರಕವಾದ ಅಂಶಗಳಾಗಿ ಬಿಡುತ್ತವೆ. ಇನ್ನು ಕ್ರಿಕೆಟ್. ಅದರಲ್ಲಿ ನಿರಂತರವಾಗಿ ಭಾಗವಹಿಸುತ್ತಿದ್ದೇನೆ. ಬಿಡುವಿನ ವೇಳೆ ಕತೆ ಬರೆಯುತ್ತೇನೆ.

● ಅಭಿಮಾನಿಗಳ ಪ್ರತಿಕ್ರಿಯೆ ಹೇಗಿದೆ?

ಅಶ್ವಿನಿ ನಕ್ಷತ್ರದಲ್ಲಿ ಜೆ.ಕೆ. ಹೆಸರೇ ಬ್ರಾಂಡ್ ಆಯಿತು. ಅದೇ ಅಭಿಮಾನಿಗಳು ಜೆ.ಕೆಯನ್ನು ಮನಸ್ಸಿನಲ್ಲಿ ಇಟ್ಟುಕೊಂಡಿದ್ದಾರೆ. ನನ್ನ ಹೆಸರು ಕಾರ್ತಿಕ್ ಜಯರಾಮ್. ಆದರೆ ಅನೇಕರು ಪಾತ್ರದ ಹೆಸರೇ ಜಯಕೃಷ್ಣ ಅದೇ ನನ್ನ ಹೆಸರಿರಬೇಕು ಅಂದುಕೊಂಡವರಿದ್ದಾರೆ. ಇಷ್ಟೊಂದು ಗುರುತಿಸುವಿಕೆ ಸಿಕ್ಕಿದೆ. ಇದೆಲ್ಲಾ ಆಗಿರುವುದು ಅಭಿಮಾನಿಗಳಿಂದಲೇ. ಅವರಿಗೆ ಆಭಾರಿ. ❖

'ಪೆಟ್ರೋಮ್ಯಾಕ್ಸ್' ಹರಿಪ್ರಿಯಾ, ನೀನಾಸಂ ಸತೀಶ್

'ಪೆಟ್ರೋಮ್ಯಾಕ್ಸ್' ಮನೆದೇವ್ರಾಣೆಗೂ ಅದಲ್ಲ!

'ನೀರ್‌ದೋಸೆ' ಸಿನಿಮಾದ ಟ್ರೇಲರ್ ಶೈಲಿಯನ್ನೇ ತಮ್ಮ ಹೊಸ ಸಿನಿಮಾ 'ಪೆಟ್ರೋಮ್ಯಾಕ್ಸ್' ಟ್ರೇಲರ್‌ನಲ್ಲೂ ನಿರ್ದೇಶಕ ವಿಜಯ್ ಪ್ರಸಾದ್ ಬಳಸಿಕೊಂಡಿದ್ದಾರೆ. ನೀನಾಸಂ ಸತೀಶ್ ಹಾಗೂ ಹರಿಪ್ರಿಯಾ ಜೋಡಿಯ ಈ ಸಿನಿಮಾದ ಟ್ರೇಲರ್ ಇತ್ತೀಚೆಗೆ ಬಿಡುಗಡೆಯಾಗಿದ್ದು, ಕುಚೇಷ್ಟೆಯ ಮಾತು, ದ್ವಂದ್ವಾರ್ಥದ ಸಂಭಾಷಣೆಗಳೇ ತುಂಬಿಕೊಂಡಿವೆ. ಈ ಶೈಲಿಗೆ ಒಂದಿಷ್ಟು ಜನ ವಿರೋಧಿಸಿದ್ದರೆ, ಮತ್ತೊಂದಿಷ್ಟು ಜನ ಹಿಂದಿನ ಚಿತ್ರಗಳಂತೇ ಇದೂ ಹಿಟ್ ಆಗಲಿ ಎಂದಿದ್ದಾರೆ.

'ಸಿನಿಮಾದಲ್ಲಿ ಡಬಲ್ ಮೀನಿಂಗ್ ಡೈಲಾಗ್ಸ್‌ಗಳಿದ್ದರೆ ಓಕೆ. ಆದರೆ, ಡಬಲ್ ಮೀನಿಂಗ್ ಡೈಲಾಗ್ಸ್‌ಗಳೇ ಸಿನಿಮಾವಾದರೆ ಕಷ್ಟ' ಎಂದೊಬ್ಬರು ಹೇಳಿದ್ದರೆ, 'ಟ್ರೇಲರ್ ನೋಡಲು ಮುಜುಗರವಾಗುತ್ತೆ' ಎಂದಿದ್ದಾರೆ ಮತ್ತೊಬ್ಬರು. ಈ ನಡುವೆ ಟ್ರೇಲರ್‌ನಲ್ಲಿ ಈ ಶೈಲಿಯನ್ನೇ ಅನುಸರಿಸುತ್ತಿರುವುದೇಕೆ ಎನ್ನುವುದರ ಕುರಿತು 'ಪ್ರಜಾವಾಣಿ' ಜೊತೆ ಮಾತನಾಡಿರುವ ವಿಜಯ್ ಪ್ರಸಾದ್, 'ಎರಡು ಉದ್ದೇಶದಿಂದ ಈ ಶೈಲಿಯನ್ನು ನಾನು ಅನುಸರಿಸುತ್ತೇನೆ. ಟೀಸರ್ ಮತ್ತು ಟ್ರೇಲರ್ ಪ್ರೇಕ್ಷಕರನ್ನು ಸೆಳೆಯುವ ಆಹ್ವಾನವಷ್ಟೇ. ಸಿನಿಮಾ ಎನ್ನುವುದು ಮನರಂಜನೆ ಹಾಗೂ ವ್ಯಾಪಾರ. ಮಾಸ್ ಹಾಗೂ ಕ್ಲಾಸ್ ಪ್ರೇಕ್ಷಕರು ನನ್ನ ಸಿನಿಮಾಗೆ ಬರಬೇಕು ಎನ್ನುವುದು ಇದರ ಹಿಂದಿನ ಉದ್ದೇಶ' ಎಂದಿದ್ದಾರೆ.

'ಕಲೆ ಮತ್ತು ವ್ಯಾಪಾರ ಹಳಿ ಇದ್ದ ಹಾಗೆ. ಜೊತೆಯಾಗಿ ಸಾಗುತ್ತವೆ ಆದರೆ ಒಟ್ಟಿಗೆ ಸೇರುವುದಿಲ್ಲ. ನಿರ್ಮಾಪಕರನ್ನು ಉಳಿಸಿದರೆ ಅವರು ಇನ್ನೊಂದು ಸಿನಿಮಾ ಮಾಡುತ್ತಾರೆ. ನಮಗೆ ಕಾಡುವ ಗಾಢವಾದ ಕಥೆಯನ್ನು ಹೇಳಲು ಈ ಶೈಲಿಯನ್ನು ಅನುಸರಿಸುತ್ತಿದ್ದೇನೆ. ಬರೀ ಚೇಷ್ಟೆ ಮಾತುಗಳಿಂದಲೇ ಸಿನಿಮಾ ಓಡುವುದಿಲ್ಲ. ಇದಕ್ಕೆ ಉತ್ತಮ ಉದಾಹರಣೆ 'ನೀರ್‌ದೋಸೆ'. ಇದರಲ್ಲಿ ಗಾಢವಾದ ಕಥೆ ಇಲ್ಲದೇ ಹೋಗಿದ್ದರೆ, ಸಿನಿಮಾ ಅಟ್ಟರ್‌ಫ್ಲಾಪ್ ಆಗಿರುತ್ತಿತ್ತು. ಚೇಷ್ಟೆ ಮಾತುಗಳ ಮೂಲಕ, ಮನರಂಜನೆ ದೃಷ್ಟಿಯಿಂದ ಕಥೆ ಹೇಳುವ ಪ್ರಯತ್ನವನ್ನು ನಾನು ಮಾಡುತ್ತೇನೆ.. ಹೀಗಾಗಿ ಈ ಶೈಲಿ ಅನುಸರಿಸುತ್ತೇನೆ. ಸಿನಿಮಾ ಬೇರೆ ಅಲ್ಲ. ಬದುಕು ಬೇರೆ ಅಲ್ಲ. ದೈನಂದಿನ ಜೀವನದಲ್ಲೂ ಈ ಚೇಷ್ಟೆ, ಪೋಲಿ ಎಲ್ಲವೂ ಇರುತ್ತದೆ. ಇದನ್ನೆಲ್ಲಾ ದೃಷ್ಟಿಯಲ್ಲಿಟ್ಟು ಸಿನಿಮಾ ಮಾಡಿದ್ದೇವೆ' ಎನ್ನುತ್ತಾರೆ ವಿಜಯ್ ಪ್ರಸಾದ್.

'ನೀನಾಸಂ ಸತೀಶ್ ಹಾಗೂ ಹರಿಪ್ರಿಯಾ ಜೋಡಿ ಮೊದಲ ಬಾರಿಗೆ ತೆರೆಯ ಮೇಲೆ ಈ ಸಿನಿಮಾ ಮುಖಾಂತರ ಕಾಣಿಸಿಕೊಳ್ಳುತ್ತಿದೆ. ನನ್ನ ಸಿನಿಮಾದಲ್ಲಿ ಗಾಢವಾದ ಪಾತ್ರ ಇರಲಿದೆ ಎನ್ನುವ ನಂಬಿಕೆ ಹರಿಪ್ರಿಯಾ ಅವರಿಗೆ ಇದೆ. 'ಪೆಟ್ರೋಮ್ಯಾಕ್ಸ್'ನಲ್ಲಿ ಅವರಿಗೆ ಬೋಲ್ಡ್ ಆಗಿರುವ ದೃಶ್ಯಗಳು, ಮಾತುಗಳು ಇವೆ. ಕಥೆಗೆ ಪೂರಕವಾಗಿರುವ ಕಾರಣ ಇದನ್ನು ಹರಿಪ್ರಿಯಾ ಒಪ್ಪಿದರು. ಚಿತ್ರದ ಪೋಸ್ಟರ್‌ನಲ್ಲೇ ಹೇಳಿರುವಂತೆ ಪೆಟ್ರೋಮ್ಯಾಕ್ಸ್ ಖಂಡಿತವಾಗಿಯೂ 'ಅದಲ್ಲ'. ಬದುಕು ಮತ್ತು ಬೆಳಕು ಈ ಪೆಟ್ರೋಮ್ಯಾಕ್ಸ್. ದೀಪಾವಳಿ ಬೆಳಕಿನ ಹಬ್ಬ ಆಗಿರುವ ಕಾರಣ ದೀಪಾವಳಿಗೆ ಚಿತ್ರ ಬಿಡುಗಡೆಗೆ ಸಿದ್ಧತೆ ನಡೆಸಿದ್ದೇವೆ' ಎಂದರು. ❖

ಸಂಗೀತಮಯ ಪ್ರೇಮಕಥೆ 'ಮೈಸೂರು'

ಪೂಜಾ, ಸಂವಿತ್

'ಮೈಸೂರು' ಹೆಸರಿನ ಚಿತ್ರವೊಂದು ತೆರೆಗೆ ಬರಲಿದೆ. ಅನಿವಾಸಿ ಕನ್ನಡಿಗನ ಪ್ರೇಮಕಥೆ ಆಧರಿಸಿದ ಸಂಗೀತಮಯ ಚಿತ್ರವಿದು. ಬೆಂಗಳೂರು, ಮೈಸೂರು, ಚಿಕ್ಕಮಗಳೂರು, ಉಡುಪಿ, ಭುವನೇಶ್ವರ, ಪುರಿ, ಕಟಕ್ ಕಡೆ ನಲವತ್ತು ದಿನಗಳ ಕಾಲ ಚಿತ್ರೀಕರಣ ನಡೆದಿದೆ.

ವಾಸುದೇವ ರೆಡ್ಡಿ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಅವರೇ ಎಸ್. ಆರ್. ಕಂಬೈನ್ಸ್ ಲಾಂಛನದಲ್ಲಿ ನಿರ್ಮಾಣವನ್ನು ಮಾಡಿದ್ದಾರೆ. ಜಗದೀಶ್ (ಜೆ.ಕೆ), ಕೆ.ಆರ್.ಅಪ್ಪಾಜಿ (ಕೊಡವತ್ತಿ) ಈ ಚಿತ್ರದ ಸಹ ನಿರ್ಮಾಪಕರು.

ಕನ್ನಡ ಚಿತ್ರರಂಗದಲ್ಲಿ ಸಾಕಷ್ಟು ವರ್ಷಗಳಿಂದ ಕಲಾವಿದನಾಗಿ ಗುರುತಿಸಿಕೊಂಡಿರುವ ಜ್ಯೂನಿಯರ್ ನರಸಿಂಹರಾಜು ಅವರ ಸಾರಥ್ಯದಲ್ಲಿ ಈ ಚಿತ್ರ ತಯಾರಾಗುತ್ತಿದೆ.

ಸಂವಿತ್ ಈ ಚಿತ್ರದ ನಾಯಕ. ತೆಲುಗು, ಬಂಗಾಳಿ, ಭೋಜಪುರಿ ಚಿತ್ರಗಳಲ್ಲಿ ಅಭಿನಯಿಸಿರುವ ಇವರಿಗೆ 'ಮೈಸೂರು' ಕನ್ನಡದಲ್ಲಿ ಮೊದಲ ಚಿತ್ರ. ಪೂಜಾ ಈ ಚಿತ್ರದ ನಾಯಕಿ. ಜ್ಯೂ.ನರಸಿಂಹರಾಜು, ಸತ್ಯಜಿತ್, ಕುರಿ ಪ್ರತಾಪ್, ಭಾಸ್ಕರ್ ಶೆಟ್ಟಿ, ಅಶೋಕ್ ಹೆಗ್ಡೆ, ಜೈಶ್ರೀ, ರವಿಕುಮಾರ್ ತಾರಾಬಳಗದಲ್ಲಿದ್ದಾರೆ.

ರಘು ಶಾಸ್ತ್ರಿ, ರವಿಶಂಕರ್ ನಾಗ್, ಅನಿತಾಕೃಷ್ಣ ಬರೆದಿರುವ ಹಾಡುಗಳಿಗೆ ರಮಣಿ ಸುಂದರೇಶನ್, ಅನಿತಕೃಷ್ಣ, ವಿಜಯ್ ರಾಜ್ ಸಂಗೀತ ನೀಡಿದ್ದಾರೆ.

ಕೃಷ್ಣ ಮಳವಳ್ಳಿ ಸಂಭಾಷಣೆ ಬರೆದಿದ್ದಾರೆ. ಭಾಸ್ಕರ್ ವಿ. ರೆಡ್ಡಿ ಛಾಯಾಗ್ರಹಣ, ಸಿದ್ದು ಭಗತ್ ಸಂಕಲನ ಹಾಗೂ ಸ್ಟಾರ್ ನಾಗಿ, ಮೈಸೂರು ರಾಜು, ಸುಧಾಕರ್ ವಸಂತ್ ಅವರ ನೃತ್ಯ, ಶ್ರೀಕಾಂತ್ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ. ❖

'ಪುಕ್ಸಟ್ಟೆ ಲೈಫು...' ಇಂದು ತೆರೆಗೆ

ಸಂಚಾರಿ ವಿಜಯ್

ನಟ ದಿವಂಗತ ಸಂಚಾರಿ ವಿಜಯ್ ಅವರು ನಟನೆಯ 'ಪುಕ್ಸಟ್ಟೆ ಲೈಫು ಪುರ್‌ಸೊತ್ತೇ ಇಲ್ಲ' ಚಿತ್ರ ಇಂದು ತೆರೆಕಾಣಲಿದೆ. ಮೈಸೂರಿನಲ್ಲಿ ಈಗಾಗಲೇ ಚಿತ್ರದ ಮೊದಲ ಪ್ರೀಮಿಯರ್ ಶೋ ನಡೆದಿದ್ದು, ಸಂಚಾರಿ ವಿಜಯ್ ಅವರ ನೆನಪಿನಲ್ಲಿ ಒಂದು ಸೀಟು ಕಾಯ್ದಿರಿಸಿ ಚಿತ್ರತಂಡವು ಗೌರವ ಸಲ್ಲಿಸಿದೆ.

'ಪುಗ್ಸಟ್ಟೆ ಲೈಫು...' ಅರವಿಂದ್ ಕುಪ್ಳೀಕರ್ ನಿರ್ದೇಶನದ ಚಿತ್ರವಾಗಿದ್ದು, ಈ ಚಿತ್ರದಲ್ಲಿ ವಿಜಯ್‌ಗೆ ಬೀಗ ರಿಪೇರಿ ಮಾಡುವ ಕಾಯಕದ ಶಹಜಹಾನ್ ಎಂಬ ಪಾತ್ರ. ಬೀಗ ರಿಪೇರಿಯಿಂದ ಬರುವ ಸಂಪಾದನೆ ಸಾಲದಾದಾಗ ಶಹಜಹಾನ್ ಈ ವ್ಯವಸ್ಥೆಯ ಚಕ್ರಸುಳಿಗೆ ಸಿಕ್ಕು ನಲುಗುವ ಅಪರೂಪದ ಕಥೆ ಇದಾಗಿದೆ. ವಿಜಯ್‌ಗೆ ಜೋಡಿಯಾಗಿ ಮಾತಂಗಿ ಪ್ರಸನ್ನ ನಟಿಸಿದ್ದಾರೆ. ಸುರೇಶ್ ಆರ್ಮುಗಂ ಸಂಕಲನ, ವಾಸು ದೀಕ್ಷಿತ್ ಸಂಗೀತ ನಿರ್ದೇಶನ, ಪೂರ್ಣಚಂದ್ರ ತೇಜಸ್ವಿಯವರ ಹಿನ್ನೆಲೆ ಸಂಗೀತ ಮತ್ತು ಅದ್ವೈತ್ ಗುರುಮೂರ್ತಿ ಛಾಯಾಗ್ರಹಣ ಈ ಚಿತ್ರಕ್ಕಿದೆ. ನಾಗರಾಜ್ ಸೋಮಯಾಜಿ ಚಿತ್ರದ ನಿರ್ಮಾಪಕರು. ❖

'ರಾಘವೇಂದ್ರ ಸ್ಟೋರ್ಸ್'ನಲ್ಲಿ ಮನರಂಜನೆಯ ಫುಲ್‌ಮೀಲ್ಸ್



ಜಗ್ಗೇಶ್

ಹೊಂಬಾಳೆ ಫಿಲ್ಮ್ಸ್ ಜೊತೆಗೆ ಈಗಾಗಲೇ ಎರಡು ಹಿಟ್ ಚಿತ್ರಗಳನ್ನು ನೀಡಿರುವ ನಿರ್ದೇಶಕ ಸಂತೋಷ್ ಆನಂದರಾಮ್, ಇದೀಗ ಮತ್ತೆ ಹೊಂಬಾಳೆ ಫಿಲ್ಮ್ಸ್ ಜೊತೆ ಕೈಜೋಡಿಸಿದ್ದಾರೆ. ನವರಸ ನಾಯಕ ಜಗ್ಗೇಶ್ ನಟನೆಯಲ್ಲಿ ಸಂತೋಷ್ ಅವರ ಹೊಸ ಚಿತ್ರದ ಪೋಸ್ಟರ್ ಬಿಡುಗಡೆಯಾಗಿದೆ.

ಹೊಂಬಾಳೆ ಫಿಲ್ಮ್ಸ್‌ನ 12ನೇ ಚಿತ್ರವಾಗಿ 'ರಾಘವೇಂದ್ರ ಸ್ಟೋರ್ಸ್-Since 1972' ಸೆಟ್ಟೇರಿದ್ದು, ನವೆಂಬರ್ 22ರಿಂದ ಚಿತ್ರೀಕರಣ ಆರಂಭವಾಗಲಿದೆ. ಕೌಟುಂಬಿಕ ಮನರಂಜನೆ, ಸಾಮಾಜಿಕ ಸಂದೇಶ, ಹಾಸ್ಯ ರಾಜಕೀಯ ವಿಷಯ ಒಳಗೊಂಡ ಹೊಸತನದ ಚಿತ್ರ ಇದು ಎಂದಿದೆ ಚಿತ್ರತಂಡ.

'ಜಗ್ಗೇಶ್ ಅವರು ಇದೇ ಮೊದಲ ಬಾರಿಗೆ ನಮ್ಮ ಬ್ಯಾನರ್‌ನಲ್ಲಿ ನಟಿಸುತ್ತಿದ್ದಾರೆ. ಕನ್ನಡ ಸಿನಿಮಾಗೆ ಹೊಸ ಸವಿರುಚಿಯನ್ನು ನೀಡಲಿದ್ದಾರೆ' ಎನ್ನುತ್ತಾರೆ ಹೊಂಬಾಳೆ ಫಿಲ್ಮ್ಸ್‌ನ ವಿಜಯ್ ಕಿರಗಂದೂರು.

'ರಾಯರ ಮಗನಿಗೆ ಬದುಕಿನ ಪರಿಪೂರ್ಣ ಅರ್ಥವನ್ನು ಹೇಳುವ ಅವಕಾಶ ಈ ಚಿತ್ರದ ಮುಖಾಂತರ ಸಿಕ್ಕಿದೆ' ಎಂದಿದ್ದಾರೆ ಜಗ್ಗೇಶ್. 'ಭಾವನೆ, ಮನರಂಜನೆ ಹಾಗೂ ಸಂವೇದನೆಯ ಪಾಕಶಾಲೆ ಈ ರಾಘವೇಂದ್ರ ಸ್ಟೋರ್ಸ್. ಜಗ್ಗೇಶ್ ಅವರು ಈ ಚಿತ್ರದಲ್ಲಿ ವಿಭಿನ್ನ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ' ಎನ್ನುತ್ತಾರೆ ಸಂತೋಷ್ ಆನಂದರಾಮ್. ❖

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ನಿಮ್ಮ ಬೆಳವಣಿಗೆಯನ್ನು ನೀವು ಎಷ್ಟು ಗಂಭೀರವಾಗಿ ತೆಗೆದುಕೊಳ್ಳುತ್ತೀರೋ ಅಷ್ಟೇ ಗಂಭೀರವಾಗಿ ನಿಮ್ಮ ಜನ ನಿಮ್ಮನ್ನು ಪರಿಗಣಿಸುತ್ತಾರೆ.

–ಜಾನ್ ಸಿ. ಮ್ಯಾಕ್ಸ್‌ವೆಲ್

ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಕ್ಕೆ ಪರಿಹಾರ: ಗೊಂದಲ ತಿಳಿಗೊಳಿಸಬೇಕಿದೆ

ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಗಳಿಗೆ ಪರಿಹಾರ ನೀಡಲು ಅನುಸರಿಸಬೇಕಾದ ಮಾರ್ಗಸೂಚಿಯನ್ನು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಕೊನೆಗೂ ಸಿದ್ಧಪಡಿಸಿದೆ. ಮೃತರ ಕುಟುಂಬಕ್ಕೆ ₹50,000 ಪರಿಹಾರ ನೀಡುವ ಅಂಶವು ಇದರಲ್ಲಿ ಒಳಗೊಂಡಿದೆ. ಸುಪ್ರೀಂ ಕೋರ್ಟ್ ಜೂನ್ 30ರಂದು ನೀಡಿದ ನಿರ್ದೇಶನಕ್ಕೆ ಅನುಗುಣವಾಗಿ ಈ ಮಾರ್ಗಸೂಚಿ ರೂಪಿಸಲಾಗಿದೆ ಎಂದು ಸುಪ್ರೀಂ ಕೋರ್ಟ್‌ಗೆ ಕೇಂದ್ರ ಸರ್ಕಾರ ತಿಳಿಸಿದೆ. ಕೋವಿಡ್ ಅನ್ನು ರಾಷ್ಟ್ರೀಯ ವಿಪತ್ತು ಎಂದು ಕೇಂದ್ರ ಸರ್ಕಾರ ಕಳೆದ ವರ್ಷ ಮಾರ್ಚ್ ತಿಂಗಳಲ್ಲೇ ಘೋಷಿಸಿತ್ತು. ಕೇಂದ್ರ ಸರ್ಕಾರ ಆಗಲೇ ನಿರ್ಧಾರ ಕೈಗೊಂಡು ಸಂತ್ರಸ್ತರ ಕುಟುಂಬಕ್ಕೆ ಪರಿಹಾರ ಒದಗಿಸುವ ಕುರಿತು ಮಾರ್ಗಸೂಚಿಯನ್ನು ರೂಪಿಸಬೇಕಿತ್ತು. ಹಾಗೆ ಮಾಡಿದ್ದರೆ ಸುಪ್ರೀಂ ಕೋರ್ಟ್ ಈ ವಿಷಯದಲ್ಲಿ ಮಧ್ಯಪ್ರವೇಶಿಸುವ ಪ್ರಮೇಯ ಬರುತ್ತಿರಲಿಲ್ಲ. ಸುಪ್ರೀಂ ಕೋರ್ಟ್ ಆದೇಶದ ಹೊರತಾಗಿಯೂ ಕೇಂದ್ರ ಸರ್ಕಾರ ಈ ವಿಷಯದಲ್ಲಿ ವಿಳಂಬ ಧೋರಣೆ ಅನುಸರಿಸಿತು. ಮಾರ್ಗಸೂಚಿ ರೂಪಿಸಲು ಕೇಂದ್ರಕ್ಕೆ ಸುಪ್ರೀಂ ಕೋರ್ಟ್ ಆರು ವಾರಗಳ ಗಡುವು ನೀಡಿತ್ತು. ಕಾಲಾವಕಾಶವನ್ನು ಆಗಸ್ಟ್ 16ರಂದು ಮತ್ತೆ ನಾಲ್ಕು ವಾರ ವಿಸ್ತರಿಸಿತ್ತು. ಇಷ್ಟೆಲ್ಲ ಒತ್ತಡದ ಬಳಿಕ ವಿಪತ್ತು ನಿರ್ವಹಣಾ ಪ್ರಾಧಿಕಾರ ಈಗ ಮಾರ್ಗಸೂಚಿ ರೂಪಿಸಿದೆ. ಪರಿಹಾರದ ಮೊತ್ತವನ್ನು ನಿಗದಿಪಡಿಸಿದೆ.

ಪರಿಹಾರ ಹಂಚಿಕೆಯಲ್ಲಿ ಗೊಂದಲಗಳು ಉಂಟಾಗದಂತೆ ನೋಡಿಕೊಳ್ಳುವ ಗುರುತರ ಜವಾಬ್ದಾರಿ ಕೇಂದ್ರ ಮತ್ತು ರಾಜ್ಯಗಳ ಮೇಲಿದೆ

ಆದರೆ, ಪರಿಹಾರ ನೀಡುವ ಹೊಣೆ ರಾಜ್ಯ ಸರ್ಕಾರಗಳ ಹೆಗಲೇರಿದೆ. ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಈ ಪರಿಹಾರ ಮೊತ್ತವನ್ನು ಭರಿಸಬೇಕು ಎಂದು ಮಾರ್ಗಸೂಚಿಯಲ್ಲಿ ಸೂಚಿಸಲಾಗಿದೆ. ಆಧಾರ್ ಜೋಡಣೆ ಇರುವ ನೇರ ನಗದು ವರ್ಗಾವಣೆ ಮೂಲಕ ನಗದು ಸಂದಾಯವಾಗಬೇಕು, ದೂರುಗಳ ಪರಿಹಾರಕ್ಕೆ ಜಿಲ್ಲಾ ಮಟ್ಟದ ಸಮಿತಿ ರಚಿಸಬೇಕು, ಕೋರಿಕೆ ಸಲ್ಲಿಕೆಯಾದ 30 ದಿನಗಳ ಒಳಗೆ ಅರ್ಜಿ ವಿಲೇವಾರಿ ಆಗಬೇಕು ಮುಂತಾಗಿ ಹಲವು ನಿಬಂಧನೆಗಳನ್ನು ಪ್ರಕಟಿಸಲಾಗಿದೆ.

ಕೊರೊನಾದಿಂದ ಉಂಟಾದ ದುರಂತವು ಇತರ ವಿಕೋಪಗಳಂತೆ ಅಲ್ಲ. ಹಾಗಾಗಿ ಅಲ್ಪ ಅವಧಿಯ ವಿಕೋಪಗಳಲ್ಲಿ ಮೃತಪಟ್ಟವರ ಕುಟುಂಬಕ್ಕೆ ₹4 ಲಕ್ಷ ಪರಿಹಾರ ನಿಗದಿ ಮಾಡಿದ್ದನ್ನು ಕೋವಿಡ್ ಸಂತ್ರಸ್ತರಿಗೆ ಅನ್ವಯಿಸುವುದು ಆಗದ ಕೆಲಸ ಎಂದು ಸುಪ್ರೀಂ ಕೋರ್ಟ್‌ಗೆ ಕೇಂದ್ರ ಸರ್ಕಾರ ವಿವರಿಸಿತ್ತು. ಈಗ ವಿಪತ್ತು ನಿರ್ವಹಣಾ ಪ್ರಾಧಿಕಾರವು ಈ ಮೊತ್ತವನ್ನು ₹50,000 ಎಂದು ನಿಗದಿ ಮಾಡಿದೆ. ಆದರೆ, ಈ ಮೊತ್ತವು ತೀರಾ ಕಡಿಮೆಯಾಯಿತು ಎಂಬ ಆಕ್ಷೇಪ ಇದೆ. ಮೇಲಾಗಿ, ರಾಜ್ಯಗಳ ಹಣಕಾಸು ಸ್ಥಿತಿ ಅಷ್ಟೇನೂ ಉತ್ತಮವಾಗಿಲ್ಲ. ಕೇಂದ್ರದಿಂದ ಬರಬೇಕಾಗಿರುವ ಜಿಎಸ್‌ಟಿ ಪರಿಹಾರ ಮೊತ್ತವೂ ಸಕಾಲಕ್ಕೆ ಬಿಡುಗಡೆ ಆಗುತ್ತಿಲ್ಲ. ಇಂತಹ ಸ್ಥಿತಿಯಲ್ಲಿ ಕೋವಿಡ್ ಪರಿಹಾರದ ಮೊತ್ತವನ್ನು ಕೇಂದ್ರ ಸರ್ಕಾರವೇ ಭರಿಸಬೇಕು ಅಥವಾ ಅರ್ಧದಷ್ಟು ಭಾರವನ್ನಾದರೂ ಹಂಚಿಕೊಳ್ಳಬೇಕು ಎಂಬ ಮಾತಿದೆ. ಪ್ರಧಾನಿಯವರ ರಾಷ್ಟ್ರೀಯ ಪರಿಹಾರ ನಿಧಿಯಿಂದ ರಾಜ್ಯಗಳಿಗೆ ನೆರವು ಒದಗಿಸುವ ಕುರಿತು ಗಂಭೀರವಾಗಿ ಚಿಂತಿಸಬೇಕು. ಅದಾಗದಿದ್ದಲ್ಲಿ ಕೋವಿಡ್‌ನ ಸಂಕಷ್ಟಗಳನ್ನು ಎದುರಿಸಲೆಂದೇ ಪ್ರತ್ಯೇಕವಾಗಿ ರೂಪಿಸಲಾದ 'ಪಿಎಂ ಕೇರ್ಸ್' ನಿಧಿಯಿಂದಲಾದರೂ ರಾಜ್ಯಗಳಿಗೆ ನೆರವು ನೀಡಬೇಕು. ಏನೇ ಆಗಲಿ, ಜವಾಬ್ದಾರಿಯಿಂದ ಕೇಂದ್ರ ಸರ್ಕಾರ ನುಣುಚಿಕೊಳ್ಳದೆ ಹಣಕಾಸಿನ ಕಷ್ಟವನ್ನು ಹಂಚಿಕೊಳ್ಳಬೇಕು. ಕೋವಿಡ್ ಮಹಾಮಾರಿಯನ್ನು ಎದುರಿಸಲು ರಾಜ್ಯಗಳಿಗೆ ಆಮ್ಲಜನಕ ಮತ್ತು ಲಸಿಕೆ ಒದಗಿಸುವ ಹೊಣೆಗಾರಿಕೆಯನ್ನು ಸಕಾಲದಲ್ಲಿ ಸಮರ್ಪಕವಾಗಿ ನಿರ್ವಹಿಸಲು ಕೇಂದ್ರ ಸರ್ಕಾರಕ್ಕೆ ಸಾಧ್ಯವಾಗಿರಲಿಲ್ಲ. ಕರ್ನಾಟಕವು ಬೇಡಿಕೆಗೆ ತಕ್ಕಂತೆ ಕೇಂದ್ರ ಸರ್ಕಾರದಿಂದ ಆಮ್ಲಜನಕ ಪಡೆಯಲು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ನೆರವಿಗೆ ಬರಬೇಕಾಯಿತು. ಪರಿಹಾರ ಹಂಚಿಕೆಯಲ್ಲಿ ಈ ರೀತಿಯ ಗೊಂದಲಗಳು ಉಂಟಾಗದಂತೆ ನೋಡಿಕೊಳ್ಳುವ ಗುರುತರ ಜವಾಬ್ದಾರಿ ಕೇಂದ್ರ ಮತ್ತು ರಾಜ್ಯಗಳ ಮೇಲಿದೆ.

ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಕ್ಕೆ ಪರಿಹಾರ ಮೊತ್ತವನ್ನು ಕೇಂದ್ರ ಸರ್ಕಾರ ₹50,000 ಎಂದು ನಿಗದಿಪಡಿಸಿರುವುದು ಗೊಂದಲಗಳಿಗೆ ಕಾರಣವಾಗಬಾರದು. ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಗಳಿಗೆ ಕೆಲವು ರಾಜ್ಯಗಳು ಈಗಾಗಲೇ ಪರಿಹಾರ ನೀಡುವ ಪ್ರಕ್ರಿಯೆಯನ್ನು ಆರಂಭಿಸಿವೆ. ಕೆಲವು ರಾಜ್ಯಗಳು ಘೋಷಿಸಿರುವ ಪರಿಹಾರ ಮೊತ್ತ ಈಗ ಕೇಂದ್ರ ಸೂಚಿಸಿರುವುದಕ್ಕಿಂತ ಹೆಚ್ಚು. ಬಿಹಾರದಲ್ಲಿ ಪರಿಹಾರದ ಮೊತ್ತವನ್ನು ₹4 ಲಕ್ಷ ಎಂದು ನಿಗದಿ ಮಾಡಲಾಗಿದೆ. ಕರ್ನಾಟಕ ಮತ್ತು ಮಧ್ಯಪ್ರದೇಶದಲ್ಲಿ ₹1 ಲಕ್ಷ, ದೆಹಲಿಯಲ್ಲಿ ₹50,000 ನಿಗದಿಪಡಿಸಲಾಗಿದೆ. ರಾಜ್ಯಗಳು ಘೋಷಿಸಿರುವ ಪರಿಹಾರ ಮೊತ್ತಕ್ಕೆ ಹೆಚ್ಚುವರಿಯಾಗಿ ಕೇಂದ್ರ ಈಗ ಸೂಚಿಸಿರುವ ಪರಿಹಾರ ಮೊತ್ತ ದೊರೆಯಲಿದೆಯೇ ಎಂಬ ಪ್ರಶ್ನೆ ಇದೆ. ರಾಜ್ಯಗಳಿಂದ ಈಗಾಗಲೇ ಪರಿಹಾರ ಪಡೆದವರು ಕೇಂದ್ರ ನಿಗದಿ ಮಾಡಿರುವ ಪರಿಹಾರ ಪಡೆಯಲು ಅರ್ಹರಾಗಿರುತ್ತಾರೆಯೇ ಎಂಬ ಪ್ರಶ್ನೆಯೂ ಕಾಡದೇ ಇರದು. ಈ ಬಗೆಯ ಅಂಶಗಳು ಸ್ಪಷ್ಟಗೊಳ್ಳಬೇಕು. ಕೋವಿಡ್ ನಿರ್ವಹಣೆಯ ಸಂದರ್ಭದಲ್ಲಿ ಅನುಸರಿಸಿದ ಎಡಬಿಡಂಗಿ ನೀತಿಯು ಪರಿಹಾರದ ವಿಷಯದಲ್ಲೂ ಮುಂದುವರಿಯದಂತೆ ನೋಡಿಕೊಳ್ಳಬೇಕು. ಕೇಂದ್ರ ಸರ್ಕಾರದ ಈ ಮಾರ್ಗಸೂಚಿಯ ಬಗ್ಗೆ ಸುಪ್ರೀಂ ಕೋರ್ಟ್ ತನ್ನ ಅಂತಿಮ ತೀರ್ಪಿನಲ್ಲಿ ಏನು ಹೇಳುತ್ತದೆ ಎನ್ನುವುದನ್ನೂ ಕಾದು ನೋಡಬೇಕಿದೆ.

ದಿನದ ಟ್ವೀಟ್

ತಂತ್ರಜ್ಞಾನ ಪರಿಣತರಲ್ಲ

ಕೋವಿನ್‌ನ ಹಿಂದಿರುವ ತಂತ್ರಜ್ಞಾನವನ್ನು ಯು.ಕೆ. ಅರ್ಥಮಾಡಿಕೊಳ್ಳದೇ ಇರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಅವರು ಎಂದೂ ತಾಂತ್ರಿಕ ಪರಿಣತಿಯನ್ನು ಹೊಂದಿರಲಿಲ್ಲ. ತಂತ್ರಜ್ಞಾನದಲ್ಲಿ ಗ್ರೇಟ್ ಬ್ರಿಟನ್ ಯಾವಾಗಲೂ ಲೇಟ್ ಬ್ರಿಟನ್ ಆಗಿದೆ.

ಸ್ಯಾವಿಯೊ ರೋಡ್ರಿಗಸ್, ಉದ್ಯಮಿ

ಕಿಡಿನುಡಿ

ಜಿಎಸ್‌ಟಿ ವ್ಯಾಪ್ತಿಗೆ ಇಂಧನಗಳನ್ನು ತರುವುದಕ್ಕೆ ರಾಜ್ಯಗಳು ಒಪ್ಪುತ್ತಿಲ್ಲ. ಹೀಗಾಗಿ ಪೆಟ್ರೋಲ್ ಮತ್ತು ಡೀಸೆಲ್ ದರಗಳು ಇಳಿಯುತ್ತಿಲ್ಲ.

ಹರ್‌ದೀಪ್ ಸಿಂಗ್ ಪುರಿ, ಪೆಟ್ರೋಲಿಯಂ ಸಚಿವ

25 ವರ್ಷಗಳ ಹಿಂದೆ
ಮಂಗಳವಾರ, 24-9-1996

- **ಸೀತಾರಾಂ ಕೇಸರಿ ಕಾಂಗ್ರೆಸ್ ಅಧ್ಯಕ್ಷ**

ನವದೆಹಲಿ, ಸೆ. 23 (ಪಿಟಿಐ, ಯುಎನ್‌ಐ)– ಕಾಂಗ್ರೆಸ್ ಪಕ್ಷದ ಹಂಗಾಮಿ ಅಧ್ಯಕ್ಷರಾಗಿ ಹಿರಿಯ ನಾಯಕ ಹಾಗೂ ಪಕ್ಷದ ಖಜಾಂಚಿ ಸೀತಾರಾಂ ಕೇಸರಿ ಅವರು ಇಂದು ರಾತ್ರಿ ಆಯ್ಕೆಯಾಗಿದ್ದಾರೆ.

ಶನಿವಾರ ರಾಜೀನಾಮೆ ನೀಡಿದ ನರಸಿಂಹ ರಾವ್ ಅವರ ಉತ್ತರಾಧಿಕಾರಿಯಾಗಿ ಸೀತಾರಾಂ ಕೇಸರಿ ಅವರನ್ನು ಸತತ ನಾಲ್ಕು ಗಂಟೆಗಳ ಕಾಲ ನಡೆದ ಸಭೆಯಲ್ಲಿ ಆಯ್ಕೆ ಮಾಡಲಾಯಿತು. ಈ ಹಿರಿಯ ಗಾಂಧಿವಾದಿಯ ಆಯ್ಕೆಗೆ ರಾಜೇಶ್ ಪೈಲಟ್ ಅವರು ಮಾತ್ರ ಒಂಟಿ ದನಿಯ ವಿರೋಧ ವ್ಯಕ್ತಪಡಿಸಿದರು.

'ನನ್ನ ಹೆಸರನ್ನು ಪಿ.ವಿ. ನರಸಿಂಹ ರಾವ್ ಅವರು ಮಂಡಿಸಿದ್ದು, ಪಕ್ಷದ ಬಲವರ್ಧನೆಗೆ ಸಾಧ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳುವೆ' ಎಂದು ತಮ್ಮ ಆಯ್ಕೆಯ ನಂತರ, ಸಂತಸದಿಂದ ಬೀಗುತ್ತಿದ್ದ ಕೇಸರಿ ತಿಳಿಸಿದರು.

ಅನಿವಾಸಿ ಭಾರತೀಯ ಲಕ್ಕೂಭಾಯಿ ಪಾಠಕ್ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ತಮ್ಮನ್ನು ಸಹ ಆರೋಪಿಯನ್ನಾಗಿ ಮಾಡಬಾರದು ಎಂದು ಮಾಜಿ ಪ್ರಧಾನಿ ಹಾಗೂ ಪಕ್ಷದ ಅಧ್ಯಕ್ಷ ಪಿ.ವಿ.ನರಸಿಂಹ ರಾವ್ ಸಲ್ಲಿಸಿದ್ದ ಅರ್ಜಿಯನ್ನು ಸಿಬಿಐ ವಿಶೇಷ ನ್ಯಾಯಾಧೀಶ ಅಜಿತ್ ಭಾರಿಹೋಕ್ ಅವರು ಶನಿವಾರ ತಳ್ಳಿಹಾಕಿದ ಹಿನ್ನೆಲೆಯಲ್ಲಿ ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ರಾವ್ ರಾಜೀನಾಮೆ ಸಲ್ಲಿಸಿದ್ದರಿಂದ ಈ ಸ್ಥಾನ ತೆರವಾಗಿತ್ತು.

- **ಚಿತ್ರನಟಿ ಸಿಲ್ಕ್‌ಸ್ಮಿತಾ ಆತ್ಮಹತ್ಯೆ**

ಚೆನ್ನೈ, ಸೆ. 23 (ಪಿಟಿಐ)– ಪಂಚಭಾಷಾ ಚಿತ್ರತಾರೆ ಸಿಲ್ಕ್ ಸ್ಮಿತಾ (35) ಇಲ್ಲಿನ ಕೋಡಂಬಾಕಂನಲ್ಲಿರುವ ತಮ್ಮ ಮನೆಯಲ್ಲಿ ಇಂದು ಬೆಳಿಗ್ಗೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

50 ವರ್ಷಗಳ ಹಿಂದೆ
ಶುಕ್ರವಾರ, 24-9-1971

- **ಎಚ್‌ಎಎಲ್ ನೌಕರರಿಗೆ 1 ಕೋಟಿ ರೂಪಾಯಿ ಬೋನಸ್ ಬಾಕಿ ಪಾವತಿ**

ಬೆಂಗಳೂರು, ಸೆ. 23– ಬೋನಸ್ ಪ್ರಶ್ನೆಯು ಒಪ್ಪಂದದ ಮೂಲಕ ಇತ್ಯರ್ಥವಾದ ಕಾರಣ ಎಚ್‌ಎಎಲ್‌ನ ಬೆಂಗಳೂರು ವಿಭಾಗದ ಸುಮಾರು 20,000 ಮಂದಿ ನೌಕರರು ಸುಮಾರು 1 ಕೋಟಿ ರೂಪಾಯಿ ಹಣವನ್ನು ಬಾಕಿ ರೂಪದಲ್ಲಿ ಪಡೆಯಲಿದ್ದಾರೆ.

ಶಾಸನದ ರೀತ್ಯ ಕೊಡಬೇಕಾಗಿರುವ ಬೋನಸ್ ಹಾಗೂ 1958ರ ಸೂತ್ರದ ಅನುಸಾರ ಉತ್ಪತ್ತಿ ಬೋನಸ್ ಪಾವತಿ– ಈ ಆಧಾರಗಳ ಮೇಲೆ ಎಚ್‌ಎಎಲ್ ಆಡಳಿತ ಹಾಗೂ ನೌಕರರ ಸಂಘ ಒಂದು ಒಪ್ಪಂದಕ್ಕೆ ಬಂದಿವೆ.

- **ಪುಸ್ತಕ ಪ್ರಕಟಣೆ, ಪ್ರಾದೇಶಿಕ ಭಾಷಾಭಿವೃದ್ಧಿಗೆ ರಾಜ್ಯಗಳಿಗೆ ಕೇಂದ್ರದ ನೆರವಿನ ಆಶ್ವಾಸನೆ**

ಮದ್ರಾಸ್, ಸೆ. 23– ಪುಸ್ತಕ ಪ್ರಕಟಣೆ ಕಾರ್ಯಕ್ರಮಕ್ಕೆ ಮತ್ತು ಉನ್ನತ ಶಿಕ್ಷಣ ಹಂತಗಳಲ್ಲಿ ಶಿಕ್ಷಣ ಮಾಧ್ಯಮವಾಗಿ ಪ್ರಾದೇಶಿಕ ಭಾಷೆ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರಗಳಿಗೆ ಕೇಂದ್ರವು ಗಣನೀಯ ಪ್ರಮಾಣದಲ್ಲಿ ಆರ್ಥಿಕ ನೆರವು ನೀಡುವುದಾಗಿ ಕೇಂದ್ರ ಶಿಕ್ಷಣ ಮತ್ತು ಸಮಾಜ ಕಲ್ಯಾಣ ಖಾತೆ ಉಪ ಸಚಿವ ಡಿ.ಪಿ. ಯಾದವ್ ಇಂದು ಆಶ್ವಾಸನೆ ನೀಡಿದರು.

ಸರ್ಕಾರದ ವರಮಾನದ ಮೂಲಗಳು ಕಡಿಮೆಯಾದಾಗ ಜನಕಲ್ಯಾಣ ಕಾರ್ಯಕ್ರಮ ಸಾಧ್ಯವಾಗದು

ಅಭಿವೃದ್ಧಿ: ಹಿತಕರವಾಗಿಸುವ ಸವಾಲು

ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

ಅಭಿವೃದ್ಧಿ ಎಂಬ ಬಹುದೊಡ್ಡ ಪರಿಕಲ್ಪನೆಯ ಪ್ರಮುಖ ಭಾಗವೇ ಆರ್ಥಿಕ ಅಭಿವೃದ್ಧಿ. ಆರ್ಥಿಕ ಅಭಿವೃದ್ಧಿಯ ಅರ್ಥಶಾಸ್ತ್ರೀಯ ಲೆಕ್ಕಾಚಾರಗಳೂ ಜನರ ಅನುಭವದ ಲೆಕ್ಕಾಚಾರಗಳೂ ಒಂದೇ ಆಗುವುದಿಲ್ಲ. ಅಂತರರಾಷ್ಟ್ರೀಯ ಆರ್ಥಿಕ ಒತ್ತಡಗಳು, ಅಂಕಿ-ಅಂಶಗಳ ಆಧಾರಗಳು, ಸಕಾರಣಗಳು ಎಲ್ಲವೂ ಏನೇ ಇರಬಹುದು; ಜನರ ದೃಷ್ಟಿಯಲ್ಲಿ ಅಭಿವೃದ್ಧಿ ಎಂದರೆ ಏನಾಗಿರುತ್ತದೆ? ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುವಾಗ ಅದು ಹೆಚ್ಚಿನ ಬೆಲೆಗೆ ಮಾರಾಟವಾಗಬೇಕು. ತಾವು ಖರೀದಿ ಮಾಡುವ ವಸ್ತುಗಳು ಕಡಿಮೆ ಬೆಲೆಗೆ ದೊರೆಯಬೇಕು ಮತ್ತು ಬೇಕಾದ್ದನ್ನು ಕೊಂಡುಕೊಳ್ಳಲು ಆದಾಯ ಇರಬೇಕು. ಇದನ್ನು ಜನ ಬಯಸುತ್ತಾರೆ.

ಅಭಿವೃದ್ಧಿಗೆ ಸಂಬಂಧಿಸಿದಂತೆ ಜನರು ಬಯಸುವ ಹಿತಕರ ಪರಿಣಾಮ ಉಂಟಾಗಬೇಕಾದರೆ ಆರ್ಥಿಕತೆಯಲ್ಲಿ ಸರ್ಕಾರದ ಮಧ್ಯಪ್ರವೇಶ ಇರಲೇಬೇಕಾಗುತ್ತದೆ. ಕೃಷಿ ಮತ್ತು ಕೃಷಿ ಆಧಾರಿತ ಉತ್ಪನ್ನಗಳು ಹಾಗೂ ಸೇವೆಗಳಿಗೆ ಬೆಲೆ ಜಾಸ್ತಿ ಬರಬೇಕಾದರೆ ಬೆಂಬಲ ಬೆಲೆ, ಸಬ್ಸಿಡಿ ಮತ್ತಿತರೇ ಸೌಲಭ್ಯ ಒದಗಣೆಯ ಕ್ಷೇತ್ರಕ್ಕೆ ಸರ್ಕಾರ ಹೂಡಿಕೆ ಮಾಡಬೇಕು. ಜನಬಳಕೆಯ ವಸ್ತುಗಳ ಬೆಲೆ ಕಡಿಮೆಯಾಗಬೇಕಾದರೆ ಅಧಿಕ ಉತ್ಪಾದನೆಯನ್ನು ಸಾಧ್ಯವಾಗಿಸಿ ಉತ್ಪಾದಕನಿಗೆ ನಷ್ಟವಾಗದ ಮಟ್ಟದಲ್ಲಿ ಬೆಲೆ ಇಡಬೇಕು ಅಥವಾ ಅಲ್ಲಿಯೂ ಸಬ್ಸಿಡಿಯನ್ನು ಕೊಡಬೇಕು.

ಆದರೆ, 1991ರ ನಂತರದ ಸರ್ಕಾರದ ನೀತಿಗಳು ಸರ್ಕಾರದ ಮಧ್ಯಪ್ರವೇಶವನ್ನು ಕಡಿಮೆ ಮಾಡುತ್ತಾ ಹೋದವು. ಪ್ರಾರಂಭದ ಹಂತದಲ್ಲಿ ಅಥವಾ ಮನಮೋಹನ್ ಸಿಂಗ್ ಅಧಿಕಾರ ಅವಧಿಯ ತನಕ ಜಾಗತೀಕರಣದ ಒಡಂಬಡಿಕೆಯಲ್ಲೇ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಕೆಲವು ರಿಯಾಯಿತಿಗಳು ಇದ್ದುದರಿಂದ ಬಂದ ವಿದೇಶಿ ಹೂಡಿಕೆಗಳು ಸ್ಪರ್ಧಾತ್ಮಕ ಮಾರುಕಟ್ಟೆಯನ್ನು ನಿರ್ಮಿಸಿ ಕೆಲವು ವಲಯಗಳ ಉತ್ಪನ್ನಗಳಿಗೆ ಬೆಲೆಯನ್ನು ಕಡಿಮೆ ಮಾಡಿದವು. ಜನೋಪಯೋಗಿ ಕ್ಷೇತ್ರಕ್ಕೆ ಸರ್ಕಾರ ಮಾಡುತ್ತಿದ್ದ ಹೂಡಿಕೆಯನ್ನು ನಿಲ್ಲಿಸಲಿಲ್ಲ. ಆದ್ದರಿಂದ ಸಮಸ್ಯೆಯ ಕಾವು ಜನರನ್ನು ತಟ್ಟಲಿಲ್ಲ.

ಆದರೆ ವರ್ತಮಾನದ ಅನುಭವ ಅದಲ್ಲ. ಜಾಗತೀಕರಣದ ಒಡಂಬಡಿಕೆಯ ಪ್ರಕಾರ, ಅಭಿವೃದ್ಧಿಶೀಲ ರಾಷ್ಟ್ರಗಳು ಜನರಿಗೆ ಕೊಡಬಹುದಾದ ರಿಯಾಯಿತಿಗಳ ಅವಧಿ ಮುಗಿದಿದೆ. ಸರ್ಕಾರ ತನ್ನ ಹೂಡಿಕೆಯನ್ನು ಬಹಳಷ್ಟು ಮಟ್ಟಿಗೆ ಹಿಂದೆಗೆದುಕೊಳ್ಳುತ್ತ ಹೋಗುತ್ತಿದೆ. ಇದರಿಂದ ಜನರಿಗೆ ಬರುವ ಆದಾಯ ಕಡಿಮೆಯಾಗುವುದಷ್ಟೇ ಅಲ್ಲದೆ, ಇರುವ ಆದಾಯವೂ ಹೀರಲ್ಪಡುತ್ತದೆ. ಬೆಲೆ ಏರಿಕೆಯ ಮೂಲಕ ಅದು ಆಗುತ್ತಿದೆ. ಈಗಿನ ಬೆಲೆ ಏರಿಕೆಯು ಇಂಧನ ಮತ್ತು ಶಕ್ತಿ ಸಂಪನ್ಮೂಲದ ಬೆಲೆ ಏರಿಕೆಯ ಮೂಲಕ ಆಗಿದೆ. ಇಂಧನ ಮತ್ತು ಶಕ್ತಿ ಸಂಪನ್ಮೂಲಗಳು ಆರ್ಥಿಕತೆಯ ನರಮಂಡಲದ ಹಾಗೆ. ಅಲ್ಲಿ ಬೆಲೆ ಏರಿಕೆಯಾದರೆ ಎಲ್ಲ ವಲಯಗಳಿಗೂ ಅದರ ಪರಿಣಾಮ ಉಂಟಾಗುತ್ತದೆ. ಜನ ಬಹಳ ತೊಂದರೆಗೆ ಒಳಗಾಗುತ್ತಾರೆ. ಕಷ್ಟಗಳಿಗೆ ಕಾರಣ ಏನು ಎನ್ನುವುದು ಯಾರಿಗೂ ಮುಖ್ಯವಾಗುವುದಿಲ್ಲ. ಕಷ್ಟವಾಗಬಾರದೆಂಬ ಅಪೇಕ್ಷೆ ಮಾತ್ರ ಇರುತ್ತದೆ.

ಖಾಸಗೀಕರಣದಲ್ಲಿ ಜನರ ಉತ್ಪನ್ನಗಳಿಗೆ ಹೆಚ್ಚು ಬೆಲೆ ಬಂದು, ಜನರ ಖರೀದಿಗಳಿಗೆ ಕಡಿಮೆ ಬೆಲೆಯಾಗುವ ಸ್ಥಿತಿ ಇರುವುದಿಲ್ಲವೆಂದಲ್ಲ. ಆದರೆ ಆ ಸ್ಥಿತಿಯನ್ನು ಈಗ ಅರ್ಥೈಸುವುದು ಕಷ್ಟ. ಏಕೆಂದರೆ ಇಂದು ಭಾರತದ ಆರ್ಥಿಕತೆ ಅಂತರರಾಷ್ಟ್ರೀಯ ಆರ್ಥಿಕತೆಯ ಒಂದು ಭಾಗವೇ ವಿನಾ ಸ್ವತಂತ್ರ ಆರ್ಥಿಕತೆಯಲ್ಲ. ಬೇರೆ ರಾಷ್ಟ್ರಗಳ ಉತ್ಪನ್ನಗಳು ದೊಡ್ಡ ಪ್ರಮಾಣದಲ್ಲಿ ಭಾರತದ ಮಾರುಕಟ್ಟೆಯನ್ನು ಪ್ರವೇಶಿಸಿದಾಗ ಆ ವಸ್ತುಗಳಿಗೆ ಬೆಲೆ ಇಳಿಕೆಯಾಗುವ ಅನುಭವ ಈಗಾಗಲೇ ಆಗಿದೆ. ಭಾರತದ ಉತ್ಪನ್ನಗಳು ಬೇರೆ ರಾಷ್ಟ್ರಗಳ ಮಾರುಕಟ್ಟೆಯನ್ನು ಪ್ರವೇಶಿಸಿದಾಗಲೂ ಬೆಲೆ ಇಳಿಕೆಯಾಗಲು ಅವಕಾಶ ಇದೆ. ಆದರೆ ಅದು ಯಾವ ವಿಧಾನದಲ್ಲಿ ಬೇರೆ ರಾಷ್ಟ್ರಗಳ ಮಾರುಕಟ್ಟೆಗೆ ಪ್ರವೇಶಿಸುತ್ತದೆ ಎಂಬುದೂ ಮುಖ್ಯವಾಗುತ್ತದೆ. ಭಾರತೀಯ ಉತ್ಪಾದಕರೇ ತಮ್ಮ ವಸ್ತುಗಳನ್ನು ಅಂತರರಾಷ್ಟ್ರೀಯ ಮಾರುಕಟ್ಟೆಗೆ ಒಯ್ದಾಗ ಬೆಲೆ ಇಳಿಕೆ ಆಗಬಹುದು. ಆದರೆ ವಿದೇಶಿ ಹೂಡಿಕೆದಾರರಿಗೆ ವಿಪುಲವಾಗಿ ಭಾರತದಲ್ಲಿ ಹೂಡಿಕೆ ಮಾಡಲು ಅವಕಾಶ ಇರುವುದರಿಂದ ಮಧ್ಯವರ್ತಿಗಳಾಗಿ ಅವರು ಇರುತ್ತಾರೆ. ಲಾಭಾಂಶವನ್ನು ಅವರು ಎಲ್ಲಿಗೆ ಬೇಕಾದರೂ ಕೊಂಡೊಯ್ಯಬಹುದು. ಆಗ ಭಾರತೀಯ ಉತ್ಪನ್ನಗಳೇ ವಿದೇಶಗಳಿಗೆ ಹೆಚ್ಚು ರಫ್ತಾದರೂ ಬೆಲೆ ಇಳಿಕೆ ಆಗುವುದಿಲ್ಲ.

ಆಗ ಖಾಸಗಿ ಘಟಕಗಳೊಂದಿಗೆ ಹೋರಾಟಕ್ಕಿಳಿದು ಲಾಭಾಂಶವನ್ನು ತಮ್ಮ ಕಡೆಗೆ ಸೆಳೆದು ತರುವ ಚೌಕಾಸಿಯ ಸಾಮರ್ಥ್ಯ ಭಾರತೀಯರಿಗೆ ಇರಬೇಕಾಗುತ್ತದೆ. ಇದು ಸರ್ಕಾರದೊಂದಿಗೆ ಹೋರಾಟ ಮಾಡಿದಷ್ಟು ಸುಲಭವಾಗುವುದಿಲ್ಲ. ಈಸ್ಟ್ ಇಂಡಿಯಾ ಕಂಪನಿಯು ಭಾರತದಲ್ಲಿ ಆಳ್ವಿಕೆ ನಡೆಸುತ್ತಿದ್ದಾಗ ಬಹುತೇಕ ಈ ರೀತಿಯ ಸನ್ನಿವೇಶವಿತ್ತು. ಕಂಪನಿಯ ವಿರುದ್ಧ ನಡೆದ ಬಹಳಷ್ಟು ಹೋರಾಟಗಳು ಈ ಆರ್ಥಿಕ ಕಾರಣಗಳಿಂದಾಗಿಯೇ ನಡೆದವುಗಳಾಗಿದ್ದವು. 1858ರಲ್ಲಿ ಬ್ರಿಟಿಷ್ ಸರ್ಕಾರವೇ ಭಾರತದ ಆಡಳಿತವನ್ನು ತೆಗೆದುಕೊಂಡ ನಂತರ ಸರ್ಕಾರದ ಮಧ್ಯಪ್ರವೇಶ ಪ್ರಾರಂಭವಾಗಿ ಹಂತ ಹಂತವಾಗಿ ಆರ್ಥಿಕ ಅಭಿವೃದ್ಧಿಯ ಅನುಭವಗಳು ಜನರಿಗೆ ಆಗತೊಡಗಿದವು. ಜವಾಹರಲಾಲ್ ನೆಹರೂ ಅವರು ಅಳವಡಿಸಿಕೊಂಡ ಮಿಶ್ರ ಆರ್ಥಿಕ ನೀತಿಯು ಇಂದಿರಾ ಗಾಂಧಿಯವರ ಕಾಲದಲ್ಲಿ ಸ್ಪಷ್ಟವಾಗಿ ದುರ್ಬಲ ವರ್ಗಕ್ಕೆ ಅನುಕೂಲಕಾರಿಯಾಯಿತು.

ಈಗ ಆ ಹಂತವನ್ನು ದಾಟಿ ಬಂದಿದ್ದೇವೆ. ಒಂದೇ ವ್ಯತ್ಯಾಸವೆಂದರೆ, ಭಾರತೀಯರಿಗೆ ರಾಜಕೀಯ ಸ್ವಾತಂತ್ರ್ಯ ಇರುತ್ತದೆ. ಆದರೆ ಆರ್ಥಿಕ ಸ್ವಾತಂತ್ರ್ಯ ಬಹಳಷ್ಟು ಕಡಿಮೆಯಾಗುತ್ತದೆ. ಭಾರತೀಯರ ಬಳಿಯೇ ಇರುವ ಘಟಕಗಳು ಕೂಡ ಸಣ್ಣವು. ಅವುಗಳನ್ನು ಅಂತರರಾಷ್ಟ್ರೀಯ ಬಂಡವಾಳಿಗರು ನುಂಗಬಲ್ಲರು. ಈ ಸ್ಥಿತಿಯನ್ನು ನಿಭಾಯಿಸುವ ಸವಾಲು ಇದೆ. ಅದರಲ್ಲಿ ಅತ್ಯಂತ ಮುಖ್ಯವಾದದ್ದೆಂದರೆ, ಭೂ ಒಡೆತನ ಯಾವುದೇ ಕಂಪನಿಗಳ ಸುಪರ್ದಿಗೂ ಹೋಗದ ಹಾಗೆ ನೋಡಿಕೊಳ್ಳಬೇಕು. ಭೂ ಒಡೆತನ ಭಾರತೀಯರ ಕೈಯಲ್ಲಿರುವ ತನಕ ಆರ್ಥಿಕತೆಯನ್ನು ಬಾಹ್ಯ ಶಕ್ತಿಗಳು ತಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳಲಾಗದು. ಚರಕದಿಂದ ನೂಲು ತೆಗೆದು ಬಟ್ಟೆ ಮಾಡುವ ಮೂಲಕ ಬ್ರಿಟಿಷರ ಬಟ್ಟೆ ಗಿರಣಿಯ ಉತ್ಪಾದನೆಗಳು ಭಾರತದಲ್ಲಿ ಮಾರಾಟವಾಗದೆ ಬ್ರಿಟಿಷ್ ಆರ್ಥಿಕತೆಯನ್ನು ಸುಸ್ತು ಹೊಡೆಸಿದ ಗಾಂಧೀಜಿಯವರ ತಂತ್ರಗಾರಿಕೆಯ ಅರಿವಿರಬೇಕು. ರಾಜಕೀಯ ಸ್ವಾತಂತ್ರ್ಯ ಇರುವುದರಿಂದ ಜಾಗತೀಕರಣದ ಒಡಂಬಡಿಕೆಯ ಒಳಗೆಯೇ ಭಾರತೀಯ ಆರ್ಥಿಕತೆಯನ್ನು ಪೋಷಿಸುವ ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳಲು ಅವಕಾಶವಿದೆ. ಆದರೆ ಜನರಿಗೆ ಹಿತಕಾರಿಯಾದ ಆರ್ಥಿಕತೆಯ ಅನುಭವ ಆಗಬೇಕಾದರೆ ಸರ್ಕಾರದ ಮಧ್ಯಪ್ರವೇಶದ ಅಗತ್ಯ ಇದ್ದೇ ಇದೆ.

ನಮ್ಮ ಸರ್ಕಾರಗಳು, ಸುಮಾರು 38 ಕೋಟಿ ಜನರ ಆರ್ಥಿಕತೆಯಾದ ಅಮೆರಿಕದ ಆರ್ಥಿಕತೆಯ ಮಾದರಿಯಲ್ಲಿ ಬರೀ ಉಸ್ತುವಾರಿ ಜವಾಬ್ದಾರಿಯನ್ನು ವಹಿಸಿದರೆ 130 ಕೋಟಿ ಜನರ ಭಾರತದ ಆರ್ಥಿಕತೆಯ ನಿರ್ವಹಣೆ ಆಗುವುದಿಲ್ಲ. ಸರ್ಕಾರವು ಉದ್ಯಮಗಳನ್ನು ನಡೆಸದೇ ಇದ್ದರೆ ಅದಕ್ಕೆ ಬರುವ ವರಮಾನದ ಪ್ರಧಾನ ಭಾಗ ಸಾರ್ವಜನಿಕ ತೆರಿಗೆ ಮಾತ್ರ. ಭಾರತ ಈಗಾಗಲೇ ಜಗತ್ತಿನಲ್ಲಿ ಅತಿ ಹೆಚ್ಚು ತೆರಿಗೆ ಇರುವ ರಾಷ್ಟ್ರಗಳಲ್ಲಿ ಒಂದು. ಇನ್ನಷ್ಟು ತೆರಿಗೆ ಏರಿಸಬೇಕಾದರೆ ಜನರ ಆದಾಯ ಏರಿಕೆ ಆಗಬೇಕು. ಆದಾಯ ಹೆಚ್ಚಳವಾಗಲು ಉದ್ಯೋಗ ಸೃಷ್ಟಿಯಾಗಬೇಕು. ಉದ್ಯೋಗ ಹೆಚ್ಚಬೇಕಾದರೆ ಉತ್ಪಾದನೆ ಜಾಸ್ತಿಯಾಗಬೇಕು. ಉತ್ಪಾದನೆ ಜಾಸ್ತಿಯಾಗಬೇಕಾದರೆ ಪರಿಣಾಮಕಾರಿ ಬೇಡಿಕೆ ಸೃಷ್ಟಿಯಾಗಬೇಕು. ಬೇಡಿಕೆ ಸೃಷ್ಟಿಯಾಗಬೇಕಾದರೆ ಜನರ ಬಳಿ ಆದಾಯ ಸಂಚಯವಾಗಬೇಕು. ಜನರ ಬಳಿ ಹಣ ಹೆಚ್ಚಳವಾಗುವಂತಹ ಯಾವುದೇ ಯೋಜನೆಗಳೂ ಡಿಮಾನಿಟೈಸೇಷನ್‌ನ ನಂತರ ಬಂದಿಲ್ಲ. ಅಂದರೆ ಮುಂದಿನ ದಿನಗಳಲ್ಲಿ ಸಾರ್ವಜನಿಕ ತೆರಿಗೆ ಹೆಚ್ಚಳ ಮಾಡಲು ಆಗುವುದಿಲ್ಲ. ಸರ್ಕಾರದ ವರಮಾನದ ಮೂಲಗಳೇ ಕಡಿಮೆಯಾದಾಗ ಜನಕಲ್ಯಾಣ ಕಾರ್ಯಕ್ರಮವೂ ಸಾಧ್ಯವಾಗುವುದಿಲ್ಲ.

ಇಂತಹ ಸಂದರ್ಭದಲ್ಲಿ, ರಾಮಕೃಷ್ಣ ಹೆಗಡೆಯವರು ಬಹಳ ಹಿಂದೆ ಪ್ರಸ್ತಾಪಿಸಿದ್ದ, 'ಬಲಿಷ್ಠ ರಾಜ್ಯ- ಸಶಕ್ತ ಕೇಂದ್ರ' ಪರಿಕಲ್ಪನೆಯ ಆಡಳಿತ ಹೆಚ್ಚು ಉಪಯುಕ್ತವಾಗಬಹುದು. ಒಕ್ಕೂಟ ಸರ್ಕಾರವು ವಿದೇಶಾಂಗ, ರಕ್ಷಣೆ, ಸಂಪರ್ಕದಂತಹ ಕೆಲವು ವಿಷಯಗಳನ್ನು ಇರಿಸಿಕೊಂಡು ಉಳಿದವನ್ನು ರಾಜ್ಯಗಳಿಗೆ ಬಿಡುತ್ತಾ ಹೋದರೆ ಪಂಚಾಯತ್ ರಾಜ್ ವ್ಯವಸ್ಥೆಯ ಮೂಲಕ ರಾಜ್ಯಗಳು ಆರ್ಥಿಕತೆಯಲ್ಲಿ ಪರಿಣಾಮಕಾರಿಯಾಗಿ ತೊಡಗಿಕೊಳ್ಳಲು ಆಗುತ್ತದೆ. ಆಗ ಆರ್ಥಿಕ ಅಭಿವೃದ್ಧಿಯ ಹಿತಕರ ಅನುಭವಗಳು ಜನರಿಗೆ ಆಗುತ್ತವೆ.

ಚುರುಮುರಿ

ಬ್ರೇಕ್ಲೆಸ್ ಗ್ರೀನ್ ಸಿಗ್ನಲ್!

• ಎಸ್.ಬಿ.ರಂಗನಾಥ್

'ಎರಡು ದಿನ ಕಾಣಲಿಲ್ಲ. ಎಲ್ಲಿಗೆ ದಯ ಮಾಡಿಸಿತ್ತೋ ಸವಾರಿ?' ಮಿತ್ರ ಚಿಕ್ಕೇಶಿಯನ್ನು ಕೇಳಿದೆ. 'ದಾವಣಗೆರೆಗೆ ಹೋಗಿದ್ದೆನಯ್ಯ' ಎಂದ. 'ಬೆಣ್ಣೆದೋಸೆ ಮೆಲ್ಲೋಕಾ?' ಎಂದೆ.

'ಅಲ್ಲವೋ ತಿಂಡಿಪೋತ. ಅಲ್ಲಿ ಕಮಲ ಪಕ್ಷದ ಕಾರ್ಯಕಾರಿಣಿ ಸಭೆಯಿತ್ತಲ್ಲ. ನಮ್ಮ ರಾಜಾಹುಲಿಯನ್ನು ನೋಡಿ ಭಾಳ ದಿನ ಆಗಿತ್ತು. ಅದಕ್ಕೇ ಹೋಗಿದ್ದೆ'.

'ಹೇಗಿದ್ದಾರೋ ನಿನ್ನ ಬಾಸು?'

'ಫಸ್ಟ್ ಕ್ಲಾಸ್. ಅವ್ರೆ ಸ್ಟಾರ್ ಅಟ್ರ್ಯಾಕ್ಷನ್! ಎಲ್ಲರಿಗಿಂತ ಹೆಚ್ಚು ಜೈಕಾರ ಅವರಿಗೇ! ಎಲ್ಲರೂ ಅವ್ರ ಗುಣಗಾನ ಮಾಡಿದರಲ್ಲ. 'ಚಾಮುಂಡಿ ಕ್ಷೇತ್ರದಿಂದ ಪ್ರವಾಸ ಆರಂಭಿಸಿ ರಾಜ್ಯ ಪ್ರವಾಸ ಮಾಡ್ತಿದೀನಿ. ಮುಂದೆ ಪಕ್ಷವನ್ನ ಅಧಿಕಾರಕ್ಕೆ ತರೋದೇ ನನ್ನ ಗುರಿ' ಅಂದರು'.

'ಅವ್ರ ಪ್ರವಾಸಕ್ಕೆ ಹೈಕಮಾಂಡ್ ಬ್ರೇಕ್ ಹಾಕಿತ್ತಂತೆ'.

'ಅವ್ರ ಪ್ರವಾಸಕ್ಕೆ ಯಾರ ಗ್ರೀನ್ ಸಿಗ್ನಲ್ ಬೇಕಿಲ್ಲಾಂತ ರಾಜ್ಯ ಉಸ್ತುವಾರೀನೇ ಹೇಳಿದಾರೆ'.

'ಮತ್ತೆ ಇದೇ ಮಿರ್ಚಿ ಮಂಡಕ್ಕಿ ನಗರದಲ್ಲೇ ಈಚೆಗೆ ದಿಲ್ಲಿಯ ಬಾದ'ಶಾ' ಮುಂದಿನ ಚುನಾವಣೆ ಬೊಮ್ಮಾಯಿ ನೇತೃತ್ವದಲ್ಲೇ ಅಂದಿದ್ರು!'

'ಅದಕ್ಕೆ, ಒಂದು ಕೈಲಿ ತೊಟ್ಟಿಲು ತೂಗೋದು, ಇನ್ನೊಂದ್ರಲ್ಲಿ ಮಗು ಚಿವುಟೋದೂಂತಾರೆ. ಮರಿ ರಾಜಾಹುಲಿ ಈ ಬಗ್ಗೆ ಕ್ಲಾರಿಫಿಕೇಷನ್ ಕೊಟ್ಟತಲ್ಲಾ'. 'ಏನಂತಾ?'

'ಪಕ್ಷ ಸಂಘಟನೆ ಅಪ್ಪಾಜಿಯವ್ರಲ್ಲಿ ರಕ್ತಗತವಾಗಿದೆ. ಅದಕ್ಕೆ ಯಾರೂ ಬ್ರೇಕ್ ಹಾಕಿಲ್ಲ. ಎಲ್ಲ ಬ್ರೇಕ್‌ಗಳನ್ನೂ ಅವ್ರ ಕೈಗೇ ಕೊಟ್ಟಿದಾರೆ. ಬೇಕಾದಾಗ ಅವ್ರೇ ಸ್ವಯಂ ಬ್ರೇಕ್ ಹಾಕ್ಕೊಳ್ತಾರೇಂತ...'.

'ಆಗ್ಲಯ್ಯ... ಯಾಕೆ ಕುಂತ್ಕಿದೀಯ?'

'ನಮ್ಮ ಲೀಡರ್‌ಗಳ ಜೊತೆ ಸೆಲ್ಫಿ ತಗಳ್ಳೋ ನೂಕುನುಗ್ಗಲಲ್ಲಿ ಬಿದ್ಬಿಟ್ಟೆ'.

'ನಂಗೊಂದು ಪ್ಲೇಟ್ ಬೆಣ್ಣೆ ದೋಸೆ ತರೋದಲ್ವೇನೋ'.

'ಅದಕ್ಕೆ ಆರ್ಡರ್ ಕೊಟ್ಟು ಗಂಟೆಗಟ್ಲೆ ಕಾಯ್ಬೇಕಪ್ಪಾ... ದಾವಣಗೆರೆ ಫೇಮಸ್ ನರ್ಗಿಸ್ ಮಿರ್ಚಿ ಮಂಡಕ್ಕಿ ತಂದಿದೀನಿ ತಗೋ' ಎಂದ ಚಿಕ್ಕೇಶಿ ನನ್ನ ಕೈಲಿ ಪೊಟ್ಟಣ ಇಟ್ಟಾಗ, ತೆರೆದ ನನ್ನ ಬಾಯಿ ಮುಚ್ಚಲಿಲ್ಲ!

ಸಂಗತ

ಕಾವ್ಯದ ರಿಂಗಣ, ಟೀಕೆಗಳ ಬಾಣ!

ಸದನ ಲವಲವಿಕೆಯಿಂದ ಕೂಡಿರಬೇಕಾದರೆ, ಉತ್ತಮ ಚಿಂತನೆಗಳ ಜೊತೆಗೆ ಕಾವ್ಯ–ಸಾಹಿತ್ಯದಿಂದ ಒಡಗೂಡಿದ ಮಾತುಗಾರಿಕೆಯನ್ನು ಜನಪ್ರತಿನಿಧಿಗಳು ರೂಢಿಸಿಕೊಳ್ಳಬೇಕು

• ಮಲ್ಲಿಕಾರ್ಜುನ ಹೆಗ್ಗಳಗಿ

ಅರಸು ರಾಕ್ಷಸ ಮಂತ್ರಿಯೆಂಬುವ
ಮೊರೆವ ಹುಲಿ ಪರಿವಾರ ಹದ್ದಿನ
ನೆರವಿ ಬಡವರ ಬಿನ್ನಪವನಿನ್ನಾರು ಕೇಳುವರು
ಉರಿ ಉರಿವುತಿದೆ ದೇಶ ನಾವಿ
ನ್ನಿರಲು ಬಾರದೆನುತ್ತ ಜನ ಬೇ
ಸರದ ಬೇಗೆಯಲಿರದಲೇ ಭೂಪಾಲ ಕೇಳೆಂದ|

ಕವಿ ಕುಮಾರವ್ಯಾಸನ ಈ ಪದ್ಯವನ್ನು ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಇತ್ತೀಚೆಗೆ ವಿಧಾನಸಭೆಯಲ್ಲಿ ಬೆಲೆ ಏರಿಕೆ ಮೇಲೆ ನಡೆದ ಚರ್ಚೆಯ ಸಂದರ್ಭದಲ್ಲಿ ಹೇಳಿ ಸರ್ಕಾರವನ್ನು ಚುಚ್ಚಿದರು. ಇದಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು...

'ಮಾಲೆಗಾರ ಸಿಳೀಮುಖನ ಪಶು
ಪಾಲಕನವೋಲ್ ಪ್ರಜೆಯ ರಕ್ಷಿಸಿ
ಮೇಲೆ ತೆಗೆವೈ ಧನವನುಳಿದಂಗಾರಕಾರಕನ
ವೋಲು ಕಡದುರು ವ್ಯಾಘ್ರನಂತೆ ವಿ
ತಾಳಿಸಲು ಪ್ರಜೆ ನಸಿಯಲರಸಿನ
ಬಾಳಿಕೆಗೆ ಸಂದೇಹವರಿಯಾ ರಾಯ ಕೇಳೆಂದ'

ಕುಮಾರವ್ಯಾಸನ ಈ ಪದ್ಯವನ್ನು ಲಘುದಾಟಿಯಲ್ಲಿ ಹೇಳುವ ಮೂಲಕ ಉತ್ತರ ನೀಡಿದರು. 'ಹೂವಾಡಿಗನು ಹೂವಿನ ಗಿಡವನ್ನು ರಕ್ಷಿಸುತ್ತಾನೆ. ಹೂವಿಗೆ ನೋವು ಕೊಡದಂತೆ ದುಂಬಿ ಜೇನು ಹೀರುತ್ತದೆ. ಪಶುಪಾಲಕನು ಗೋವನ್ನು ರಕ್ಷಿಸಿ ಹಾಲನ್ನು ಮಾತ್ರ ಕರೆದುಕೊಳ್ಳುತ್ತಾನೆ. ರಾಜನು ಪ್ರಜೆಗಳನ್ನು ರಕ್ಷಿಸದಿದ್ದರೆ ರಾಜನ ಅಸ್ತಿತ್ವ ಸಂಶಯಕ್ಕೊಳಗಾಗುತ್ತದೆ' ಎಂಬುದು ಇದರ ತಾತ್ಪರ್ಯ.

ಸದನದಲ್ಲಿ ಕಾವ್ಯ ರಿಂಗಣಿಸಿದ್ದರಿಂದ ಜಡಗಟ್ಟಿದ ಮಾತಿನ ಮನೆಯಲ್ಲಿ ಉತ್ಸಾಹದ ಅಲೆ ಹರಡಿದ್ದಂತೂ ನಿಜ. ಸದನ ಸದಾ ಲವಲವಿಕೆಯಿಂದ ನಡೆಯಲು ಸೊಗಸಾದ ಮಾತುಗಾರಿಕೆ ಬೇಕು. ಇದು ಕಾವ್ಯ ಮತ್ತು ಸಾಹಿತ್ಯದ ಉಲ್ಲೇಖದಿಂದ ಮಾತ್ರ ಸಾಧ್ಯ.

ಶಾಸಕರಾಗಿದ್ದ ಕೆ.ಪಿ.ನಾಡಗೌಡ ಸದನದಲ್ಲಿ ಮಹಾಕವಿ ರನ್ನನ 'ಗದಾಯುದ್ಧ' ಕಾವ್ಯವನ್ನು ನಿರರ್ಗಳವಾಗಿ ಹೇಳುತ್ತಿದ್ದರು. ಆಗ ಮುಖ್ಯಮಂತ್ರಿಯಾಗಿದ್ದ ಡಿ.ದೇವರಾಜ ಅರಸು ಅವರು ನಾಡಗೌಡರ ಕಾವ್ಯಾಸಕ್ತಿ ಕಂಡು ವಿಧಾನಸಭೆಯ ಸಭಾಭವನದಲ್ಲಿ ಶಾಸಕರಿಗಾಗಿ ಗದಾಯುದ್ಧ ಕಾವ್ಯದ ಮೇಲೆ ಉಪನ್ಯಾಸ ಏರ್ಪಡಿಸಿದ್ದರು. ಈ ಸಂದರ್ಭದಲ್ಲಿ ನಾಡಗೌಡರು 'ಮುಧೋಳ ರನ್ನ ಮಹಾಕವಿಯ ಹುಟ್ಟೂರು. ನಾನು ಅಲ್ಲಿಯ ಶಾಸಕ. ಮಹಾಕವಿ ನನ್ನನ್ನು ಸದಾ ಎಚ್ಚರಿಸುತ್ತಿರುತ್ತಾನೆ' ಎಂದು ಹೇಳಿದ್ದರು.

ಕಂಪನಿಗಳ ಗಂಭೀರವಾದ ವ್ಯಾವಹಾರಿಕ ಸಭೆಗಳಲ್ಲಿಯೂ ಕಾವ್ಯದ ತುಣುಕು, ಸುಂದರ ನುಡಿಗಟ್ಟು, ಸಾಹಿತ್ಯದ ಝಲಕ್ ಇಡೀ ಸಭೆಯನ್ನು ಉತ್ಸಾಹದಿಂದ ಇಡುತ್ತದೆ. ಅಜೀಂ ಪ್ರೇಮ್‌ಜಿ ತಮ್ಮ ಕಂಪನಿಯ ಸಭೆಗಳಲ್ಲಿ ಕವಿಗಳನ್ನು ಆಮಂತ್ರಿಸಿ ಸ್ವಲ್ಪಕಾಲ ಮಾತನಾಡಿಸುತ್ತಾರೆ. ಈಗ ಹಲವು ಕಂಪನಿಗಳು ಈ ವಿಧಾನ ಅನುಸರಿಸತೊಡಗಿವೆ.

ಉಪಮುಖ್ಯಮಂತ್ರಿಯಾಗಿದ್ದ ಎಂ.ಪಿ.ಪ್ರಕಾಶ್ ಅವರು ಬರವಣಿಗೆಯಲ್ಲೂ ಆಸಕ್ತಿ ಹೊಂದಿದವರಾಗಿದ್ದರು. ಬರೀ ಚುನಾವಣೆ, ಅಧಿಕಾರ, ಹಣಗಳಿಕೆಯಲ್ಲಿ ರಾಜಕಾರಣಿಗಳು ಕಳೆದುಹೋಗುತ್ತಾರೆ. ಅವರು ಓದಿನ ಮೂಲಕ ತಮ್ಮ ವ್ಯಕ್ತಿತ್ವದ ಕ್ಷಿತಿಜವನ್ನು ಹೆಚ್ಚಿಸಿಕೊಳ್ಳಬೇಕು ಎಂದು ತಮ್ಮ ಕೃತಿಯೊಂದರಲ್ಲಿ ಹೇಳಿದ್ದಾರೆ. ಪ್ರಕಾಶ್ ಅವರು ಸದನದಲ್ಲಿ ನಾಟಕಗಳ ರಸವತ್ತಾದ ಸನ್ನಿವೇಶಗಳನ್ನು ಹೇಳಿ ರಂಜಿಸುತ್ತಿದ್ದರು. ಷೇಕ್ಸ್‌ಪಿಯರ್‌ನ ಜೂಲಿಯಸ್ ಸೀಜರ್ ನಾಟಕದ ಸನ್ನಿವೇಶವನ್ನು ರೋಮಾಂಚನಕಾರಿಯಾಗಿ ಹೇಳಿದ್ದರು. ರೋಮನ್ ಚಕ್ರಾಧಿಪತ್ಯದ ಅವಿವೇಕದ ಆಡಳಿತ ಕುರಿತು ಹೇಳಬಂದ ಕವಿಯೊಬ್ಬನನ್ನು ಬ್ರುಟಸ್ ಕತ್ತು ಹಿಡಿದು ಹೊರಗೆ ತಳ್ಳುತ್ತಾನೆ, ಯಾವ ಪ್ರಭುತ್ವಕ್ಕೂ ಭಿನ್ನ ಧ್ವನಿಯನ್ನು ಸಹಿಸಲಾಗದು ಎಂದಿದ್ದರು.

ಜೆ.ಎಚ್.ಪಟೇಲ್, ವೀರಪ್ಪ ಮೊಯಿಲಿ, ದೇವರಾಜ ಅರಸು ಸದನದಲ್ಲಿ ರಸವತ್ತಾಗಿ ಮಾತನಾಡುತ್ತಿದ್ದರು. ವಾಜಪೇಯಿ ತಾವೇ ಬರೆದ ಕವನಗಳನ್ನು ಲೋಕಸಭೆಯಲ್ಲಿ ವಾಚನ ಮಾಡಿ ಸುಂದರ ವಾತಾವರಣ ಸೃಷ್ಟಿಸುತ್ತಿದ್ದರು. ನೆಹರೂ ಕವಿತೆ ಬರೆಯದಿದ್ದರೂ ಕಾವ್ಯಗಳನ್ನು ಆಸ್ವಾದಿಸುತ್ತಿದ್ದರು. ಚೀನಾದ ಮಹಾನಾಯಕ ಮಾವೊ ತ್ಸೆ ತುಂಗ್, ಇಂಗ್ಲೆಂಡ್ ಪ್ರಧಾನಿಯಾಗಿದ್ದ ಚರ್ಚಿಲ್ ತಮ್ಮ ಕಾವ್ಯದ ಮೂಲಕವೇ ಸದನವನ್ನು ಸೆಳೆಯುತ್ತಿದ್ದರು.



ಕಲೆ ಸದಾ ಪ್ರತಿಪಕ್ಷದಂತೆ ಕೆಲಸ ಮಾಡುತ್ತದೆ. ಕಾವ್ಯ ಮತ್ತು ಪ್ರಭುತ್ವ ಒಂದಾಗಿ ಸಾಗಲಾರವು. ಆದರೆ ಕಾವ್ಯವು ಪ್ರಭುತ್ವಕ್ಕೆ ದಾರಿ ತೋರಿಸಬಲ್ಲದು. ಕಲೆ-ಸಾಹಿತ್ಯ ಪ್ರಭುತ್ವದ ಜಡತ್ವ ಕಳೆದು ಚಲನೆ ನೀಡುತ್ತವೆ. ಕವಿಗೆ ಅರಸುಗಿರಸುಗಳ ಹಂಗಿಲ್ಲ, ಅವನು ಅಗ್ನಿಮುಖಿ ಎಂದು ಕುವೆಂಪು ಹಾಡಿದ್ದು ಇದೇ ಕಾರಣಕ್ಕೆ.

ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿದ್ದ ಶರದ್ ಪವಾರ್ ಅವರು ಜನಕವಿ ಎಂದೇ ಹೆಸರಾಗಿದ್ದ ನಾರಾಯಣ ಸುರ್ವೆ ಅವರ ಕವನಗಳನ್ನು ಸದನದಲ್ಲಿ ಆಗಾಗ ಹೇಳುತ್ತಿದ್ದರು. ಸುರ್ವೆ ಅವರಿಗೆ ಉನ್ನತ ಸಾಹಿತ್ಯ ಪ್ರಶಸ್ತಿಯೊಂದು ಪ್ರಕಟವಾಯಿತು. ಮುಂಬೈ ಮುನಿಸಿಪಲ್ ಸ್ಕೂಲಿನಲ್ಲಿ ಸಿಪಾಯಿಯಾಗಿ ಸುರ್ವೆ ಕೆಲಸ ಮಾಡುತ್ತಿದ್ದರು. ಅವರನ್ನು ಅಭಿನಂದಿಸಲು ಪವಾರ್ ಸ್ಕೂಲಿಗೆ ತೆರಳಿದರು. ಸುರ್ವೆ ಮುಖ್ಯಮಂತ್ರಿಯ ಸ್ವಾಗತಕ್ಕೆ ಸಿಪಾಯಿ ಸಮವಸ್ತ್ರದಲ್ಲಿ ಸಜ್ಜಾಗಿ ನಿಂತಿದ್ದರು. ಭಾವುಕರಾದ ಪವಾರ್ 'ನೀವು ಸರಸ್ವತಿ ಪುತ್ರ. ನಿಮ್ಮ ಚರಣ ಮುಟ್ಟಿ ನಮಸ್ಕರಿಸಿ ಧನ್ಯನಾಗುವೆ' ಎಂದು ಸಾಷ್ಟಾಂಗ ನಮಸ್ಕಾರ ಹಾಕಿದ್ದರು. ಈ ಘಟನೆ ಮಹಾರಾಷ್ಟ್ರದಲ್ಲಿ ಮನೆಮಾತಾಗಿದೆ.

ವಿಧಾನ ಪರಿಷತ್ತಿಗೆ ಕಲೆ, ಸಾಹಿತ್ಯ ಕ್ಷೇತ್ರದ ಗಣ್ಯರನ್ನು ನಾಮಕರಣ ಮಾಡುವುದಕ್ಕೆ ಅವಕಾಶವಿದೆ. ಆದರೆ ಈ ಸ್ಥಾನಗಳು ಇತ್ತೀಚಿನ ದಿನಗಳಲ್ಲಿ ರಾಜಕಾರಣಿಗಳ ಪಾಲಾಗುತ್ತಿರುವುದು ವಿಷಾದದ ಸಂಗತಿ.

ವಾಚಕರ ವಾಣಿ

ಮತಾಂತರ: ಕಾರಣ ಅರಿಯುವ ಕೆಲಸವಾಗಲಿ

ಮತಾಂತರ ನಿಷೇಧಕ್ಕೆ ಕಾಯ್ದೆ ತರಲು ಆಡಳಿತಗಾರರು ಚಿಂತಿಸುತ್ತಿದ್ದಾರೆ. ಕಡೆಗಣಿಸಲಾದ ಹಿಂದೂಗಳು ಮಿಕ್ಕ ಧರ್ಮಕ್ಕೆ ಮತಾಂತರಗೊಳ್ಳುತ್ತಿದ್ದಾರೆ. ಬಹುಸಂಖ್ಯಾತ ಹಿಂದೂಗಳ ದೇಶದಲ್ಲೇ 'ನಾವೆಲ್ಲಾ ಹಿಂದೂ, ನಾವೆಲ್ಲ ಒಂದು' ಎಂದು ಪ್ರಚಾರ ಮಾಡಿದರೂ, ಈಗ ಪರ ಧರ್ಮಕ್ಕೆ ವಲಸೆ ಹೋಗುವುದಕ್ಕೆ ಹಿಂದೂ ಧರ್ಮ ಕಾರಣವೋ ಹಿಂದುತ್ವವಾದಿಗಳು ಕಾರಣರೋ ಎಂದು ಚಿಂತಿಸಿದ್ದಾರೆಯೇ?

ಹಿಂದೂಗಳಾದ ದಲಿತರನ್ನು, ಕೆಳವರ್ಗದವರನ್ನು, ವಂಚಿತರನ್ನು ಕಡೆಗಣಿಸಿ, ಅವರನ್ನು ತುಚ್ಛೀಕರಿಸಿ, ಅವರು ದೇವಾಲಯಗಳಿಗೆ ಹೋಗುವುದಕ್ಕೆ ಅಡ್ಡಿಪಡಿಸಿ, ಅವರ ಮೇಲಿನ ಅತ್ಯಾಚಾರಗಳಿಗೆ, ದಾಳಿಗಳಿಗೆ ಉತ್ತೇಜನ ಕೊಟ್ಟು, ಅವರು ಮತಾಂಧರಿಗೆ ಬಲಿಪಶುಗಳಾಗಲು ಅವಕಾಶ ಕಲ್ಪಿಸಿ, ಬಾವಿ ನೀರನ್ನು ಪಡೆಯಲೂ ಅಡ್ಡಿಪಡಿಸಿ, ಅವರ ದೈಹಿಕ ನೋವುಗಳ ಜೊತೆಗೆ, ಮಾನಸಿಕವಾಗಿ ಜೀವನ ಜರ್ಜರಿತವಾಗುವಂತೆ ಆಗುವುದರ ಹಿಂದಿನ ಕಾರಣಗಳಿಗೆ ಸ್ಪಂದಿಸದೇ ಮತಾಂತರ ನಿಷೇಧ ಕಾಯ್ದೆ ತರುವುದು ಎಷ್ಟು ವಿವೇಕಶಾಲಿ? ಹಿಂದೂ ಧರ್ಮಕ್ಕೆ ಮತಾಂತರವಾಗಿದ್ದರೆ ನಿಷೇಧಿಸುತ್ತಿದ್ದರೇ?

ಕೆ.ಎಸ್.ಭಗವಾನ್, ಬೆಂಗಳೂರು

ಬರಲು ಸಿದ್ಧರಾದವರಿಗೆ ಬಲೆ ಹಾಕುವುದೇಕೆ?

'ಕಾಂಗ್ರೆಸ್ ಪಕ್ಷದ ಇಪ್ಪತ್ತು ಶಾಸಕರು ಬಿಜೆಪಿ ಸೇರಲು ಸಿದ್ಧರಾಗಿದ್ದು ಅವರನ್ನು ಬಲೆ ಹಾಕಿ ಸೆಳೆಯುವ ಕೆಲಸವನ್ನು ಸಚಿವ ಮುನಿರತ್ನ ಅವರಿಗೆ ವಹಿಸಲಾಗಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದ್ದಾರೆ. ಶಾಸಕರೇ ಬರಲು ಸಿದ್ಧರಾಗಿರುವಾಗ ಬಲೆ ಹಾಕಿ ಸೆಳೆಯುವ ಅಗತ್ಯ ಏನಿದೆ? ಒಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷರು ಈ ರೀತಿ ಮಾತನಾಡುವುದು ಅಥವಾ ಬಯಸುವುದು ಸರಿಯಲ್ಲ. ಯಾವುದೇ ವ್ಯಕ್ತಿ ಆ ಪಕ್ಷದ ಸಿದ್ಧಾಂತದ ಮೇಲೆ ಒಲವಿಟ್ಟು ಸೇರಬೇಕೇ ಹೊರತು ಅಧಿಕಾರದ ಹಂಬಲದಿಂದ ಅಲ್ಲ. ಕೇವಲ ಅಧಿಕಾರ ಸಿಗುತ್ತದೆ ಎಂಬ ಸ್ವಾರ್ಥದಿಂದ ಸೇರ್ಪಡೆಗೊಂಡರೆ ಅಂತಹವರು ನಿಜವಾಗಿಯೂ ಜನರ ಸೇವೆ ಮಾಡುತ್ತಾರೆಯೇ?

ಪಕ್ಷಾಂತರಗೊಂಡವರಿಗೆ ಪಕ್ಷಾಂತರಗೊಂಡ ಐದು ವರ್ಷಗಳ ನಂತರವಷ್ಟೇ ಅಧಿಕಾರ ದೊರಕುವಂತೆ ಕಾನೂನು ರೂಪಿಸಲಿ. ಐದು ವರ್ಷಗಳು ಪಕ್ಷದ ಸಿದ್ಧಾಂತ ಮತ್ತು ನಿಲುವಿಗೆ ಬದ್ಧರಾಗಿ ದುಡಿದ ನಂತರ ಯಾವುದಾದರೂ ಕ್ಷೇತ್ರದಿಂದ ಸ್ಪರ್ಧಿಸಲಿ. ಪಕ್ಷಾಂತರ ತಡೆಗೆ ಒಂದು ಬಲವಾದ ಕಾನೂನು ತರದಿದ್ದರೆ 'ಆಪರೇಷನ್ ಕಮಲ', 'ಆಪರೇಷನ್ ಹಸ್ತ'ದಂತಹ ಅನಿಷ್ಟ ಬೆಳವಣಿಗೆಗಳು ನಡೆಯುತ್ತಲೇ ಇರುತ್ತವೆ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಬಿಸಿಯೂಟ: ಪುನರಾರಂಭಕ್ಕೆ ಸಕಾಲ

ಕೋವಿಡ್ ಕಾರಣದಿಂದ ಶಾಲೆಗಳಲ್ಲಿನ ಮಧ್ಯಾಹ್ನದ ಬಿಸಿಯೂಟ ಯೋಜನೆ ಸ್ಥಗಿತವಾಗಿತ್ತು. ಸಂಕಷ್ಟ ಕಾಲದಲ್ಲಿ ಸರ್ಕಾರವು ಮಕ್ಕಳಿಗೆ ಸಲ್ಲಬೇಕಾದ ಆಹಾರ ಪದಾರ್ಥವನ್ನು ಅವರ ಮನೆಗೆ ತಲುಪಿಸುತ್ತಿರುವುದು ಶ್ಲಾಘನೀಯ. ಆದರೆ ಇನ್ನೂ ಅದೇ ಮಾರ್ಗವನ್ನು ಅನುಸರಿಸಿದರೆ ಅಕ್ಷರ ದಾಸೋಹ ಕಾರ್ಯಕ್ರಮದ ನೈಜ ಕಳಕಳಿಯನ್ನು ಮರೆತಂತಾಗುತ್ತದೆ. ಶಾಲೆಗಳಲ್ಲಿ ಬಿಸಿಯೂಟ ಯೋಜನೆಯನ್ನು ಪುನರಾರಂಭ ಮಾಡುವುದಕ್ಕೆ ತಡಮಾಡದಿರುವುದು ಲೇಸು. ಬಿಸಿಯೂಟ ಪುನಃ ಆರಂಭಿಸಿದರೆ ಲಕ್ಷಾಂತರ ಬಡ ಮಕ್ಕಳಿಗೆ ಅನುಕೂಲವಾಗುತ್ತದೆ.

ಸರೋಜಿ ನಾಯಕ್, ಹೊಸನಗರ

ಇರುವ ವಿ.ವಿ.ಗಳ ಘನತೆ ಹೆಚ್ಚಿಸಿ

ಚಾಣಕ್ಯನ ಹೆಸರಿನಲ್ಲಿ ವಿಶ್ವವಿದ್ಯಾಲಯ ಸ್ಥಾಪನೆಗೆ ರಾಜ್ಯ ಸರ್ಕಾರ ಅನುಮತಿ ನೀಡಿರುವುದು ಹಾಗೂ ಅದಕ್ಕಾಗಿ 400 ಎಕರೆ ಜಮೀನು ನೀಡಿರುವುದು ವರದಿಯಾಗಿದೆ. ದಶಕಗಳ ಹಿಂದೆ ಕಡಿಮೆ ಸಂಖ್ಯೆಯ ವಿಶ್ವವಿದ್ಯಾಲಯಗಳಿದ್ದವು ಮತ್ತು ಅಲ್ಲಿನ ಶೈಕ್ಷಣಿಕ ಹಾಗೂ ಆಡಳಿತ ವಾತಾವರಣ ಆಕರ್ಷಣೀಯವಾಗಿತ್ತು. ಕುಲಪತಿಗಳ ಹುದ್ದೆಗೆ ಬಹಳ ಗೌರವವಿತ್ತು. ಕುವೆಂಪು, ಡಾ. ಎಚ್.ನರಸಿಂಹಯ್ಯ, ಪ್ರೊ. ಡಿ.ಎಂ.ನಂಜುಂಡಪ್ಪ, ಡಾ. ಲಕ್ಕಪ್ಪಗೌಡ ಮುಂತಾದವರು ಆ ಹುದ್ದೆಗೆ ಘನತೆಯನ್ನು ತಂದುಕೊಟ್ಟಿದ್ದಾರೆ. ವಿಶ್ವವಿದ್ಯಾಲಯಗಳ ಸಂಖ್ಯೆ ಹೆಚ್ಚಿದಂತೆ ಅಲ್ಲಿನ ಗುಣಮಟ್ಟ ಕುಸಿಯುತ್ತಿರುವುದನ್ನು ಕಾಣಬಹುದು. ಇದರ ಜೊತೆಗೆ ವಿಶ್ವವಿದ್ಯಾಲಯಗಳಿಗೆ ನೀಡುವ ಅನುದಾನದಲ್ಲೂ ಕಡಿತ ಮಾಡಲಾಗುತ್ತಿದೆ. ಹೀಗಿರುವಾಗ ಹತ್ತರಲ್ಲಿ ಹನ್ನೊಂದು ಎಂಬಂತೆ ಮತ್ತೊಂದು ವಿಶ್ವವಿದ್ಯಾಲಯ ತೆರೆಯುವುದು ಎಷ್ಟು ಸರಿ ಎಂಬ ಬಗ್ಗೆ ಎಲ್ಲರೂ ಆಲೋಚಿಸಬೇಕಾಗಿದೆ.

ಈ. ಬಸವರಾಜು, ಬೆಂಗಳೂರು

ತೆರಿಗೆ ನಷ್ಟ: ಪ್ರತಿವರ್ಷದ ಬೆಳವಣಿಗೆ

'ತೆರಿಗೆ: ₹ 2491 ಕೋಟಿ ನಷ್ಟ' ಎಂಬ ಸುದ್ದಿಯಲ್ಲಿ (ಪ್ರ.ವಾ., ಸೆ. 23) ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಕ್ಷಮತೆಯ ಒಂದು ದಯನೀಯ ಸ್ಥಿತಿಯ ಚಿತ್ರಣ ಸಿಗುತ್ತದೆ. ಈ ನಷ್ಟ 2019- 20ನೇ ಸಾಲಿಗೆ ಸಂಬಂಧಿಸಿದ ಮಹಾಲೇಖಪಾಲರ ವರದಿಯಲ್ಲಿ ಉಲ್ಲೇಖವಾಗಿರುವಂಥದ್ದು. ವರದಿಯನ್ನು ವಿಧಾನಸಭೆಯಲ್ಲಿ ಸರ್ಕಾರ ಇದೇ 22ರಂದು ಮಂಡಿಸಿದೆ. ಎಂದರೆ, ಮಹಾಲೇಖಪಾಲರು ವರದಿಯನ್ನು ಅಂತಿಮಗೊಳಿಸುವ ಮುನ್ನ ತಾವು ಗಮನಿಸಿರುವ ಲೋಪದೋಷಗಳನ್ನು ಆಯಾ ಇಲಾಖೆಗೆ ಮೊದಲು ಕಳಿಸಿ, ಅಲ್ಲಿಂದ ಪಡೆದ ಸಮಜಾಯಿಷಿ ಮತ್ತು ಉತ್ತರ ಒಪ್ಪಿತವಲ್ಲ ಎಂದಾದಾಗ ವರದಿಯಲ್ಲಿ ಸೇರಿಸುವ ಮೂಲಕ ಪ್ರಕರಣಗಳನ್ನು ಸಾದ್ಯಂತ ನಿರೂಪಿಸಿರುತ್ತಾರೆ.

ಸದನದಲ್ಲಿ ಈ ವರದಿಯ ಬಗೆಗೆ ವಿವರವಾದ ಚರ್ಚೆ ನಡೆಯುತ್ತದೆಯೇ? ಬಹುಶಃ, ಇರಲಾರದು. ಪ್ರತೀ ವರ್ಷ ಹೀಗೆ ಲೇಖಪಾಲರ ವರದಿಗಳು ಸರ್ಕಾರದ ಕೈಸೇರುತ್ತವೆ. ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ? ಇದು ಜನತೆಗೆ ತಿಳಿಯುವುದಿಲ್ಲ. ಲೇಖಪಾಲರು ತೋರಿಸಿದ ನಷ್ಟವನ್ನು ಸರ್ಕಾರ ಹೇಗೆ ಕ್ರಮ ಕೈಗೊಂಡು ವಸೂಲು ಮಾಡುತ್ತದೆ, ನಷ್ಟಕ್ಕೆ ಕಾರಣರಾದ ಅಧಿಕಾರಿಗಳು ಹಾಗೂ ನೌಕರವರ್ಗದ ವಿರುದ್ಧ ಇಲಾಖಾ ಕ್ರಮಗಳನ್ನು ಕೈಗೊಳ್ಳಲಾಯಿತೇ ಎನ್ನುವುದೂ ತಿಳಿಯುವುದಿಲ್ಲ. ಹಾಗೆ ಸೂಕ್ತ ಕ್ರಮ ಕೈಗೊಂಡಿದ್ದರೆ ಇಲಾಖೆಗಳ ಕೆಲಸದಲ್ಲಿ ಹೆಚ್ಚು ಕ್ಷಮತೆ ಇರುತ್ತಿತ್ತು ಮತ್ತು ಲೇಖಪಾಲರ ವರದಿಗಳಲ್ಲಿ ಇಂಥ ನಷ್ಟದ ಪ್ರಸ್ತಾಪಕ್ಕೆ ಹೆಚ್ಚು ಆಸ್ಪದ ಇರುತ್ತಿರಲಿಲ್ಲ. ಆಡಳಿತ ಚುರುಕುಗೊಳ್ಳುತ್ತಿತ್ತು ಮತ್ತು ದೋಷರಹಿತವಾಗಿ ಇರುತ್ತಿತ್ತು. ಲೇಖಪಾಲರು ತಮ್ಮ ಜವಾಬ್ದಾರಿಯನ್ನು ನಿರ್ವಹಿಸುತ್ತಲೇ ಇರುತ್ತಾರೆ. ಸರ್ಕಾರ ಸಂಪ್ರದಾಯದಂತೆ ವರದಿ ಮಂಡನೆ ಮಾಡುತ್ತಲೇ ಇದೆ. ಸರ್ಕಾರಕ್ಕೆ ಪ್ರತಿವರ್ಷವೂ ನಷ್ಟ ಸಂಭವಿಸುತ್ತಲೇ ಇರುತ್ತದೆ. ಜನ ನಿಸ್ಸಹಾಯಕರಾಗಿ ಪ್ರತಿವರ್ಷದ ನಷ್ಟಕ್ಕೆ ತಲೆಯೊಡ್ಡುವುದು ಮುಂದುವರಿಯುತ್ತಲೇ ಇರುತ್ತದೆ ಎನ್ನುವುದೇ ಭರತವಾಕ್ಯ.

ಸಾಮಗ ದತ್ತಾತ್ರಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ನಗರಗಳತ್ತ ದಾಪುಗಾಲು

2050ರ ವೇಳೆಗೆ ಭಾರತದ ಬಹುಪಾಲು ಜನರು ನಗರವಾಸಿಗಳಾಗಲಿದ್ದಾರೆ ಎಂದು ತಜ್ಞರು ಅಂದಾಜಿಸಿದ್ದಾರೆ. 2011ರ ಜನಸಂಖ್ಯೆಯ ಪ್ರಕಾರ ದೇಶದ ಶೇ 31ರಷ್ಟು ಜನರು ನಗರ ಪ್ರದೇಶಗಳಲ್ಲಿ ಇದ್ದರು. ಈಗ ಈ ಪ್ರಮಾಣವು ಗಣನೀಯ ಮಟ್ಟದಲ್ಲಿ ಏರಿಕೆಯಾಗಿದೆ. 2036ರ ವೇಳೆಗೆ ಈ ಪ್ರಮಾಣವು ಶೇ 73ಕ್ಕೆ ಏರಿಕೆಯಾಗಲಿದೆ ಎಂದು ತಜ್ಞರು ಅಂದಾಜಿಸಿದ್ದಾರೆ. ಭಾರತದ ನಗರಗಳು ಈಗಾಗಲೇ, ಗರಿಷ್ಠ ನಗರೀಕರಣಕ್ಕೆ ಒಳಗಾಗಿರುವ ದೇಶಗಳಿಗಿಂತ ಹೆಚ್ಚು ಜನರನ್ನು ನಿಭಾಯಿಸುತ್ತಿವೆ. ಮುಂದಿನ ದಶಕಗಳಲ್ಲಿ ಈ ನಗರೀಕರಣ ಮತ್ತು ನಗರ ಜನಸಂಖ್ಯೆಯ ಪ್ರಮಾಣ ಅಪಾಯಕಾರಿ ಮಟ್ಟಕ್ಕೆ ಏರಿಕೆಯಾಗಲಿದೆ ಎಂದು ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ.

ಭಾರತವು ಕ್ಷಿಪ್ರ ನಗರೀಕರಣಕ್ಕೆ ಒಳಗಾಗುತ್ತಿದೆ. 2001ರ ಜನಗಣತಿ ವರದಿಯಲ್ಲಿ 1,362 ಅರೆನಗರಗಳನ್ನು ಗುರುತಿಸಲಾಗಿತ್ತು. 2011ರ ಜನಗಣತಿ ವೇಳೆಗೆ ಈ ಇಂತಹ ನಗರಗಳ ಸಂಖ್ಯೆಯು 3,892ಕ್ಕೆ ಏರಿಕೆಯಾಗಿದೆ. ಈಗ ಇಂತಹ ನಗರಗಳ ಸಂಖ್ಯೆ ಇನ್ನೂ ಏರಿಕೆಯಾಗಿದೆ. 2036ರ ವೇಳೆಗೆ ಈ ಸಂಖ್ಯೆ 8,000ದ ಗಡಿಯನ್ನು ದಾಟಲಿದೆ. 2050ರ ವೇಳೆಗೆ 12,000ದ ಗಡಿಯನ್ನು ದಾಟಲಿದೆ ಎಂದು ಅಂದಾಜಿಸಲಾಗಿದೆ. ದೇಶದ ಮಹಾನಗರಗಳು, ಪ್ರಮುಖ ನಗರಗಳ ವ್ಯಾಪ್ತಿ ವಿಸ್ತರಿಸುತ್ತಾ ಹೋಗುತ್ತಿದ್ದರೆ, ಮತ್ತೊಂದೆಡೆ ಪಟ್ಟಣಗಳೇ ಅರೆ ನಗರ ಪ್ರದೇಶಗಳಾಗಿ ಮಾರ್ಪಾಡಾಗುತ್ತಿವೆ. ನಗರ ಪ್ರದೇಶದ ಸುತ್ತಲಿನ ಗ್ರಾಮೀಣ ಪ್ರದೇಶಗಳು ಕಿರುನಗರಗಳಾಗಿ ಬದಲಾಗುತ್ತಿವೆ. ಹೀಗಾಗಿಯೇ ಅರೆನಗರಗಳ ಸಂಖ್ಯೆ ವಿಪರೀತ ಪ್ರಮಾಣದಲ್ಲಿ ಏರಿಕೆಯಾಗುತ್ತಿದೆ.

ದೇಶದ ಬಡಜನರಲ್ಲಿ ಒಂದನೇ ಮೂರರಷ್ಟು ಭಾಗವು ನಗರ ಪ್ರದೇಶಗಳಲ್ಲೇ ನೆಲೆಸಿವೆ. 1950ರಲ್ಲಿ ದೇಶದ ಪ್ರತಿ ಎಂಟು ಬಡವರಲ್ಲಿ ಒಬ್ಬರು ಮಾತ್ರವೇ ನಗರ ಪ್ರದೇಶದಲ್ಲಿ ಇದ್ದರು. ಈಗ ದೇಶದ ಪ್ರತಿ ಮೂವರು ಬಡವರಲ್ಲಿ ಒಬ್ಬರು ನಗರ ಪ್ರದೇಶಗಳಲ್ಲಿ ನೆಲೆಸಿದ್ದಾರೆ. 2036ರ ವೇಳೆಗೆ ಪ್ರತಿ ಇಬ್ಬರು ಬಡವರಲ್ಲಿ ಒಬ್ಬರು ನಗರ ಪ್ರದೇಶಗಳಲ್ಲಿ ನೆಲೆಸಲಿದ್ದಾರೆ ಎಂದು ತಜ್ಞರು ಅಂದಾಜಿಸಿದ್ದಾರೆ. 2050ರ ವೇಳೆಗೆ ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ 80ಕ್ಕೂ ಹೆಚ್ಚು ಜನರು ನಗರ/ಅರೆನಗರವಾಸಿಗಳಾಗಿ ಬದಲಾಗಲಿದ್ದಾರೆ. ಹೀಗಾಗಿಯೇ ಭಾರತವು 2050ರ ವೇಳೆಗೆ ಅರೆನಗರ ದೇಶವಾಗಿ ಬದಲಾಗಲಿದೆ ಎಂದು ತಜ್ಞರು ವಿವರಿಸಿದ್ದಾರೆ.

ನಗರ ಜನಸಂಖ್ಯೆ ಚೀನಾ, ಭಾರತದಲ್ಲೇ ಹೆಚ್ಚು

ವಿಶ್ವದ ಬಹುತೇಕ ಎಲ್ಲಾ ಅಭಿವೃದ್ಧಿ ಹೊಂದಿದ ದೇಶಗಳಿಗೆ ಹೋಲಿಸಿದರೆ ನಗರವಾಸಿಗಳ ಸಂಖ್ಯೆ ಭಾರತದಲ್ಲೇ ಹೆಚ್ಚು. ಆ ಎಲ್ಲಾ ದೇಶಗಳ ನಗರೀಕರಣ ಪ್ರಮಾಣ ಭಾರತಕ್ಕಿಂತ ಹೆಚ್ಚು. ಆಯಾ ದೇಶಗಳ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ನಗರವಾಸಿಗಳ ಪ್ರಮಾಣ ಹೆಚ್ಚು. ಆದರೆ ಈ ದೇಶಗಳ ನಗರವಾಸಿಗಳ ಸಂಖ್ಯೆಗೆ ಹೋಲಿಸಿದರೆ, ಭಾರತದಲ್ಲಿನ ನಗರವಾಸಿಗಳ ಸಂಖ್ಯೆ ಹೆಚ್ಚು. ಸದ್ಯ ಚೀನಾದ ನಗರವಾಸಿಗಳ ಸಂಖ್ಯೆ, ಭಾರತದ ನಗರವಾಸಿಗಳ ಸಂಖ್ಯೆಗಿಂತ ಒಂದುಪಟ್ಟು ಹೆಚ್ಚು. ಆದರೆ, 2050ರ ವೇಳೆಗೆ ಭಾರತದ ನಗರವಾಸಿಗಳ ಸಂಖ್ಯೆಯು ಚೀನಾದ ನಗರವಾಸಿಗಳ ಸಂಖ್ಯೆಯನ್ನು ಮೀರಿಸಲಿದೆ ಎಂದು ತಜ್ಞರು ಅಂದಾಜಿಸಿದ್ದಾರೆ.



ನಗರ ಜನಸಂಖ್ಯೆ ಪ್ರಮಾಣ ಭಾರತದಲ್ಲೇ ಕಡಿಮೆ



ಆಧಾರ: ಭಾರತದಲ್ಲಿ ನಗರಯೋಜನೆ ಸಾಮರ್ಥ್ಯ ಸುಧಾರಣೆ ವರದಿ:2021 ಪ್ರಜಾವಾಣಿ ಗ್ರಾಫಿಕ್ಸ್

ನಗರೀಕರಣದ ವಿನ್ಯಾಸ

ಭಾರತದ ನಗರೀಕರಣವು ಸಂಕೀರ್ಣ ಮತ್ತು ವೈವಿಧ್ಯತೆಯಿಂದ ಕೂಡಿದೆ. ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಭಿನ್ನವಾಗಿದೆ. ಗೋವಾ, ತಮಿಳುನಾಡು, ಕೇರಳ, ಮಹಾರಾಷ್ಟ್ರ, ಗುಜರಾತ್ ರಾಜ್ಯಗಳಲ್ಲಿ ಶೇ 40ರಷ್ಟು ನಗರೀಕರಣ ಗುರುತಿಸಬಹುದು. ಬಿಹಾರ, ಒಡಿಶಾ, ಅಸ್ಸಾಂ, ಉತ್ತರ ಪ್ರದೇಶಗಳು ರಾಷ್ಟ್ರೀಯ ಸರಾಸರಿಯಾದ ಶೇ 31ಕ್ಕಿಂತ ಕಡಿಮೆಯಿವೆ.

ಮಹಾರಾಷ್ಟ್ರ, ಉತ್ತರ ಪ್ರದೇಶ, ರಾಜಸ್ಥಾನ, ಕೇರಳ, ತಮಿಳುನಾಡು, ಪಶ್ಚಿಮ ಬಂಗಾಳ, ಆಂಧ್ರ ಪ್ರದೇಶ, ಗುಜರಾತ್, ಕರ್ನಾಟಕ ಹಾಗೂ ಮಧ್ಯಪ್ರದೇಶ – ಈ 10 ರಾಜ್ಯಗಳಲ್ಲಿ ಶೇ 75ಕ್ಕಿಂತ ಹೆಚ್ಚು ನಗರೀಕರಣ ಕೇಂದ್ರೀಕೃತವಾಗಿದೆ. ರಾಷ್ಟ್ರೀಯ ರಾಜಧಾನಿ ದೆಹಲಿ, ಕೇಂದ್ರಾಡಳಿತ ಪ್ರದೇಶಗಳಾದ ದಮನ್ ದಿಯು, ಚಂಡೀಗಡ ಮತ್ತು ಲಕ್ಷದ್ವೀಪಗಳು ಶೇ 75ರಷ್ಟು ನಗರೀಕರಣ ದಾಖಲಿಸಿವೆ ಎಂದು 2011ರ ಜನಗಣತಿ ಉಲ್ಲೇಖಿಸಿದೆ. ನಗರದ ಜನವಸತಿಯನ್ನು ಮೂರು ಹಂತಗಳಲ್ಲಿ ವಿಭಾಗಿಸಲಾಗಿದೆ.

ನಗರ ಜನಸಂಖ್ಯೆ ಹಂಚಿಕೆ

ಶಾಸನಬದ್ಧ ಪಟ್ಟಣಗಳು	31.8 ಕೋಟಿ (ನಗರದ 84.5%)
ಜನಗಣತಿ ಪಟ್ಟಣಗಳು	5.43 ಕೋಟಿ (ನಗರದ 14%)
ನಗರವು ಹೊರವಲಯಗಳಿಗೆ ವಿಸ್ತರಣೆಗೊಂಡ ಪ್ರದೇಶ	43 ಲಕ್ಷ (ನಗರದ 1.14%)

ಒಟ್ಟು 37.7 ಕೋಟಿ (ಜನಸಂಖ್ಯೆಯ ಶೇ 31.1)

1. **ಶಾಸನಬದ್ಧ ಪಟ್ಟಣಗಳು:** ಪುರಸಭೆಯಂತಹ ಸ್ಥಳೀಯ ಆಡಳಿತದೊಂದಿಗೆ ಆಯಾ ರಾಜ್ಯ ಸರ್ಕಾರಗಳು ಅಥವಾ ಕೇಂದ್ರಾಡಳಿತ ಪ್ರದೇಶಗಳ ಕಾನೂನಿನ ಅಡಿಯಲ್ಲಿ ಅಧಿಸೂಚನೆಗೊಂಡ ಜನವಸತಿ ಪ್ರದೇಶಗಳು.
2. **ಜನಗಣತಿ ಪಟ್ಟಣಗಳು:** ಜನಗಣತಿಯಲ್ಲಿ ಈ ಜನವಸತಿ ಪ್ರದೇಶಗಳನ್ನು 'ನಗರ' ಎಂಬುದಾಗಿ ವರ್ಗೀಕರಿಸಲಾಗಿರುತ್ತದೆ. ಕನಿಷ್ಠ 5,000 ಜನಸಂಖ್ಯೆ ಇರುವ, ಶೇ 75ರಷ್ಟು ಪುರುಷ ಮುಖ್ಯ ಕೆಲಸಗಾರರು ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಹಾಗೂ ಪ್ರತಿ ಚದರ ಕಿ.ಮೀಗೆ ಕನಿಷ್ಠ 400 ವ್ಯಕ್ತಿಗಳ ಜನಸಾಂದ್ರತೆ ಹೊಂದಿರುವ ಮಾನದಂಡಗಳನ್ನು ಇವು ಪೂರೈಸಿರುತ್ತವೆ. ಹಳ್ಳಿಗಳ ರೀತಿಯಲ್ಲೇ ಇವುಗಳ ಆಡಳಿತ ನಡೆಸಲಾಗುತ್ತದೆ. ನಗರ ಸ್ಥಳೀಯ ಸಂಸ್ಥೆಗಳನ್ನು ಇವು ಹೊಂದಿರುವುದಿಲ್ಲ.
3. **ನಗರವು ಹೊರವಲಯಗಳಿಗೆ ವಿಸ್ತರಣೆಗೊಂಡ ಪ್ರದೇಶ:** ಪಕ್ಕಾ ರಸ್ತೆ, ವಿದ್ಯುತ್ ಸಂಪರ್ಕ ಮೊದಲಾದ ನಗರದ ಸವಲತ್ತು ಮತ್ತು ಮೂಲಸೌಕರ್ಯಗಳನ್ನು ಹೊಂದಿರುತ್ತವೆ. ನಗರ ಸಮುಚ್ಚಯದ ಪ್ರಮುಖ ಭಾಗದೊಂದಿಗೆ ಈ ಪ್ರದೇಶ ಭೌತಿಕವಾಗಿ ಹೊಂದಿಕೊಂಡಿರುತ್ತದೆ.

ಹಳ್ಳಿಯಿಂದ ನಗರಕ್ಕೆ ವಲಸೆ: ಗ್ರಾಮಗಳಿಂದ ಪಟ್ಟಣಗಳಿಗೆ ಸಹಜವಾಗಿ ಆಗುವ ವಲಸೆಯು ಜನಗಣತಿ ಪಟ್ಟಣಗಳ ಜನಸಂಖ್ಯೆಯನ್ನು ಹೆಚ್ಚಿಸಿದೆ. ನಗರ ಜನಸಂಖ್ಯೆ ಹೆಚ್ಚಳದಲ್ಲಿ ವಲಸೆಯ ಪಾಲು ಶೇ 22.8ರಷ್ಟು, ಜನಗಣತಿ ಪಟ್ಟಣಗಳು ಭಾರತದ ಪ್ರಸ್ತುತ ನಗರೀಕರಣದ ಅವಿಭಾಜ್ಯ ಅಂಗವಾಗಿವೆ. ಒಟ್ಟು ನಗರ ಜನಸಂಖ್ಯೆಯಲ್ಲಿ ಜನಗಣತಿ ಪಟ್ಟಣಗಳ ಒಟ್ಟು ಪಾಲು 2001ರಲ್ಲಿ ಶೇ 7.3ರಷ್ಟಿದ್ದು, ಅದು 2011ರ ವೇಳೆಗೆ ಶೇ 14.4ಕ್ಕೆ ಏರಿತು. ಈ ಅವಧಿಯಲ್ಲಿ ಜನಗಣತಿ ಪಟ್ಟಣಗಳ ಸಂಖ್ಯೆ ಬೆಳೆಯುತ್ತಾ ಹೋಯಿತು. ಕರ್ನಾಟಕದಲ್ಲಿ 44ರಿಂದ 127ಕ್ಕೆ ಹೆಚ್ಚಿದವು.

ಏರುತ್ತಿದೆ ಸಂಖ್ಯೆ: ಈ ಸ್ವರೂಪದ ಪಟ್ಟಣಗಳ ಗಾತ್ರ ದೇಶದಲ್ಲಿ ಏಕರೂಪವಾಗಿಲ್ಲ. 2011ರಲ್ಲಿ 1 ಲಕ್ಷಕ್ಕೂ ಅಧಿಕ ಜನಸಂಖ್ಯೆ ಇರುವ ನಗರಗಳಲ್ಲಿ ಶೇ 70.2ರಷ್ಟು ಜನ ವಾಸ ಮಾಡುತ್ತಿದ್ದರು. ಹತ್ತು ಲಕ್ಷ ಜನಸಂಖ್ಯೆ ಹೊಂದಿರುವ ನಗರಗಳ ಸಂಖ್ಯೆ ಕಳೆದ ದಶಕದಲ್ಲಿ ಕ್ಷಿಪ್ರಗತಿಯಲ್ಲಿ ಏರಿಕೆಯಾಗಿದ್ದು, ಇನ್ನಷ್ಟು ಏರುವ ಸೂಚನೆಗಳಿವೆ. 10 ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಹೊಂದಿರುವ ನಗರಗಳು 2001ರಲ್ಲಿ 35 ಇದ್ದವು. ಇವುಗಳ ಸಂಖ್ಯೆ 2011ರ ಹೊತ್ತಿಗೆ 53ಕ್ಕೆ ಏರಿದೆ. ಜನಗಣತಿ ಪಟ್ಟಣಗಳ ಸಂಖ್ಯೆಯೂ ಈ ಅವಧಿಯಲ್ಲಿ ಹೆಚ್ಚಳವಾಗಿದೆ.

ನಗರೀಕರಣದ ಸವಾಲುಗಳು

- ನಗರೀಕರಣವನ್ನು ನಿರ್ವಹಿಸಲು ಯೋಜನೆ ನಿರ್ಣಾಯಕ. ಭೂಮಿ, ವಿಸ್ತರಣೆ ಮತ್ತು ಭವಿಷ್ಯದಲ್ಲಿ ಅವುಗಳ ಬಳಕೆಯನ್ನು ನಿಯಂತ್ರಿಸಲು ಹಾಗೂ ಮುಂದಿನ 25 ವರ್ಷಗಳ ದೂರದೃಷ್ಟಿಯಲ್ಲಿ ನಗರಗಳನ್ನು ಕಟ್ಟುವ ಯಾವುದೇ ಉದ್ದೇಶ ಇಲ್ಲದೇ ಶಾಸನಬದ್ಧ ಪಟ್ಟಣಗಳು ಬೆಳೆಯುತ್ತಿವೆ.
- ಜನಗಣತಿ ಪಟ್ಟಣಗಳಲ್ಲಿ ಆರ್ಥಿಕ ಚಟುವಟಿಕೆಗಳು ವೇಗವಾಗಿ ಬೆಳೆಯುತ್ತಿವೆ. ಆದರೆ ಮೂಲಸೌಕರ್ಯ ಅಭಿವೃದ್ಧಿಯ ಹೊಣೆಯನ್ನು ಸ್ಥಳೀಯ ಸಂಸ್ಥೆಗಳು ಸರಿಯಾಗಿ ನಿಭಾಯಿಸುತ್ತಿಲ್ಲ. ಜನಗಣತಿ ಪಟ್ಟಣಗಳನ್ನು ಹಳ್ಳಿ ಆಡಳಿತದ ರೀತಿ ನಿರ್ವಹಿಸಲಾಗುತ್ತಿದೆ.
- ನಗರ ಭೂಮಿಯನ್ನು ಸದ್ಬಳಕೆ ಮಾಡಿಕೊಳ್ಳುವ ಸವಾಲು ಸ್ಥಳೀಯಾಡಳಿತಗಳ ಮುಂದಿದೆ. ರೈಲ್ವೆ, ಬಂದರು ಮೊದಲಾದ ಸರ್ಕಾರಿ ಸಂಸ್ಥೆಗಳು ಸ್ವಂತ ಜಮೀನುಗಳನ್ನು ಹೊಂದಿವೆ. ಮೂಲಸೌಕರ್ಯ ಅಭಿವೃದ್ಧಿ ವಿಚಾರ ಬಂದಾಗ ಇದು ತೊಡಕಾಗುತ್ತಿದೆ. ಭೂಸ್ವಾಧೀನ ಎಂಬುದು ಸಂಕೀರ್ಣ ಪ್ರಕ್ರಿಯೆಯಾಗಿದೆ. ಹೀಗಾಗಿ ಒಂದೇ ಏಜೆನ್ಸಿ ಬಳಿ ಭೂಮಿಗೆ ಸಂಬಂಧಪಟ್ಟ ಕೆಲಸಗಳು ಆಗುವಂತಿದ್ದರೆ ಮೂಲಸೌಕರ್ಯಗಳಿಗೆ ವೇಗ ಸಿಗುತ್ತದೆ.
- 2011ರ ಜನಗಣತಿ ಪ್ರಕಾರ, ಶೇ 17.3ರಷ್ಟು ನಗರದ ಜನಸಂಖ್ಯೆಯು ಕೊಳೆಗೇರಿಗಳಲ್ಲಿ ವಾಸಿಸುತ್ತಿತ್ತು. ಶೇ 70ರಷ್ಟು ಕೊಳೆಗೇರಿಗಳು 6 ರಾಜ್ಯಗಳಲ್ಲಿ ಕೇಂದ್ರೀಕೃತವಾಗಿವೆ. ಇವುಗಳನ್ನು ಗುಣಮಟ್ಟದ ಜನವಸತಿಗಳಾಗಿ ಪರಿವರ್ತಿಸುವ ಸವಾಲಿದೆ.
- ಭಾರತದ ನಗರಗಳು ನೀರಿನ ಕೊರತೆಯ ಗಂಭೀರ ಅಪಾಯ ಎದುರಿಸುತ್ತಿವೆ ಎಂದು ಹಲವು ಅಧ್ಯಯನಗಳು ಬೊಟ್ಟು ಮಾಡಿವೆ. ಬೆಂಗಳೂರು ಸೇರಿದಂತೆ ದೇಶದ 30 ನಗರಗಳು ಮುಂದಿನ ಕೆಲವು ದಶಕಗಳಲ್ಲಿ ತೀವ್ರ ನೀರಿನ ಅಭಾವ ಎದುರಿಸಲಿವೆ.
- ನಗರಗಳ ಯೋಜನೆ, ಅಭಿವೃದ್ಧಿ ಜೊತೆಗೆ ನಿರ್ವಹಣೆಯೂ ಮುಖ್ಯ. ನಗರಕ್ಕೆ ಎದುರಾಗುವ ವಿಪತ್ತುಗಳನ್ನು ನಿರ್ವಹಿಸಲು ನಮ್ಮ ನಗರಗಳು ಸಿದ್ಧವಾಗಬೇಕಿದೆ. 2015ರಲ್ಲಿ ಚೆನ್ನೈನಲ್ಲಿ ಉಂಟಾದ ಪ್ರವಾಹ ಇದಕ್ಕೊಂದು ನಿದರ್ಶನ. ಕೆರೆಗಳ ಒತ್ತುವರಿ, ಕಿರಿದಾಗುತ್ತಿರುವ ಜಲಾನಯನ ಪ್ರದೇಶಗಳ ವ್ಯಾಪ್ತಿ ಹಾಗೂ ಮಳೆಯ ವಿನ್ಯಾಸದಲ್ಲಿ ಆದ ಬದಲಾವಣೆಗಳಿಂದ ನಗರದಲ್ಲಿ ಪ್ರವಾಹ ಉಂಟಾಗುತ್ತಿದೆ. ಕರಾವಳಿ ತಟದಲ್ಲಿರುವ ನಗರಗಳಲ್ಲೂ ಈ ಅಪಾಯ ಹೆಚ್ಚು.

ದೆಹಲಿ ಹೈಕೋರ್ಟ್‌ಗೆ ಕೇಂದ್ರದ ಮಾಹಿತಿ

ಪಿಎಂ ಕೇರ್ಸ್ ಸರ್ಕಾರಿ ನಿಧಿಯಲ್ಲ

PMCARES Prime Minister's Citizen Assistance and Relief in Emergency Situations Fund

ನವದೆಹಲಿ (ಪಿಟಿಐ): 'ಪಿಎಂ ಕೇರ್ಸ್ ಫಂಡ್' ಸರ್ಕಾರದ ನಿಧಿಯಲ್ಲ. ಅದಕ್ಕೆ ನೀಡುವ ದೇಣಿಗೆಗಳು ಭಾರತದ ಬೊಕ್ಕಸಕ್ಕೆ ಹೋಗುವುದಿಲ್ಲ ಎಂದು ದೆಹಲಿ ಹೈಕೋರ್ಟ್‌ಗೆ ಕೇಂದ್ರ ಸರ್ಕಾರ ಗುರುವಾರ ಮಾಹಿತಿ ನೀಡಿದೆ. ಮಾಹಿತಿ ಹಕ್ಕು ಕಾಯ್ದೆಯ (ಆರ್‌ಟಿಐ) ಅಡಿಯಲ್ಲಿ ಈ ನಿಧಿಗೆ ಸಂಬಂಧಿಸಿದ ಮಾಹಿತಿ ಹಂಚಿಕೊಳ್ಳಲು ಸಾಧ್ಯವಿಲ್ಲ ಎಂದು ತಿಳಿಸಿದೆ.

ಪ್ರಧಾನಿ ಕಚೇರಿಯ (ಪಿಎಂಒ) ಅಧೀನ ಕಾರ್ಯದರ್ಶಿ ಪ್ರದೀಪ್ ಕುಮಾರ್ ಶ್ರೀವಾಸ್ತವ ಅವರು ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದ್ದಾರೆ. ಪಿಎಂ ಕೇರ್ಸ್ ಟ್ರಸ್ಟ್ ಪಾರದರ್ಶಕತೆಯಿಂದ ಕಾರ್ಯ ನಿರ್ವಹಿಸುತ್ತಿದ್ದು, ಹಣವನ್ನು ಲೆಕ್ಕ ಪರಿಶೋಧಕರಿಂದ ಪರಿಶೋಧನೆಗೆ ಒಳಪಡಿಸಲಾಗುತ್ತದೆ ಎಂದು ಪ್ರಮಾಣಪತ್ರದಲ್ಲಿ ತಿಳಿಸಲಾಗಿದೆ.

ಆರ್‌ಟಿಐ ಕಾಯ್ದೆಯಡಿ ಪಿಎಂ ಕೇರ್ಸ್ ಅನ್ನು 'ಸಾರ್ವಜನಿಕ ಪ್ರಾಧಿಕಾರ' ಎಂದು ಘೋಷಿಸಲು ನಿರ್ದೇಶನ ನೀಡುವಂತೆ ಹಾಗೂ ಇದನ್ನು 'ಸರ್ಕಾರಿ' ನಿಧಿ ಎಂದು ಘೋಷಿಸಲು ನಿರ್ದೇಶನ ನೀಡಬೇಕೆಂದು ಕೋರಿ ಸಲ್ಲಿಸಲಾಗಿದ್ದ ಅರ್ಜಿಗೆ ಉತ್ತರವಾಗಿ ಕೇಂದ್ರ ಸರ್ಕಾರವು ಈ ಪ್ರಮಾಣಪತ್ರ ಸಲ್ಲಿಸಿದೆ.

ನ್ಯಾಯಮೂರ್ತಿಗಳಾದ ಡಿ.ಎನ್.ಪಟೇಲ್ ಮತ್ತು ಅಮಿತ್ ಬನ್ಸಲ್ ಅವರು ಮುಂದಿನ ವಿಚಾರಣೆಯನ್ನು ಸೆ. 27ಕ್ಕೆ ಮುಂದೂಡಿದರು.

'ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳಲು ಲೆಕ್ಕಪರಿಶೋಧನೆಯ ವರದಿಯನ್ನು ಟ್ರಸ್ಟ್‌ನ ಅಧಿಕೃತ ವೆಬ್‌ಸೈಟ್‌ನಲ್ಲಿ ಸ್ವೀಕರಿಸಿದ ನಿಧಿಯ ಬಳಕೆಯ ವಿವರಗಳೊಂದಿಗೆ ಪ್ರಕಟಿಸಲಾಗಿದೆ' ಎಂದು ತಿಳಿಸಲಾಗಿದೆ.

'ಸಂವಿಧಾನದ 12ನೇ ಪರಿಚ್ಛೇದದ ಅರ್ಥದಲ್ಲಿ ಈ ಟ್ರಸ್ಟ್ 'ಸರ್ಕಾರಿ' ಎಂದಾಗಲೀ, ಅಥವಾ ಆರ್‌ಟಿಐ ಕಾಯ್ದೆಯ ನಿಬಂಧನೆಗಳ ಅರ್ಥದಲ್ಲಿ 'ಸಾರ್ವಜನಿಕ ಪ್ರಾಧಿಕಾರ' ಎಂದಾಗಲೀ ಘೋಷಿಸಿಲ್ಲ. ಹಾಗಾಗಿ ಮೂರನೆಯವರಿಗೆ ಮಾಹಿತಿ ಬಹಿರಂಗ ಸಾಧ್ಯವಿಲ್ಲ' ಎಂದು ಪ್ರಮಾಣಪತ್ರ ಉಲ್ಲೇಖಿಸಿದೆ.

ಎಲ್ಲಾ ದೇಣಿಗೆಗಳನ್ನು ಆನ್‌ಲೈನ್ ಪಾವತಿಗಳು, ಚೆಕ್‌ಗಳು ಅಥವಾ ಡಿಮಾಂಡ್ ಡ್ರಾಫ್ಟ್‌ಗಳ ಮೂಲಕ ಟ್ರಸ್ಟ್ ಸ್ವೀಕರಿಸಿದ್ದು, ಈ ಮೊತ್ತವನ್ನು ಲೆಕ್ಕಪರಿಶೋಧನೆಯ ವರದಿಯೊಂದಿಗೆ ಪರಿಶೀಲಿಸಲಾಗುತ್ತದೆ. ಟ್ರಸ್ಟ್ ನಿಧಿಯ ವೆಚ್ಚವನ್ನು ವೆಬ್‌ಸೈಟ್‌ನಲ್ಲಿ ಪ್ರದರ್ಶಿಸಲಾಗುತ್ತದೆ ಎಂದು ತಿಳಿಸಲಾಗಿದೆ.

'ಟ್ರಸ್ಟ್ ಪಾರದರ್ಶಕತೆ ಮತ್ತು ಸಾರ್ವಜನಿಕ ಹಿತದ ತತ್ವಗಳ ಮೇಲೆ ಕಾರ್ಯನಿರ್ವಹಿಸುತ್ತಿದೆ. ಇತರ ಯಾವುದೇ ಚಾರಿಟಬಲ್ ಟ್ರಸ್ಟ್‌ಗಳಂತೆಯೇ ಸಾರ್ವಜನಿಕ ಹಿತಾಸಕ್ತಿ ಹೊಂದಿದೆ' ಎಂದು ತಿಳಿಸಲಾಗಿದೆ.

'ನಾನು ಕೇಂದ್ರ ಸರ್ಕಾರದ ಅಧಿಕಾರಿಯಾಗಿದ್ದರೂ, ಗೌರವಾನ್ವಿತವಾಗಿ ಪಿಎಂ ಕೇರ್ಸ್ ಟ್ರಸ್ಟ್‌ನಲ್ಲಿ ನನ್ನ ಕಾರ್ಯಗಳನ್ನು ನಿರ್ವಹಿಸಲು ನನಗೆ ಅನುಮತಿ ಇದೆ' ಎಂದು ಪ್ರದೀಪ್ ಕುಮಾರ್ ಹೇಳಿದ್ದಾರೆ.

ಪಿಎಂ ಕೇರ್ಸ್ ನಿಧಿಯು ಸರ್ಕಾರಿ ನಿಧಿ ಎಂದು ಪ್ರತಿಪಾದಿಸಿ ಸಮ್ಯಕ್ ಗಂಗ್ವಾಲ್ ಅವರು ಸಲ್ಲಿಸಿದ ಅರ್ಜಿಯನ್ನು ನ್ಯಾಯಾಲಯವು ವಿಚಾರಣೆ ನಡೆಸುತ್ತಿದೆ. ಸಾರ್ವಜನಿಕರ ನೆರವಿನೊಂದಿಗೆ ದೇಶದ ನಾಗರಿಕರಿಗೆ ನೆರವು ನೀಡಲು ಇದನ್ನು 2020ರ ಮಾರ್ಚ್ 27ರಂದು ಪ್ರಧಾನಿ ರಚಿಸಿದ್ದರು.

'ಪಿಎಂ ಹೆಸರು ಬೇಡ'

ಈ ಟ್ರಸ್ಟ್‌ನಲ್ಲಿ ಪ್ರಧಾನಿ, ರಕ್ಷಣೆ, ಗೃಹ ಮತ್ತು ಹಣಕಾಸು ಸಚಿವರು ಟ್ರಸ್ಟಿಗಳಾಗಿದ್ದಾರೆ. ಈ ಟ್ರಸ್ಟ್ ಸ್ಥಾಪನೆಯಾದ ಬಳಿಕ, ಇದು ಭಾರತ ಸರ್ಕಾರ ನಿರ್ವಹಿಸುವ ಟ್ರಸ್ಟ್ ಎಂದು ಹೇಳಲಾಗುತ್ತಿತ್ತು ಎಂದು ಅರ್ಜಿಯಲ್ಲಿ ಆರೋಪಿಸಲಾಗಿದೆ. ಪಿಎಂ ಕೇರ್ಸ್ ನಿಧಿಯು ಭಾರತ ಸರ್ಕಾರದ ನಿಧಿ ಅಲ್ಲ ಎಂಬುದನ್ನು ಪ್ರಕಟಿಸುವಂತೆ ಕೇಂದ್ರಕ್ಕೆ ಸೂಚಿಸಬೇಕು ಎಂದೂ ಅರ್ಜಿದಾರರು ಕೋರಿದ್ದಾರೆ. ಭಾರತದ ಪ್ರಧಾನಿ ಎಂಬ ಹೆಸರು ಅಥವಾ ಪ್ರಧಾನ ಮಂತ್ರಿ ಎಂಬುದರ ಸಂಕ್ಷಿಪ್ತರೂಪ ಪಿಎಂ ಎಂಬುದನ್ನು ಬಳಸದಂತೆ ಸೂಚನೆ ನೀಡಲು ಅವರು ವಿನಂತಿಸಿದ್ದಾರೆ.

'ಪಿಎಂ ಕೇರ್ಸ್' ಒಂದು ಚಾರಿಟಬಲ್ ಟ್ರಸ್ಟ್ ಆಗಿದ್ದು, ಸಂವಿಧಾನದ ಅಡಿಯಲ್ಲಿ ಅಥವಾ ಸಂಸತ್ತಿನಿಂದ ಅಥವಾ ಯಾವುದೇ ರಾಜ್ಯ ಶಾಸಕಾಂಗದಿಂದ ರಚಿಸಲ್ಪಟ್ಟಿಲ್ಲ
ಕೇಂದ್ರ ಸರ್ಕಾರ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ದೆಹಲಿಯಲ್ಲಿ ವಿಶ್ವದ ಐದು ಪ್ರಮುಖ ದೇಶಗಳ ಗುಪ್ತಚರ ಮುಖ್ಯಸ್ಥರ ಸಭೆ ನಡೆದಿದೆ. ಭಾರತದ ರಾ, ಅಮೆರಿಕದ ಸಿಐಎ, ಇಸ್ರೇಲ್ ಮೊಸ್ಸಾದ್, ರಷ್ಯಾದ ಕೆಜಿಬಿ ಮತ್ತು ಬ್ರಿಟನ್‌ನ ಐಎಂ6 ಗುಪ್ತಚರ ಸಂಘಟನೆಗಳ ಮುಖ್ಯಸ್ಥರು ಭಯೋತ್ಪಾದನೆ ಬಗ್ಗೆ ಉನ್ನತ ಮಟ್ಟದ ಸಭೆ ನಡೆಸಿದ್ದಾರೆ. ಅಫ್ಗಾನಿಸ್ತಾನದಲ್ಲಿ ತಾಲಿಬಾನ್ ಮೇಲುಗೈ ಸಾಧಿಸಿರುವ ಈ ವೇಳೆಯಲ್ಲಿ ಭಾರತದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ದೇಶದಲ್ಲಿ ಮಹತ್ವದ ಸಭೆ ನಡೆಸಿದ್ದಾರೆ. ಇದು ಭಾರತದ ಸಾಮರ್ಥ್ಯ ಬಿಂಬಿಸುತ್ತದೆ' ಎಂಬುದಾಗಿ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಯಾಗುತ್ತಿದೆ. ವಿವಿಧ ದೇಶಗಳ ಗಣ್ಯರು ಭಾಗವಹಿಸಿರುವ ಚಿತ್ರವನ್ನು ಹಂಚಿಕೊಳ್ಳಲಾಗಿದೆ.

ಈ ಚಿತ್ರವನ್ನು ರಿವರ್ಸ್ ಇಮೇಜ್ ಮೂಲಕ ಪರಿಶೀಲಿಸಿದಾಗ, ಗುಪ್ತಚರ ಸಂಸ್ಥೆಗಳ ಸಭೆಗೆ ಸಂಬಂಧಿಸಿದ ಚಿತ್ರವಲ್ಲ ಎಂದು ತಿಳಿದುಬಂದಿದೆ. ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್ ಅವರು ರಷ್ಯಾದ ರಾಷ್ಟ್ರೀಯ ಭದ್ರತಾ ಸಲಹೆಗಾರ ನಿಕೋಲಾಯ್ ಅವರ ಜತೆ ಸೆಪ್ಟೆಂಬರ್ 8ರಂದು ದೆಹಲಿಯಲ್ಲಿ ನಡೆಸಿದ ಎನ್‌ಎಸ್‌ಜಿ ಮಟ್ಟದ ಸಭೆಯ ಚಿತ್ರವಿದು. ದೇಶದ ಹಲವು ಸುದ್ದಿಸಂಸ್ಥೆಗಳು ಈ ಸುದ್ದಿಯನ್ನು ಪ್ರಕಟಿಸಿವೆ. ಆದರೆ ಜಗತ್ತಿನ ಐದು ದೇಶಗಳ ಗೂಢಚರ್ಯೆ ಸಂಸ್ಥೆಗಳ ಮುಖ್ಯಸ್ಥರನ್ನು ಮೋದಿ ಅವರು ಒಟ್ಟಿಗೆ ಸೇರಿಸಿದ್ದಾರೆ ಎಂದು ತಪ್ಪಾಗಿ ಬಿಂಬಿತವಾಗುತ್ತಿದೆ.

ಗುಂಡಣ್ಣ



ದಿನ ಭವಿಷ್ಯ

ಶುಕ್ರವಾರ ಸೆಪ್ಟೆಂಬರ್ 24, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಭಾದ್ರಪದ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಉತ್ತರ ಫಲ್ಗುಣಿ ತೃತೀಯ ಗಂ. 1-3 (ಬೆ. 6-40) ಶುಕ್ರವಾರ ನಿತ್ಯ ನಕ್ಷತ್ರ ಅಶ್ವಿನಿ ಗಂ. 5-26 (ಬೆ. 8-25) ವ್ಯಾಘಾ ನಾಮ ಯೋಗ ಗಂ. 21-17 ಭದ್ರೆ ಕರಣ ಗಂ. 1-3 ವಿಷ ಗಂ. 32-15 ಅಮೃತ ಗಂ 57-57 : ರಾಹುಕಾಲ ಬೆ ಗಂ. 10-30 ರಿಂದ 12-00 ಗುಳಿಕ ಬೆ ಕಾಲ ಗಂ 7-30 ರಿಂದ 9-00 ಯಮಗಂಡ ಕಾಲ ಮ ಗಂ 3-00 ರಿಂದ 4-30 : ಸೂರ್ಯೋದಯ: 6-12 ಸೂರ್ಯಾಸ್ತ: 6-16 ಅದೃಷ್ಟ ಸಂಖ್ಯೆ 3, 7

ಮೇಷ: ಬೌದ್ಧಿಕ ಮಟ್ಟ ಹೆಚ್ಚಿದ ಅನುಭವವಾಗಲಿದೆ. ಉನ್ನತ ಶಿಕ್ಷಣದ ಯೋಜನೆ ಕೈಗೂಡಲಿದೆ. ಉದ್ಯೋಗ ಕ್ಷೇತ್ರದಲ್ಲಿನ ಜವಾಬ್ದಾರಿ ಹೆಚ್ಚಾಗುವ ಸಾಧ್ಯತೆ. ಸಾಹಿತ್ಯ, ಕಲೆಗಳಲ್ಲಿ ತೊಡಗಿಕೊಂಡವರಿಗೆ ಉತ್ತಮ ಅವಕಾಶದಿಂದಾಗಿ ಕೀರ್ತಿ.

ವೃಷಭ: ಬಿಡುವಿಲ್ಲದ ಕೆಲಸ ಕಾರ್ಯಗಳು. ಅತಿಯಾದ ಓಡಾಟ, ಪ್ರಯಾಣಗಳಿಂದಾಗಿ ದೇಹಾಲಸ್ಯ. ಮಕ್ಕಳು ಉದ್ಯೋಗದ ನಿಮಿತ್ತ ವಿದೇಶ ಪ್ರಯಾಣ ಮಾಡುವ ಸಾಧ್ಯತೆ. ಮನೆಯಲ್ಲಿ ಹೊಸ ಚೇತನವೊಂದು ಮೂಡಿಬರಲಿದೆ.

ಮಿಥುನ: ಹೊಸ ಉದ್ಯಮವೊಂದರಲ್ಲಿ ಹಣ ವಿನಿಯೋಗಿಸಲಿದ್ದೀರಿ. ಅತಿಯಾದ ದುಡುಕಿನಿಂದಾಗಿ ಸಂಗಾತಿಯೊಂದಿಗೆ ಮನಸ್ತಾಪ. ಧಾರ್ಮಿಕ ಕಾರ್ಯಕ್ರಮಗಳಿಗಾಗಿ ಧನ ವಿನಿಯೋಗ ಮಾಡುವ ಸಾಧ್ಯತೆ.

ಕರ್ಕಾಟಕ: ಸ್ಥಿರಾಸ್ತಿ ಖರೀದಿಸುವ ಸಾಧ್ಯತೆ. ದೊಡ್ಡ ವ್ಯಕ್ತಿಯೊಬ್ಬರ ಸಹವಾಸದಿಂದ ಸಾಮಾಜಿಕ ಗೌರವ ಹೆಚ್ಚಲಿದೆ. ಭೂ ಸಂಬಂಧಿ ತಕರಾರುಗಳು ತಲೆದೋರುವ ಸಾಧ್ಯತೆ. ಹಳೆಯ ಸಾಲಗಳು ತೀರುವುದರಿಂದ ನೆಮ್ಮದಿ.

ಸಿಂಹ: ಜೀವನ ನಿರ್ವಹಣೆಗೆ ನಾಂದಿಯಾಗುವ ಆರ್ಥಿಕ ಸಂಪನ್ಮೂಲವೊಂದು ಗೋಚರವಾಗುವ ಸಾಧ್ಯತೆ. ನಗರ ಸಭೆಯಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳಿಗೆ ಪದೋನ್ನತಿ ಅಥವಾ ಅಧಿಕಾರದಲ್ಲಿ ಬದಲಾವಣೆ ಸಾಧ್ಯತೆ.

ಕನ್ಯಾ: ಉದ್ಯೋಗ, ವ್ಯವಹಾರಗಳು ಅಭಿವೃದ್ಧಿಗೊಂಡು ಆರ್ಥಿಕ ಬಲವರ್ಧನೆಯಾಗಲಿದೆ. ಯಂತ್ರೋಪಕರಣಗಳನ್ನು ಖರೀದಿಸುವ ಸಾಧ್ಯತೆ. ಅಧಿಕಾರ ವೃದ್ಧಿ. ಗೃಹ ನಿರ್ಮಾಣ ಚಟುವಟಿಕೆ ಚುರುಕುಗೊಳ್ಳಲಿವೆ.

ತುಲಾ: ವ್ಯವಹಾರಗಳು ಸುಗಮವಾಗಿ ಸಾಗಲಿವೆ. ಉದ್ಯೋಗ ಕ್ಷೇತ್ರದಲ್ಲಿ ಶುಭವಾರ್ತೆಯೊಂದನ್ನು ಕೇಳಲಿದ್ದೀರಿ. ವಿರೋಧಿಗಳು ದೂರ ಸರಿಯಲಿದ್ದಾರೆ. ಸ್ತ್ರೀಯರಿಗೆ ಉದ್ಯೋಗ ಭಾಗ್ಯ ಕಂಡುಬರುವುದು.

ವೃಶ್ಚಿಕ: ತಾಳ್ಮೆಯಿಂದ ಕಾರ್ಯಾನುಕೂಲ. ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ನಿಮಿತ್ತ ವಿದೇಶ ಪ್ರಯಾಣ ಸಾಧ್ಯತೆ. ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲಿದ್ದೀರಿ. ವಸ್ತ್ರಾಭರಣ ಹಾಗೂ ಆಸ್ತಿ ಖರೀದಿ ಮಾಡುವ ಸಾಧ್ಯತೆ.

ಧನು: ಪದೋನ್ನತಿಯ ಸಲುವಾಗಿ ನಡೆಸುವ ಯತ್ನಗಳಲ್ಲಿ ಯಶಸ್ಸು. ವ್ಯವಹಾರಗಳಲ್ಲಿ ಶ್ರೇಯಸ್ಸು. ಕರಕುಶಲ ವಸ್ತುಗಳ ವ್ಯಾಪಾರಿಗಳಿಗೆ ಧನಲಾಭವಾಗುವ ಸಾಧ್ಯತೆ. ನೌಕರಿಯಲ್ಲಿನ ತೀವ್ರ ಒತ್ತಡದಿಂದಾಗಿ ಬೇಸರ.

ಮಕರ: ಆಸ್ತಿ ಸಂಬಂಧಿಸಿದ ಸಮಸ್ಯೆಗಳಿಗೆ ಪರಿಹಾರ. ಹೊಸ ಗೃಹ ನಿರ್ಮಾಣ ಯೋಜನೆಯನ್ನು ಕಾರ್ಯರೂಪಕ್ಕೆ ತರಲಿದ್ದೀರಿ. ಕೃಷಿ ಭೂಮಿಯನ್ನು ಖರೀದಿ ಮಾಡುವ ಸಾಧ್ಯತೆ. ಆರೋಗ್ಯದಲ್ಲಿ ಸುಧಾರಣೆ.

ಕುಂಭ: ಧವಸ ಧಾನ್ಯಗಳ ವ್ಯಾಪಾರಸ್ಥರಿಗೆ ಉತ್ತಮ ಲಾಭ. ಆಯವ್ಯಯಗಳನ್ನು ಪರಿಶೀಲನೆ ಮಾಡಬೇಕಾದುದು ಅನಿವಾರ್ಯವಾಗಲಿದೆ. ಬ್ಯಾಂಕ್ ಅಧಿಕಾರಿಗಳಿಂದ ವಂಚನೆಗೊಳಗಾಗುವ ಸಾಧ್ಯತೆ.

ಮೀನ: ಉದ್ಯೋಗ ವ್ಯವಹಾರಗಳಲ್ಲಿ ಪ್ರಗತಿ. ಭೂಮಿ, ನಿವೇಶನ ವ್ಯಹಾರದಲ್ಲಿ ಅಧಿಕ ಧನ ಲಾಭ. ಸ್ತ್ರೀಯರಿಂದ ಮಾನಸಿಕ ಕಿರಿಕಿರಿ. ವಿರೋಧಿಗಳ ಪರಾಜಯ. ಹೈನುಗಾರಿಕೆಯವರಿಗೆ ಲಾಭದಲ್ಲಿ ಹೆಚ್ಚಳ.

ನಿಮ್ಮ ಜನ್ಮದಿನ 24-ಸೆಪ್ಟೆಂಬರ್ ಇಂದು ಅತ್ಯಂತ ಶುಭದಾಯಕ. ವಿದ್ಯಾವಂತ ನಿರುದ್ಯೋಗಿಗಳಿಗೆ ಉದ್ಯೋಗ ಪ್ರಾಪ್ತವಾಗಲಿದೆ. ವ್ಯವಹಾರಗಳಲ್ಲಿ ಹಂತಹಂತವಾಗಿ ಉನ್ನತಿ. ಕೌಟುಂಬಿಕ ಕಲಹವನ್ನು ಸಮರ್ಥವಾಗಿ ನಿಭಾಯಿಸಲಿದ್ದೀರಿ. ಹಿರಿಯರ ಮಧ್ಯಸ್ಥಿಕೆಯಿಂದಾಗಿ ಒಡನಾಡಿಗಳಲ್ಲಿ ಒಮ್ಮತ ಮೂಡಿಬರಲಿದೆ. ಸಂಗಾತಿಯ ಅನುಕೂಲಕ್ಕಾಗಿ ವಾಹನ ಖರೀದಿ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಮಹರ್ಷಿಗಳ ಮತ

ಸ್ರವಿಸುವುದು ಜೀವರಸ ಹೃದಯಗರ್ತದ ತಳದಿ |
ಕಿವಿಗಾ ರಹಸ್ಯದುಲಿ ಕಾವ್ಯಗಾನಗಳಿಂ ||
ಭುವನದಾಚಿನ ರಹಸ್ಯದ ಕೀರ್ತಿ ವೇದಗಳ |
ರವದಿನೆಂದಾರ್ಷಮತ – ಮಂಕುತಿಮ್ಮ || 464||

ಪದ-ಅರ್ಥ: ಸ್ರವಿಸುವುದು = ಹುಟ್ಟುವುದು, ಹೃದಯಗರ್ತದ = ಹೃದಯ + ಗರ್ತದ(ಕೊಳ್ಳದ, ಗವಿಯ), ರಹಸ್ಯದುಲಿ = ರಹಸ್ಯದ + ಉಲಿ(ಗುಟ್ಟಿನ ಕೂಗು), ಭುವನದಾಚಿನ = ಭುವನದ + ಆಚಿನ, ರವದಿನೆಂದಾರ್ಷಮತ = ರವದಿಂ(ಶಬ್ದದಿಂದ) + ಎಂದು + ಆರ್ಷಮತ(ಮಹರ್ಷಿಗಳ ಮತ).

ವಾಚ್ಯಾರ್ಥ: ಹೃದಯದಾಳದ ತಳದಲ್ಲಿ ಜೀವರಸ ಹುಟ್ಟುತ್ತದೆ. ಕಾವ್ಯ, ಹಾಡುಗಳಿಂದ ಅದರ ಗುಟ್ಟಿನ ಕೂಗು ಕಿವಿಗೆ ಕೇಳಿಸುತ್ತದೆ. ನಮ್ಮ ತಿಳಿವನ್ನು ಮೀರಿದ, ಪ್ರಪಂಚದ ಜ್ಞಾನವನ್ನು ಮೀರಿದ ರಹಸ್ಯ ನಮಗೆ ದೊರೆಯುವುದು ವೇದಗಳಿಂದ ಎಂಬುದು ಮಹರ್ಷಿಗಳ ಮತ.

ವಿವರಣೆ: ನಮ್ಮ ಸಂತೋಷಕ್ಕೆ ಸಾಧನವಾದವುಗಳು ಎರಡು. ಒಂದು ದೇಹ, ಮತ್ತೊಂದು ಮನಸ್ಸು. ಮನಸ್ಸಿನ ಸ್ಥಾನ ಹೃದಯ. ನಮ್ಮ ದೇಹಕ್ಕೆ ಸಂತೋಷವಾಗುವುದು ಅದು ಪಡುವ ಅನುಭವದಲ್ಲಿ. ಒಳ್ಳೆಯ ಊಟ, ಗಾಢ ನಿದ್ರೆ, ಪ್ರೇಯಸಿಯೊಡನೆ ಪ್ರಣಯದಾಟ, ಸುಗಂಧ ದ್ರವ್ಯಗಳ ವಾಸನೆ, ಸುರಮ್ಯ ಕಣ್ಣಿನ ನೋಟ, ಇವೆಲ್ಲ ಸುಖ ಕೊಡುತ್ತವೆ. ಅವು ತುಂಬ ಕ್ಷಣಿಕವಾದವುಗಳು. ದೇಹ ಅವುಗಳನ್ನು ಅನುಭವಿಸುವುದು ಅವುಗಳೊಂದಿಗಿದ್ದಾಗ ಮಾತ್ರ. ಅವು ಮರೆಯಾದೊಡನೆ ದೇಹ ಅದನ್ನು ಮರೆಯುತ್ತದೆ. ಆದರೆ ದೇಹ ಹೊಂದಿದ ಸಂತೋಷ ಮನಸ್ಸಿನಲ್ಲಿ ಮಾತ್ರ ಬಹುಕಾಲ ನೆಲೆಯಾಗಿ ನಿಲ್ಲುತ್ತದೆ. ಒಂದು ಸಂತಸದ ಕ್ಷಣ ಅಮೃತವಾಗುತ್ತದೆ.

ಜೀವರಸ ನಮ್ಮ ಹೃದಯದ ಆಳದ ಗುಹೆಯಲ್ಲಿ ಸೃಷ್ಟಿಯಾಗುತ್ತದೆ. ಅದು ಗೂಢವಾಗಿರುತ್ತದೆ. ಅದು ಹೊರಬಂದು ನಮ್ಮಲ್ಲಿ ಸಂತೋಷದ ಚಿಲುಮೆಯನ್ನು ಉಕ್ಕಿಸುವುದು ಸಂಗೀತ, ಕಾವ್ಯ, ನಟನೆ, ಚಿತ್ರ ಮುಂತಾದ ಕಲಾ ಪ್ರಕಾರಗಳ ಪ್ರಚೋದನೆಯಿಂದ. ಅದನ್ನು ಕಗ್ಗ ಸೊಗಸಾಗಿ 'ರಹಸ್ಯದುಲಿ' ಎಂದು ಕರೆಯುತ್ತದೆ. ಅದು ಗುಟ್ಟಿನ ಕೂಗು. ಹೃದಯದ ರಹಸ್ಯ, ದೇಹಕ್ಕೆ ಗುಟ್ಟಾಗಿ ನೀಡುವ ಕರೆ. ಹೀಗೆಂದರೆ ನಮ್ಮ ಎಲ್ಲರಲ್ಲಿ ಸದಾಕಾಲವೂ ರಹಸ್ಯವಾಗಿ, ಹೃದಯದಲ್ಲಿ ಹರಿಯುತ್ತಿರುವ ಜೀವರಸದ ಅನುಭವ ನಮಗಾಗುವುದು, ಬಾಹ್ಯದ ಸುಂದರ ಪ್ರಚೋದನೆಗಳಿಂದ.

ಆದರೆ ಇಲ್ಲೊಂದು ತೊಂದರೆ ಇದೆ. ನಮ್ಮ ಹೃದಯ, ಮನಸ್ಸುಗಳು ಗ್ರಹಿಸುವುದು ಇಂದ್ರಿಯಗಳ ಅನುಭವಕ್ಕೆ ಬಂದ ವಸ್ತುಗಳು, ಚಿಂತನೆಗಳಿಂದ. ದೈಹಿಕ ಅನುಭವಕ್ಕೆ ಬಾರದ್ದನ್ನು ಹೃದಯ ಗ್ರಹಿಸಲಾರದು. ನೀವು ಎಂದೂ ಕಂಡಿರದ, ಕೇಳಿರದ ಪ್ರಾಣಿಯ ಹೆಸರನ್ನು ಯಾರಾದರೂ ಹೇಳಿದರೆ ಅದರ ಚಿತ್ರ ಮನದಲ್ಲಿ ಮೂಡಲಾರದು. ಆಗ ನಾವು ಶಾಸ್ತ್ರದಲ್ಲಿ ಶ್ರದ್ಧೆಯನ್ನಿಟ್ಟು ಮುಂದುವರೆಯಬೇಕು. ಶ್ರದ್ಧೆ ಎಂದರೆ ಕುರುಡು ನಂಬಿಕೆಯಲ್ಲ. ವೈದ್ಯನ ಔಷಧಿ, ತಾಯ ಕೈತುತ್ತಿನಲ್ಲಿರುವ ನಂಬಿಕೆ ಅಂಥದ್ದು.

ಮಾತಿಗೆ ಸಿಕ್ಕದ, ವಿವರಣೆಗೆ ದೊರಕದ, ಕೇವಲ ಅಂತರನುಭವಕ್ಕೆ ಬರುವ ಸತ್ಯಾಂಶಗಳೇ ರಹಸ್ಯ. ದೇವರು, ದೈವ, ವಿಧಿ, ಕರ್ಮ, ಇಂತಹ ಇಂದ್ರಿಯಾತೀತವಾದ ವಿಷಯಗಳಲ್ಲಿ ಶಾಸ್ತ್ರಗಳೇ ನಮಗೆ ಆಧಾರ. ಯಾಕೆಂದರೆ ಅವು ಇಂದ್ರಿಯಗಳ ಅನುಭವಕ್ಕೆ ದೊರಕುವುವಲ್ಲ. ಅವು ಶತಶತಮಾನಗಳ, ಸಹಸ್ರಾರು ದುಷ್ಟಾರರ ಅನುಭವಗಳ ಸಾರ. ಅದಕ್ಕೇ ಅವು ವೇದ. ವೇದವೆಂದರೆ ಅಪೌರುಷೇಯವಾದ ಜ್ಞಾನದ ಶಬ್ದರಾಶಿ. ಇದೇ ಮಹರ್ಷಿಗಳ ಮತ.

ಪದಬಂಧ 4728

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ಸಂಸಾರದ ಸೆರೆಯಿದು (5)
4.ಬೇಡಿಕೆಯನ್ನು ಹೀಗೆ ಹೇಳಿ (3)
6.ಏರುತಗ್ಗಿಲ್ಲದಿರುವುದು (3)
8.ಮಣ ಭಾರ ಹೊತ್ತಿರುವ ನಲ್ಲ (3)
9.ವಿಕ್ರಯಿಸು ಎಂದಾಗ ಬೀಸಿದ ಗಾಳಿ (3)
10.ಶ್ರೀಗಂಧ ಇಲ್ಲಿದೆ (3)
11.ಮರದೊಳಗೆ ಸವಿಯಾದುದು ಬಂದಿದೆ (3)
13.ಆನೆಯ ದಾಡೆ (3)
14.ಬೆಳ್ಳಿ ಹಬ್ಬವಿದು (5)

ಮೇಲಿಂದ ಕೆಳಕ್ಕೆ
1.ಅದೇ ತಾನೆ ಬಿರಿದ ಹೂವು (4)
2.ಈ ಪರಿ ಕಾಣುತ್ತಿರುವ ಅಳತೆ! (4)
5.ಈ ತರಹ ತಮ್ಮನಿಗೆ ತೋರಿದ ಭೇದಭಾವ (4)
7.ಮಾನ ನಡುವಿದ್ದಾಗ ಸರಿಸಮನಾಗಿರುವಿಕೆ (4)
10.ಚಂದ್ರನ ಹುಟ್ಟುವಿಕೆ (4)
12.ದೇವರನ್ನು ರಥದಲ್ಲಿಟ್ಟು ಮಾಡುವ ಮೆರವಣಿಗೆ (4)



4727ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಮುಗ್ಧೆ 2.ಕಾಯಕ 4.ಕಡಿವಾಣ 6.ರುದ್ರಭೂಮಿ 8.ರಾಜ 9. ಜ್ಞಾನಿ 10.ಸಮಂಜಸ 12.ಮಧುಕರ 14.ತಿಕ್ಕಲು 15.ಗಣಿ
ಮೇಲಿಂದ ಕೆಳಕ್ಕೆ: 1.ಮುದುಕ 2.ಕಾರಣ 3.ಕರಾರು 5.ಡಿರಜ 7.ಮಿಸುನಿ 8.ರಾಯಸ 9.ಜ್ಞಾಪಕ 11.ಸವತಿ 12.ಮಹಲು 13.ರಮಣಿ

ಸುಡೊಕು 5114

		5	6		2			
	3	1			4	6		
6				1			5	9
	8	3		6				4
1				4				8
			8		1	5	6	
					3			
4		2		9			3	1
	1		4		6		7	

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5113 ಸುಡೊಕು

8	7	6	1	4	9	3	2	5
1	3	4	5	2	7	8	6	9
5	9	2	6	3	8	7	4	1
2	1	5	9	7	3	6	8	4
6	4	7	8	1	2	9	5	3
3	8	9	4	5	6	1	7	2
9	2	8	3	6	5	4	1	7
7	6	1	2	9	4	5	3	8
4	5	3	7	8	1	2	9	6

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

10ನೇ ವರ್ಷದ ಸವಿನೆನಪು

ನಿಧನ: 24-09-2011 ನಿಧನ: 04-11-2012
ಶ್ರೀ ಗವಿ ರಂಗಪ್ಪ ಮತ್ತು ಶ್ರೀಮತಿ ಗಿರಿಯಮ್ಮ
(ಬೆಂದಳೂರು ಡೈರಿ)
ಇಂತಿ ದುಃಖತಪ್ತರು,
ಬಿ.ಆರ್. ರಂಗರಾಮೇಗೌಡ (ರಾಮು)
(ಮಾಜಿ ನಿರ್ದೇಶಕರು, ಬಿ.ಎಂ.ಟಿ.ಸಿ. ಕರ್ನಾಟಕ ಸರ್ಕಾರ)
ಇವರ ಕುಟುಂಬದವರಿಂದ, ಪದ್ಮನಾಭನಗರ, ಬೆಂಗಳೂರು-70

1ನೇ ವರ್ಷದ ಪುಣ್ಯ ಸ್ಮರಣೆ

ಶ್ರೀ. ಸಿ ಹೆಚ್ ಜಾಕೋಬ್ ಲೋಬೊ
ಜನನ: 19.06.1930 – ಮರಣ: 14.09.2020
ಸ್ವಾತಂತ್ರ್ಯ ಹೋರಾಟಗಾರರು,
ತಾಮ್ರಪತ್ರ ಪ್ರಶಸ್ತಿ ಪುರಸ್ಕೃತರು ಹಾಗೂ ಸಾಹಿತಿ.
ಪ್ರತಿ ದಿನ ನಿಮ್ಮ ಸವಿನೆನಪು ಹೃದಯಾಂತರಾಳದಲ್ಲಿ ಅಚ್ಚಳಿಯದೆ ಉಳಿದಿದೆ. ನಿಮ್ಮ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಪ್ರಾರ್ಥಿಸುತ್ತೇವೆ.
ದಿನಾಂಕ : 25.09.2021 ರಂದು ಬೆಳಿಗ್ಗೆ 11 ಗಂಟೆಗೆ ಸೈಂಟ್ ಪ್ಯಾಟ್ರಿಕ್ ಚರ್ಚ್ ನಲ್ಲಿ ರಿಕ್ವಿಯಮ್ ಮಾಸ್ ಹಾಗೂ ಪ್ರಾರ್ಥನೆ, ನಂತರ ಊಟದ ವ್ಯವಸ್ಥೆ ಯನ್ನು ಕ್ಯಾಥೊಲಿಕ್ ಕ್ಲಬ್‌ನಲ್ಲಿ ಏರ್ಪಡಿಸಲಾಗಿದೆ.
ಅವರ ಆತ್ಮಕ್ಕಾಗಿ ಪ್ರಾರ್ಥಿಸಿರಿ
ಜಾಕ್ವಲಿನ್, ಫ್ರಾನ್ಸಿಸ್, ಹೆಲೆನ್ ಮತ್ತು ಕುಟುಂಬದವರು

LOOKING TO BUILD, BUY OR SELL A PROPERTY
Please refer Classifieds on Sunday

ಮೊದಲನೇ ವರ್ಷದ ಪುಣ್ಯಸ್ಮರಣೆ

ಎ.ಗೋವಿಂದಪ್ಪ (A.G)
ದ್ರಾಕ್ಷಿ ವ್ಯಾಪಾರಿಗಳು, ಅತ್ತಿಬೆಲೆ
ನಿಧನ: 24-09-2020
ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರೂ ನಿಮ್ಮ ಸವಿನೆನಪು ನಮ್ಮ ಹೃದಯಗಳಲ್ಲಿ ಹಚ್ಚ ಹಸಿರಾಗಿ ಉಳಿದಿದೆ. ನಿಮ್ಮ ಆತ್ಮಕ್ಕೆ ಚಿರಶಾಂತಿ ಕರುಣಿಸಲೆಂದು ಭಗವಂತನಲ್ಲಿ ಸದಾ ಪ್ರಾರ್ಥಿಸುವ
ದುಃಖತಪ್ತರು: ಪತ್ನಿ ರಾಜಮ್ಮ ಮತ್ತು ಮಕ್ಕಳು, ಮೃತರ ಅಣ್ಣ ತಮ್ಮಂದಿರು, ಅಕ್ಕ ತಂಗಿಯರು ಹಾಗೂ ಕುಟುಂಬವರ್ಗ, ಅತ್ತಿಬೆಲೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕ ಪ್ರಕಟಣೆ
ಮೆ. ಒಜೊ ಅಗ್ರಿ ಕೇರ್ ಪ್ರೈ. ಲಿ.,
ವಾರ್ಡ್ ನಂ-16, ಸಿಟಿ ಪ್ರೆಸ್ ಕಾಂಪೌಂಡ್,
ಬಳ್ಳಾರಿ, ಕರ್ನಾಟಕ-583101,
ಭಾರತ ಸರ್ಕಾರದ ಕೃಷಿ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ, ಕೃಷಿ ಸಹಕಾರ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಹೊರಡಿಸಿದ ದಿನಾಂಕ 24ನೇ ಅಕ್ಟೋಬರ್ 2015ರ ಆದೇಶ ಸಂ. ಎಸ್.ಒ.2900 (ಇ) ಮತ್ತು ದಿನಾಂಕ 30ನೇ ಡಿಸೆಂಬರ್ 2017ರ ತಿದ್ದುಪಡಿ ಮೇರೆಗೆ. ಒಜೊ ಅಗ್ರಿ ಕೇರ್ ಪ್ರೈ. ಲಿ., ಕಂಪೆನಿಯು ಈ ಮೂಲಕ ತಿಳಿಸುವುದು ಏನೆಂದರೆ, ಕಂಪೆನಿಯು ಕೆಳಗಿನ ವರ್ಗೀಕರಣಗಳನ್ನು ಹೊಂದಿರುವ 100% ನೀರಿನಲ್ಲಿ ಕರಗಬಲ್ಲ ರಸಗೊಬ್ಬರ ಮಿಶ್ರಣಗಳನ್ನು ಮಾರಾಟ ಮಾಡಲು ಉದ್ದೇಶಿಸಿರುತ್ತದೆ (1).ಎನ್‌ಪಿಕೆ 13-40-13 ಒಟ್ಟು ನೈಟ್ರೋಜನ್ 13%, ಒಟ್ಟು ಫಾಸ್ಫೇಟ್ ಪಿ205 40% ಮತ್ತು ಒಟ್ಟು ಪೊಟ್ಯಾಷ್ ಕೆ20 13% (2).ಎನ್‌ಪಿಕೆ 18-18-18 ಒಟ್ಟು ನೈಟ್ರೋಜನ್ 18%, ಒಟ್ಟು ಫಾಸ್ಫೇಟ್ ಪಿ205 18% ಮತ್ತು ಟೋಟಲ್ ಪೊಟ್ಯಾಷ್ ಕೆ20 18% (3) ಎನ್‌ಪಿಕೆ 13-5-26 ಒಟ್ಟು ನೈಟ್ರೋಜನ್ 13%, ಒಟ್ಟು ಫಾಸ್ಫೇಟ್ ಪಿ205 5% ಮತ್ತು ಒಟ್ಟು ಪೊಟ್ಯಾಷ್ ಕೆ20 26% (4) ಎನ್‌ಪಿಕೆ 6-12-36 ಒಟ್ಟು ನೈಟ್ರೋಜನ್ 6%, ಒಟ್ಟು ಫಾಸ್ಫೇಟ್ ಪಿ205 12% ಮತ್ತು ಒಟ್ಟು ಪೊಟ್ಯಾಷ್ ಕೆ20 36% (5) ಎನ್‌ಪಿಕೆ 20-20-20 ಒಟ್ಟು ನೈಟ್ರೋಜನ್ 20%, ಒಟ್ಟು ಫಾಸ್ಫೇಟ್ ಪಿ205 20% ಮತ್ತು ಒಟ್ಟು ಪೊಟ್ಯಾಷ್ ಕೆ20 20% (6) ಎನ್‌ಪಿಕೆ 19-19-19 ಒಟ್ಟು ನೈಟ್ರೋಜನ್ 19%, ಒಟ್ಟು ಫಾಸ್ಫೇಟ್ ಪಿ205 19% ಮತ್ತು ಒಟ್ಟು ಪೊಟ್ಯಾಷ್ ಕೆ20 19% (7) ಝಿಂಕ್ ಫಾಸ್ಫೇಟ್ ಜೆಡ್‌ಎನ್ 19.4% ಫಾಸ್ಫರಸ್ 12.9% (8) ಎನ್‌ಪಿಕೆಜೆಡ್‌ಎನ್‌ಬಿ 12-0-42-0.7-0.3 ನೈಟ್ರೋಜನ್ 12%, ಒಟ್ಟು ಪೊಟ್ಯಾಷ್ ಕೆ20 42%, ಝಿಂಕ್ 0.7 ಮತ್ತು ಬೋರಾನ್ 0.3% (9) ಎನ್‌ಪಿಕೆ 12-32-14 19 ಒಟ್ಟು ನೈಟ್ರೋಜನ್ 12%, ಒಟ್ಟು ಫಾಸ್ಫೇಟ್ ಪಿ205 32% ಮತ್ತು ಒಟ್ಟು ಪೊಟ್ಯಾಷ್ ಕೆ20 14% (10) ಯೂರಿಯಾ ಫಾಸ್ಫೇಟ್ ಜೊತೆಗೆ ಎಸ್‌ಒಪಿ 18-18-18 (11) ಎನ್‌ಪಿಕೆ 12-30-15 ನೈಟ್ರೋಜನ್ 12%, ಒಟ್ಟು ಫಾಸ್ಫೇಟ್ ಪಿ205 30% ಮತ್ತು ಒಟ್ಟು ಪೊಟ್ಯಾಷ್ ಕೆ20 15% (12) ಎನ್‌ಪಿಕೆಜೆಡ್‌ಎನ್ 7.6-23.5-7.6-3.5 ನೈಟ್ರೋಜನ್ 7.6%, ಒಟ್ಟು ಫಾಸ್ಫೇಟ್ ಪಿ205 23.5%, ಒಟ್ಟು ಪೊಟ್ಯಾಷ್ ಕೆ20 7.6% ಮತ್ತು ಝಿಂಕ್ ಜೆಡ್‌ಎನ್ 3.5%. ಈ ಮೇಲಿನ ಎಲ್ಲಾ ದರ್ಜೆಗಳಲ್ಲಿ (1) ಶೇಕಡವಾರು ತೇವಾಂಶ ತೂಕದಲ್ಲಿ, ಗರಿಷ್ಠ: 0.5% (2) ಒಟ್ಟು ಶೇಕಡವಾರು ಕ್ಲೋರೈಡ್, ತೂಕದಲ್ಲಿ, ಗರಿಷ್ಠ: 1.5% (3) ಶೇಕಡವಾರು ಸೋಡಿಯಂ ಎನ್‌ಎಸಿಐ, ತೂಕದಲ್ಲಿ, ಗರಿಷ್ಠ: 0.5% (4) ನೀರಿನಲ್ಲಿ ಕರಗದಿರುವ ವಸ್ತು ಶೇಕಡವಾರು, ತೂಕದಲ್ಲಿ ಗರಿಷ್ಠ: 0.5% (5) ಲೀಡ್ (ಪಿಬಿ) ಶೇಕಡವಾರು ತೂಕದಲ್ಲಿ, ಗರಿಷ್ಠ: 0.003% (6) ಕ್ಯಾಡ್ಮಿಯಂ (ಸಿಡಿ) ಶೇಕಡವಾರು ತೂಕದಲ್ಲಿ, ಗರಿಷ್ಠ: 0.0025% (7) ಆರ್ಸೆನಿಕ್ (ಎಎಸ್) ಶೇಕಡವಾರು ತೂಕದಲ್ಲಿ, ಗರಿಷ್ಠ: 0.01%
ಉತ್ಪಾದನಾ ಘಟಕದ ವಿಳಾಸ:
ಸರ್ವೆ ನಂ. 41ಎ, ದೇವಳಮ್ಮ ನಗರಂ (ವಿ)
ಚೌತುಪ್ಪಾಲ್ (ಎಮ್),
ನಾಲ್ಗೊಂಡ-508252.
Email ID: ozoagricarepvtltd@gmail.com
Web: www.ozoagricare.com
ಫೋನ್: 040-29887134

ಹೆಚ್ಚುವರಿ ಆದಾಯ ಗಳಿಸಿರಿ !! udaan
ನೀವು ಹೆಚ್ಚು ಮಾರಾಟ ಮಾಡಿದ ಹಾಗೆ, ಹೆಚ್ಚು ಗಳಿಸುತ್ತೀರಿ
udaan ಕಮಿಷನ್ ಏಜೆಂಟ್ ಆಗಿರಿ ಮತ್ತು ಪ್ರತಿಯೊಂದು (ಆಹಾರ ಮತ್ತು FMCG) ಆರ್ಡರ್ ಮೇಲೆ ಕಮಿಷನ್ ಗಳಿಸಿರಿ.
ನಿಮ್ಮ ಈಗಿನ ಉದ್ಯೋಗದ ಜೊತೆಗೆ ಇದನ್ನು ಮಾಡಬಹುದು.
ಹೆಚ್ಚಿನ ವಿವರಗಳಿಗಾಗಿ ಮತ್ತು ಅಪ್ಲೈ ಮಾಡಲು QR ಕೋಡ್ ಅನ್ನು ಸ್ಕ್ಯಾನ್ ಮಾಡಿ .

ಕಂಪ್ಯೂಟರ್
Printer
EPSON EXCEED YOUR VISION
ಹೊಚ್ಚಹೊಸ A3 ಮೊನೋ ಎಕೋಟ್ಯಾಂಕ್ ಪ್ರಿಂಟರ್ SMART MFP ಫೋಟೋಕಾಪಿ ಮತ್ತು ಸ್ಟೇಷನರಿ ಶಾಪ್‌ಗಳಿಗೆ
12 ಪೈಸೆ ಪ್ರತಿ ಪ್ರಿಂಟ್‌ಗೆ*
ವಿದ್ಯುತ್ ಬಳಕೆ 19w* ನಷ್ಟು ಕಡಿಮೆ

ಮೊನೋಕ್ರೋಮ್ ಎಕೋಟ್ಯಾಂಕ್ M15140
*Conditions apply.
CALL 98852 22296 FOR MORE INFO

ಉದ್ಯೋಗಾವಕಾಶ
Multiple Vacancy
HIRING RECRUITERS and Delivery boys Two wheeler & DL is Mandatory Call Bangalore-9980411233, 9739411233, 9739611233, 9742811233, 9148317736 Mysore/Manglore 9980211233/ 8296331417/ 9591004487

Wanted
ವಯಸ್ಸಾದವರನ್ನು ನೋಡಿಕೊಳ್ಳಲು ಮಹಿಳೆಯರು ಬೇಕಾಗಿದ್ದಾರೆ 18ವರ್ಷ ಮೇಲ್ಪಟ್ಟವರಿಗೆ ಉಚಿತ ಊಟ ವಸತಿಯೊಂದಿಗೆ 11000 ರಿಂದ 16000ವರೆಗೆ ಸಂಬಳ. ಫೋ: 8139962883

General
ತಕ್ಷಣ ಬೇಕಾಗಿದ್ದಾರೆ ಹೊಸದಾದ ಕಂಪನಿಗಳಿಗೆ ಆಫೀಸ್‌ಗಳಿಗೆ 7th,SSLC, PUC,Degree ಆದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ವಸತಿ ಊಟದೊಂದಿಗೆ ESI/PF ನೊಂದಿಗೆ ಸಂಬಳ 16,000-80,000/- ಸಂಪರ್ಕಿಸಿ: 8884486100, 7829919947

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧಕಂಪನಿ ಹಾಗೂ ಆಫೀಸ್ ಕೆಲಸಗಳಿಗೆ ಯುವಕ ಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800-45000/-. 7618763886, 7618760283

TOYOTA, ಟಾಟಾಮೋಟರ್ಸ್, ಬಿಗ್ ಬಜಾರ್ಸ್ ಬ್ರಿಟಾನಿಯಾಗಳಿಗೆ 5th,SSLC, Degree, ITI,Diploma ದವರು ನೇರನೇಮಕಾತಿಯಿದೆ.18,000-60,000 /- ವಸತಿಯೂಟವಿದೆ. 7795837319, 9901312461

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

ತಕ್ಷಣ ಬೇಕಾಗಿದ್ದಾರೆ ಮಾರ್ಕೆಟಿಂಗ್ ಅಲ್ಲ MNC, TVS, TOYOTA, BRITANIYA ಕಂಪನಿಗಳಿಗೆ 7th,SSLC, PUC, Degree, DIPLOMA ಆದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಊಟದೊಂದಿಗೆ ESI/PFನೊಂದಿಗೆ ಸಂಬಳ 16,000-80,000/- ಸಂಪರ್ಕಿಸಿ: 7829400441, 7829416611

ಕರ್ನಾಟಕದಾದ್ಯಂತ ಹೆಸರಾಂತ 450ಕಂಪನಿಗಳಿಗೆ, ಕಂಪನಿ ಹಾಗೂ ಆಫೀಸ್ ವರ್ಕ್ ಗೆ, ಯುವಕ, ಯುವತಿಯರು ಬೇಕಾಗಿದ್ದಾರೆ.ನೇರನೇಮಕಾತಿ 16,200-65,000/-ಊಟ, ವಸತಿಯೊಂದಿಗೆ 7022366461, 8904049301.

ರಾವ್ ಸಂಸ್ಥೆಗೆ ಅನುಭವವುಳ್ಳವರು ಆಫೀಸ್ ವರ್ಕ್,ಫೀಲ್ಡ್ ವರ್ಕ್ (Any Degree) ವಯಸ್ಸಾದವರನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು, ಹೋಂನರ್ಸ್ ಗಳು, ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ.10,000-15,000. 8951315839, 9880545002

TVS, ವಿಡಿಯೋಕಾನ್, TOYOTA, ಬ್ರಿಟಾನಿಯಾ MNCಗಳಿಗೆ SSLC, PUC, Degree, ITI ನವರು (ವಿದ್ಯಾರ್ಹತೆಯಿಲ್ಲದವರಿಗೂ) 17,800-56,000/- ವಸತಿಯೂಟವಿದೆ. 7899778278, 9611715755

Hospital & Medical Jobs
ತಕ್ಷಣ ಬೇಕಾಗಿದ್ದಾರೆ ಮಹಿಳೆಯರು, ಪುರುಷರು ಹೋಂ-ನರ್ಸಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ ಸಂಬಳ: 10,000 - 26,000/- (ಊಟ, ವಸತಿ ಉಚಿತ) 9035113222, 9742892222

Part-Time Jobs
ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

★ಮನೆಯಿಂದಲೇ ಮೇಣದಬತ್ತಿ★ ತಯಾರಿಸಿ ನಮಗೆ ಮರಳಿಸಿ, ಪ್ರತಿದಿನ 500 ರಿಂದ 1000 ಸಂಪಾದಿಸಿ.ತರಬೇತಿಗಾಗಿ: ಬೆಂಗಳೂರು.9060472077, ಶಿವಮೊಗ್ಗ.9008012895

WORK FROM Home No Qualification Housewifes, Employes, Students, Visit our Office Near SP Circle, Bellary -8123012124, 7022121569

ರಿಯಲ್ ಎಸ್ಟೇಟ್ ಸೆಲ್ಲಿಂಗ್
Mysore
GOVIANU LUXURIA, High-end Luxury Flat at Mysore, Zoo Road, near Mysore Mall, Rera-003588, www.govianu.com. 8103990990

ಪ್ರವಾಸ
Travel
ದಸರ ರಜಾ ಪ್ರಯುಕ್ತ: 16.10.2021 7ದಿನಗಳ ತಮಿಳುನಾಡು, 24.10.2021 5ದಿನಗಳ ಕಾಶಿ,ಗಯಾ, 18.10.2021 12ದಿನಗಳ ಗುಜರಾತ್,ಮಧ್ಯಪ್ರದೇಶ, 18.10.2021, 24.10.2021 10ದಿನಗಳ ಲೇಹ್‌ಲಡಾಕ್. ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್, 9342848791, 9880847001

16-10-2021 ಮಧ್ಯಪ್ರದೇಶ, ಗುಜರಾತ್, 17-10-2021 ಬದ್ರಿನಾಥ್, ಕೇದಾರ್‌ನಾಥ್, ಗಂಗೋತ್ರಿ, ಯಮುನೋತ್ರಿ, ಕರ್ನಾಟಕ ಹೆರಿಟೇಜ್ ಟೂರ್ಸ (ಹನುಮಂತ್ ನಗರ) 9845035349, 9482435755

ಭವಿಷ್ಯ
Astrology
★||ಶ್ರೀಶಿರಿಡಿ ಸಾಯಿಬಾಬಾ||★ ಆರಾಧನೆಯಿಂದ ಪ್ರೀತಿಪ್ರೇಮ, ಸ್ತ್ರೀ_ಪುರುಷ_ವಶೀಕರಣ, ದಾಂಪತ್ಯ_ಕಿರಿಕಿರಿ, ಕಂಕಣಬಾಗ್ಯ, ಸಾಲದಬಾದೆ ಇನ್ನೂಯಾವುದೇ ಕಠಿಣ_ಗುಪ್ತ_ಸಮಸ್ಯೆಗಳಿಗೆ 11_ಗಂಟೆಗಳಲ್ಲಿ ಶಾಶ್ವತ_ಪರಿಹಾರ. ಪಂಡಿತ್.ವಿಕ್ರಮ್_ಭಟ್ 9972654095

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

★||ಮೋಡಿ ಮಾಂತ್ರಿಕರು||★ ನಂಬರ್.1 ವಶೀಕರಣ ಸಪೆಷಲಿಸ್ಟ್, ಪ್ರೀತಿಪ್ರೇಮ, ಸಾಲದಬಾದೆ, ಗಂಡಹೆಂಡತಿ ವಿಚಾರ ಇನ್ನೂಯಾವುದೆ ಗುಪ್ತ ಸಮಸ್ಯೆಗಳಿಗೆ ಫೋನಿನ_ಮೂಲಕ ಶಾಶ್ವತ_ಪರಿಹಾರ. 9591588881

ಶಕ್ತಿಶಾಲಿ ಮಹಾಲಕ್ಷ್ಮಿ ಯಂತ್ರ ವ್ಯಾಪಾರ ಅಭಿವೃದ್ಧಿ,ಹಣಕಾಸಿನ ಸಮಸ್ಯೆಯಿಂದ ಆರ್ಥಿಕ ಅಭಿವೃದ್ಧಿ ಹೊಂದಲು ಲಕ್ಷ್ಮಿಯಂತ್ರ ಕೊಡಲಾಗುತ್ತದೆ Rs.999 ಹಾಗೂ ಎಲ್ಲಾ ಕಠಿಣ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ: 9606701007, 8892501007

★ಅಂಭಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೆಯಿರಲಿ 2ದಿನದಲ್ಲಿ ಪರಿಹಾರ.9886755306

"ವಶೀಕರಣ ಯಂತ್ರ" ಜನವಶೀಕರಣ, ಲಕ್ಷ್ಮಿವಶೀಕರಣ, ಸ್ತ್ರೀಪುರುಷ ವಶೀಕರಣ, ಶತ್ರು ವಶೀಕರಣ, ಕೇವಲ 2001 ರೂಪಾಯಿ. ಗುರೂಜಿ ಮಹೇಶ್ 9686999517

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH ಪ್ರಜಾವಾಣಿ Classifieds
EFFECTIVE FROM JUNE 3rd, 2020
DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,547
ಇಂದಿನ ಅಂತ್ಯ	17,823
▲	276
ದಿನದ ಗರಿಷ್ಠ	17,843

ವಿನಿಮಯ ದರ

$ ಡಾಲರ್	73.64
£ ಪೌಂಡ್	100.7
€ ಯುರೊ	86.31
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹450
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹450

ಸಂಕ್ಷಿಪ್ತ ಸುದ್ದಿ

ಶೈಕ್ಷಣಿಕ ಸಂಸ್ಥೆಗಳಿಗೆ ಪೇಟೆಂಟ್ ಶುಲ್ಕ ಇಳಿಕೆ

ನವದೆಹಲಿ (ಪಿಟಿಐ): ಶೈಕ್ಷಣಿಗೆ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಪೇಟೆಂಟ್ ಶುಲ್ಕವನ್ನು ಶೇಕಡ 80ರಷ್ಟು ಕಡಿಮೆ ಮಾಡಲಾಗಿದೆ ಎಂದು ಕೇಂದ್ರ ಸರ್ಕಾರವು ಗುರುವಾರ ತಿಳಿಸಿದೆ. ಈ ಪ್ರಯೋಜನವು ಇದಕ್ಕೂ ಮೊದಲು ಸರ್ಕಾರಿ ಸ್ವಾಮ್ಯದ, ಮಾನ್ಯತೆ ಪಡೆದ ಶೈಕ್ಷಣಿಕ ಸಂಸ್ಥೆಗಳಿಗೆ ಮಾತ್ರ ಸೀಮಿತವಾಗಿತ್ತು.

ಶೈಕ್ಷಣಿಕ ಸಂಸ್ಥೆಗಳು ಹಲವು ಸಂಶೋಧನಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುತ್ತವೆ. ವಿದ್ಯಾರ್ಥಿಗಳು, ಬೋಧಕರು ಹೊಸ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುತ್ತಾರೆ. ಇವುಗಳ ವಿಚಾರವಾಗಿ ಪೇಟೆಂಟ್ ಪಡೆದುಕೊಳ್ಳಬೇಕಿರುತ್ತದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯವು ಹೇಳಿದೆ.

ಶುಲ್ಕ ತೀರಾ ಹೆಚ್ಚಿನ ಮಟ್ಟದಲ್ಲಿದ್ದರೆ, ತಂತ್ರಜ್ಞಾನಕ್ಕೆ ಪೇಟೆಂಟ್ ಪಡೆಯುವುದಕ್ಕೆ ಅಡ್ಡಿಯಾಗುತ್ತದೆ. ಅಲ್ಲದೆ, ಇದು ಹೊಸ ತಂತ್ರಜ್ಞಾನದ ಅಭಿವೃದ್ಧಿಗೆ ಅಡ್ಡಿಯಾಗಿ ಪರಿಣಮಿಸುತ್ತದೆ ಎಂದು ಸಚಿವಾಲಯವು ಹೇಳಿದೆ. 'ಶುಲ್ಕವನ್ನು ತಗ್ಗಿಸಿರುವುದು ಆತ್ಮನಿರ್ಭರ ಭಾರತ ನಿರ್ಮಾಣದತ್ತ ಮಹತ್ವದ ಹೆಜ್ಜೆ. ಪೇಟೆಂಟ್ ನಿಯಮಗಳಿಗೆ ತಂದಿರುವ ಬದಲಾವಣೆಗಳನ್ನು ಅಧಿಸೂಚನೆಯಲ್ಲಿ ಪ್ರಕಟಿಸಲಾಗಿದೆ' ಎಂದು ಸಚಿವಾಲಯ ಹೇಳಿದೆ.

ಫೋಕ್ಸ್‌ವ್ಯಾಗನ್ ಟೈಗುನ್ ಬಿಡುಗಡೆ

ಬೆಂಗಳೂರು: ಜರ್ಮನಿಯ ಫೋಕ್ಸ್‌ವ್ಯಾಗನ್ ಕಂಪನಿಯು ಭಾರತದ ಮಾರುಕಟ್ಟೆಗೆ ಹೊಸ ಮಾದರಿ 'ಟೈಗುನ್' ಬಿಡುಗಡೆ ಮಾಡಿದೆ. ವೇಗವಾಗಿ ಬೆಳೆಯುತ್ತಿರುವ ಮಧ್ಯಮ ಗಾತ್ರದ ಎಸ್‌ಯುವಿ ಮಾರುಕಟ್ಟೆಯಲ್ಲಿ ಮುಂದಿನ ವರ್ಷದೊಳಗೆ ಶೇಕಡ 10ರಷ್ಟು ಪಾಲು ಹೊಂದಲು ಬಯಸಿದೆ.

ಹೊಸ ಟೈಗುನ್ ಎಸ್‌ಯುವಿ ಪರಿಚಯಾತ್ಮಕ ಬೆಲೆಯು ₹ 10.49 ಲಕ್ಷದಿಂದ ₹ 17.49 ಲಕ್ಷದವರೆಗೆ ಇರಲಿದೆ ಎಂದು ಕಂಪನಿ ತಿಳಿಸಿದೆ.

'ಇಂಡಿಯಾ 2.0 ಪ್ರಾಜೆಕ್ಟ್' ಅಡಿಯಲ್ಲಿ ಕಂಪನಿಯ ಮೊದಲ ಉತ್ಪನ್ನ ಇದಾಗಿದೆ. ಭಾರತದಲ್ಲಿ ಮಧ್ಯಮ ಗಾತ್ರದ ಎಸ್‌ಯುವಿ ವಿಭಾಗವು ವೇಗವಾಗಿ ಬೆಳವಣಿಗೆ ಕಾಣುತ್ತಿದ್ದು, ವಾರ್ಷಿಕ ಮಾರಾಟವು ನಾಲ್ಕು ಲಕ್ಷದಷ್ಟಿದೆ ಎಂದು ಫೋಕ್ಸ್‌ವ್ಯಾಗನ್ ಪ್ಯಾಸೆಂಜರ್ ಕಾರ್ ಇಂಡಿಯಾದ ಬ್ರ್ಯಾಂಡ್ ನಿರ್ದೇಶಕ ಆಶಿಶ್ ಗುಪ್ತಾ ತಿಳಿಸಿದ್ದಾರೆ.

ವಿಕೆಸಿಗೆ ಅಮಿತಾಭ್ ಬ್ರ್ಯಾಂಡ್ ರಾಯಭಾರಿ

ಬೆಂಗಳೂರು: ಬಾಲಿವುಡ್ ನಟ ಅಮಿತಾಭ್ ಬಚ್ಚನ್ ಅವರು ಪಾದರಕ್ಷೆಗಳನ್ನು ತಯಾರಿಸುವ ಕಂಪನಿ 'ವಿಕೆಸಿ'ಯ ಬ್ರ್ಯಾಂಡ್ ರಾಯಭಾರಿ ಆಗಲಿದ್ದಾರೆ. ಬಚ್ಚನ್ ಅವರು ಪಾದರಕ್ಷೆ ತಯಾರಿಸುವ ಕಂಪನಿಯೊಂದರ ಬ್ರ್ಯಾಂಡ್ ರಾಯಭಾರಿ ಆಗಲು ಒಪ್ಪಿರುವುದು ಇದೇ ಮೊದಲು ಎಂದು ಕಂಪನಿಯು ಹೇಳಿದೆ.

ಅಮಿತಾಭ್ ಬಚ್ಚನ್

'ವಿಕೆಸಿ ಬ್ರ್ಯಾಂಡ್‌ಗೆ ಅನುಮೋದನೆ ನೀಡುತ್ತಿರುವುದು ನನಗೆ ಸಂತಸ ತಂದಿದೆ' ಎಂದು ಬಚ್ಚನ್ ಅವರು ಹೇಳಿದ್ದಾರೆ. 'ದೇಶದ ಸಿನಿಮಾ ರಂಗದ ದಂತಕಥೆ ಆಗಿರುವ ಬಚ್ಚನ್ ಅವರ ಜೊತೆಗಿನ ಸಹಭಾಗಿತ್ವವು ವಿಕೆಸಿ ಸಮೂಹಕ್ಕೆ ಗೌರವ ತಂದಿದೆ' ಎಂದು ಸಮೂಹದ ವ್ಯವಸ್ಥಾಪಕ ನಿರ್ದೇಶಕ ವಿಕೆಸಿ ಅಬ್ದುಲ್ ರಜಾಕ್ ಹೇಳಿದ್ದಾರೆ.

ಹೂಡಿಕೆದಾರರಿಗೆ ಒಂದೇ ಕಡೆ ಹಲವು ಸೇವೆಗಳು

'ಎಂಎಫ್' ಸೇವೆಗಳಿಗೆ ಏಕೀಕೃತ ಪೋರ್ಟಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೇರೆ ಬೇರೆ ಮ್ಯೂಚುವಲ್ ಫಂಡ್ ಕಂಪನಿಗಳ ಮೂಲಕ ಹೂಡಿಕೆ ಮಾಡಿದವರಿಗೆ, ಹೂಡಿಕೆಗೆ ಸಂಬಂಧಿಸಿದ ಹತ್ತು ಹಲವು ಸೇವೆಗಳನ್ನು ಒಂದೇ ಕಡೆ ಒದಗಿಸಲು ಹೊಸ ಪೋರ್ಟಲ್ ಸಿದ್ಧವಾಗಿದೆ.

ಮ್ಯೂಚುವಲ್ ಫಂಡ್ ಹೂಡಿಕೆಗೆ ಸಂಬಂಧಿಸಿದ ಸೇವೆಗಳನ್ನು ಒದಗಿಸುವ ಕೆ-ಫಿನ್ ಟೆಕ್ನಾಲಜೀಸ್, ಕ್ಯಾಮ್ಸ್, ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ಒಟ್ಟಾಗಿ ಎಂಎಫ್‌ಸೆಂಟ್ರಲ್ (mfcentral.com) ಹೆಸರಿನ ಪೋರ್ಟಲ್‌ಗೆ ಚಾಲನೆ ನೀಡಿವೆ.

ದೇಶದಲ್ಲಿ ನಲವತ್ತಕ್ಕೂ ಹೆಚ್ಚು ಕಂಪನಿಗಳು ಮ್ಯೂಚುವಲ್ ಫಂಡ್ ಹೂಡಿಕೆ ಸೇವೆಗಳನ್ನು ಒದಗಿಸುತ್ತಿವೆ. ಬೇರೆ ಬೇರೆ ಕಂಪನಿಗಳ ಮೂಲಕ ಹೂಡಿಕೆ ಮಾಡಿದವರು, ತಮ್ಮ ಎಲ್ಲ ಹೂಡಿಕೆಗಳ ವಿವರಗಳನ್ನು ಈ ಪೋರ್ಟಲ್ ಮೂಲಕ ಪಡೆಯಬಹುದು. ಅಲ್ಲದೆ, ಮ್ಯೂಚುವಲ್ ಫಂಡ್ ಹೂಡಿಕೆ ಜೊತೆ ನೀಡಿದ ಬ್ಯಾಂಕ್ ವಿವರಗಳಲ್ಲಿ ಬದಲಾವಣೆ, ಇ-ಮೇಲ್ ವಿಳಾಸ ಹಾಗೂ ದೂರವಾಣಿ ಸಂಖ್ಯೆ ಬದಲಾವಣೆ, ಬ್ಯಾಂಕ್ ಖಾತೆಯ ವಿವರ ಅಪ್ಡೇಟ್ ಮಾಡುವುದು ಸೇರಿದಂತೆ ಒಟ್ಟು ಒಂಬತ್ತು ಸೇವೆಗಳನ್ನು ಈ ಪೋರ್ಟಲ್‌ನಲ್ಲಿ ಪಡೆಯಬಹುದು.



ಎಂಎಫ್ ಸೆಂಟ್ರಲ್ ವೆಬ್ ಪುಟ

ಹೂಡಿಕೆದಾರರು ಬೇರೆ ಬೇರೆ ಕಂಪನಿಗಳ ಮೂಲಕ ಮಾಡಿದ ಹೂಡಿಕೆಯ ವಿವರಗಳನ್ನೆಲ್ಲ ಒಂದೇ ಕಡೆ ವೀಕ್ಷಿಸಬಹುದು. ಯಾವ ಫಂಡ್ ಹೌಸ್ ಮೂಲಕ ಎಷ್ಟು ಹೂಡಿಕೆ ಆಗಿದೆ, ಈಕ್ವಿಟಿಯಲ್ಲಿ ಎಷ್ಟು ಹೂಡಿಕೆ, ಸಾಲಪತ್ರಗಳಲ್ಲಿ ಎಷ್ಟು ಹೂಡಿಕೆ ಎಂಬ ವಿವರಗಳನ್ನು ನೋಡಿಕೊಳ್ಳಬಹುದು.

'ಈ ಪೋರ್ಟಲ್‌ನಿಂದಾಗಿ ಮ್ಯೂಚುವಲ್ ಫಂಡ್‌ಗೆ ಸಂಬಂಧಿಸಿದ ಸೇವೆಗಳನ್ನು ಪಡೆಯುವುದು ಸರಳವಾಗುತ್ತದೆ. ಸೇವೆಗಳನ್ನು ಪಡೆಯುವುದಕ್ಕೆ ಬೇಕಿದ್ದ ಸಮಯ ಕಡಿಮೆ ಆಗುತ್ತದೆ. ಯಾವುದೇ ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆ ಮಾಡಿದ್ದರೂ, ಒಂದೇ ಪೋರ್ಟಲ್ ಮೂಲಕ ಸೇವೆಗಳನ್ನು ಪಡೆಯಬಹುದು' ಎಂದು ಕ್ಯಾಮ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಅನುಜ್ ಕುಮಾರ್ ಹೇಳಿದ್ದಾರೆ.

ಈ ಪೋರ್ಟಲ್ ಮೂರು ಹಂತಗಳಲ್ಲಿ ಸೇವೆಗಳನ್ನು ನೀಡಲಿದೆ. ಈಗ ಮೊದಲ ಹಂತವು ಸೇವೆಗೆ ಲಭ್ಯವಾಗಿದೆ. ಇನ್ನೆರಡು ಹಂತಗಳು ಡಿಸೆಂಬರ್ ಅಂತ್ಯಕ್ಕೆ ಸೇವೆಗೆ ದೊರೆಯಲಿವೆ. ಆಗ ಮೊಬೈಲ್ ಆ್ಯಪ್ ಮೂಲಕ ಈ ಸೇವೆಯನ್ನು ಪಡೆಯಬಹುದು, ಪೋರ್ಟಲ್ ಮೂಲಕ ಯಾವುದೇ ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆಯನ್ನೂ ಮಾಡಬಹುದು ಎಂದು ಕೆ-ಫಿನ್ ಟೆಕ್ನಾಲಜೀಸ್ ಮತ್ತು ಕ್ಯಾಮ್ಸ್ ತಿಳಿಸಿವೆ.

60 ಸಾವಿರದ ಸನಿಹ ಸೆನ್ಸೆಕ್ಸ್

ಮುಂಬೈ (ಪಿಟಿಐ): ಜಾಗತಿಕ ಷೇರುಪೇಟೆಗಳಲ್ಲಿನ ಸಕಾರಾತ್ಮಕ ವಹಿವಾಟಿನಿಂದಾಗಿ ದೇಶದ ಷೇರುಪೇಟೆಗಳಲ್ಲಿ ಗುರುವಾರ ಸೂಚ್ಯಂಕಗಳು ಏರಿಕೆ ಕಂಡವು. ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ 958 ಅಂಶ ಜಿಗಿತ ಕಂಡು ಹೊಸ ಎತ್ತರವಾದ 59,885 ಅಂಶಗಳಿಗೆ ತಲುಪಿತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 276 ಅಂಶ ಹೆಚ್ಚಾಗಿ 17,823 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು. ಬಿಎಸ್‌ಇಯಲ್ಲಿ ರಿಯಲ್ ಎಸ್ಟೇಟ್, ಬ್ಯಾಂಕಿಂಗ್, ಇಂಧನ, ಹಣಕಾಸು, ಬಂಡವಾಳ ಸರಕುಗಳು ಮತ್ತು ಕೈಗಾರಿಕಾ ವಲಯದ ಸೂಚ್ಯಂಕಗಳು ಶೇ 8.71ರವರೆಗೂ ಏರಿಕೆ ಕಂಡವು.

ರಿಯಲ್ ಎಸ್ಟೇಟ್, ಲೋಹ ಮತ್ತು ಬ್ಯಾಂಕಿಂಗ್ ಸೇರಿದಂತೆ ಬಹುತೇಕ ಎಲ್ಲಾ ವಲಯಗಳಲ್ಲಿಯೂ ಖರೀದಿ ವಹಿವಾಟು ಕಂಡುಬಂತು.

ಬಾಂಡ್‌ನಂತಹ ಹಣಕಾಸಿನ ಸ್ವತ್ತುಗಳ ಖರೀದಿಯನ್ನು ನವೆಂಬರ್‌ನಲ್ಲಿ ತಗ್ಗಿಸಲು ಆರಂಭಿಸುವುದಾಗಿ ಅಮೆರಿಕದ ಫೆಡರಲ್ ಬ್ಯಾಂಕ್ ಹೇಳಿದೆ. ಈ ಹೇಳಿಕೆಯ ಹೊರತಾಗಿಯೂ ಜಾಗತಿಕ ಷೇರುಪೇಟೆಗಳಲ್ಲಿ ಉತ್ತಮ ವಹಿವಾಟು ನಡೆಯಿತು ಎಂದು ಜಿಯೋಜಿತ್ ಹಣಕಾಸು ಸೇವೆಗಳ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಮುಖ್ಯಾಂಶಗಳು

- ಬಿಎಸ್‌ಇ ಮಿಡ್, ಸ್ಮಾಲ್ ಕ್ಯಾಪ್ ಸೂಚ್ಯಂಕಗಳು ಶೇ 1.28ರವರೆಗೂ ಏರಿಕೆ
- ರೂಪಾಯಿ ಮೌಲ್ಯ 23 ಪೈಸೆ ಹೆಚ್ಚಳ

ಬಂಡವಾಳ ಮೌಲ್ಯ ಹೆಚ್ಚಳ: ಮುಂಬೈ ಷೇರುಪೇಟೆಯಲ್ಲಿ ಗುರುವಾರ ಕಂಡುಬಂದ ಸಕಾರಾತ್ಮಕ ವಹಿವಾಟಿನಿಂದಾಗಿ ಹೂಡಿಕೆದಾರರ ಸಂಪತ್ತು ಮೌಲ್ಯವು ₹ 3.16 ಲಕ್ಷ ಕೋಟಿಯಷ್ಟು ಹೆಚ್ಚಾಯಿತು. ಇದರಿಂದಾಗಿ ಷೇರುಪೇಟೆಯ ಒಟ್ಟಾರೆ ಬಂಡವಾಳ ಮೌಲ್ಯವು ₹ 261.73 ಲಕ್ಷ ಕೋಟಿಗೆ ತಲುಪಿತು. ಇದು ಸಾರ್ವಕಾಲಿಕ ದಾಖಲೆ ಮಟ್ಟ.

ಇರಾಕ್‌ಗೆ ಮರಳಿದ ಪ್ರಾಚೀನ ಮಣ್ಣಿನ ಟ್ಯಾಬ್ಲೆಟ್

ವಾಷಿಂಗ್ಟನ್(ಎಪಿ): 30 ವರ್ಷಗಳ ಹಿಂದೆ ಇರಾಕಿನ ವಸ್ತುಸಂಗ್ರಹಾಲಯದಿಂದ ಕಳ್ಳಸಾಗಣೆಯಾಗಿದ್ದ 3,500 ವರ್ಷಗಳ ಹಳೆಯ ಜೇಡಿಮಣ್ಣಿನ ಟ್ಯಾಬ್ಲೆಟ್ ಅಂತಿಮವಾಗಿ ಇರಾಕ್‌ಗೆ ಮರಳಿ ಬರುತ್ತಿದೆ.

ಅಸ್ಸಿರಿಯಾದ ರಾಜ ಅಸ್ಸೂರ್ ಬಾನಿಪಾಲ್ ಅವರ ಗ್ರಂಥಾಲಯದ ಅವಶೇಷಗಳಲ್ಲಿ 12-ಟ್ಯಾಬ್ಲೆಟ್ ಸಂಗ್ರಹದ ಭಾಗವಾಗಿ ಮಣ್ಣಿನ ಟ್ಯಾಬ್ಲೆಟ್ 1853ರಲ್ಲಿ ಪತ್ತೆಯಾಗಿತ್ತು. ಇದನ್ನು ಗಿಲ್ಗಮೇಶ್ ಡ್ರೀಮ್ ಟ್ಯಾಬ್ಲೆಟ್ ಎಂದು ಕರೆಯಲಾಗುತ್ತದೆ. 2003ರಲ್ಲಿ ಇದನ್ನು ಕಾನೂನುಬಾಹಿರವಾಗಿ ಅಮೆರಿಕಕ್ಕೆ ಆಮದು ಮಾಡಿಕೊಳ್ಳಲಾಗಿತ್ತು. ನಂತರ ಮಾರಾಟವಾಗಿ, ಅಂತಿಮವಾಗಿ ರಾಷ್ಟ್ರ ರಾಜಧಾನಿಯ ಬೈಬಲ್ ಮ್ಯೂಸಿಯಂನಲ್ಲಿ ಪ್ರದರ್ಶನಕ್ಕೆ ಇಡಲಾಗಿತ್ತು.

ಹೋಮ್ಲ್ಯಾಂಡ್ ಸೆಕ್ಯುರಿಟಿ ತನಿಖಾಧಿಕಾರಿಗಳೊಂದಿಗೆ ಫೆಡರಲ್ ಏಜೆಂಟರು ಟ್ಯಾಬ್ಲೆಟ್ ಅನ್ನು ವಶಪಡಿಸಿಕೊಂಡಿದ್ದರು. ಇದರ ವಿಚಾರಣೆಗೆ ನ್ಯೂಯಾರ್ಕ್‌ನ ಬ್ರೂಕ್ಲಿನ್‌ನಲ್ಲಿ ಫೆಡರಲ್ ಪ್ರಾಸಿಕ್ಯೂಟರ್‌ಗಳು ನಾಗರಿಕ ಜಪ್ತಿ ನ್ಯಾಯಾಲಯ ಪ್ರಾರಂಭಿಸಿದರು, ಇದು ಟ್ಯಾಬ್ಲೆಟ್‌ನ ವಾಪಸಾತಿಗೆ ಕಾರಣವಾಯಿತು. ಗುರುವಾರ ಮಧ್ಯಾಹ್ನ ಇರಾಕ್‌ನ ಅಧಿಕಾರಿಗಳನ್ನು ಒಳಗೊಂಡಿರುವ ಅಮೆರಿಕನ್ ಇಂಡಿಯನ್ ಸ್ಮಿತ್ಸೋನಿಯನ್ ನ್ಯಾಷನಲ್ ಮ್ಯೂಸಿಯಂನಲ್ಲಿ ನಡೆದ ಸಮಾರಂಭದಲ್ಲಿ ಟ್ಯಾಬ್ಲೆಟ್ ಅನ್ನು ಇರಾಕ್‌ಗೆ ಹಸ್ತಾಂತರಿಸಲಾಯಿತು.

'ರಾಮ್‌ರಾಜ್'ನಿಂದ ಹುತಾತ್ಮರ ಕುಟುಂಬಸ್ಥರಿಗೆ ಗೌರವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾತ್ಮ ಗಾಂಧೀಜಿ ಅವರು ಆಧುನಿಕ ಉಡುಗೆಯನ್ನು ತ್ಯಜಿಸಿ, ಧೋತಿಯನ್ನು ಮಾತ್ರ ಧರಿಸುವುದಾಗಿ ಶಪಥ ಮಾಡಿದ ಶತಮಾನೋತ್ಸವ ಆಚರಣೆಯನ್ನು ರಾಮ್‌ರಾಜ್ ಕಾಟನ್ ಕಂಪನಿಯು ತಮಿಳುನಾಡಿನ ತಿರುಪುರದಲ್ಲಿ ಆಯೋಜಿಸಿತ್ತು.

ನಾಗರಾಜನ್

'ಧೋತಿ 100' ಹೆಸರಿನ ಈ ಕಾರ್ಯಕ್ರಮದಲ್ಲಿ ನೂರು ಮಂದಿ ಹುತಾತ್ಮರ ಕುಟುಂಬದವರನ್ನು ಹಾಗೂ ನೂರು ಜನ ನೇಕಾರರನ್ನು ಗೌರವಿಸಲಾಯಿತು ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ. 100 ಸಸಿಗಳನ್ನು ಸಹ ಇದೇ ಸಂದರ್ಭದಲ್ಲಿ ನೆಡಲಾಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ರಾಮ್‌ರಾಜ್ ಕಾಟನ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಕೆ.ಆರ್. ನಾಗರಾಜನ್, 'ನಾವು ಒಟ್ಟು ನಲವತ್ತು ಸಾವಿರ ನೇಕಾರರ ಬದುಕನ್ನು ಶ್ರೀಮಂತಗೊಳಿಸುತ್ತಿದ್ದೇವೆ' ಎಂದು ಹೇಳಿದರು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ		ಹಳೆಚಾಲಿ	48099-48099	ಚಾಲಿ	46599-49309
ಬಂಟ್ವಾಳ		**ಪುತ್ತೂರು**		ರಾಶಿ	48810-52209
ಕೋಕ	10000-25000	ಕೋಕ	10500-26000	**ಯಲ್ಲಾಪುರ**	
ಹೊಸತು	25000-50000	ಹೊಸತು	35500-50000	ಬಿಳಿಗೋಟು	38299-42819
ಹಳತು	42500-51500	**ಸಿದ್ದಾಪುರ**		ಚಾಲಿ	42969-48939
ಚಿತ್ರದುರ್ಗ		ಬಿಳಿಗೋಟು	37299-42012	ಕೋಕ	23612-35212
ಆಪಿ	51639-52069	ಚಾಲಿ	46129-48801	ಕೆಂಪುಗೋಟು	30800-35899
ಬೆಟ್ಟೆ	39919-40399	ಕೋಕ	28899-39312	ರಾಶಿ	48990-52469
ಕೆಂಪುಗೋಟು	32609-33010	ಕೆಂಪುಗೋಟು	31899-38899	ತಟ್ಟಿಬೆಟ್ಟೆ	38499-48010
ರಾಶಿ	51129-51559	ರಾಶಿ	49099-51009	**ರಾಮನಗರ ರೇಷ್ಮೆ**	
ಕುಮಟ		ತಟ್ಟಿಬೆಟ್ಟೆ	37799-47099	ಮಿಶ್ರ ತಳಿ	271-469
ಚಿಪ್ಪು	34105-42869	**ಶಿರಸಿ**		ದ್ವಿತಳಿ	318-561
ಕೋಕ	25519-38575	ಬೆಟ್ಟೆ	32899-47618		
ಹೊಸಚಾಲಿ	44569-48399	ಬಿಳಿಗೋಟು	32111-44099		

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1545 (1570)
ಸೋಯಾ (ರಿಫೈನ್ಡ್)	₹1330 (1320)
ಸೂರ್ಯಕಾಂತಿ(ರಿಫೈನ್ಡ್)	₹1360(1360)
ಪಾಮೋಲಿನ್	₹1210 (1205)

ಮುಂಬೈ ಧಾರಣೆ

ಶೇಂಗಾ

23-9-2021

ಜಾವಾ 70/80(ಹೊಸ)	10900-10950
ಜಾವಾ 80/90(ಹೊಸ)	10300-10350
ದಪ್ಪ ಮಧ್ಯಪ್ರದೇಶ(ಹೊಸ)	10700-10800
ದಪ್ಪ ಗುಜರಾತ್(ಹೊಸ)	9500-9600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1555 (1580)
ಒಂದು ವಾರದ ಡೆಲಿವರಿ	1550 (1575)
ಸೋಯಾ ಕಚ್ಚಾ	1290 (1280)
ಪಾಮ್ ವಾರದ ಡೆಲಿವರಿ	1208 (1203)
ಸೂರ್ಯಕಾಂತಿ ಎಣ್ಣೆ ಕಚ್ಚಾ	1300 (1300)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
46,400 (46,650)
ಬೆಳ್ಳಿ ಕೆ.ಜಿ 60,750 (60,800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಕೋವಿಡ್: ಕೇರಳದಲ್ಲಿ ಒಂದು ಲಕ್ಷಕ್ಕೂ ಅಧಿಕ ಸಕ್ರಿಯ ಪ್ರಕರಣ ದಾಖಲು

ಅಂಗವಿಕಲರಿಗೆ ಮನೆ ಬಾಗಿಲಲ್ಲೇ ಲಸಿಕೆ

ನವದೆಹಲಿ (ಪಿಟಿಐ): ಅಂಗವಿಕಲರು ಹಾಗೂ ಸರಾಗವಾಗಿ ಓಡಾಡಲು ಆಗದವರಿಗೆ ಅವರ ಮನೆ ಬಾಗಿಲಲ್ಲಿಯೇ ಕೋವಿಡ್ ಲಸಿಕೆಯನ್ನು ನೀಡಲಾಗುವುದು ಎಂದು ಕೇಂದ್ರ ಸರ್ಕಾರ ಗುರುವಾರ ಪ್ರಕಟಿಸಿದೆ.

ಸುದ್ದಿಗೋಷ್ಠಿಯಲ್ಲಿ ಈ ವಿವರ ನೀಡಿದ ಗೃಹ ಸಚಿವಾಲಯದ ಅಧಿಕಾರಿಗಳು, ದೇಶದಲ್ಲಿ ಈಗಲೂ ಕೋವಿಡ್ ಎರಡನೇ ಅಲೆ ಇದೆ. ಆದರೆ, ನಿತ್ಯ ದಾಖಲಾಗುತ್ತಿದ್ದ ಹೊಸ ಪ್ರಕರಣಗಳು ಇಳಿಮುಖವಾಗುತ್ತಿವೆ ಎಂದರು.

ಕಳೆದ ವಾರ ದೇಶದಾದ್ಯಂತ ದಾಖಲಾಗಿರುವ ಹೊಸ ಪ್ರಕರಣಗಳಲ್ಲಿ ಶೇ 62.73ರಷ್ಟು ಕೇರಳದಲ್ಲಿಯೇ ಇದ್ದವು. ಸದ್ಯ, ಈ ರಾಜ್ಯದಲ್ಲಿ ಮಾತ್ರ ಒಂದು ಲಕ್ಷಕ್ಕೂ ಅಧಿಕ ಸಕ್ರಿಯ ಪ್ರಕರಣಗಳಿವೆ ಎಂದು ಹೇಳಿದರು.

ಪ್ರಸ್ತುತ ಒಟ್ಟು 33 ಜಿಲ್ಲೆಗಳಲ್ಲಿ ಈ ವಾರ ದೃಢೀಕರಣ ಪ್ರಮಾಣವು ಶೇ 10ಕ್ಕಿಂತಲೂ ಅಧಿಕವಾಗಿದೆ. 23 ಜಿಲ್ಲೆಗಳಲ್ಲಿ ಈ ಪ್ರಮಾಣ ಶೇ 5 ರಿಂದ 10ರಷ್ಟಿದೆ ಎಂದು ಅಧಿಕಾರಿಗಳು ವಿವರಿಸಿದರು.

ಕೋವಿಡ್ ಮಾರ್ಗಸೂಚಿ ನಿಯಮಗಳ ಪ್ರಕಾರ, ಕಂಟೈನ್ಮೆಂಟ್ ವಲಯಗಳು ಹಾಗೂ ದೃಢೀಕರಣ ಪ್ರಮಾಣವು ಶೇ 5ಕ್ಕೂ ಅಧಿಕವಾಗಿರುವ ಜಿಲ್ಲೆಗಳಲ್ಲಿ ಮುಂಬರುವ ಹಬ್ಬಗಳ ಋತುವಿನಲ್ಲಿ ಸಾಮೂಹಿಕವಾಗಿ ಗುಂಪುಗೂಡುವಿಕೆಯನ್ನು ಆದಷ್ಟು ತಪ್ಪಿಸಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ಲಸಿಕೆ ಅಭಿಯಾನ: ದೇಶದಲ್ಲಿ ಶೇ 66ರಷ್ಟು ವಯಸ್ಕರಿಗೆ ಲಸಿಕೆ ನೀಡಲಾಗಿದೆ. ಶೇ 23ರಷ್ಟು ಜನರಿಗೆ ಕನಿಷ್ಠ ಒಂದು ಡೋಸ್ ಲಸಿಕೆ ನೀಡಲಾಗಿದೆ. ಗ್ರಾಮೀಣ ಭಾಗದಲ್ಲಿ ಶೇ 63.7ರಷ್ಟು, ನಗರ ಪ್ರದೇಶಗಳಲ್ಲಿ ಶೇ 35.4ರಷ್ಟು ಲಸಿಕೆ ನೀಡಲಾಗಿದೆ. 68.2 ಲಕ್ಷ ಡೋಸ್ ಅನ್ನು ಲಸಿಕೆ ಕೇಂದ್ರಗಳಲ್ಲಿಯೇ ನೀಡಲಾಗಿದೆ ಎಂದರು.

ಭಾರತದಲ್ಲಿ ಕೋವಿಡ್ ಲಸಿಕೆ ಪಡೆದಿದ್ದರೂ 10 ದಿನದ ಕ್ವಾರಂಟೈನ್ ಕಡ್ಡಾಯಪಡಿಸಿರುವ ಬ್ರಿಟನ್ ಸರ್ಕಾರದ ನಿಯಮ ತಾರತಮ್ಯ ಕ್ರಮದಿಂದ ಕೂಡಿದ್ದಾಗಿದೆ ಎಂದು ಕೇಂದ್ರ ಗೃಹ ಕಾರ್ಯದರ್ಶಿ ರಾಜೇಶ್ ಭೂಷಣ್ ತಿಳಿಸಿದರು. ಉಭಯ ರಾಷ್ಟ್ರಗಳು ಈ ವಿಷಯ ಕುರಿತಂತೆ ಚರ್ಚೆ ಆರಂಭಿಸಿವೆ ಎಂದು ಹೇಳಿದರು.

ಆತ್ಮಹತ್ಯೆ ಮಾಡಿಕೊಂಡವರ ಕುಟುಂಬಕ್ಕೂ ಪರಿಹಾರ

ನವದೆಹಲಿ: ಕೋವಿಡ್ ಸೋಂಕು ದೃಢವಾದ ಒಂದು ತಿಂಗಳ ಒಳಗೆ ಆತ್ಮಹತ್ಯೆ ಮಾಡಿಕೊಂಡವರ ಕುಟುಂಬಗಳು ಕೂಡ ₹50,000 ಪರಿಹಾರ ಧನ ಪಡೆಯಲು ಅರ್ಹತೆ ಹೊಂದಿರುತ್ತವೆ ಎಂದು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ. ಮೃತರು ಕೋವಿಡ್ ಬಾಧಿತರು ಎಂದು ಸಾಬೀತಾಗಿರಬೇಕು. ಆಗ ಅವರ ಕುಟುಂಬ ಕೂಡಾ ಪರಿಹಾರ ಧನ ಪಡೆಯಲು ಅರ್ಹವಾಗಿರುತ್ತದೆ ಎಂದು ಕೋರ್ಟ್ ಹೇಳಿದೆ.

ಈ ಕುರಿತು ಹೆಚ್ಚುವರಿ ಪ್ರಮಾಣಪತ್ರ ಸಲ್ಲಿಸಿರುವ ಗೃಹ ಸಚಿವಾಲಯ, ಈ ನಿಟ್ಟಿನಲ್ಲಿ ಅಗತ್ಯ ನಿರ್ದೇಶನ ನೀಡುವಂತೆ ನ್ಯಾಯಾಲಯವನ್ನು ಕೇಳಿಕೊಂಡಿದೆ.

ಕೋವಿಡ್–19ನಿಂದ ಮೃತಪಟ್ಟವರ ಮರಣ ಪತ್ರದಲ್ಲಿ 'ಕೋವಿಡ್ ಕಾರಣದಿಂದ ಆತ್ಮಹತ್ಯೆ' ಎಂಬ ಅಂಶವನ್ನು ನಮೂದು ಮಾಡದೇ ಇರುವ ಕುರಿತು ಪುನರ್‌ವಿಮರ್ಶೆ ಮಾಡಬೇಕು. ಸಂತ್ರಸ್ತರ ಕುಟುಂಬಗಳಿಗೆ ಪರಿಹಾರ ಧನ ನೀಡಲು 'ಆತ್ಮಹತ್ಯೆ' ಎಂಬುದರ ಉಲ್ಲೇಖ ಅತಿಮುಖ್ಯ ಎಂದು ಸೆ.13ರಂದು ಕೇಂದ್ರ ಸರ್ಕಾರಕ್ಕೆ ಕೋರ್ಟ್ ಹೇಳಿತ್ತು. ಕೋರ್ಟ್ ಎತ್ತಿರುವ ಕಳಕಳಿ ಕುರಿತು ಪುನರ್‌ವಿಮರ್ಶೆ ಮಾಡಲಾಗುವುದು ಎಂದು ಕೇಂದ್ರ ಸರ್ಕಾರ ಹೇಳಿತ್ತು.

ಕೋವಿಡ್‌ನಿಂದ ಬಳಲುತ್ತಿರುವ ವೇಳೆಯೇ, ವಿಷ ಪದಾರ್ಥ ಸೇವನೆ, ಆತ್ಮಹತ್ಯೆ, ಕೊಲೆ ಅಥವಾ ಆತ್ಮಹತ್ಯೆಯಿಂದ ಸಂಭವಿಸಿದ ಸಾವುಗಳನ್ನು ಕೋವಿಡ್‌ನಿಂದ ಸಂಭವಿಸಿದ ಸಾವುಗಳು ಎಂದು ಪರಿಗಣಿಸಲು ಸಾಧ್ಯವಿಲ್ಲ ಎಂದು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ, ಐಸಿಎಂಆರ್ ಇದಕ್ಕೂ ಮೊದಲು ಜಂಟಿಯಾಗಿ ಮಾರ್ಗಸೂಚಿ ಹೊರಡಿಸಿದ್ದವು.

ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಸೆ.11ರಂದು ಹೊರಡಿಸಿರುವ ಮಾರ್ಗಸೂಚಿ ಅನ್ವಯ ಕೋವಿಡ್–19 ಸಾಂಕ್ರಾಮಿಕದಿಂದ ಮೃತಪಟ್ಟವರ ಕುಟುಂಬಕ್ಕೆ ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಪರಿಹಾರ ಮೊತ್ತವನ್ನು ಭರಿಸಬೇಕು. ಜೂನ್ 30ರಂದು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿಗೆ ಅನುಗುಣವಾಗಿ ಮಾರ್ಗಸೂಚಿ ರೂಪಿಸಲಾಗಿದೆ.

ಚೇತರಿಕೆ ನಂತರದ ಸವಾಲು ಎದುರಿಸಲು ಮಾರ್ಗದರ್ಶಿ ಸಲಹೆ

ನವದೆಹಲಿ (ಪಿಟಿಐ): ಕೋವಿಡ್ ಚೇತರಿಕೆ ನಂತರ ಆರೋಗ್ಯ ಸಮಸ್ಯೆಗಳಿಗೆ ಚಿಕಿತ್ಸೆ ಕುರಿತು ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಗುರುವಾರ ಮಾರ್ಗದರ್ಶಿ ಸೂತ್ರ ಬಿಡುಗಡೆ ಮಾಡಿದರು.

ಸಚಿವಾಲಯವು, ಚಿಕಿತ್ಸೆ ನೀಡುವಲ್ಲಿ ವೈದ್ಯರು, ಶುಶ್ರೂಷಕರು, ಸಮುದಾಯ ಆರೋಗ್ಯ ಕಾರ್ಯಕರ್ತರಲ್ಲಿ ಆತ್ಮವಿಶ್ವಾಸ, ದಕ್ಷತೆಹೆಚ್ಚಿಸಲು ಈ ಮಾರ್ಗದರ್ಶಿ ಸೂತ್ರಗಳು ನೆರವಾಗಲಿದೆ ಎಂದು ಹೇಳಿಕೆ ನೀಡಿದೆ.

ಚೇತರಿಕೆ ನಂತರ ಸಮಸ್ಯೆ ಕಾಡದಂತೆ ಕನಿಷ್ಠ ಅಡ್ಡಪರಿಣಾಮವುಳ್ಳ ಔಷಧ ಪಡೆಯಬೇಕು. ಆರಂಭದಲ್ಲೇ ಎಚ್ಚರವಹಿಸಿದರೆ ಪರಿಣಾಮಕಾರಿಯಾಗಿ ಸಮಸ್ಯೆ ನಿಭಾಯಿಸಬಹುದು ಎಂದೂ ಸಚವರು ಹೇಳಿದ್ದಾರೆ.

ಚೇತರಿಕೆಯ ನಂತರ ರೋಗಿಗಳಿಗೆ ಕಾಡುವ ಆತಂಕ, ಮಾನಸಿಕ ಆರೋಗ್ಯ ಸಂಬಂಧಿತ ಸ್ಥಿತಿಯನ್ನು ಸಮರ್ಪಕವಾಗಿ ನಿರ್ವಹಿಸುವುದು ಅಗತ್ಯವಾಗಿದೆ ಎಂದು ಸಚಿವರು ಹೇಳಿದ್ದಾರೆ ಎಂದು ಹೇಳಿಕೆ ತಿಳಿಸಿದೆ.

ಆರೋಗ್ಯ ಖಾತೆ ರಾಜ್ಯ ಸಚಿವ ಭಾರತಿ ಪ್ರವೀಣ್ ಪವಾರ್ ಅವರು, ಆರೋಗ್ಯ ಸೇವೆಯ ಮುಂಚೂಣಿ ಕಾರ್ಯಕರ್ತರಿಗೂ ಚೇತರಿಕೆ ಚಿಕಿತ್ಸೆ ಕ್ರಮ ಕುರಿತು ಅಗತ್ಯ ಮಾಹಿತಿ ಮತ್ತು ತರಬೇತಿಯನ್ನು ಒದಗಿಸಲಾಗಿದೆ ಎಂದು ಹೇಳಿದರು.

'ನಿಯಮಗಳಿಗೆ ಪೂರಕವಾಗಿರಬೇಕು'

ಲಂಡನ್ (ಪಿಟಿಐ): ವಿವಿಧ ದೇಶಗಳಿಂದ ಬರುವ ಪ್ರಯಾಣಿಕರು ಹಾಜರುಪಡಿಸುವ ಕೋವಿಡ್ ಲಸಿಕೆ ಪ್ರಮಾಣಪತ್ರವು 'ಕನಿಷ್ಠ ನಿಯಮ'ಗಳಿಗೆ ಪೂರಕವಾಗಿರಬೇಕು ಎಂದು ಬ್ರಿಟನ್ ಹೇಳಿದೆ.

ಅಂತರರಾಷ್ಟ್ರೀಯ ನಿಯಮಗಳಿಗೆ ಅನುಸಾರ ವಿಧಿಸಲಾದ ನಿಯಮ ಕುರಿತು ಭಾರತದ ಜೊತೆಗೆ ಚರ್ಚಿಸಲಾಗುತ್ತಿದೆ ಎಂದು ಬ್ರಿಟನ್ ಸರ್ಕಾರ ಹೇಳಿದೆ. ಬುಧವಾರ ಬಿಡುಗಡೆ ಮಾಡಿರುವ ನಿಯಮಗಳಂತೆ, ಭಾರತದ ಸೀರಂ ಇನ್‌ಸ್ಟಿಟ್ಯೂಟ್ ಉತ್ಪಾದಿಸಿರುವ, ಆಕ್ಸ್‌ಫರ್ಡ್/ಆಸ್ಟ್ರಜೆನೆಕಾ ಲಸಿಕೆ ಪಡೆದವರೂ ದೇಶಕ್ಕೆ ಪ್ರಯಾಣಿಸಲು ಅರ್ಹರಾಗಿದ್ದಾರೆ.

ರೈತರ ಆಕ್ರೋಶ ಪಂಜಾಬ್‌ನ ಅಮೃತಸರದಲ್ಲಿ ಭತ್ತದ ಕಟಾವಿನ ಬಳಿಕ ಒಣಹುಲ್ಲಿಗೆ ಗುರುವಾರ ಬೆಂಕಿ ಹಾಕಿದ ಕೃಷಿಕರು, ಇದೇ ಸಂದರ್ಭದಲ್ಲಿ ಕೇಂದ್ರದ ಮೂರು ಕೃಷಿ ಕಾಯ್ದೆಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ ಘೋಷಣೆ ಕೂಗಿದರು -ಎಎಫ್‌ಪಿ ಚಿತ್ರ

ಅರೆ ನ್ಯಾಯಾಂಗ ಆಡಳಿತ ವ್ಯವಸ್ಥೆಗೆ 'ಸುಪ್ರೀಂ' ನಿರ್ದೇಶನ

'ಪ್ರತಿ ನಿರ್ಧಾರಕ್ಕೂ ಕಾರಣ ದಾಖಲಿಸಿ'

ನವದೆಹಲಿ (ಪಿಟಿಐ): ಅರೆ ನ್ಯಾಯಾಂಗದ ಹೊಣೆಗಾರಿಕೆ ನಿಭಾಯಿಸುತ್ತಿರುವ ಪ್ರಾಧಿಕಾರಗಳು ಮತ್ತು ಆಡಳಿತ ವ್ಯವಸ್ಥೆಯು ತಮ್ಮ ಪ್ರತಿ ತೀರ್ಮಾನಕ್ಕೂ ಕಡ್ಡಾಯವಾಗಿ ಕಾರಣ ದಾಖಲಿಸಬೇಕು ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

ಲಿಖಿತವಾಗಿ ಕಾರಣಗಳನ್ನು ದಾಖಲಿಸಬೇಕು ಎಂದು ಕಾಯ್ದೆಯಲ್ಲಿ ಇದ್ದಲ್ಲಿ ಅನುಮಾನಕ್ಕೆ ಆಸ್ಪದವಿಲ್ಲದಂತೆ ಅದನ್ನು ನಿಭಾಯಿಸಬೇಕು. ಇಲ್ಲದಿದ್ದರೆ ಅದು ಕಾಯ್ದೆಯ ಉಲ್ಲಂಘನೆಯಾಗಲಿದೆ ಎಂದು ಸ್ಪಷ್ಟವಾಗಿ ಹೇಳಿತು.

'ಕಾರಣಗಳನ್ನು ದಾಖಲಿಸುವ ಸಂದರ್ಭ ಇಲ್ಲದಿದ್ದರೆ ಅಥವಾ ಆದೇಶ ಸಮರ್ಥಿಸಲು ಕಾರಣಗಳಿದ್ದರೆ ಶಂಕೆಗೆ ಆಸ್ಪದವಿರುವುದಿಲ್ಲ. ಆದರೆ, ಪ್ರತಿ ನಿರ್ಧಾರಕ್ಕೂ ಒಂದು ಕಾರಣ ಇದ್ದಿರಲೇಬೇಕು' ಎಂದೂ ಕೋರ್ಟ್ ಹೇಳಿತು.

ನ್ಯಾಯಮೂರ್ತಿಗಳಾದ ಕೆ.ಎಂ. ಜೋಸೆಫ್ ಮತ್ತು ಎಸ್.ರವೀಂದ್ರ ಭಟ್ ಅವರಿದ್ದ ಪೀಠವು, ಕಾರಣವನ್ನು ತಿಳಿಯುವ ಹಕ್ಕು ಅಥವಾ ಆಸಕ್ತಿ ಇದ್ದವರಿಗೆ ಈ ಅಂಶಗಳು ತಿಳಿಯಬೇಕು ಎಂದು ಅಭಿಪ್ರಾಯಪಟ್ಟಿತು.

ಅರೆ ನ್ಯಾಯಾಂಗವಾಗಿ ಕಾರ್ಯನಿರ್ವಹಿಸುವ ಆಡಳಿತಾತ್ಮಕ ಪ್ರಾಧಿಕಾರವು, ಆಡಳಿತಾತ್ಮಕ ನಿರ್ಧಾರ ಕೈಗೊಂಡಾಗಲೂ ಅದಕ್ಕೆ ಕಾರಣ ತಿಳಿಸಬೇಕು. ಇಲ್ಲದಿದ್ದರೆ ಕಾನೂನು ಹಕ್ಕುಗಳ ಮೇಲೆ ನಕಾರಾತ್ಮಕ ಪರಿಣಾಮ ಬೀರಲಿದೆ ಎಂದು ಹೇಳಿತು.

ಒಕ್ಕೂಟ ಸರ್ಕಾರ ಮತ್ತು ರಾಜ್ಯಗಳಿಗೆ ಕ್ರಮವಾಗಿ ಸಂವಿಧಾನದ ವಿಧಿ 73 ಮತ್ತು 162ರ ಪ್ರಕಾರ ಕಾರ್ಯಕಾರಿ ಅಧಿಕಾರವಿದೆ. ನಿಸ್ಸಂದೇಹವಾಗಿ ಭಾರತದಲ್ಲಿ ರಾಜ್ಯಗಳ ಪ್ರತಿ ನಿರ್ಧಾರವು ನ್ಯಾಯಯುತವಾಗಿರಬೇಕು. ಇಲ್ಲದಿದ್ದರೆ ಅದು ವಿಧಿ 14ರಲ್ಲಿನ ಅಡಕಗಳ ಅಣಕವಾಗಲಿದೆ ಎಂದೂ ಪೀಠವು ತನ್ನ 109 ಪುಟಗಳ ತೀರ್ಪಿನಲ್ಲಿ ನಮೂದಿಸಿದೆ.

ಬಿಹಾರದಲ್ಲಿ ರಾಷ್ಟ್ರೀಯ ಹೆದ್ದಾರಿ 30ರಲ್ಲಿ ಪಾಟ್ನಾ–ಭಕ್ತಿಯಾರ್‌ಪುರ್ ಹೆದ್ದಾರಿಯಲ್ಲಿ ಟೋಲ್ ಪ್ಲಾಜಾವನ್ನು 194 ಕಿ.ಮೀ ಬದಲಾಗಿ ಬೇರೊಂದು ಕಡೆ ಸ್ಥಾಪಿಸಬೇಕು ಎಂಬ ಪಾಟ್ನಾ ಹೈಕೋರ್ಟ್ ಆದೇಶ ಪ್ರಶ್ನಿಸಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿದ ತೀರ್ಪಿನಲ್ಲಿ ಕೋರ್ಟ್ ಈ ಮಾತು ಹೇಳಿತು.

ಅಲ್ಲದೆ, ಸರ್ವೀಸ್ ರಸ್ತೆ ಬಂದ್ ಮಾಡಿ ಹಾಕಿರುವ ಕೃತಕ ತಡೆಗೋಡೆ ತೆರವುಗೊಳಿಸಬೇಕು. ಪ್ರತಿ ನಿರ್ಧಾರಕ್ಕೆ ಸಮರ್ಪಕ ಕಾರಣ ದಾಖಲಿಸಲು ತನ್ನ ಎಲ್ಲ ಅಧಿಕಾರಿಗಳಿಗೆ ಸೂಚಿಸಬೇಕು ಎಂದು ಪೀಠವು ಎನ್‌ಎಚ್‌ಎಐಗೆ ನಿರ್ದೇಶನ ನೀಡಿತು.

ಉದ್ಯೋಗಶೀಲತೆ ಶ್ರೇಣಿ: ಬೆಂಗಳೂರಿನ ಐಐಎಸ್‌ಸಿ ಸ್ಥಾನ

ನವದೆಹಲಿ (ಪಿಟಿಐ): 'ಕ್ಯೂಎಸ್ ಪದವೀಧರರ ಉದ್ಯೋಗಶೀಲತೆ ಶ್ರೇಣಿ 2022' ಪಟ್ಟಿಯ ಉನ್ನತ 500 ಸಂಸ್ಥೆಗಳಲ್ಲಿ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ), ಆರು ಐಐಟಿಗಳು ಒಳಗೊಂಡು ದೇಶದ 12 ಸಂಸ್ಥೆಗಳು ಸ್ಥಾನ ಪಡೆದಿವೆ. ಭಾರತದ ಸಂಸ್ಥೆಗಳ ಪೈಕಿ ಐಐಟಿ (ಬಾಂಬೆ) ಮೊದಲ ಸ್ಥಾನದಲ್ಲಿದೆ.

ದೆಹಲಿ, ಮುಂಬೈ ಮತ್ತು ಕೋಲ್ಕತ್ತದಲ್ಲಿನ ಮೂರು ಕೇಂದ್ರೀಯ ವಿಶ್ವವಿದ್ಯಾಲಯಗಳೂ ಪಟ್ಟಿಯಲ್ಲಿ ಸ್ಥಾನ ಪಡೆದಿರುವುದು ಗಮನಾರ್ಹ. ಉಳಿದಂತೆ ಖಾಸಗಿ ವಿಶ್ವವಿದ್ಯಾಲಯಗಳಾದ ಒ.ಪಿ.ಜಿಂದಾಲ್ ಗ್ಲೋಬಲ್ ಯೂನಿವರ್ಸಿಟಿ, ಸೋನೆಪತ್ ಮತ್ತು ಬಿಟ್ಸ್ ಪಿಳನಿ ಕೂಡ ಮೊದಲ 500ರ ಪಟ್ಟಿಯಲ್ಲಿ ಸ್ಥಾನ ಪಡೆದಿವೆ.

ಪಟ್ಟಿಯಲ್ಲಿರುವ ದೇಶದ ಆರು ಐಐಟಿಗಳಲ್ಲಿ ಐಐಟಿ ಬಾಂಬೆ 101–110ನೇ ಶ್ರೇಣಿ, ಐಐಟಿ ದೆಹಲಿ (131–40), ಐಐಟಿ ಮದ್ರಾಸ್ (151–60), ಐಐಟಿ ಕರಗ್‌ಪುರ (201–50), ಐಐಟಿ ಕಾನ್ಪುರ (251–300) ಮತ್ತು ಐಐಟಿ ರೂರ್ಕಿ (500) ಸೇರಿವೆ.

ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ ಮತ್ತು ಒ.ಪಿ.ಜಿಂದಾಲ್ ಗ್ಲೋಬಲ್ ಯೂನಿವರ್ಸಿಟಿಯು 301–500ರ ವರ್ಗದಲ್ಲಿ ಸ್ಥಾನ ಪಡೆದಿವೆ. ಅಂತೆಯೇ, ಬಿರ್ಲಾ ತಂತ್ರಜ್ಞಾನ ಮತ್ತು ವಿಜ್ಞಾನ ಸಂಸ್ಥೆ (ಬಿಐಟಿಎಸ್) ಪಿಳನಿ ಮತ್ತು ಮುಂಬೈ ಯೂನಿವರ್ಸಿಟಿಯು 251–300ರ ವರ್ಗದಲ್ಲಿದೆ.

ಕೋವಿಡ್ ಪರಿಣಾಮದಿಂದ ಜಗತ್ತು ಹೊರಬರುತ್ತಿರುವ ಈ ಸಂದರ್ಭದಲ್ಲಿ ಕೌಶಲಯುಕ್ತ ಪದವೀಧರರ ಪ್ರಾಮುಖ್ಯತೆ ಹೆಚ್ಚುತ್ತಿದೆ. ಉದ್ಯೋಗದಾತರು ಇಂಥ ಕೌಶಲಯುಕ್ತ ಪದವೀಧರರನ್ನೇ ಬಯಸುತ್ತಿದ್ದಾರೆ ಎಂದು ಶ್ರೇಣಿಯನ್ನು ಪ್ರಕಟಿಸಿರುವ ಲಂಡನ್ ಮೂಲದ ಕ್ವಾಕ್ವರೆಲಿ ಸೈಮಂಡ್ಸ್ (ಕ್ಯೂಎಸ್) ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ.

ಕೌಶಲಯುಕ್ತ ಪದವೀಧರರನ್ನು ರೂಪಿಸುವ ಸಾಮರ್ಥ್ಯವನ್ನು ಆಧರಿಸಿ ವಿಶ್ವವಿದ್ಯಾಲಯಗಳಿಗೆ ಶ್ರೇಣಿ ನೀಡಲಾಗಿದೆ. ವಿವಿಧೆಡೆ ಇರುವ ಸ್ಪರ್ಧೆಯನ್ನು ಗಮನದಲ್ಲಿ ಇಟ್ಟುಕೊಂಡು ವಿದ್ಯಾರ್ಥಿಗಳು ಕೂಡಾ ಶಿಕ್ಷಣ ಸಂಸ್ಥೆಗಳು ತಮ್ಮನ್ನು ಹೇಗೆ ರೂಪಿಸುತ್ತಿವೆ ಎಂಬುದನ್ನು ಗಮನಿಸುತ್ತಾರೆ ಎಂದು ಹೇಳಿದೆ.

ಕ್ಯೂಎಸ್ ಸಂಸ್ಥೆಯು ಶ್ರೇಣಿ ನಿಗದಿಪಡಿಸುವ ಮೊದಲು ಉದ್ಯೋಗದಾತರ ವರ್ಚಸ್ಸು (ಶೇ 30), ಸಂಸ್ಥೆಯಿಂದ ಪದವೀಧರರಾಗುವವರ ಸಂಖ್ಯೆ (ಶೇ 25), ಉದ್ಯೋಗದಾತ ಸಂಸ್ಥೆಗಳು ಮತ್ತು ವಿವಿಧ ವಿಭಾಗಗಳ ನಡುವಣ ಸಹಭಾಗಿತ್ವ (ಶೇ 25), ಉದ್ಯೋಗದಾತರು ಮತ್ತು ವಿದ್ಯಾರ್ಥಿಗಳ ನಡುವಣ ಸಂಪರ್ಕ (ಶೇ 10) ಹಾಗೂ ಪದವೀಧರ ಉದ್ಯೋಗಿಗಳ ಪ್ರಮಾಣ (ಶೇ 10) ಅಂಶಗಳನ್ನು ಆಧಾರವಾಗಿ ಪರಿಗಣಿಸಿದೆ.

ಸಂಕ್ಷಿಪ್ತ ಸುದ್ದಿ

ಉ. ಪ್ರ: ಸಿಎಂ ಯೋಗಿ ಭೇಟಿ ನೀಡಿದ್ದ ಸ್ಥಳ ಶುದ್ಧೀಕರಣ

ಸಂಭಾಲ್(ಉತ್ತರ ಪ್ರದೇಶ)(ಪಿಟಿಐ): ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಇತ್ತೀಚೆಗೆ ಜಿಲ್ಲೆಯಲ್ಲಿ ಭೇಟಿ ನೀಡಿದ್ದ ಸ್ಥಳಗಳನ್ನು ಸಮಾಜವಾದಿ ಪಕ್ಷದ(ಎಸ್‌ಪಿ) ಕಾರ್ಯಕರ್ತರು ಗಂಗಾಜಲ ಪ್ರೋಕ್ಷಿಸಿ ಶುದ್ಧೀಕರಿಸುತ್ತಿರುವ ವಿಡಿಯೊವೊಂದು ಬುಧವಾರ ವೈರಲ್ ಆಗಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಮಾಜವಾದಿ ಪಕ್ಷದ ಯುವಜನ ಸಭಾ ವಿಭಾಗದ ರಾಜ್ಯ ಘಟಕದ ಅಧ್ಯಕ್ಷ ಭಾವೇಶ್ ಯಾದವ್ ಅವರನ್ನು ಬಂಧಿಸಿದ್ದು, ಪಕ್ಷದ ಇತರೆ 8 ರಿಂದ 10 ಮಂದಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಚಕ್ರೇಶ್ ಮಿಶ್ರಾ ಗುರುವಾರ ತಿಳಿಸಿದ್ದಾರೆ.

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಮಂಗಳವಾರ ಜಿಲ್ಲೆಯ ವಿವಿಧ ಕಡೆಗಳಲ್ಲಿ ₹275 ಕೋಟಿ ವೆಚ್ಚದ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಿ, ಕೆಲವೊಂದು ಯೋಜನೆಗಳನ್ನು ಉದ್ಘಾಟಿಸಿದ್ದರು. ಈ ಕಾರ್ಯಕ್ರಮದ ನಂತರ ಕೈಲಾ ದೇವಿ ಗ್ರಾಮದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿದ್ದರು.

'ಪ್ರಕರಣ ದಾಖಲಿಸಲು ಕಾಲಮಿತಿ ಸಡಿಲಿಸಿದ್ದ ಆದೇಶ ವಾಪಸಿಗೆ ನಿರ್ಧಾರ'

ನವದೆಹಲಿ (ಪಿಟಿಐ): ದೇಶದಲ್ಲಿ ಕೋವಿಡ್ ಪರಿಸ್ಥಿತಿಯು ಸುಧಾರಿಸುತ್ತಿರುವ ಹಿನ್ನೆಲೆಯಲ್ಲಿ, ಪ್ರಕರಣಗಳನ್ನು ದಾಖಲಿಸಲು ಇದ್ದ ಕಾಲಮಿತಿಯನ್ನು ಸಡಿಲಿಸಿ ನೀಡಿದ್ದ ಆದೇಶ ಹಿಂಪಡೆಯಲು ಸುಪ್ರೀಂ ಕೋರ್ಟ್ ನಿರ್ಧರಿಸಿದೆ.

ಈ ಮೊದಲು ಮಾರ್ಚ್ 15, 2020ರಿಂದ ಅನ್ವಯವಾಗುವಂತೆ ಪ್ರಕರಣಗಳನ್ನು ದಾಖಲಿಸಲು ಇದ್ದ ಕಾಲಮಿತಿ ನಿಯಮ ಜಾರಿಗೊಳಿಸುವುದರಿಂದ ವಿನಾಯಿತಿ ನೀಡಿ ಕೋರ್ಟ್ ನಿರ್ದೇಶನ ನೀಡಿತ್ತು.

ಕೋವಿಡ್ 2ನೇ ಅಲೆಯ ಹಿನ್ನೆಲೆಯಲ್ಲಿ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ, ನ್ಯಾಯಮೂರ್ತಿಗಳಾದ ಎಲ್.ನಾಗೇಶ್ವರರಾವ್ ಮತ್ತು ಸೂರ್ಯಕಾಂತ್ ಅವರಿದ್ದ ಪೀಠವು ಏಪ್ರಿಲ್ 27, 2021ರಂದು ಆದೇಶ ಹೊರಡಿಸಿ, ಚುನಾವಣಾ ಅರ್ಜಿಗಳು ಸೇರಿ ಪ್ರಕರಣ ದಾಖಲಿಸಲು ನಿಗದಿಪಡಿಸಿದ್ದ ಕಾಲಮಿತಿಯನ್ನು ಸಡಿಲಿಸಿತ್ತು.

ಈ ಆದೇಶವನ್ನು ಅಕ್ಟೋಬರ್ 1ರಿಂದ ಅನ್ವಯವಾಗುವಂತೆ ಹಿಂಪಡೆಯಲಾಗುವುದು. ತರುವಾರ 90 ದಿನಗಳ ಒಳಗೆ ಪ್ರಕರಣ ದಾಖಲಿಸಬೇಕು ಎಂಬ ನಿಯಮವೇ ಜಾರಿಯಲ್ಲಿರುತ್ತದೆ ಎಂದು ಪೀಠವು ಸ್ಪಷ್ಟಪಡಿಸಿತು. ಈ ಕುರಿತು ಆದೇಶವನ್ನು ಹೊರಡಿಸಲಾಗುವುದು ಎಂದು ತಿಳಿಸಿತು.

ರೋಹಿಂಗ್ಯಾ ನರಮೇಧ: ದಾಖಲೆ ಬಿಡುಗಡೆಗೆ ಫೇಸ್‌ಬುಕ್‌ಗೆ ಆದೇಶ

ವಾಷಿಂಗ್ಟನ್ (ಎಎಫ್‌ಪಿ): ಮ್ಯಾನ್ಮಾರ್‌ನಲ್ಲಿ ರೋಹಿಂಗ್ಯಾ ಸಮುದಾಯದವರ ವಿರುದ್ಧ ಸರ್ಕಾರಿ ಬೆಂಬಲಿತ ಹಿಂಸಾಚಾರಕ್ಕೆ ಸಂಬಂಧಿಸಿ ರೋಹಿಂಗ್ಯ ವಿರೋಧಿ ವಿಷಯಗಳನ್ನು ಪ್ರಕಟಿಸಿದ ಖಾತೆಗಳ ದಾಖಲೆಗಳನ್ನು ಬಿಡುಗಡೆ ಮಾಡುವಂತೆ ಅಮೆರಿಕದ ನ್ಯಾಯಾಧೀಶರು ಫೇಸ್‌ಬುಕ್‌ಗೆ ಆದೇಶಿಸಿದ್ದಾರೆ ಎಂದು ವಾಲ್ ಸ್ಟ್ರೀಟ್ ಜರ್ನಲ್ ವರದಿ ಮಾಡಿದೆ.

ಅಂತರರಾಷ್ಟ್ರೀಯ ನ್ಯಾಯಾಲಯದಲ್ಲಿ ಮ್ಯಾನ್ಮಾರ್ ವಿರುದ್ಧ ಪ್ರಕರಣ ನಡೆಸುತ್ತಿರುವ ದೇಶಗಳಿಗೆ ಸಂಬಂಧಿಸಿದ ದಾಖಲೆಗಳನ್ನು ನೀಡಲು ನಿರಾಕರಿಸಿದ್ದಕ್ಕಾಗಿ ಫೇಸ್‌ಬುಕ್ ಅನ್ನು ವಾಷಿಂಗ್ಟನ್ ಡಿಸಿ ಜಿಲ್ಲಾ ನ್ಯಾಯಾಲಯದ ನ್ಯಾಯಾಧೀಶ ಜಿಯಾ ಫಾರೂಕಿ ಅವರು ಬುಧವಾರ ತಮ್ಮ ತೀರ್ಪಿನಲ್ಲಿ ಟೀಕಿಸಿದ್ದಾರೆ ಎಂದು ಅದು ಹೇಳಿದೆ.

ಅಮೆರಿಕದ ಗೋಪ್ಯತೆ ಕಾನೂನಿನ ಆಧಾರದ ಮೇಲೆ ಮಾಹಿತಿ ಬಿಡುಗಡೆ ಮಾಡಲು ಫೇಸ್‌ಬುಕ್ ನಿರಾಕರಿಸಿತ್ತು.

ಸ್ಪರ್ಧಾ ಆಯೋಗದ ವಿರುದ್ಧ ಅರ್ಜಿ

ನವದೆಹಲಿ (ಪಿಟಿಐ): ತನಗೆ ಸಂಬಂಧಿಸಿದ ಗೌಪ್ಯ ವರದಿಗಳನ್ನು ಭಾರತೀಯ ಸ್ಪರ್ಧಾ ಆಯೋಗವು (ಸಿಸಿಐ) ಸೋರಿಕೆ ಮಾಡಿದೆ ಎಂದು ಆರೋಪಿಸಿ ಗೂಗಲ್ ಸಂಸ್ಥೆ ದೆಹಲಿ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದೆ.

ಸಿಸಿಐ ವಿಶ್ವಾಸದ್ರೋಹದ ಕೆಲಸ ಮಾಡಿದೆ. ಇದರಿಂದ ಗೂಗಲ್ ಮತ್ತು ಅದರ ಪಾಲುದಾರ ಸಂಸ್ಥೆಗಳಿಗೆ ಕೆಡುಕಾಗುವಂತಿದೆ. ಸಿಸಿಐನ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ದೆಹಲಿ ಹೈಕೋರ್ಟ್‌ಗೆ ಗೂಗಲ್ ಮನವಿ ಮಾಡಿದೆ.

ಗೂಗಲ್ ಸ್ಪರ್ಧಾ ನಿಯಮಗಳನ್ನು ಮೀರುತ್ತಿದೆ ಎಂದು ಮೇಲ್ನೋಟಕ್ಕೆ ತಿಳಿಯುತ್ತಿದೆ ಎಂದು ಶಂಕಿಸಿ, 2019ರಲ್ಲಿ ಗೂಗಲ್ ವಿರುದ್ಧ ವಿವರವಾಗಿ ತನಿಖೆ ನಡೆಸುವಂತೆ ಸಿಸಿಐ ಆದೇಶಿಸಿತ್ತು. ಅದರಂತೆ, ಆ್ಯಂಡ್ರಾಯ್ಡ್ ಸಂಸ್ಥೆಗೆ ಸಂಬಂಧಿಸಿದ ವ್ಯವಹಾರದಲ್ಲಿ ಗೂಗಲ್ ಅವ್ಯವಹಾರ ನಡೆಸುತ್ತಿದೆ ಎಂಬ ಕುರಿತು ಕಳೆದ ವಾರ ಸಿಸಿಐ ಮಹಾ ನಿರ್ದೇಶಕರು (ಡಿಜಿ) ಮಾಹಿತಿ ಕಲೆಹಾಕಿದ್ದರು. ಆ ವರದಿ ಬಹಿರಂಗವಾಗಿದೆ ಮತ್ತು ಮಾಧ್ಯಮಗಳಿಗೆ ದೊರಕಿದೆ ಎನ್ನಲಾಗಿದೆ.

ತನಿಖೆ ಜಾರಿಯಲ್ಲಿರುವ ಮೊಕದ್ದಮೆಗೆ ಸಂಬಂಧಿಸಿದಂತೆ ಗೌಪ್ಯವಾಗಿ ಇರಬೇಕಿದ್ದ ವರದಿಗಳನ್ನು ಡಿಜಿ ಬಹಿರಂಗಪಡಿಸಿದ್ದಾರೆ. ಗೌಪ್ಯ ಮಾಹಿತಿಗಳನ್ನು ಕಾಪಾಡುವುದು ಸರ್ಕಾರದ ವತಿಯಿಂದ ನಡೆಯುವ ಎಲ್ಲಾ ತನಿಖೆಗಳ ಮೂಲಭೂತ ಕರ್ತವ್ಯವಾಗಿದೆ. ನಾವು ನಮ್ಮ ನ್ಯಾಯಸಮ್ಮತ ಹಕ್ಕನ್ನು ಪಡೆಯಲು ಮತ್ತು ಮುಂದೆ ಈ ರೀತಿಯ ಕಾನೂನು ಬಾಹಿರ ಕೆಲಸಗಳು ನಡೆಯದಂತೆ ನೋಡಿಕೊಳ್ಳಲು ಹೈಕೋರ್ಟ್ ಮೆಟ್ಟಿಲೇರಿದ್ದೇವೆ ಎಂದು ಗೂಗಲ್ ವಕ್ತಾರರೊಬ್ಬರು ಹೇಳಿದರು.

ಸಂಸ್ಥೆಗೆ ಸಂಬಂಧಿಸಿದ ಇತರ ಗೌಪ್ಯ ಮಾಹಿತಿಗಳನ್ನು ಸಿಸಿಐ ಬಹಿರಂಗಪಡಿಸದಂತೆ ನೋಡಿಕೊಳ್ಳುವ ಗುರಿ ಹೊಂದಿದ್ದೇವೆ. ಅಲ್ಲದೇ, ಸಂಸ್ಥೆ ಇನ್ನೂ ಆ ವರದಿಯನ್ನು ಪಡೆದಿಲ್ಲ ಮತ್ತು ಪರಿಶೀಲಿಸಿಲ್ಲ ಎಂದು ಕೂಡಾ ಹೇಳಿದ್ದಾರೆ.

'ನೊಬೆಲ್: ತಾಯ್ನಾಡಿನಲ್ಲೇ ಪ್ರದಾನ'

ಸ್ಟಾಕ್‌ಹೋಮ್ (ಎಎಫ್‌ಪಿ): ವಿಜ್ಞಾನ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ನೊಬೆಲ್ ಪ್ರಶಸ್ತಿಗೆ ಭಾಜನರಾಗುವವರು ತಮ್ಮ ತಾಯ್ನಾಡಿನಲ್ಲೇ ಪ್ರಶಸ್ತಿಗಳನ್ನು ಸ್ವೀಕರಿಸಲಿದ್ದಾರೆ ಎಂದು ನೊಬೆಲ್ ಪ್ರಶಸ್ತಿ ಪ್ರತಿಷ್ಠಾನವು ಗುರುವಾರ ಹೇಳಿದೆ.

ಕೋವಿಡ್ ಸಾಂಕ್ರಾಮಿಕ ರೋಗದಿಂದಾಗಿ ಸತತ ಎರಡನೇ ವರ್ಷ ಈ ಕ್ರಮಕೈಗೊಳ್ಳಲಾಗಿದೆ.

ನಾರ್ವೆಯಲ್ಲಿ ಸಾಂಪ್ರದಾಯಿಕವಾಗಿ ನೀಡಲಾಗುವ ನೊಬೆಲ್ ಶಾಂತಿ ಪ್ರಶಸ್ತಿ ಕುರಿತು ಇನ್ನೂ ನಿರ್ಧಾರ ತೆಗೆದುಕೊಂಡಿಲ್ಲ ಎಂದು ಪ್ರತಿಷ್ಠಾನವು ತಿಳಿಸಿದೆ.

> **ಎಲ್ಲರು ಕೋವಿಡ್ ಪಿಡುಗು ಬೇಗ ನಿವಾರಣೆಯಾಗಲಿ ಎಂದು ಬಯಸುತ್ತಿದ್ದಾರೆಂದು ನಾನು ಭಾವಿಸಿರುವೆ. ಆದರೆ, ನಾವಿನ್ನು ಆ ಹಂತದಲ್ಲಿ ಇಲ್ಲ**
> **ವಿದಾರ್ ಹೆಲ್ಗೆಸನ್**, ನೊಬೆಲ್ ಪ್ರತಿಷ್ಠಾನದ ಕಾರ್ಯನಿರ್ವಾಹಕ ನಿರ್ದೇಶಕ

ನೊಬೆಲ್ ಸಮಿತಿಯು ಈ ವರ್ಷದ ನೊಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತರನ್ನು ಓಸ್ಲೋಗೆ ಸ್ವಾಗತಿಸುವ ಸಾಧ್ಯತೆಯನ್ನು ಈಗಲೂ ಮುಕ್ತವಾಗಿರಿಸಿದೆ. ಓಸ್ಲೋದಲ್ಲಿ ನಡೆಯುವ ಸಮಾರಂಭದ ಸ್ವರೂಪದ ಬಗ್ಗೆ ಅಕ್ಟೋಬರ್ ಮಧ್ಯದಲ್ಲಿ ಘೋಷಿಸಲಾಗುವುದು ಎಂದು ಅದು ಹೇಳಿದೆ.

ಕಳೆದ ವರ್ಷವು ಸಾಂಕ್ರಾಮಿಕ ರೋಗದಿಂದ ವಿದೇಶ ಪ್ರಯಾಣಕ್ಕೆ ನಿರ್ಬಂಧವಿದ್ದಿದ್ದರಿಂದ ವಿಜ್ಞಾನ ಮತ್ತು ಸಾಹಿತ್ಯದ ನೊಬೆಲ್ ಪ್ರಶಸ್ತಿಗಳನ್ನು ಪ್ರಶಸ್ತಿ ವಿಜೇತರ ತಾಯ್ನಾಡಿನಲ್ಲೇ ನೀಡಲು ನಿರ್ಧರಿಸಲಾಯಿತು. ಕಳೆದ ವರ್ಷದಂತೆಯೇ ಈ ವರ್ಷದ ಪ್ರಶಸ್ತಿ ಪ್ರದಾನ ಸಮಾರಂಭಗಳು ಡಿಜಿಟಲ್ ಮತ್ತು ಭೌತಿಕ ಉಪಸ್ಥಿತಿಯ ಮಿಶ್ರಣವಾಗಿರಲಿದೆ ಎಂದು ಪ್ರತಿಷ್ಠಾನ ಹೇಳಿದೆ.

ಮಹಾರಾಷ್ಟ್ರ: ಬಾಲಕಿ ಮೇಲೆ ಸಾಮೂಹಿಕ ಅತ್ಯಾಚಾರ–26 ಮಂದಿಯ ಬಂಧನ

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರದ ಠಾಣೆ ಜಿಲ್ಲೆಯ ಡೊಂಬಿವ್ಲಿ ಪಟ್ಟಣದಲ್ಲಿ ಬಾಲಕಿಯ ಮೇಲೆ ಕೆಲ ತಿಂಗಳುಗಳಿಂದ ಸತತವಾಗಿ ಸಾಮೂಹಿಕ ಅತ್ಯಾಚಾರವೆಸಗಿರುವ ಘಟನೆ ಗುರುವಾರ ಬೆಳಕಿಗೆ ಬಂದಿದೆ.

ಈ ಸಂಬಂಧ ಮನ್ಪಾಡಾ ಪೊಲೀಸ್ ಠಾಣೆಯಲ್ಲಿ 29 ಮಂದಿಯ ವಿರುದ್ಧ ಪ್ರಕರಣ ದಾಖಲಿಸಲಾಗಿದ್ದು, 26 ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ. ಇನ್ನುಳಿದ ಆರೋಪಿಗಳಿಗಾಗಿ ಪೊಲೀಸರು ಶೋಧ ನಡೆಸುತ್ತಿದ್ದಾರೆ.

'14 ವರ್ಷದ ಬಾಲಕಿಯ ಮೇಲೆ ಜನವರಿ ಮತ್ತು ಆಗಸ್ಟ್ ತಿಂಗಳ ನಡುವೆ ಅತ್ಯಾಚಾರವೆಸಗಲಾಗಿದೆ. ಆಕೆ ಸದ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಳೆ' ಎಂದು ಹೆಚ್ಚುವರಿ ಪೊಲೀಸ್ ಆಯುಕ್ತ ದತ್ತ ಕಾರ್ಲೆ ಅವರು ತಿಳಿಸಿದರು.

'ಬಾಲಕಿಯ ಪ್ರಿಯಕರ ಆಕೆಯ ಮೇಲೆ ಅತ್ಯಾಚಾರವೆಸಗಿ, ಅದನ್ನು ಚಿತ್ರೀಕರಿಸಿದ್ದಾನೆ. ಬಳಿಕ ತನ್ನ ಸ್ನೇಹಿತರೊಂದಿಗೆ ಹಂಚಿಕೊಂಡಿದ್ದಾನೆ. ಆ ವಿಡಿಯೊ ತೋರಿಸಿ ಸಂತ್ರಸ್ತೆಯನ್ನು ಬ್ಲ್ಯಾಕ್‌ಮೇಲ್ ಮಾಡಿ, ವಿವಿಧ ಸ್ಥಳಗಳಲ್ಲಿ ಆಕೆಯ ಮೇಲೆ ಅತ್ಯಾಚಾರವೆಸಗಲಾಗಿದೆ' ಎಂದು ಅವರು ಹೇಳಿದರು.

ಈ ಸಂಬಂಧ ಸಂತ್ರಸ್ತೆಯು ಬುಧವಾರ ಬೆಳಿಗ್ಗೆ ದೂರು ದಾಖಲಿಸಿದ್ದಾರೆ. ದೂರಿನಲ್ಲಿ 29 ಮಂದಿಯ ಹೆಸರು ಪ್ರಸ್ತಾಪಿಸಿದ ಬಾಲಕಿ, ಕೆಲವು ಆರೋಪಿಗಳು ರಾಜಕೀಯ ವ್ಯಕ್ತಿಗಳೊಂದಿಗೆ ಸಂಬಂಧವನ್ನು ಹೊಂದಿದ್ದಾರೆ ಎಂದು ಹೇಳಿದ್ದಾರೆ.

ಛತ್ತೀಸಗಡ: ಬಾಲಕಿ ಮೇಲೆ ಅತ್ಯಾಚಾರ, ನಾಲ್ವರ ಬಂಧನ

ಬಲರಾಂಪುರ(ಛತ್ತೀಸಗಡ) (ಪಿಟಿಐ): ಛತ್ತೀಸಗಡದ ಬಲರಾಂಪುರ ಜಿಲ್ಲೆಯಲ್ಲಿ 14 ವರ್ಷದ ಬಾಲಕಿಯ ಮೇಲೆ ಇಬ್ಬರು ಬಾಲಕರು ಸೇರಿದಂತೆ ಐದು ಜನ ಅತ್ಯಾಚಾರ ನಡೆಸಿದ್ದಾರೆ ಎಂದು ಪೊಲೀಸರು ಗುರುವಾರ ಹೇಳಿದ್ದಾರೆ. ಸೆಪ್ಟೆಂಬರ್ 19 ರಂದು ಗಣಪತಿ ಉತ್ಸವದ ಸಮಯದಲ್ಲಿ ಬಾಲಕಿಯು ಗಣೇಶ ಮೂರ್ತಿಯ ವಿಸರ್ಜನೆಯನ್ನು ನೋಡಿ ಮನೆಗೆ ಹಿಂತಿರುಗುತ್ತಿದ್ದಾಗ ಈ ಘಟನೆ ಜರುಗಿದೆ. ಈ ಸಂಬಂಧ ನಾಲ್ವರು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಶಂಕರಗಡ ಪೊಲೀಸ್ ಠಾಣೆಯ ಠಾಣಾಧಿಕಾರಿ ಅಮಿತ್ ಗುಪ್ತಾ ಹೇಳಿದ್ದಾರೆ.

ಲಿವ್ ದ ಗೇಮ್; ಲವ್ ದ ಗೇಮ್...

ದುಬೈ (ಪಿಟಿಐ): ಮುಂದಿನ ತಿಂಗಳು ಯುನೈಟೆಡ್ ಅರಬ್ ಎಮಿರೇಟ್ಸ್ ಮತ್ತು ಒಮನ್‌ನಲ್ಲಿ ನಡೆಯಲಿರುವ ಟ್ವೆಂಟಿ–20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಗೀತೆಯನ್ನು ಗುರುವಾರ ಬಿಡುಗಡೆ ಮಾಡಲಾಯಿತು.

'ಅವತಾರ್ಸ್' ಆ್ಯನಿಮೇಷನ್ ಮಾದರಿಯಲ್ಲಿ ಈ ಗೀತೆಯ ವಿಡಿಯೊ ತಯಾರಿಸಲಾಗಿದೆ. ಅದರಲ್ಲಿ ಭಾರತ ತಂಡದ ನಾಯಕ ವಿರಾಟ್ ಕೊಹ್ಲಿ ಮತ್ತು ಕೀರನ್ ಪೊಲಾರ್ಡ್ ಅವರ ಆ್ಯನಿಮೇಟೆಡ್ ಪ್ರತಿಕೃತಿಗಳಿವೆ.

'ಲಿವ್ ದ ಗೇಮ್..ಲವ್ ದ ಗೇಮ್..' ಎಂಬ ಧ್ಯೇಯವಾಕ್ಯ ಪ್ರಧಾನವಾದ ಹಾಡು ಇದಾಗಿದೆ. ಇದಕ್ಕೆ ಬಾಲಿವುಡ್ ಸಂಗೀತ ನಿರ್ದೇಶಕ ಅಮಿತ್ ತ್ರಿವೇದಿ ಸಂಗೀತ ಸಂಯೋಜನೆ ಮಾಡಿದ್ದಾರೆ. ಈ ವಿಡಿಯೊದಲ್ಲಿ ವಿಶ್ವದ ಬೇರೆ ಬೇರೆ ದೇಶಗಳ ಯುವ ಅಭಿಮಾನಿಗಳು (ಆ್ಯನಿಮೇಟೆಡ್) ವಿಶ್ವಕಪ್ ಟೂರ್ನಿಗಾಗಿ ಕಾತುರದಿಂದ ಕಾಯುವ ರೂಪಕವನ್ನು ಚಿತ್ರಿಸಲಾಗಿದೆ.

ಜಮೈಕಾ, ಮುಂಬೈ, ಕರಾಚಿ, ಆಕ್ಲಂಡ್ ಸೇರಿದಂತೆ ವಿವಿಧ ನಗರಗಳ ಯುವಕ–ಯುವತಿಯರು ತಮ್ಮ ಐಪಾಡ್, ಮೊಬೈಲ್, ಲ್ಯಾಪ್‌ಟ್ಯಾಪ್‌ಗಳಲ್ಲಿ ಪಂದ್ಯಗಳನ್ನು ವೀಕ್ಷಿಸುವಂತಹ ದೃಶ್ಯಾವಳಿಗಳನ್ನು ಹಾಕಲಾಗಿದೆ.

ಆಧುನಿಕ ಕಾಲದ ಯುವಸಮೂಹವನ್ನು ಕೇಂದ್ರಿಕರಿಸಿಕೊಂಡು ಮಾಡಿರುವ ವಿಡಿಯೊ ಗಮನ ಸೆಳೆಯುತ್ತದೆ. ತ್ರಿಡಿ ಮತ್ತು ಟುಡಿ ತಂತ್ರಜ್ಞಾನವನ್ನು ಬಳಸಲಾಗಿದೆ.

ಅಧಿಕೃತ ಪ್ರಸಾರಕರಾದ ಸ್ಟಾರ್ ಸ್ಪೋರ್ಟ್ಸ್, ಬಿಸಿಸಿಐ ಮತ್ತು ಐಸಿಸಿಯ ಸಾಮಾಜಿಕ ಜಾಲತಾಣಗಳಲ್ಲಿ ಗುರುವಾರ ಈ ವಿಡಿಯೊ ಬಿಡುಗಡೆಯಾಯಿತು. ಹಾಲಿ ಚಾಂಪಿಯನ್ ವೆಸ್ಟ್ ಇಂಡೀಸ್ ತಂಡದ ನಾಯಕ ಕೀರನ್ ಪೊಲಾರ್ಡ್, ಭಾರತ ತಂಡದ ನಾಯಕ ವಿರಾಟ್ ಕೊಹ್ಲಿ, ಆಸ್ಟ್ರೇಲಿಯಾ ಆಲ್‌ರೌಂಡರ್ ಗ್ಲೆನ್ ಮ್ಯಾಕ್ಸ್‌ವೆಲ್ ಮತ್ತು ಅಫ್ಗಾನಿಸ್ತಾನದ ರಶೀದ್ ಖಾನ್ ಇದ್ದರು.

'ವಿಶ್ವದಲ್ಲಿ ಕ್ರಿಕೆಟ್‌ಗೆ ಶತಕೋಟಿ ಅಭಿಮಾನಿಗಳು ಇದ್ದಾರೆ. ಅದರಲ್ಲಿ ಯುವ ಅಭಿಮಾನಿಗಳ ಬಳಗ ದೊಡ್ಡದು. ಅವರ ಮನ ಗೆಲ್ಲುವ ಪ್ರಯತ್ನ ಈ ಗೀತೆಯಲ್ಲಿದೆ' ಎಂದು ಐಸಿಸಿ ಮಾರುಕಟ್ಟೆ ಮತ್ತು ಸಂವಹನ ವಿಭಾಗದ ಮಹಾಪ್ರಬಂಧಕ ಕ್ಲೇರ್ ಫರ್ಲಾಂಗ್ ಹೇಳಿದ್ದಾರೆ.

ಡುರಾಂಡ್ ಕಪ್: 4ರ ಘಟ್ಟಕ್ಕೆ ಬೆಂಗಳೂರು ಯುನೈಟೆಡ್

ಕೋಲ್ಕತ್ತ (ಪಿಟಿಐ): ಆಟಗಾರರಲ್ಲಿ ಕೋವಿಡ್ ಸೋಂಕು ಕಾಣಿಸಿಕೊಂಡ ಕಾರಣ ಆರ್ಮಿ ರೆಡ್ ತಂಡ ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಆಡದೇ ಇರಲು ನಿರ್ಧರಿಸಿದೆ. ಹೀಗಾಗಿ ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡ ಆಡದೇ ಸೆಮಿಫೈನಲ್ ಪ್ರವೇಶಿಸಿತು.

ಎಫ್‌ಸಿ ಬೆಂಗಳೂರು ಯುನೈಟೆಡ್ ಮತ್ತು ಆರ್ಮಿ ರೆಡ್ ತಂಡ ಗಳ ಮುಖಾಮುಖಿ ಶುಕ್ರವಾರ ನಿಗದಿಯಾಗಿತ್ತು. ಕಲ್ಯಾಣಿ ಕ್ರೀಡಾಂಗಣದಲ್ಲಿ ನಡೆಯಬೇಕಾಗಿದ್ದ ಪಂದ್ಯವನ್ನು ರದ್ದುಗೊಳಿಸಲಾಗಿದೆ. ಗೋವಾ ಮತ್ತು ಡೆಲ್ಲಿ ಎಫ್‌ಸಿ ನಡುವಿನ ಎಂಟರ ಘಟ್ಟದ ಹಣಾಹಣಿ ನಿಗದಿಯಿಂದ ನಡೆಯಲಿದೆ. ಆದರೆ ಕಲ್ಯಾಣಿ ಬದಲು ಕೋಲ್ಕತ್ತದಲ್ಲಿ ಪಂದ್ಯ ಆಯೋಜಿಸಲು ನಿರ್ಧರಿಸಲಾಗಿದೆ.

'ಆಟಗಾರರು ಮತ್ತು ಸಿಬ್ಬಂದಿಯ ಆರೋಗ್ಯ ರಕ್ಷಣೆ ಮತ್ತು ಸುರಕ್ಷತೆಯ ದೃಷ್ಟಿಯಿಂದ ಪಂದ್ಯವನ್ನು ರದ್ದುಗೊಳಿಸಲಾಗಿದೆ. ಟೂರ್ನಿಯನ್ನು ನಿರಾತಂಕವಾಗಿ ನಡೆಸುವ ಜವಾಬ್ದಾರಿಯೂ ಇರುವುದರಿಂದ ಈ ನಿರ್ಧಾರ ಅನಿವಾರ್ಯವಾಗಿತ್ತು' ಎಂದು ಆಯೋಜಕರು ತಿಳಿಸಿದ್ದಾರೆ.

ಭಾರತ ಟಿಟಿ ತಂಡಕ್ಕೆ ಉಪಾಧ್ಯ ವ್ಯವಸ್ಥಾಪಕ

ಹುಬ್ಬಳ್ಳಿ: ದೋಹಾದಲ್ಲಿ ಇದೇ 28ರಿಂದ ನಡೆಯಲಿರುವ ಏಷ್ಯನ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಆಡಲಿರುವ ಭಾರತ ತಂಡಕ್ಕೆ ಧಾರವಾಡದ ಟಿ.ಜಿ. ಉಪಾಧ್ಯ ವ್ಯವಸ್ಥಾಪಕರಾಗಿ ನೇಮಕವಾಗಿದ್ದಾರೆ. ಕರ್ನಾಟಕ ಟೇಬಲ್ ಟೆನಿಸ್ ಸಂಸ್ಥೆಯ ಗೌರವ ಕಾರ್ಯದರ್ಶಿಯೂ ಆಗಿರುವ ಉಪಾಧ್ಯ, ಭಾರತ ತಂಡಕ್ಕೆ ವ್ಯವಸ್ಥಾಪಕರಾಗಿರುವುದು ಇದು ಎರಡನೇ ಬಾರಿ. 2018ರಲ್ಲಿ ಸ್ವೀಡನ್‌ನಲ್ಲಿ ನಡೆದಿದ್ದ ವಿಶ್ವ ಟಿ.ಟಿ. ಚಾಂಪಿಯನ್‌ಷಿಪ್‌ಗೆ ತೆರಳಿದ್ದರು.

'ಭಾರತ ತಂಡದ ಜೊತೆಗೆ ಹೋಗುವುದು ಯಾವಾಗಲೂ ಹೆಮ್ಮೆಯ ಭಾವ ಮೂಡಿಸುತ್ತದೆ' ಎಂದು ಉಪಾಧ್ಯ ಹೇಳಿದರು.

ಕ್ರಿಕೆಟ್: ವಾಹಿದ್ ಆಲ್‌ರೌಂಡ್ ಆಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಲ್‌ರೌಂಡ್ ಆಟವಾಡಿದ ವಾಹಿದ್ (20ಕ್ಕೆ3 ಮತ್ತು 88) ನೆರವಿನಿಂದ ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕ್ರಿಕೆಟ್ ತಂಡವು (ಕೆಐಒಸಿ) ಗುರುವಾರ ನಡೆದ 16 ವರ್ಷದೊಳಗಿನವರ ಗೋಪಾಲನ್ ಕ್ರಿಕೆಟ್ ಚಾಲೆಂಜ್ ಟೂರ್ನಿಯಲ್ಲಿ ಜಯ ಗಳಿಸಿತು.

ಸೋಷಿಯಲ್ ಕ್ರಿಕೆಟರ್ಸ್ ತಂಡದ ಎದುರು ನಡೆದ ಪಂದ್ಯದಲ್ಲಿ ಕೆಐಒಸಿಯು ಆರು ವಿಕೆಟ್‌ಗಳಿಂದ ಗೆಲುವು ಸಾಧಿಸಿತು.

ಸಂಕ್ಷಿಪ್ತ ಸ್ಕೋರು: ಸೋಷಿಯಲ್ ಕ್ರಿಕೆಟರ್ಸ್: 21 ಓವರ್‌ಗಳಲ್ಲಿ 129 (ಪ್ರತ್ಯೂಷ್ 53, ಹರ್ಷ ಜೈನ್ 32, ವಾಹಿದ್ 20ಕ್ಕೆ3), **ಕೆಐಒಸಿ:** 17.5 ಓವರ್‌ಗಳಲ್ಲಿ 4ಕ್ಕೆ133 (ವಾಹಿದ್ 88, ಪಿ. ಆರಿನ್ 35ಕ್ಕೆ2) ಫಲಿತಾಂಶ: ಕೆಐಒಸಿಗೆ 6 ವಿಕೆಟ್‌ಗಳಜಯ.

ಕಾರ್ಮೆಲ್ ಪ್ರೌಢಶಾಲೆ: 30 ಓವರ್‌ಗಳಲ್ಲಿ 4ಕ್ಕೆ149 (ಆರ್. ಅಮೋಘ 55, ಸುಶೀಲ್ 50, ರೋನಕ್ 37ಕ್ಕೆ2), **ಸಿಕ್ಸ್ ಅಕಾಡೆಮಿ:** 3ಕ್ಕೆ150 (ಪಿ. ಆಕಾಶ್ ಔಟಾಗದೆ 71, ವಜ್ರ 48) **ಫಲಿತಾಂಶ:** ಸಿಕ್ಸ್ ಅಕಾಡೆಮಿಗೆ 7 ವಿಕೆಟ್‌ಗಳ ಜಯ.

ಆರ್ಚರಿ ಅಥ್ಲೀಟ್ಸ್ ಸಮಿತಿಗೆ ಅಭಿಷೇಕ್

ಯಾಂಗ್ಟನ್, ಅಮೆರಿಕ (ಪಿಟಿಐ): ಭಾರತದ ಕಾಂಪೌಂಡ್ ಆರ್ಚರಿ ಪಟು ಅಭಿಷೇಕ್ ವರ್ಮಾ ಅವರು ವಿಶ್ವ ಆರ್ಚರಿಯ ಅಥ್ಲೀಟ್ಸ್ ಸಮಿತಿಗೆ ಆಯ್ಕೆಯಾಗಿದ್ದಾರೆ. ಅವರ ಅಧಿಕಾರ ಅವಧಿ ನಾಲ್ಕು ವರ್ಷದ್ದಾಗಿರುತ್ತದೆ.

ವಿಶ್ವಕಪ್‌ನಲ್ಲಿ ಮೂರು ಬಾರಿ ಚಾಂಪಿಯನ್ ಆಗಿರುವ ಅಭಿಷೇಕ್ ಅವರಿಗೆ ಈಗ 32 ವರ್ಷ. ರಷ್ಯಾದ ನತಾಲಿಯಾ ಅವ್ದೀವಾ ಕೂಡ ಜಯ ಗಳಿಸಿದರು. ನತಾಲಿಯಾ ಮಹಿಳಾ ವಿಭಾಗದಲ್ಲಿ ಹಾಲಿ ವಿಶ್ವ ಚಾಂಪಿಯನ್ ಆಗಿದ್ದಾರೆ. ಇಲ್ಲಿ ನಡೆಯುತ್ತಿರುವ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಂಡಿರುವ ಆರ್ಚರ್‌ಗಳು ಮತದಾನದಲ್ಲಿ ಪಾಲ್ಗೊಂಡಿದ್ದರು.

ಅಭಿಷೇಕ್ ಆಯ್ಕೆ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದ ಏಕೈಕ ಪುರುಷ ಅಭ್ಯರ್ಥಿಯಾಗಿದ್ದರು. ನತಾಲಿಯಾ ಜೊತೆ ಜರ್ಮನಿಯ ಜೆನ್ನೈನ್ ಮೇಸ್ನೆರ್ ಕೂಡ ಸ್ಪರ್ಧಿಸಿದ್ದರು. ನತಾಲಿಯಾ 69 ಶೇಕಡಾ ಮತಗಳನ್ನು ಪಡೆದುಕೊಂಡರು.

‘ದಕ್ಷಿಣ ಡರ್ಬಿ’ಯಲ್ಲಿ ವಿರಾಟ್ ಬಳಗಕ್ಕೆ ಧೋನಿ ಪಡೆಯ ಸವಾಲು

ಬೆಂಗಳೂರಿಗೆ ಚೆನ್ನೈ ಚಾಲೆಂಜ್

ವಿರಾಟ್ ಕೊಹ್ಲಿ

ಮಹೇಂದ್ರಸಿಂಗ್ ಧೋನಿ

ಶಾರ್ಜಾ (ಪಿಟಿಐ): ತಾರೆಗಳ ತಂಡ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಈಗ ಗೆಲುವಿನ ಹಳಿಗೆ ಮರಳುವ ಒತ್ತಡವಿದೆ.

ಶುಕ್ರವಾರ ನಡೆಯಲಿರುವ ಪಂದ್ಯದಲ್ಲಿ ‘ಕ್ಯಾಪ್ಟನ್ ಕೂಲ್’ ಮಹೇಂದ್ರಸಿಂಗ್ ಧೋನಿ ನಾಯಕತ್ವದ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ವಿರಾಟ್ ಕೊಹ್ಲಿ ಬಳಗವು ಎದುರಿಸಲಿದೆ. 14ನೇ ಆವೃತ್ತಿಯ ಎರಡನೇ ಹಂತದ ತನ್ನ ಮೊದಲ ಪಂದ್ಯದಲ್ಲಿ‘ಚಾಂಪಿಯನ್’ ಮುಂಬೈ ಇಂಡಿಯನ್ಸ್ ವಿರುದ್ಧ ಅಮೋಘ ಜಯ ಸಾಧಿಸಿದ್ದ ಚೆನ್ನೈ ತಂಡವು ಈಗ ಪ್ಲೇಆಫ್ ಪ್ರವೇಶದ ಬಾಗಿಲಿಗೆ ಬಂದು ನಿಂತಿದೆ. ಆ ಪಂದ್ಯದಲ್ಲಿ ದಿಗ್ಗಜ ಆಟಗಾರರು ಮುಗ್ಗರಿಸಿದ್ದರೂ ಯುವ ಪ್ರತಿಭೆ ಋತುರಾಜ್ ಗಾಯಕವಾಡ್ ದಿಟ್ಟ ಬ್ಯಾಟಿಂಗ್ ಮಾಡಿ ತಂಡಕ್ಕೆ ಆಸರೆಯಾಗಿದ್ದರು.

ಆದರೆ, ಕೋಲ್ಕತ್ತ ನೈಟ್ ರೈಡರ್ಸ್ ಎದುರು ಹೀನಾಯವಾಗಿ ಸೋತಿರುವ ಆರ್‌ಸಿಬಿ ಅಭಿಮಾನಿಗಳ ಟೀಕೆಗೆ ಗುರಿಯಾಗಿದೆ. ವಿರಾಟ್, ಎಬಿ ಡಿವಿಲಿಯರ್ಸ್, ಗ್ಲೆನ್ ಮ್ಯಾಕ್ಸ್‌ವೆಲ್ ವೈಫಲ್ಯ ಕಾಡಿತ್ತು. ಅದರಿಂದಾಗಿ ಎದುರಾಳಿ ತಂಡಕ್ಕೆ 92 ರನ್‌ಗಳ ಅಲ್ಪಮೊತ್ತದ ಗುರಿ ನೀಡಿತ್ತು.

ಆದರೂ ಪುಟಿದೇಳುವ ಸಾಮರ್ಥ್ಯ ಇರುವ ಆರ್‌ಸಿಬಿಗೆ ಪ್ಲೇ ಆಫ್ ಹಾದಿ ದೂರವೇನಿಲ್ಲ. ಎಂಟು ಪಂದ್ಯಗಳಲ್ಲಿ ಐದು ಗೆದ್ದಿರುವ ವಿರಾಟ್ ಬಳಗವು ಹತ್ತು ಪಾಯಿಂಟ್ಸ್‌ನೊಂದಿಗೆ ಮೂರನೇ ಸ್ಥಾನದಲ್ಲಿದೆ. ಇನ್ನೂ ಆರು ಪಂದ್ಯಗಳಲ್ಲಿ ಆಡಬೇಕಿದ್ದು ಕನಿಷ್ಠ ನಾಲ್ಕರಲ್ಲಿ ಜಯಿಸಿದರೆ ಹಾದಿ ಸುಗಮವಾಗುತ್ತದೆ.

ವಿರಾಟ್ ಮತ್ತು ದೇವದತ್ತ ಪಡಿಕ್ಕಲ್ ಈ ಟೂರ್ನಿಯಲ್ಲಿ ಈಗಾಗಲೇ ತಲಾ ಇನ್ನೂರಕ್ಕಿಂತ ಹೆಚ್ಚು ರನ್‌ಗಳನ್ನು ಗಳಿಸಿದ್ದಾರೆ. ಇವರಿಬ್ಬರು ಉತ್ತಮ ಆರಂಭ ನೀಡಿದರೆ, ಮುಂದಿನ ಬ್ಯಾಟ್ಸ್‌ಮನ್‌ಗಳು ದೊಡ್ಡ ಮೊತ್ತ ಕಲೆಹಾಕಬಹುದು. ಎಬಿಡಿ ಮತ್ತು ಮ್ಯಾಕ್ಸ್‌ವೆಲ್ ತಮ್ಮ ಲಯಕ್ಕೆ ಮರಳಿದರೆ ಮಧ್ಯಮಕ್ರಮಾಂಕ ಬಲಾಢ್ಯವಾಗುವುದರಲ್ಲಿ ಸಂಶಯವಿಲ್ಲ. ಮೊದಲ ಹಂತದಲ್ಲಿ ಉಭಯ ತಂಡಗಳು ಮುಖಾಮುಖಿಯಾದಾಗ ಆರ್‌ಸಿಬಿ ಸೋತಿತ್ತು. ಎಡಗೈ ಸ್ಪಿನ್ನರ್ ರವೀಂದ್ರ ಜಡೇಜ, ಲೆಗ್‌ಸ್ಪಿನ್ನರ್ ಇಮ್ರಾನ್ ತಾಹೀರ್ ಅವರ ಬೌಲಿಂಗ್ ಮುಂದೆ ಶರಣಾಗಿತ್ತು.

ಬಲಾಬಲ

ಪಂದ್ಯ	27
ಚೆನ್ನೈ ಜಯ	18
ಬೆಂಗಳೂರು ಜಯ	9

ಆರಂಭ: ರಾತ್ರಿ 7.30

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಉತ್ತಮವಾಗಿ ಆಡಿ ಬಂದಿರುವ ಶಾರ್ದೂಲ್ ಠಾಕೂರ್, ದೀಪಕ್ ಚಾಹರ್ ಅವರ ರಿವರ್ಸ್ ಸ್ವಿಂಗ್ ಎಸೆತಗಳೂ ಆರ್‌ಸಿಬಿ ಬ್ಯಾಟ್ಸ್‌ಮನ್‌ಗಳಿಗೆ ಸವಾಲೊಡ್ಡಬಲ್ಲವು. ಚೆನ್ನೈನ ಅಂಬಟಿ ರಾಯುಡು, ಫಫ್ ಡುಪ್ಲೆಸಿ, ರವೀಂದ್ರ ಜಡೇಜ, ಋತುರಾಜ್, ಡ್ವೇನ್ ಬ್ರಾವೊ, ಸುರೇಶ್ ರೈನಾ ಮತ್ತು ಧೋನಿ ಅವರ ಅಬ್ಬರದ ಬ್ಯಾಟಿಂಗ್‌ಗೆ ತಡೆಯೊಡ್ಡುವ ಸವಾಲೂ ಬೆಂಗಳೂರು ಬೌಲರ್‌ಗಳ ಮುಂದಿದೆ.

ಸ್ಪಿನ್ನರ್ ಯಜುವೇಂದ್ರ ಚಾಹಲ್, ಹೆಚ್ಚು ವಿಕೆಟ್ ಗಳಿಸಿರುವ ಹರ್ಷಲ್ ಪಟೇಲ್, ಮೊಹಮ್ಮದ್ ಸಿರಾಜ್ ಮತ್ತು ಕೈಲ್ ಜೆಮಿಸನ್ ಅವರು ಚೆನ್ನೈ ‘ಅನುಭವಿ’ ಬ್ಯಾಟಿಂಗ್ ಪಡೆಯನ್ನು ಕಟ್ಟಿಹಾಕಿದರೆ ಗೆಲುವಿನ ಹಾದಿ ಸುಗಮವಾಗಬಹುದು.

ತಂಡಗಳು

ರಾಯಲ್ ಚಾಲೆಂಜರ್ಸ್ ಬೆಂಗಳೂರು: ವಿರಾಟ್ ಕೊಹ್ಲಿ (ನಾಯಕ), ದೇವದತ್ತ ಪಡಿಕ್ಕಲ್, ಶ್ರೀಕರ್ ಭರತ್, ಎಬಿ ಡಿವಿಲಿಯರ್ಸ್, ಗ್ಲೆನ್ ಮ್ಯಾಕ್ಸ್‌ವೆಲ್, ಹರ್ಷಲ್ ಪಟೇಲ್, ಕೈಲ್ ಜೆಮಿಸನ್, ಮೊಹಮ್ಮದ್ ಸಿರಾಜ್, ಯಜುವೇಂದ್ರ ಚಾಹಲ್, ನವದೀಪ್ ಸೈನಿ, ಸಚಿನ್ ಬೇಬಿ, ವನಿಂದು ಹಸರಂಗ, ಪವನ್ ದೇಶಪಾಂಡೆ, ರಜತ್ ಪಾಟೀದಾರ್, ಡ್ಯಾನ್ ಕ್ರಿಸ್ಟಿಯನ್, ಮೊಹಮ್ಮದ್ ಅಜರುದ್ದೀನ್.

ಚೆನ್ನೈ ಸೂಪರ್ ಕಿಂಗ್ಸ್: ಮಹೇಂದ್ರಸಿಂಗ್ ಧೋನಿ (ನಾಯಕ), ಋತುರಾಜ್ ಗಾಯಕವಾಡ್, ಮೊಯಿನ್ ಅಲಿ, ಸುರೇಶ್ ರೈನಾ, ಅಂಬಟಿ ರಾಯುಡು, ಡ್ವೇನ್ ಬ್ರಾವೊ, ರವೀಂದ್ರ ಜಡೇಜ, ಶಾರ್ದೂಲ್ ಠಾಕೂರ್, ಲುಂಗಿ ಗಿಡಿ, ದೀಪಕ್ ಚಾಹರ್, ಇಮ್ರಾನ್ ತಾಹೀರ್, ಫಫ್ ಡುಪ್ಲೆಸಿ, ರಾಬಿನ್ ಉತ್ತಪ್ಪ, ಕೆ. ಗೌತಮ್, ಚೇತೇಶ್ವರ್ ಪೂಜಾರ, ಕರ್ಣ ಶರ್ಮಾ, ಮಿಷೆಲ್ ಸ್ಯಾಂಟನರ್.

ಕೋಲ್ಕತ್ತಗೆ ಮಣಿದ ಮುಂಬೈ

ಕೋಲ್ಕತ್ತ ನೈಟ್ ರೈಡರ್ಸ್ ಪರ ಅರ್ಧಶತಕ ಗಳಿಸಿದ ರಾಹುಲ್ ತ್ರಿಪಾಠಿ ಅವರ ಬ್ಯಾಟಿಂಗ್ ಶೈಲಿ –ಪಿಟಿಐ

ಅಬುಧಾಬಿ (ಪಿಟಿಐ): ಆರಂಭಿಕ ಆಟಗಾರ ವೆಂಕಟೇಶ್ ಅಯ್ಯರ್ ಮತ್ತು ಮೂರನೇ ಕ್ರಮಾಂಕದ ರಾಹುಲ್ ತ್ರಿಪಾಠಿ ಅವರ ಅಮೋಘ ಜೊತೆಯಾಟ ಕೋಲ್ಕತ್ತ ನೈಟ್ ರೈಡರ್ಸ್‌ಗೆ ಹಾಲಿ ಚಾಂಪಿಯನ್ ಮುಂಬೈ ವಿರುದ್ಧ ಸುಲಭ ಜಯ ತಂದುಕೊಟ್ಟಿತು.

ಗುರುವಾರ ನಡೆದ ಪಂದ್ಯದಲ್ಲಿ 156 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಕೋಲ್ಕತ್ತ 29 ಎಸೆತಗಳು ಬಾಕಿ ಇರುವಾಗಲೇ 159 ರನ್ ಗಳಿಸಿತು. ಇದಕ್ಕಾಗಿ ತಂಡ ಕಳೆದುಕೊಂಡದ್ದು ಮೂರು ವಿಕೆಟ್ ಮಾತ್ರ.

ಶುಭಮನ್ ಗಿಲ್ ಬೇಗನೇ ಔಟಾದರೂ ವೆಂಕಟೇಶ್ ಮತ್ತು ತ್ರಿಪಾಠಿ 88 ರನ್‌ಗಳ ಜೊತೆಯಾಟದ ಮೂಲಕ ಸುಲಭ ಜಯಕ್ಕೆ ವೇದಿಕೆ ಸಿದ್ದಪಡಿಸಿದರು. ಇಬ್ಬರೂ ತಲಾ ಮೂರು ಸಿಕ್ಸರ್ ಸಿಡಿಸಿ ಮಿಂಚಿದರು. ವೆಂಕಟೇಶ್ ನಾಲ್ಕು ಬೌಂಡರಿ ಗಳಿಸಿದರೆ ತ್ರಿಪಾಠಿ ಎಂಟು ಬೌಂಡರಿಗಳೊಂದಿಗೆ ಅಜೇಯರಾಗಿ ಉಳಿದರು.

ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ ಇಂಡಿಯನ್ಸ್ ತಂಡ ನಾಯಕ ರೋಹಿತ್ ಶರ್ಮಾ ಮತ್ತು ಕ್ವಿಂಟನ್ ಡಿಕಾಕ್ ಹಾಕಿದ ಉತ್ತಮ ಬುನಾದಿಯ ಮೇಲೆ ದೊಡ್ಡ ಮೊತ್ತ ಕಲೆ ಹಾಕುವತ್ತ ಹೆಜ್ಜೆ ಹಾಕಿತ್ತು. ಆದರೆ ಪ್ರಸಿದ್ಧ (43ಕ್ಕೆ2) ಮತ್ತು ಲಾಕಿ ಫರ್ಗ್ಯುಸನ್ (27ಕ್ಕೆ2) ದಾಳಿಗೆ ನಲುಗಿ ಸಾಧಾರಣ ಮೊತ್ತ ಗಳಿಸಲಷ್ಟೇ ತಂಡಕ್ಕೆ ಸಾಧ್ಯವಾಯಿತು.

ರೋಹಿತ್ ಶರ್ಮಾ ಮತ್ತು ಕ್ವಿಂಟನ್ ಡಿ ಕಾಕ್ ಮೊದಲ ವಿಕೆಟ್‌ಗೆ 78 ರನ್ ಸೇರಿಸಿದರು.

ಹತ್ತನೇ ಓವರ್‌ನಲ್ಲಿ ಸುನೀಲ್ ನಾರಾಯಣ್ ಈ ಜೊತೆಯಾಟಕ್ಕೆ ತೆರೆ ಎಳೆದರು. ಈ ಹಂತದಲ್ಲಿ ಕನ್ನಡಿಗ ಪ್ರಸಿದ್ಧ ಕೃಷ್ಣ ತಮ್ಮ ಅಸ್ತ್ರಗಳನ್ನು ಪ್ರಯೋಗಿಸಿದರು. 13ನೇ ಓವರ್‌ನಲ್ಲಿ ಸೂರ್ಯಕುಮಾರ್ ಯಾದವ್ ಮತ್ತು 15ನೇ ಓವರ್‌ನಲ್ಲಿ ಕ್ವಿಂಟನ್ ಡಿಕಾಕ್ ವಿಕೆಟ್‌ಗಳನ್ನು ಗಳಿಸಿದರು. ಇದರಿಂದಾಗಿ ರನ್ ಗಳಿಕೆಯ ವೇಗಕ್ಕೆ ಕಡಿವಾಣ ಬಿದ್ದಿತು.

ಪ್ರಸಿದ್ಧ ಅವರಿಗೆ ಉತ್ತಮ ಜೊತೆ ನೀಡಿದ ಲಾಕಿ ಫರ್ಗ್ಯುಸನ್ ಕೊನೆಯ ಐದು ಓವರ್‌ಗಳಲ್ಲಿ ಹೆಚ್ಚು ರನ್‌ಗಳು ಹರಿಯದಂತೆ ನೋಡಿಕೊಂಡರು. ಇಶಾನ್ ಕಿಶನ್ ಮತ್ತು ಕೃಣಾಲ್ ಪಾಂಡ್ಯ ವಿಕೆಟ್‌ಗಳನ್ನು ಗಳಿಸಿದರು. ಸ್ಫೋಟಕ ಬ್ಯಾಟ್ಸ್‌ಮನ್ ಕೀರನ್ ಪೊಲಾರ್ಡ್ ರನ್‌ಔಟ್‌ನಲ್ಲಿಯೂ ಲಾಕಿ ತಮ್ಮ ಕೈಚಳಕ ತೋರಿದರು.

ರೋಹಿತ್ ದಾಖಲೆ

ಮುಂಬೈ ಇಂಡಿಯನ್ಸ್ ತಂಡದ ನಾಯಕ ರೋಹಿತ್ ಶರ್ಮಾ ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ ಒಟ್ಟು ಒಂದು ಸಾವಿರ ರನ್ ಗಳಿಸಿದ ಸಾಧನೆ ಮಾಡಿದರು.

ಈ ವಿಶಿಷ್ಟ ದಾಖಲೆ ಮಾಡಿದ ಐಪಿಎಲ್‌ನ ಮೊದಲ ಬ್ಯಾಟರ್ ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾದರು. ಒಂದೇ ಫ್ರ್ಯಾಂಚೈಸಿ ವಿರುದ್ಧ ಅವರು ಮಾಡಿದ ದಾಖಲೆ ಇದಾಗಿದೆ.

ಹಿಟ್‌ಮ್ಯಾನ್ ಖ್ಯಾತಿಯ ರೋಹಿತ್, ಐಪಿಎಲ್‌ನಲ್ಲಿ ಒಟ್ಟು 208 ಪಂದ್ಯಗಳನ್ನು ಆಡಿದ್ದಾರೆ. 5513 ರನ್‌ಗಳನ್ನು ಗಳಿಸಿದ್ದಾರೆ.

ಅವರು ಎರಡನೇ ಸುತ್ತಿನ ಮೊದಲ ಪಂದ್ಯದಲ್ಲಿ ಆಡಿರಲಿಲ್ಲ.

ಸ್ಕೋರ್ ಕಾರ್ಡ್

ಮುಂಬೈ ಇಂಡಿಯನ್ಸ್ 6ಕ್ಕೆ 155 (20 ಓವರ್)

ರೋಹಿತ್ ಸಿ ಶುಭಮನ್ ಬಿ ನಾರಾಯಣ್ 33 (30 ಎ, 4x4), ಕ್ವಿಂಟನ್ ಸಿ ನಾರಾಯಣ್ ಬಿ ಪ್ರಸಿದ್ಧ 55 (42 ಎ, 4x4, 6x3), ಸೂರ್ಯಕುಮಾರ್ ಸಿ ಕಾರ್ತಿಕ ಬಿ ಪ್ರಸಿದ್ಧ 5 (10 ಎ), ಇಶಾನ್ ಸಿ ರಸೆಲ್ ಬಿ ಫರ್ಗ್ಯುಸನ್ 14 (13 ಎ, 6x1), ಪೊಲಾರ್ಡ್ ರನೌಟ್ (ಮಾರ್ಗನ್/ಫರ್ಗ್ಯುಸನ್) 23 (15 ಎ, 4x2, 6x1), ಕೃಣಾಲ್ ಸಿ ಅಯ್ಯರ್ ಬಿ ಫರ್ಗ್ಯುಸನ್ 12 (9 ಎ, 4x1), ಸೌರಭ್ ಔಟಾಗದೆ 5 (2 ಎ, 4x1), ಮಿಲ್ನೆ ಔಟಾಗದೆ 1 (1 ಎ)

ಇತರೆ (ಲೆಗ್‌ಬೈ 1, ನೋಬಾಲ್ 2, ವೈಡ್ 6) 9

ವಿಕೆಟ್ ಪತನ: 1-78 (ರೋಹಿತ್ ಶರ್ಮಾ, 9.2), 2-89 (ಸೂರ್ಯಕುಮಾರ್ ಯಾದವ್, 12.1), 3-106 (ಕ್ವಿಂಟನ್ ಡಿ ಕಾಕ್, 14.5), 4-119 (ಇಶಾನ್ ಕಿಶನ್, 16.2), 5-149 (ಕೀರನ್ ಪೊಲಾರ್ಡ್, 19.2), 6-149 (ಕೃಣಾಲ್ ಪಾಂಡ್ಯ, 19.3)

ಬೌಲಿಂಗ್: ನಿತೀಶ್ ರಾಣಾ 1-0-5-0, ವರುಣ್ ಚಕ್ರವರ್ತಿ 4-0-22-0, ಸುನಿಲ್ ನಾರಾಯಣ್ 4-0-20-1, ಲಾಕಿ ಫರ್ಗ್ಯುಸನ್ 4-0-27-2, ಪ್ರಸಿದ್ಧ ಕೃಷ್ಣ 4-0-43-2, ಆ್ಯಂಡ್ರೆ ರಸೆಲ್ 3-0-37-0

ಕೋಲ್ಕತ್ತ ನೈಟ್ ರೈಡರ್ಸ್ 3 ವಿಕೆಟ್‌ಗಳಿಗೆ 159 (15.1 ಓವರ್)

ಶುಭಮನ್ ಬಿ ಬೂಮ್ರಾ 13 (9 ಎ, 4x1, 6x1), ವೆಂಕಟೇಶ್ ಬಿ ಬೂಮ್ರಾ 53 (30 ಎ, 4x4, 6x3), ತ್ರಿಪಾಠಿ ಔಟಾಗದೆ 74 (42 ಎ, 4x8, 6x3), ಮಾರ್ಗನ್ ಸಿ ಬೌಲ್ಟ್ ಬಿ ಬೂಮ್ರಾ 7 (8 ಎ, 6x1), ರಾಣಾ ಔಟಾಗದೆ 5 (2ಎ, 4x1)

ಇತರೆ (ಲೆಗ್ ಬೈ 1, ವೈಡ್ 6) 7

ವಿಕೆಟ್ ಪತನ: 1-40 (ಶುಭಮನ್ ಗಿಲ್, 2.6), 2-128 (ವೆಂಕಟೇಶ್ ಅಯ್ಯರ್, 11.4), 3-147 (ಏಯಾನ್ ಮಾರ್ಗನ್, 14.1)

ಬೌಲಿಂಗ್: ಟ್ರೆಂಟ್ ಬೌಲ್ಟ್ 2-0-23-0, ಆ್ಯಡಂ ಮಿಲ್ನೆ 3-0-29-0, ಜಸ್‌ಪ್ರೀತ್ ಬೂಮ್ರಾ 4-0-43-3, ಕೃಣಾಲ್ ಪಾಂಡ್ಯ 3-0-25-0, ರಾಹುಲ್ ಚಾಹರ್ 3-0-34-0, ರೋಹಿತ್ ಶರ್ಮಾ 0.1-0-4-0

ಫಲಿತಾಂಶ: ಕೋಲ್ಕತ್ತ ನೈಟ್‌ರೈಡರ್ಸ್‌ಗೆ 7 ವಿಕೆಟ್‌ಗಳ ಜಯ

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಶಿಖರ್ ಧವನ್	ಡೆಲ್ಲಿ	422
ಕೆ.ಎಲ್.ರಾಹುಲ್	ಪಂಜಾಬ್	380
ಮಯಂಕ್	ಪಂಜಾಬ್	327

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಹರ್ಷಲ್	ಆರ್‌ಸಿಬಿ	17
ಆವೇಶ್ ಖಾನ್	ಡೆಲ್ಲಿ	14
ಕ್ರಿಸ್ ಮೊರಿಸ್	ರಾಜಸ್ತಾನ್	14

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ
ಡೆಲ್ಲಿ ಕ್ಯಾಪಿಟಲ್ಸ್	9	7	2	00	00	14
ಚೆನ್ನೈ ಸೂಪರ್ ಕಿಂಗ್ಸ್	8	6	2	00	00	12
ಬೆಂಗಳೂರು	8	5	3	00	00	10
ಕೋಲ್ಕತ್ತ ನೈಟ್ ರೈಡರ್ಸ್	9	4	5	00	00	8
ರಾಜಸ್ಥಾನ್ ರಾಯಲ್ಸ್	8	4	4	00	00	8
ಮುಂಬೈ ಇಂಡಿಯನ್ಸ್	9	4	5	00	00	8
ಪಂಜಾಬ್	9	3	6	00	00	6
ಹೈದರಾಬಾದ್	8	1	7	00	00	2

* ಗುರುವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಭಾರತ ಮಹಿಳೆಯರಿಗೆ ಸರಣಿ ಉಳಿಸಿಕೊಳ್ಳುವ ಸವಾಲು

ಮಕಾಯ, ಆಸ್ಟ್ರೇಲಿಯಾ: ಮೊದಲ ಪಂದ್ಯದಲ್ಲಿ ನೀರಸ ಪ್ರದರ್ಶನ ನೀಡಿದ ಭಾರತ ಮಹಿಳಾ ಕ್ರಿಕೆಟ್ ತಂಡಕ್ಕೆ ಈಗ ಸರಣಿಯಲ್ಲಿ ಜೀವಂತವಾಗಿ ಉಳಿಯುವ ಸವಾಲು. ಶುಕ್ರವಾರ ನಡೆಯಲಿರುವ ಎರಡನೇ ಪಂದ್ಯದಲ್ಲಿ ಆಸ್ಟ್ರೇಲಿಯಾ ವಿರುದ್ಧ ಗೆಲ್ಲದೇ ಇದ್ದರೆ ಮಿಥಾಲಿ ರಾಜ್ ಬಳಗ ಸರಣಿಯನ್ನು ಕಳೆದುಕೊಳ್ಳಲಿದೆ.

ಮೊದಲ ಪಂದ್ಯದಲ್ಲಿ ಭಾರತವನ್ನು ಆತಿಥೇಯರು ಒಂಬತ್ತು ವಿಕೆಟ್‌ಗಳಿಂದ ಮಣಿಸಿದ್ದರು. ಮಿಥಾಲಿ ರಾಜ್ ಅವರ ಏಕಾಂಗಿ ಹೋರಾಟದ ಫಲವಾಗಿ ಭಾರತ 225 ರನ್ ಗಳಿಸಿದ್ದರೂ ಬೌಲಿಂಗ್ ವಿಭಾಗ ಎದುರಾಳಿ ಬ್ಯಾಟರ್‌ಗಳ ಮುಂದೆ ಕಳೆಗುಂದಿತ್ತು.

ಹರ್ಮನ್‌ಪ್ರೀತ್ ಕೌರ್ ಹೆಬ್ಬೆರಳಿಗೆ ಗಾಯಗೊಂಡ ಕಾರಣ ಮೊದಲ ಪಂದ್ಯದಲ್ಲಿ ಆಡಿರಲಿಲ್ಲ. ಎರಡನೇ ಪಂದ್ಯಕ್ಕೂ ಅವರು ಲಭ್ಯ ಇರುವುದಿಲ್ಲ ಎಂದು ತಂಡದ ಬ್ಯಾಟಿಂಗ್ ಕೋಚ್ ಶಿವಸುಂದರ್ ದಾಸ್ ತಿಳಿಸಿದ್ದಾರೆ.

ಮೊದಲ ಪಂದ್ಯದಲ್ಲಿ ಯಸ್ತಿಕಾ ಭಾಟಿಯಾ ಭರವಸೆ ಮೂಡಿಸಿದ್ದರು. ಪದಾರ್ಪಣೆ ಪಂದ್ಯದಲ್ಲಿ ಬೌಲರ್‌ಗಳನ್ನು ದಿಟ್ಟವಾಗಿ ಎದುರಿಸಿ 35 ರನ್ ಗಳಿಸಿದ್ದರು. ಅವರ ಮೇಲೆ ನಿರೀಕ್ಷೆ ಇದೆ.

ಅಗ್ರ ಕ್ರಮಾಂಕದ ತಾಕತ್ತು: ಆಸ್ಟ್ರೇಲಿಯಾಗೆ ಬ್ಯಾಟಿಂಗ್‌ನಲ್ಲಿ ಆರಂಭಿಕರಾದ ರಾಚೆಲ್ ಹೇನ್ಸ್ ಮತ್ತು ಅಲಿಸಾ ಹೀಲಿ ಅವರೊಂದಿಗೆ ನಾಯಕಿ ಮೆಗ್ ಲ್ಯಾನಿಂಗ್ ಭಾರತದ ಬೌಲಿಂಗ್ ದಾಳಿಯನ್ನು ಸುಲಭವಾಗಿ ಎದುರಿಸಿದ್ದರು.

ಪಂದ್ಯ ಆರಂಭ: ಬೆಳಿಗ್ಗೆ 10.40 (ಭಾರತೀಯ ಕಾಲಮಾನ)

ನೇರ ಪ್ರಸಾರ: ಸೋನಿ ಸಿಕ್ಸ್

ನೀರಜ್‌ಗೆ ‘ಗೋಲ್ಡನ್’ ಕಾಣಿಕೆ

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆದ್ದಿರುವ ಜಾವೆಲಿನ್ ಥ್ರೋ ಅಥ್ಲೀಟ್ ನೀರಜ್ ಚೋಪ್ರಾ ಅವರಿಗೆ 2008ರ ಒಲಿಂಪಿಕ್ಸ್‌ನ ಚಿನ್ನದ ಪದಕ ವಿಜೇತ ಶೂಟರ್ ಅಭಿನವ್ ಬಿಂದ್ರಾ ಅವರು ಗೋಲ್ಡನ್ ರಿಟ್ರೀವರ್ ನಾಯಿಮರಿಯನ್ನು ಕಾಣಿಕೆ ನೀಡಿದ್ದಾರೆ. ಈ ವಿಷಯವನ್ನು ಇಬ್ಬರೂ ಟ್ವೀಟ್ ಮಾಡಿದ್ದಾರೆ –ಟ್ವಿಟರ್ ಚಿತ್ರ

ಫೋರ್ಬ್ಸ್ ಪಟ್ಟಿ ಬಿಡುಗಡೆ

ಮೆಸ್ಸಿ ಹಿಂದಿಕ್ಕಿದ ರೊನಾಲ್ಡೊ

ಬೆಂಗಳೂರು (ರಾಯಿಟರ್ಸ್): ಮ್ಯಾಂಚೆಸ್ಟರ್ ಯುನೈಟೆಡ್ ತಂಡದ ಫಾರ್ವರ್ಡ್ ಆಟಗಾರ ಕ್ರಿಸ್ಟಿಯಾನೊ ರೊನಾಲ್ಡೊ ಫೋರ್ಬ್ಸ್ ನಿಯತಕಾಲಿಕೆಯು ಬಿಡುಗಡೆ ಮಾಡಿರುವ ಶ್ರೀಮಂತ ಕ್ರೀಡಾಪಟುಗಳಲ್ಲಿ ಅತಿ ಹೆಚ್ಚುಆದಾಯ ಪಡೆಯುವ ಫುಟ್‌ಬಾಲ್ ತಾರೆಯಾಗಿದ್ದಾರೆ.



ಕ್ರಿಸ್ಟಿಯಾನೊ ರೊನಾಲ್ಡೊ

ಪೋರ್ಚುಗಲ್‌ನ ರೊನಾಲ್ಡೊ ಅವರು ಅರ್ಜೆಂಟಿನಾದ ತಾರೆ ಲಯೊನೆಲ್ ಮೆಸ್ಸಿಯನ್ನು ಹಿಂದಿಕ್ಕಿ ಪ್ರಥಮ ಸ್ಥಾನಕ್ಕೇರಿದ್ದಾರೆ. ಆಗಸ್ಟ್‌ನಲ್ಲಿ ರೊನಾಲ್ಡೊ ಯುವೆಂಟಸ್‌ನಿಂದ ಯುನೈಟೆಡ್ ತಂಡಕ್ಕೆ ಮರಳಿದ್ದರು. ಈಚೆಗೆ ಮೆಸ್ಸಿ ಕೂಡ ತಾವು ಬಹುಕಾಲ ಪ್ರತಿನಿಧಿಸಿದ್ದ ಬಾರ್ಸಿಲೋನಾ ಕ್ಲಬ್ ತೊರೆದು ಪ್ಯಾರಿಸ್ ಸೇಂಟ್ ಜರ್ಮೇನ್ (ಪಿಎಸ್‌ಜಿ) ತಂಡ ಸೇರಿದ್ದರು.

‘ರೊನಾಲ್ಡೊ ವಿಶ್ವದ ಅತ್ಯಂತ ಜನಪ್ರಿಯ ಫುಟ್‌ಬಾಲ್ ತಾರೆಯಾಗಿದ್ದಾರೆ. ಫೇಸ್‌ಬುಕ್, ಇನ್ಸ್ಟಾಗ್ರಾಮ್ ಮತ್ತು ಟ್ವಿಟರ್‌ಗಳಲ್ಲಿ ಅವರಿಗೆ 50 ಕೋಟಿಗೂ ಹೆಚ್ಚು ಅಭಿಮಾನಿಗಳಿದ್ದಾರೆ. 2021–22ರ ಋತುವಿನಲ್ಲಿ ಅವರು ₹ 942 ಕೋಟಿ (ತೆರಿಗೆ ಕಡಿತಕ್ಕೂ ಮುನ್ನ) ಆದಾಯ ಗಳಿಸಿದ್ದಾರೆ. ಅದರಲ್ಲಿ ಯುನೈಟೆಡ್ ತಂಡದಿಂದ ಪಡೆದ ಸುಮಾರು ₹ 500 ಕೋಟಿ ಮೊತ್ತದ ವೇತನ ಮತ್ತು ಬೋನಸ್‌ಗಳೂ ಸೇರಿವೆ. ಉಳಿದಂತೆ ನೈಕಿ, ಹರ್ಬ್‌ಲೈಫ್, ಕ್ಲಿಯರ್ ಮತ್ತು ತಮ್ಮದೇ ಬ್ರ್ಯಾಂಡ್ ಸಿಆರ್7 ಒಪ್ಪಂದಗಳಿಂದ ಬರುವ ಆದಾಯವೂ ಇದರಲ್ಲಿದೆ’ ಎಂದು ಫೋರ್ಬ್ಸ್ ಹೇಳಿದೆ.

ಪಿಎಸ್‌ಜಿಯಲ್ಲಿ ಮೆಸ್ಸಿ ಜೊತೆಗೆ ಆಡುವ ನೇಯ್ಮರ್, ಕೈಲಿಯನ್ ಬಾಪೆ ಕೂಡ ಅಗ್ರ ಐವರು ಶ್ರೀಮಂತ ಫುಟ್‌ಬಾಲ್ ಆಟಗಾರರ ಪಟ್ಟಿಯಲ್ಲಿದ್ದಾರೆ.

ಆಟಗಾರ	ಆದಾಯ (₹ ಕೋಟಿ)
ಕ್ರಿಸ್ಟಿಯಾನೊ ರೊನಾಲ್ಡೊ	942
ಲಯೊನೆಲ್ ಮೆಸ್ಸಿ	811
ನೇಯ್ಮರ್	700
ಕೈಲಿಯನ್ ಎಂಬಾಪೆ	316
ಮೊಹಮ್ಮದ್ ಸಲಾಹ	302
ರಾಬರ್ಟ್ ಲೆವಾಂಡೊಸ್ಕಿ	258
ಆ್ಯಂಡ್ರೆಸ್ ಇನಿಸ್ಟಾ	258
ಪಾಲ್ ಪೊಗ್ಬಾ	250
ಗೆರೆತ್ ಬೆಲ್	235
ಈಡನ್ ಹಜಾರ್ಡ್	213

ರಾಜ್ಯ ಈಜು ಚಾಂಪಿಯನ್‌ಷಿಪ್: 200 ಮೀಟರ್ಸ್ ಫ್ರೀಸ್ಟೈಲ್‌ನಲ್ಲಿ ಸಾಧನೆ

ಕೂಟ ದಾಖಲೆ ನಿರ್ಮಿಸಿದ ಧೀನಿಧಿ

ಪ್ರಜಾವಾಣಿ ವಾರ್ತೆ

ಧೀನಿಧಿ ದೇಸಿಂಗು ಅವರ ಈಜಿನ ಪರಿ –ಪ್ರಜಾವಾಣಿ ಚಿತ್ರ

ಬೆಂಗಳೂರು: ಡಾಲ್ಫಿನ್ ಅಕ್ವಾಟಿಕ್ಸ್‌ನ ಧೀನಿಧಿ ದೇಸಿಂಗು ಅವರು ರಾಜ್ಯ ಈಜುಸಂಸ್ಥೆ ಆಶ್ರಯದ ಈಜು ಚಾಂಪಿಯನ್‌ಷಿಪ್‌ನ ಬಾಲಕಿಯರ 200 ಮೀಟರ್ಸ್ ಫ್ರೀಸ್ಟೈಲ್‌ನ ಮೂರನೇ ಗುಂಪಿನ ಸ್ಪರ್ಧೆಯಲ್ಲಿ ಮೊದಲ ದಿನ ಕೂಟ ದಾಖಲೆ ಬರೆದರು.

ಬಸವನಗುಡಿ ಈಜುಕೇಂದ್ರದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನಲ್ಲಿ ಅವರು 2 ನಿಮಿಷ 16.33 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಚಿನ್ನ ಗಳಿಸಿದರು. ಜೀ ಸ್ವಿಮ್ ಅಕಾಡೆಮಿಯ ನಯಿಷಾ ಮತ್ತು ವಿಜಯನಗರ ಈಜುಕೇಂದ್ರದ ತಿಸ್ಯಾ ಸೊನಾರ್ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದುಕೊಂಡರು.

ಮೊದಲ ದಿನದ ಫಲಿತಾಂಶಗಳು: ಬಾಲಕರ 200 ಮೀ ಫ್ರೀಸ್ಟೈಲ್: ಗುಂಪು 3: ದ್ರುಪದ್ ರಾಮಕೃಷ್ಣ (ಬಸವನಗುಡಿ)–1.ಕಾಲ: 2:27.13; ರಕ್ಷಣ್–2, ನೈತಿಕ್ ಎನ್ (ಇಬ್ಬರೂ ಡಾಲ್ಫಿನ್)–3; ಗುಂಪು 4: ಶರಣ್ ಶ್ರೀಧರ (ಮತ್ಸ್ಯ)–1. ಕಾಲ: 2:27.13, ಅಥರ್ವ ಪಾಲ್ (ಗೋಲ್ಡನ್ ಫಿನ್ಸ್)–2, ದರ್ಶವೀರ್ ಸಿಂಗ್ (ಡಾಲ್ಫಿನ್)–3; 100 ಮೀ ಬ್ಯಾಕ್‌ಸ್ಟ್ರೋಕ್: ಗುಂಪು 3: ನೈತಿಕ್ ಎನ್ (ಡಾಲ್ಫಿನ್)–1. ಕಾಲ: 1:19.5, ಅಡ್ರಿಯನ್ ಸೆರಾವೊ (ಜಿಎಫ್‌ಆರ್‌ಎವೈ)–2, ಸಮರ್ಥ್ ಗೌಡ (ಬಸವನಗುಡಿ)–3; ಗುಂಪು 4: ಶರಣ್ ಶ್ರೀಧರ (ಮತ್ಸ್ಯ)–1. ಕಾಲ: 1:18.60, ಅಥರ್ವ ಪಾಲ್ (ಗೋಲ್ಡನ್)–2, ಅದ್ವೈತ (ಬಸವನಗುಡಿ)–3; ಗುಂಪು 5: ಅರ್ಜುನ್ ರಾಘವನ್ (ಡಾಲ್ಫಿನ್)–1. ಕಾಲ: 1:30.17, ಅದ್ವೈತ (ಸ್ವಿಮಿಂಗ್ ಕ್ಲಬ್, ಬೆಳಗಾಂ)–2. ಯತಿನ್ (ಪಿಇಟಿ)–3; 50 ಮೀ ಬ್ರೆಸ್ಟ್‌ಸ್ಟ್ರೋಕ್: ಗುಂಪು 3: ಯಶ್ ಪಾಲ್ (ಬಸವನಗುಡಿ)–1. ಕಾಲ: 39.62, ಅಡ್ರಿಯನ್ ಸೆರಾವೊ (ಜಿಎಫ್‌ಆರ್‌ಎವೈ)–2, ಗಗನ್ (ಬಸವನಗುಡಿ)–3; ಗುಂಪು 4: ರೆಯಾಂಶ್ ಕಾಂತಿ (ಬಸವನಗುಡಿ)–1. ಕಾಲ: 41.72, ಅಥರ್ವ ಪಾಲ್ (ಗೋಲ್ಡನ್)–2, ವೈಭವ್ ಪ್ರತಾಪ್ (ಡಿಕೆವಿ)–3; ಗುಂಪು 5: ಜಸ್ ಸಿಂಗ್ (ಮತ್ಸ್ಯ)–1. ಕಾಲ: 42.62, ಕೃಷ್–2, ಅರ್ಜುನ್–3 (ಇಬ್ಬರೂ ಬಸವನಗುಡಿ); 100 ಮೀ ಬಟರ್‌ಫ್ಲೈ: ಅಕ್ಷಜ್ ಠಾಕೂರಿಯಾ (ಡಾಲ್ಫಿನ್)–1. ಕಾಲ: 1:09.68, ನೈತಿಕ್ (ಡಾಲ್ಫಿನ್)–2, ಜೇಡನ್ ಥಾಮಸ್ (ಮತ್ಸ್ಯ)–3; ಗುಂಪು 4: ಶರಣ್ ಶ್ರೀಧರ (ಮತ್ಸ್ಯ)–1. ಕಾಲ: 1:16.38 , ಅಥರ್ವ ಪಾಲ್ (ಗೋಲ್ಡನ್)–2, ಸುಚೇತ್ (ಎಂ.ಪಿ ಅಕ್ವಾಟಿಕ್ಸ್)–3; ಗುಂಪು 5: ಅರ್ಜುನ್ ರಾಘವನ್ (ಡಾಲ್ಫಿನ್)–1. ಕಾಲ: 1:24.95, ವೇದಾಂತ್ (ಸ್ವಿಮರ್ಸ್ ಕ್ಲಬ್, ಬೆಳವಿ)–2, ಸೋಮೇಶ್ವರ (ಗೋಲ್ಡನ್)–3; 50 ಮೀ ಫ್ರೀಸ್ಟೈಲ್: ಗುಂಪು 3: ಅಕ್ಷಜ್ ಠಾಕೂರಿಯಾ–1. ಕಾಲ: 29.93, ರಕ್ಷಣ್–2(ಇಬ್ಬರೂ ಡಾಲ್ಫಿನ್), ಶಾನ್ ಡೊಮಿನಿಕ್ (ಸ್ವಿಮ್‌ಲೈಫ್)–3; ಗುಂಪು 4: ಸಮರ್ಥ್ ಗೌಡ (ಸ್ವಿಮ್‌ಲೈಫ್)–1. ಕಾಲ: 32.57, ಮಯೂಖ್ ರೆಡ್ಡಿ (ಜೀ ಸ್ವಿಮ್)–2, ದರ್ಶವೀರ್ ಸಿಂಗ್ (ಡಾಲ್ಫಿನ್)–3; ಗುಂಪು 5:ಜಸ್ ಸಿಂಗ್ (ಮತ್ಸ್ಯ)–1. ಕಾಲ: 32.91, ಕೃಶ್ (ಬಸವನಗುಡಿ)–2, ಸೋಮೇಶ್ವರ (ಗೋಲ್ಡನ್)–3.

ಬಾಲಕಿಯರ ವಿಭಾಗ: 200 ಮೀ ಫ್ರೀಸ್ಟೈಲ್: ಗುಂಪು 3: ಧೀನಿಧಿ ದೇಸಿಂಗು (ಡಾಲ್ಫಿನ್)–1. ಕಾಲ: 2:16.33 (ಕೂಟ ದಾಖಲೆ), ನಯಿಷಾ (ಜೀ ಸ್ವಿಮ್)–2, ತಿಸ್ಯಾ (ವಿಜಯನಗರ)–3; ಗುಂಪು 4: ಅಲಿಸಾ ರೇಗೊ (ಡಾಲ್ಫಿನ್)–1. ಕಾಲ: 2:32.38, ತ್ರಿಶಾ ಸಿಂಧು (ಡಿಕೆವಿ)–2, ವರ್ಷಾ (ಡಾಲ್ಫಿನ್)–3; 100 ಮೀ ಬ್ಯಾಕ್‌ಸ್ಟ್ರೋಕ್: ಗುಂಪು 3: ಧೀನಿಧಿ ದೇಸಿಂಗು (ಡಾಲ್ಫಿನ್)–1. ಕಾಲ: 1:11.72, ನಯಿಷಾ (ಜೀ)–2, ಸಮೃದ್ಧಿ (ಸ್ವಿಮ್ಮರ್ಸ್ ಕ್ಲಬ್, ಬೆಳಗಾವಿ)–3; ಗುಂಪು 4: ವರ್ಷಾ–1. ಕಾಲ: 1:27.02, ಶೆಲಿನ್–2 (ಇಬ್ಬರೂ ಡಾಲ್ಫಿನ್), ಆದ್ಯ (ಎಂ.ಪಿ)–3; ಗುಂಪು 5: ಔನಾ ಪವನ್ (ಗೋಲ್ಡನ್)–1. ಕಾಲ: 1:37, ವಿಭಾ ರೆಡ್ಡಿ (ಡಾಲ್ಫಿನ್)–2, ಸಿರಿ ಪ್ರೀತಮ್ (ಏಕಲವ್ಯ ಅಕಾಡೆಮಿ)–3; 50 ಮೀ ಬ್ಯಾಕ್‌ಸ್ಟ್ರೋಕ್: ಔರೇಲಿಯಾ ಡಯಾಸ್ (ಜೈಹಿಂದ್, ಮಂಗಳೂರು)–1. ಕಾಲ: 39.90, ಅನ್ಯಾ ಚಕ್ರವರ್ತಿ (ಡಾಲ್ಫಿನ್)–2, ಗಗನ (ಬೆಂಗಳೂರು ಸ್ವಿಮ್ಮರ್ಸ್ ರೀಸರ್ಚ್ ಸೆಂಟರ್)–3; ಗುಂಪು 4; ಸಾನ್ವಿ ಮೈಗೂರು (ಡಿಕೆವಿ)–1. ಕಾಲ: 46.44, ದ್ವಿಶಾ ಶೆಟ್ಟಿ (ಡಾಲ್ಫಿನ್)–2, ಶಿವಾನಿ ಶೆಣೈ (ಬಸವನಗುಡಿ)–3; ಗುಂಪು 4: ಧೃತಿ (ಜೀ)–1. ಕಾಲ: 46.37, ವಿಭಾ ರೆಡ್ಡಿ (ಡಾಲ್ಫಿನ್)–2, ಅಹಿಕಾ (ಸ್ವಿಮ್ಮರ್ಸ್ ಕ್ಲಬ್, ಬೆಳಗಾವಿ)–3; 100 ಮೀ ಬಟರ್‌ಫ್ಲೈ: ಗುಂಪು3: ತನಿಶಿ ಗುಪ್ತಾ (ಡಾಲ್ಫಿನ್)–1. ಕಾಲ: 1:10.18, ಅನನ್ಯ (ಗೋಲ್ಡನ್)–2, ತನ್ಯಾ (ಜಿಎಫ್‌ಆರ್‌ಎವೈ)–3; ಗುಂಪು 4: ಅಲಿಸಾ ರೇಗೊ (ಡಾಲ್ಫಿನ್)–1. ಕಾಲ: 1:19.70, ಆದ್ಯ (ಎಂ.ಪಿ)–2, ನೇಹಶ್ರೀ (ಬೆಂಗಳೂರು ಸ್ವಿಮ್ಮರ್ಸ್)–3; ಗುಂಪು 5: ಜನನಿ (ಡಾಲ್ಫಿನ್)–1. ಕಾಲ: 1:34.27, ಆವುನಾ ಪವನ್ (ಗೋಲ್ಡನ್)–2, ರಿಷಿಕಾ (ಬಸವನಗುಡಿ)–3; 50 ಮೀ ಫ್ರೀಸ್ಟೈಲ್: ಗುಂಪು3: ತನಿಶಿ ಗುಪ್ತಾ (ಡಾಲ್ಫಿನ್)–1. ಕಾಲ: 30.1, ಸಂಜನಾ–2, ತನ್ಯಾ–3 (ಇಬ್ಬರೂ ಜಿಎಫ್‌ಆರ್‌ಎವೈ); ಗುಂಪು 4: ತ್ರಿಶಾ ಸಿಂಧು (ಡಿಕೆವಿ)–1. ಕಾಲ: 32.09 ಅಲಿಸಾ ರೇಗೊ–2, ವರ್ಷಾ–3 (ಇಬ್ಬರೂ ಡಾಲ್ಫಿನ್); ಗುಂಪು 5: ದಿಶಾ (ಆ್ಯಕ್ಟಿವ್ ಬೋರ್ಡ್, ಬೆಳಗಾವಿ)–1. ಕಾಲ: 37.35, ಧೃತಿ (ಜೀ)–2, ಜನನಿ (ಡಾಲ್ಫಿನ್)–3.